

ದೆಹಲಿ ನೋಟ



ದಿನೇಶ್ ಅಮಿನ್ ಮಟ್ಟು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ದೆಹಲಿ ನೋಟ

ಪ್ರಜಾವಾಣಿ ಅಂಕಣ ಬರಹಗಳು

ದಿನೇಶ್ ಅಮೀನ್ ಮಟ್ಟು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

DEHALI NOTA : A compendium of articles related to political and social development, culture and others by DINESH AMINMATTU
145, Akash Darshan Apartment, Mayur Vihar Phase -1, Newdelhi - 1100091
email:dineshmattu@gmail.com MOB:09818576611.
published by Ashoka N. Chalwadi, Administrative Officer.
Kannada Pustaka Pradhikara, Kannada Bhavana, J.C.Road, Bangalore-2

ಮೊದಲ ಮುದ್ರಣ : 2008

ಪ್ರತಿಗಳು : 1000

ಪುಟ : 277

ಕಾಗದ : ಎನ್.ಎಸ್.ಮ್ಯಾಪ್‌ಲಿಥೋ 80ಜಿಎಸ್‌ಎಮ್

ಬೆಲೆ : ರೂ.100

ಮುಖಪುಟ ವಿನ್ಯಾಸ : **ಕೃಷ್ಣ ರಾಯಚೂರು**

ISBN · 81-7713-257-1

ಪ್ರಕಾಶಕರು :
ಅಶೋಕ್ ಎನ್.ಚಲವಾದಿ
ಆಡಳಿತ ಅಧಿಕಾರಿ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-2

ಮುದ್ರಣ :
ಮಯೂರ ಪ್ರಿಂಟ್ ಆ್ಯಡ್ಸ್
69, ಸುಬೇದಾರ್‌ಛತ್ರಂ ರಸ್ತೆ
ಬೆಂಗಳೂರು-560020. ದೂ.2334724

ಅಧ್ಯಕ್ಷರ ಮಾತು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮ ಕ್ಷೇತ್ರದ ಜವಾಬ್ದಾರಿ ದೊಡ್ಡದು. ವಿರೋಧಪಕ್ಷದ ರೀತಿಯಲ್ಲಿ ಅದು ಕೆಲಸ ನಿರ್ವಹಿಸಬೇಕಾದ ಅಗತ್ಯವಿದೆ. ಜಾಗತೀಕರಣದ ಸಂದರ್ಭವಲ್ಲಿ ರಾಜ್ಯ ರಾಷ್ಟ್ರದ ಆಡಳಿತಗಳು ತೆಗೆದುಕೊಳ್ಳುವ ವಿದೇಶಾಂಗ ವ್ಯವಹಾರದ ನೀತಿ ರೀತಿಗಳು ಎಷ್ಟರ ಮಟ್ಟಿಗೆ ಜನೋಪಕಾರಿ, ಎಷ್ಟರ ಮಟ್ಟಿಗೆ ತಂತ್ರರಾಜಕಾರಣದ ಅನುಕೂಲಸಿಂಧು, ಎಷ್ಟರ ಮಟ್ಟಿಗೆ ವಿಶ್ವರಾಜಕಾರಣದ ಒತ್ತಡಫಲ – ಈ ಇತ್ಯಾದಿ ವಿಚಾರಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸವನ್ನು ಮಾಧ್ಯಮಗಳು ಮಾಡಬೇಕಾಗುತ್ತದೆ; ಜನತೆಯನ್ನು ಎಚ್ಚರಿಸಬೇಕಾಗುತ್ತದೆ. ಇದರ ಜೊತೆಗೆ ಒಕ್ಕೂಟ ವ್ಯವಸ್ಥೆಯೊಳಗೆ ಬಲಿಷ್ಠ ಪ್ರಾದೇಶಿಕ ಪಕ್ಷಗಳು ಪಡೆದುಕೊಳ್ಳುವ ಹೆಚ್ಚಿನ ಪಾಲು, ಅವಕಾಶವಂಚಿತ ರಾಜ್ಯಗಳು ಅನಾದರಣೆಗೆ ಒಳಗಾಗುತ್ತಿರುವ ರೀತಿ – ಇತ್ಯಾದಿ ವಿಷಯಗಳ ಬಗ್ಗೆ ಅವು ಮಾತನಾಡಬೇಕಾಗುತ್ತದೆ. ಹಳಿ ತಪ್ಪಿದ ಗಣತಂತ್ರ ವ್ಯವಸ್ಥೆಯನ್ನು ಸರಿದಾರಿಗೆ ತರುವ ಕಾರ್ಯ ನಿರ್ವಹಿಸಬೇಕಾಗುತ್ತದೆ. ಆದರೆ, ಮಾಧ್ಯಮಗಳು ಇಂಥ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ನಿರ್ವಹಿಸುತ್ತಿವೆ? ಇದು ಮೂಲಭೂತ ಪ್ರಶ್ನೆ. ಇತ್ತೀಚಿನ ಅನಾರೋಗ್ಯಕರ ಸ್ಪರ್ಧೆ ಮಾಧ್ಯಮರಂಗದ ನೈತಿಕತೆಯನ್ನೇ ಪ್ರಶ್ನಿಸುವಷ್ಟರ ಮಟ್ಟಿಗೆ ಕೆಟ್ಟುಹೋಗಿದೆ. ದರ ಸಮರದಿಂದ ಹಿಡಿದು ಸ್ಥಳೀಯ ಮತ್ತು ವಿಶ್ವಾತ್ಮಕ ಸಮಸ್ಯೆಗಳನ್ನು ಅವು ಬಿಂಬಿಸುವಲ್ಲಿ ತೋರುತ್ತಿರುವ ದೃಷ್ಟಿ ಧೋರಣೆಗಳು ಪ್ರಶ್ನಾರ್ಹವಾಗಿದೆ.

ಇಂಥ ಹೊತ್ತಿನಲ್ಲಿ ಪತ್ರಿಕಾರಂಗ ಹಲವೊಮ್ಮೆ ತನ್ನ ವ್ಯಾಪಾರ ನೀತಿಯಲ್ಲಿ ಆದ ಲೋಪಗಳನ್ನು ಅಂಕಣಬರಹಗಳ ಮುಖೇನ ತೂಗಿಸಿಕೊಳ್ಳುವ ಕಾರ್ಯ ಮಾಡುತ್ತಿದೆ. ದಿನಪತ್ರಿಕೆಗಳಿಂದ ಹಿಡಿದು ವಾರ ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಹಲವು ಕ್ಷೇತ್ರಗಳ ತಜ್ಞರ ಅಂಕಣ ಬರಹಗಳು ಓದುಗರ ನಡುವೆ ಹೊಸ ಸಂಚಲನ ಉಂಟು ಮಾಡಿವೆ. ಇದು ಸಮಾಧಾನದ ಸಂಗತಿ.

ಕರ್ನಾಟಕದ ವಿದ್ಯಮಾನಗಳನ್ನು ಗಮನಿಸಿದಾಗ ಕನ್ನಡ-ಕನ್ನಡಿಗ-ಕರ್ನಾಟಕವನ್ನು ರಾಷ್ಟ್ರದ ರಾಜಕಾರಣದಲ್ಲಿ ಸಮರ್ಥವಾಗಿ ಬಿಂಬಿಸುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತದೆ. ನೆಲ ಜಲದ ಸಮಸ್ಯೆಯಿಂದ ಹಿಡಿದು ಭಾಷೆ ಬದುಕು ಪ್ರಾತಿನಿಧ್ಯದ ವಿಚಾರಗಳನ್ನು ಒಳಗೊಂಡು ಕರ್ನಾಟಕದ ಅರ್ಹ ಪಾಲನ್ನು ಕೇಂದ್ರದಿಂದ ಪಡೆಯುವಲ್ಲಿ ನಮ್ಮ ರಾಜಕೀಯ ಇಚ್ಛಾಶಕ್ತಿ ಹಿಂದೆ ಬಿದ್ದಿದೆ. ಇನ್ನೂ ಇದು ಆತ್ಮಾವಲೋಕನ ಮಾಡಿಕೊಂಡಂತೆ ಕಾಣುತ್ತಿಲ್ಲ. ಆದರೆ, ಈ ಲೋಪವನ್ನು ತುಂಬುವ ಹಾಗೂ ತಮ್ಮ ಪಾಲಿನ ಕಾರ್ಯವನ್ನು ಸಮರ್ಥವಾಗಿ ಮಾಡುವ ಎಚ್ಚರವನ್ನು ಮಾಧ್ಯಮಗಳು ಬೆಳೆಸಿಕೊಂಡಿವೆ. ಎಲ್ಲ ಪತ್ರಿಕೆಗಳು ಒಂದಲ್ಲ ಒಂದು ವಿಧದಲ್ಲಿ ಕೇಂದ್ರದ ಆಳುವ ವ್ಯವಸ್ಥೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ,

ಸಿಗಬೇಕಾಗಿರುವ ಅವಕಾಶಗಳ ಬಗ್ಗೆ ಅವು ದಿಟ್ಟವಾಗಿ ಬರೆದಿವೆ, ಬರೆಯುತ್ತಿವೆ. ಇದು ಮೆಚ್ಚಬೇಕಾದ ವಿಚಾರ.

ದಿನೇಶ್ ಅಮೀನ್‌ಮಟ್ಟು ಅವರ 'ದೆಹಲಿ ನೋಟ' ಅಂಕಣ ಬರಹ ಒಂದು ಅಪರೂಪದ ಹಾಗೂ ಸಕಾಲಿಕ ಸಂಕಲನ. ಸಂದರ್ಭವಶದಲ್ಲಿ ಬರೆದ ಲೇಖನಗಳು ಇವಾದರೂ ಇವು ಕರ್ನಾಟಕವನ್ನು ರಾಷ್ಟ್ರ ರಾಜಕಾರಣದ ಸಂದರ್ಭದಲ್ಲಿ ಸಮರ್ಥವಾಗಿ ಬಿಂಬಿಸುವಲ್ಲಿ ಪ್ರಧಾನ ಪಾತ್ರ ವಹಿಸಬಲ್ಲ ಸತ್ವಶಾಲಿ ಬರಹಗಳಾಗಿವೆ. ಸೈದ್ಧಾಂತಿಕ ಪೂರ್ವ ಪಕ್ಷಪಾತ ದೃಷ್ಟಿಯಿಂದಾಗಲಿ ಯಾವುದೇ ಪಕ್ಷದ ಪ್ರಣಾಳಿಕೆಗೆ ಬದ್ಧವಾದ ದೃಷ್ಟಿಯಿಂದಾಗಲಿ ಇವುಗಳ ನೋಟ ಮಲಿನಗೊಂಡಿಲ್ಲ. ಪತ್ರಿಕಾಧರ್ಮ ಹಾಗೂ ಪ್ರಜಾಪ್ರಭುತ್ವದಲ್ಲಿನ ಸಾಮಾಜಿಕ ನ್ಯಾಯ ಪ್ರಾದೇಶಿಕ ಅಸ್ಮಿತೆಗಳಿಗೆ ನಿಷ್ಠವಾದಂತೆ ಇಲ್ಲಿನ ಆಲೋಚನೆ, ಚಿಂತನೆಗಳು ಹರಿದಿವೆ. ಜಾಗತಿಕ ವಿದ್ಯಮಾನಗಳು, ರಾಷ್ಟ್ರೀಯ ವಿದ್ಯಮಾನಗಳು ಇಲ್ಲಿ ಚರ್ಚೆಗೆ ಬಂದರೂ ಆ ಚರ್ಚೆಗಳ ಕೇಂದ್ರಬಿಂದು ಕರ್ನಾಟಕದ ಸ್ಥಳೀಯತೆ ಎಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಇಲ್ಲಿ ಚರ್ಚಿತವಾಗುವ ಇಶ್ಯೂಗಳು ಕರ್ನಾಟಕದ ಪರವಾಗಿ ವಕಾಲತ್ತು ವಹಿಸುವ ಏಕಪಕ್ಷೀಯ ನಿಲುವಿನಲ್ಲಿ ನಿಂತಿಲ್ಲ; ಅದಕ್ಕಿಂತ ಮುಖ್ಯವಾಗಿ ಒಕ್ಕೂಟ ವ್ಯವಸ್ಥೆಯೊಳಗಿನ ಸಮಾನಧರ್ಮವನ್ನು ಗೌರವಿಸುವ ಹಕ್ಕಿನ ರೀತಿಯಲ್ಲಿ ಅದನ್ನು ಪ್ರತಿಪಾದಿಸುವ ನೈತಿಕ ಕೆಚ್ಚಿನಿಂದ ಬೆಳಗಿವೆ. ಹೀಗಾಗಿ ಇವು ಕರ್ನಾಟಕದ ಆಡಳಿತ ಚುಕ್ಕಾಣಿ ಹಿಡಿದವರಿಗೆ ಕೈದೀವಿಗಳಾಗುವಷ್ಟೇ ಪ್ರಮಾಣದಲ್ಲಿ ಬೇರೆ ರಾಜ್ಯಗಳ ಹಾಗೂ ರಾಷ್ಟ್ರೀಯ ನಾಯಕರುಗಳಿಗೂ ಮಾರ್ಗದರ್ಶಿಗಳಾಗಬಲ್ಲ ಶಕ್ತಿಬಿಂದುಗಳು. ಇಂಥ ಆರೋಗ್ಯಪೂರ್ಣ ಚಿಂತನೆಯ ಬರಹಗಳನ್ನು ಪ್ರಕಟಿಸಲು ಅನುಮತಿ ನೀಡಿದ ಪ್ರಜಾವಾಣಿಯ ಸಂಪಾದಕರಾದ ಶ್ರೀ ಕೆ.ಎನ್. ತಿಲಕ್ ಕುಮಾರ್ ಅವರಿಗೆ ಪ್ರಾಧಿಕಾರದ ಪರವಾಗಿ ಆತ್ಮೀಯ ಕೃತಜ್ಞತೆಗಳು. ಈ ಪುಸ್ತಕ ರೂಪಿಸುವಲ್ಲಿ ಸಹಕಾರ ನೀಡಿದ ಡಾ॥ ಜಿ.ವಿ. ಆನಂದಮೂರ್ತಿ, ಶ್ರೀ ನಾಗರಾಜಶೆಟ್ಟಿ ಅವರಿಗೆ ಕೃತಜ್ಞತೆಗಳು.

ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಪರಿವಿಡಿ

ಭಾಗ : ಎರಡು

ಭಾಗ : ಒಂದು

ಸಾಂಸ್ಕೃತಿಕ ರಾಯಭಾರ

ಇಂದು ರಾಜ್ಯವನ್ನು ಹೊರನಾಡಿನಲ್ಲಿ ಪ್ರತಿನಿಧಿಸುತ್ತಿರುವವರು ಯಾರು? ರಾಜಕಾರಣಿಗಳು, ಸಾಹಿತಿಗಳು, ಸಂಗೀತಗಾರರು, ಕ್ರೀಡಾಪಟುಗಳು, ವಿಜ್ಞಾನಿಗಳು, ಉದ್ಯಮಿಗಳು, ಜನಸಾಮಾನ್ಯರು.... ಯಾರು? ಮೊದಲ ಸಾಲಿನಲ್ಲಿರುವ ಪ್ರತಿನಿಧಿಗಳು- ರಾಜಕಾರಣಿಗಳು, ಜನಸಾಮಾನ್ಯರದ್ದು ಕೊನೆಯ ಸಾಲು.

ಲಾಲುಪ್ರಸಾದ್ ಯಾದವ್ ಬಗ್ಗೆ ಮಾಧ್ಯಮಗಳು ಬಿಡಿಸಿಟ್ಟ ಚಿತ್ರವನ್ನು ನೋಡಿ ಬಿಹಾರದ ಜನರೆಲ್ಲ ಭ್ರಷ್ಟರು, ಗೂಂಡಾಗಳು ಎಂದು ತಿಳಿದುಕೊಂಡವರಿದ್ದಾರೆ. ಬಾಳ್‌ಠಾಕ್ರೆ ಮಾತಿನ ಅಬ್ಬರ ನೋಡಿ ಮುಂಬೈನ ಮರಾಠಿಗಳೆಲ್ಲ ಹುಲಿ ಮಂಡೆಗಳೆಂದು ದ್ವೇಷದ ಬೆಂಕಿ ಕಾರುವವರಿದ್ದಾರೆ. ಕಾವೇರಿ ನೀರಿನ ಜಗಳದಲ್ಲಿ ಜಯಲಲಿತಾ-ಕರುಣಾನಿಧಿ ಹೇಳಿಕೆಗಳನ್ನು ಓದಿ ತಮಿಳರಷ್ಟು ಭಾಷಾಂಧರು ಯಾರೂ ಇಲ್ಲವೆಂದು ಜಗಳಕ್ಕಿಳಿಯುವವರೂ ಕಡಿಮೆಯೇನಿಲ್ಲ. ಆದರೆ ಆ ರಾಜ್ಯಗಳಲ್ಲಿ ಸುತ್ತಾಡಿದರೆ, ಅಲ್ಲಿನ ಜನರ ಜತೆ ಒಡನಾಟ ಮಾಡಿದರೆ, ಆ ರಾಜ್ಯಗಳ ಚರಿತ್ರೆಯ ಪುಟಗಳತ್ತ ಕಣ್ಣಾಡಿಸಿದರೆ, ಬಹುಶಃ ರಾಜಕಾರಣಿಗಳನ್ನು ನೋಡಿ ಮನದಲ್ಲಿ ಚಿತ್ರಿಸಿಕೊಂಡ ಚಿತ್ರ ಎಷ್ಟೊಂದು ಪೊಳ್ಳುತನವೆಂದು ಅನಿಸದೆ ಇರದು. ಇಂತಹವರ ಬಗ್ಗೆ ತಪ್ಪು ತಿಳಿದುಕೊಂಡೆವಲ್ಲಾ ಎನ್ನುವ ಅಪರಾಧಿ ಭಾವ- ನಮ್ಮನ್ನು ಕಾಡದೆ ಇರದು.

ಸಾಮಾನ್ಯ ಬಿಹಾರಿಗಳು ಮೂಲತಃ ವಿನಯಶೀಲರು. ಬಡತನ-ಅಸಹಾಯಕತೆ ಅವರನ್ನು ಇನ್ನಷ್ಟು ಮೆತ್ತಗಾಗಿಸಿದೆ. ನಮ್ಮ ಉತ್ತರ ಕರ್ನಾಟಕದ ಮಂದಿಯಂತೆ, ಭಾಷೆ ಸ್ವಲ್ಪ ಗಡಸು, ಆದರೆ ಮನಸ್ಸು ಅಷ್ಟೇ ಮೃದು. ಬೇರೆ ರಾಜ್ಯದಿಂದ ಬಂದವರೆಂದು ತಿಳಿದರೆ ಅವರು ಇನ್ನಿಲ್ಲದ ಪ್ರೀತಿ- ಅಭಿಮಾನದಿಂದ ಕಾಣುತ್ತಾರೆ. ಅದಕ್ಕೆ ಕಾರಣವೂ ಇದೆ. ಬಿಹಾರಿಗಳು ಕೂಪಮಂಡೂಕಗಳಲ್ಲ. ಸಹಬಾಳ್ವೆಯ ಮಹತ್ವ ಅವರಿಗೆ ಗೊತ್ತಿದೆ. ಆ ರಾಜ್ಯದ ಜನಸಂಖ್ಯೆಯ ಕಾಲುಭಾಗ ಬೇರೆ, ಬೇರೆ ರಾಜ್ಯಗಳಲ್ಲಿದೆ. ಗ್ರಾಮೀಣ ಬಿಹಾರ ಈಗಲೂ ಮನಿಆರ್ಡರ್ ಆರ್ಥಿಕತೆಯ ಮೇಲೆ ನಡೆಯುತ್ತಿದೆ. ಮುಂಬೈನ ಚಾಳ್‌ಗಳಿರಲಿ, ಅಪಾರ್ಟ್‌ಮೆಂಟ್‌ಗಳಿರಲಿ, ತಲೆಮಾರುಗಳಿಂದ ಒಂದು ಕುಟುಂಬದಂತೆ ಬಾಳಿಕೊಂಡು ಬಂದ ಕನ್ನಡಿಗರು ಮತ್ತು ಮರಾಠಿಗಳು ಸಾವಿರ-ಸಾವಿರ ಸಂಖ್ಯೆಯಲ್ಲಿ ಸಿಗುತ್ತಾರೆ. ಸಾಮಾನ್ಯ ಮರಾಠಿಗಳು ಹುಂಬರು, ಆದರೆ ಸಹೃದಯಿಗಳು. ಅವರಲ್ಲಿ ಕನ್ನಡಿಗರ ಉದ್ಯಮಶೀಲತೆಯ ಬಗ್ಗೆ ಸ್ವಲ್ಪ ಅಸೂಯೆ ಇದೆ. ಅದಕ್ಕಿಂತಲೂ ಹೆಚ್ಚಿನ ವಿಶ್ವಾಸ ಇದೆ. ಬಾಳ್‌ಠಾಕ್ರೆ ಶಿವಾಜಿ ಪಾರ್ಕ್ ಮೈದಾನದಲ್ಲಿ ನಿಂತು ಮದ್ರಾಸಿಗಳ ಬಗ್ಗೆ ಎಷ್ಟೇ ಬೆಂಕಿ ಕಾರಲಿ, ತನ್ನ ಭದ್ರತಾ ಸಿಬ್ಬಂದಿಯ ಆಯ್ಕೆಯ ಪ್ರಶ್ನೆ ಬಂದಾಗ ಆತನಿಗೆ ಶೆಟ್ಟಿಲೋಗ್ ಮೇಲೆಯೇ ಅಪಾರ ವಿಶ್ವಾಸ.

ತಮಿಳರು ಭಾಷಾಂಧರು ಎಂದು ಮೂಗುಮುರಿಯುವುದು ಸುಲಭ. ಆದರೆ ಅದೇ ತಮಿಳರು ಕನ್ನಡತಿ ಜಯಲಲಿತಾ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಇನ್ನೊಬ್ಬ ಕನ್ನಡಿಗ ರಜನಿಕಾಂತ್‌ನನ್ನು ಹೃದಯ ಸಿಂಹಾಸನದಲ್ಲಿ ಕೂರಿಸಿ ಮೆರೆಸುತ್ತಿದ್ದಾರೆ. ಆ ರಾಜ್ಯವನ್ನು ಹತ್ತು ವರ್ಷ ಆಳಿದ ಎಂಜಿಆರ್ ನೆರೆಯ ಕೇರಳ ರಾಜ್ಯದವರು. ಕರುಣಾನಿಧಿ ತೆಲುಗು ಮೂಲದವರು. ಹೆಚ್ಚೇಕೆ ದ್ರಾವಿಡ ಚಳುವಳಿಯ ನೇತಾರ ಪೆರಿಯಾರ್ ರಾಮಸ್ವಾಮಿ ಅವರ ಪೂರ್ವಿಕರು ಬಳ್ಳಾರಿಯಿಂದ ಚಿತ್ರದುರ್ಗದ ಮೂಲಕ ಈರೋಡ್‌ಗೆ ಹೋದವರು. ಎಲ್ಲ ರಾಜ್ಯಗಳಲ್ಲಿಯೂ ಹೊರ ರಾಜ್ಯದವರಿದ್ದಾರೆ. ರಾಜಕಾರಣಿಗಳು ದ್ವೇಷದ ಕಿಚ್ಚು ಹಚ್ಚಿದಾಗ ಆಗಾಗ ನೆಲ-ಜಲ-ಭಾಷೆಯ ಸಂಘರ್ಷ ಹತ್ತಿಕೊಂಡಿರಬಹುದು, ಉಳಿದಂತೆ ಸಹಬಾಳ್ವೆಗೆ ಅವರು ಒಗ್ಗಿಕೊಂಡಿದ್ದಾರೆ. ಅದರಲ್ಲಿಯೇ ನೆಮ್ಮದಿಯನ್ನು ಕಾಣುತ್ತಿದ್ದಾರೆ.

ನಿಜಕ್ಕೂ ಕನ್ನಡಿಗರು ಭಾಷಾಂಧರು, ಜಗಳಗಂಟರು ಆಗಿದ್ದರೆ ಬೆಂಗಳೂರಿನಲ್ಲಿ ಶೇಖಡ 65 ರಷ್ಟು ಹೊರರಾಜ್ಯದವರು ಯಾಕೆ ತುಂಬಿಕೊಳ್ಳುತ್ತಿದ್ದರು? ಕನ್ನಡದ ಗಂಧ-ಗಾಳಿ ಇಲ್ಲದಿದ್ದರೂ ಹೊರ ರಾಜ್ಯಗಳಿಂದ ಬಂದವರಿಗೆ ಕರ್ನಾಟಕದಲ್ಲಿ ಸುತ್ತಾಡಲು ಭಾಷೆ ಅಡ್ಡಿಯಾಗುವುದಿಲ್ಲ. ನೀರಿನ ಜಗಳ, ಗಡಿ ತಂಟೆಯ ಬಗ್ಗೆ ಕೇಳದ ಮತ್ತು ಕೇಳಿದ್ದೇ ನಿಜವೆಂದು ಬರೆದ ದೆಹಲಿ ಮೂಲದ

ಪತ್ರಕರ್ತರು ಚುನಾವಣೆಯ ಸಮಯದಲ್ಲಿ ಕರ್ನಾಟಕದಲ್ಲಿ ಸುತ್ತಾಡಿ ಬಂದ ನಂತರ ಹೊಸ ರಾಗ ಹೊರಡಿಸುತ್ತಾರೆ. ಕರ್ನಾಟಕದ ಸಾಮಾನ್ಯ ಜನರ ನಡವಳಿಕೆಯ ಬಗ್ಗೆ ಅವರ ಕೊಂಡಾಟಕ್ಕೆ ಕೊನೆ ಇರುವುದಿಲ್ಲ. ಹಳೆ ಮೈಸೂರಿನ ಕೆಲವು ಭಾಗ ಬಿಟ್ಟರೆ ಉಳಿದೆಡೆ ಹಿಂದಿ ಚಲ್ತಾ ಹೈ ಎನ್ನುವುದೇ ಅವರಿಗೆ ಹೊಸ ಅನುಭವ.

ಈ ಸಹೃದಯಿ ಸಾಮಾನ್ಯ ಜನತೆಯ ಮೂಲಕ ಒಂದು ರಾಜ್ಯವನ್ನು ನೋಡುವ, ಅರ್ಥೈಸುವ ಪ್ರಯತ್ನ ಯಾಕೆ ನಡೆಯುತ್ತಿಲ್ಲ? ಕೇವಲ ರಾಜಕೀಯ ಪ್ರತಿನಿಧಿಗಳಾಗಿರುವ ರಾಜಕಾರಣಿಗಳ ಆಟಾಟೋಪಕ್ಕೆ ಯಾಕೆ ಭೂತಗನ್ನಡಿ ಹಿಡಿಯಲಾಗುತ್ತಿದೆ? ರಾಜಕಾರಣಿಗಳು ಬಂದ ಸಮಾಜದಿಂದಲೇ ದೇಶ ಹೆಮ್ಮೆ ಪಡುವಂತಹ ಸಾಹಿತಿಗಳು, ಸಂಗೀತಗಾರರು, ಚಿತ್ರಕಲಾವಿದರು, ಕ್ರೀಡಾಪಟುಗಳು, ವಿಜ್ಞಾನಿಗಳು ಹೀಗೆ ವಿಭಿನ್ನ ಕ್ಷೇತ್ರಗಳ ಸಾಧಕರು ಉದಯಿಸಿಲ್ಲವೇ? ಅವರನ್ನು ಅಕ್ಕರೆ-ಅಭಿಮಾನಗಳಿಂದ ಪೊರೆದವರು ಜನಸಾಮಾನ್ಯರು. ವ್ಯಕ್ತಿ ಪರಿಸರದ ಕೂಸು ಎಂದಾದರೆ ಈ ಸಾಧಕರಿಗೆ ಸಿಗುವ ಗೌರವದಲ್ಲಿ ಪರಿಸರದ ಪಾಲಿಲ್ಲವೇ?

ಉಳಿದ ರಾಜ್ಯಗಳ ವರ್ತಮಾನದ ಸ್ಥಿತಿಗೆ ಹೋಲಿಸಿಕೊಂಡರೆ ಕರ್ನಾಟಕದ ಭಾಗ್ಯಕ್ಕೆ ಎಣೆಯಿಲ್ಲ. ರಾಜಕೀಯೇತರ ಕ್ಷೇತ್ರಗಳಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಪಡೆದ ಕನ್ನಡಿಗರ ಪಟ್ಟಿ ದೊಡ್ಡದು. ಸಂಗೀತದಿಂದ ಕ್ರಿಕೆಟ್‌ವರೆಗೆ, ಸಾಹಿತ್ಯದಿಂದ ವಿಜ್ಞಾನದ ವರೆಗೆ ವಿಭಿನ್ನ ಕ್ಷೇತ್ರಗಳಲ್ಲಿ ಮಿಂಚುತ್ತಿರುವ ಕನ್ನಡಿಗರಿದ್ದಾರೆ. ಕುಮಾರ ಗಂಧರ್ವ, ಸವಾಯಿ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ, ಸರ್.ಎಂ. ವಿಶ್ವೇಶ್ವರಯ್ಯ, ವರನಟ ರಾಜ್‌ಕುಮಾರ್, ಕುವೆಂಪು, ಶಿವರಾಮ ಕಾರಂತ, ಬೇಂದ್ರೆ, ಮಾಸ್ತಿ, ಬಿ.ವಿ. ಕಾರಂತ, ಶ್ರೀರಂಗ, ಡಾ. ರಾಜಾರಾಮಣ್ಣ ಮೊದಲಾದವರು ನಮ್ಮ ನಡುವೆ ಈಗ ಇಲ್ಲ. ಚಂದ್ರಶೇಖರ್, ಪ್ರಸನ್ನ, ಜಿ.ಆರ್. ವಿಶ್ವನಾಥ್ ಮೊದಲಾದ ಕ್ರೀಡಾಪಟುಗಳು ಮರೆಗೆ ಸರಿದಿದ್ದಾರೆ ಎನ್ನುವುದು ನಿಜ. ಆದರೆ ಗಂಗೂಬಾಯಿ ಹಾನಗಲ್, ಭೀಮಸೇನ ಜೋಷಿ, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಪ್ರೊ. ಯು.ಆರ್.ರಾವ್, ಸಿ.ಎನ್.ಆರ್. ರಾವ್, ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಗಿರೀಶ್ ಕಾಸರವಳ್ಳಿ, ಎಂ.ಎಸ್. ಸತ್ಯು, ಆರ್.ಕೆ. ಲಕ್ಷ್ಮಣ್, ಎನ್.ಆರ್. ಕಾಸರವಳ್ಳಿ, ಎನ್.ಆರ್. ನಾರಾಯಣಮೂರ್ತಿ ಇದ್ದಾರಲ್ಲ. ಇವರು ಯಾಕೆ ಹೊರನಾಡಿನಲ್ಲಿ ಕರ್ನಾಟಕದ ಪ್ರತಿನಿಧಿಗಳಾಗುವುದಿಲ್ಲ?

ಕರ್ನಾಟಕ ಎಂಬ ಸಿರಿಗಂಧದ ನಾಡನ್ನು ದೇಶದ ರಾಜಧಾನಿಯಲ್ಲಿ ಮೂಸುವವರಿಲ್ಲ. ದೇವೇಗೌಡರು ಪ್ರಧಾನಿಯಾಗಿದ್ದಾಗ ಕರ್ನಾಟಕದ ಹೆಸರು ಸ್ವಲ್ಪ ಕಾಲ ದಿಲ್ಲಿಯವರ ನಾಲಗೆಯಲ್ಲಿ ನಲಿದಾಡಿತ್ತು. ಕೊನೆಗೆ ಕೊನೆಗೆ ಆ ನಾಲಗೆ ಕೂಡಾ ಅಡ್ಡಾದಿಡ್ಡಿ ಹೊರಳಾಡತೊಡಗಿತು.

ಸಂಸತ್‌ಭವನದ ಆವರಣದಲ್ಲಿ ಯಾರ ಕಣ್ಣಿಗೂ ಹೆಚ್ಚು ಬೀಳದ ಜಾಗದಲ್ಲಿ ಬಸವೇಶ್ವರರ ಪ್ರತಿಮೆ ಇದೆ. ಅದೇ ದಿನ ಸ್ಥಾಪಿಸಿದ ಛತ್ರಪತಿ ಶಿವಾಜಿ ಪ್ರತಿಮೆಯು ಮುಖ್ಯದ್ವಾರದ ಪಕ್ಕದಲ್ಲಿಯೇ ಇದೆ. ಕಿತ್ತೂರು ಚೆನ್ನಮ್ಮ ಪ್ರತಿಮೆಯು ಬಂದು ದೆಹಲಿಗೆ ಬಿದ್ದು ತಿಂಗಳುಗಳು ಕಳೆದಿವೆ. ಅದಕ್ಕೆ ಎದ್ದು ನಿಲ್ಲುವ ಭಾಗ್ಯ ಇನ್ನೂ ಬಂದಿಲ್ಲ. ಸಂಸತ್‌ಭವನದ ಸೆಂಟ್ರಲ್ ಹಾಲ್‌ನಲ್ಲಿ ಈಗ ಡಿಎಂಕೆ ನಾಯಕರು ಕೇಂದ್ರದ ಮಾಜಿ ಸಚಿವ ಮುರಸೋಳಿ ಮಾರನ್ ಪ್ರತಿಮೆ ಸ್ಥಾಪನೆಗೆ ಒತ್ತಡ ಹೇರುತ್ತಿದ್ದಾರೆ. ಅಲ್ಲಿ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರಿಗೆ ಇನ್ನೂ ಜಾಗ ಸಿಕ್ಕಿಲ್ಲ. ದೆಹಲಿಯಲ್ಲಿ ಉತ್ತರ ಭಾರತದ ದೊಡ್ಡ-ಸಣ್ಣ ನಾಯಕರದ್ದು ಮಾತ್ರವಲ್ಲ ಕಾಮರಾಜ, ರಾಜಾಜಿ, ತ್ಯಾಗರಾಜನ್ ಹೆಸರಿನ ರಸ್ತೆಗಳು, ಗೋಲ್‌ಚಕ್ಕರ್ (ವೃತ್ತ)ಗಳು ಇವೆ. ಯಾವುದೋ ಕಾಲದಲ್ಲಿ ಜನರಲ್ ಕೆ.ಎಂ. ಕಾರಿಯಪ್ಪ ಹೆಸರಲ್ಲಿನ ಒಂದು ರಸ್ತೆ ಬಿಟ್ಟರೆ ಕನ್ನಡಿಗರ ಹೆಸರು ದೆಹಲಿಯಲ್ಲಿ ಎಲ್ಲೂ ಇಲ್ಲ. ಕರ್ನಾಟಕದ ಗಣ್ಯ-ಮಾನ್ಯರ ಬಗೆಗಿನ ಈ ರೀತಿಯ ಅವಗಣನೆ ಬಗ್ಗೆ ರಾಜಕಾರಣಿಗಳು ಬಾಯಿ ಬಿಚ್ಚಿಲ್ಲ ಎನ್ನುವುದು ನಿಜ. ಆದರೆ ಉಳಿದವರೆಷ್ಟು ದನಿ ಎತ್ತಿದ್ದಾರೆ!

ತಪ್ಪು ಎರಡೂ ಕಡೆಗಳಿಂದಲೂ ಆಗಿದೆ. ರಾಜಕಾರಣಿಗಳು ಬೇರೆಯವರ ಪ್ರಸಿದ್ಧಿ-ಪ್ರಾಮುಖ್ಯವನ್ನು ಸಹಿಸುವುದಿಲ್ಲ ಎಂಬ ಆರೋಪದಲ್ಲಿ ಹುರುಳಿಲ್ಲದೆ ಇಲ್ಲ. ರಾಜಕೀಯವನ್ನೇ ವೈಭವೀಕರಿಸುವ ಮಾಧ್ಯಮಗಳು ಇದಕ್ಕೆ ಕಾರಣ ಎನ್ನುವುದು ಕೂಡಾ ಸತ್ಯ. ಆದರೆ ನಿಜಕ್ಕೂ ನಮ್ಮ ರಾಜಕೀಯೇತರ ಗಣ್ಯರು ತಮ್ಮ ಸಾಧನೆಯ ಕ್ಷೇತ್ರದಿಂದ ಹೊರಗೆ ಕತ್ತುಚಾಚುವ ಪ್ರಯತ್ನ ಮಾಡಿದ್ದು ಕಡಿಮೆ. ಒಬ್ಬ ರಾಜಕಾರಣಿಗೆ ಮತದಾರನ ಋಣ ಇರುವುದಾದರೆ ಒಬ್ಬ ಸಾಹಿತಿಗೆ ಓದುಗನ, ಸಂಗೀತಗಾರನಿಗೆ ಶ್ರೋತೃವಿನ, ನಟ-ನಿರ್ದೇಶಕನಿಗೆ ಪ್ರೇಕ್ಷಕನ, ಕ್ರೀಡಾಪಟುವಿಗೆ ಕ್ರೀಡಾಭಿಮಾನಿಯ ಋಣ ಇರುವುದಿಲ್ಲವೇ? ಆತನ ನಿತ್ಯ ಬದುಕಿನ ಸುಖ-ದುಃಖ ತಮಗೆ ಸಂಬಂಧಿಸಿದ ವಿಷಯವಲ್ಲವೇ? ಕ್ಷುಲ್ಲಕ ವಿಷಯಗಳನ್ನೆತ್ತಿಕೊಂಡು ನಡೆಸುವ ಸಾಂಸ್ಕೃತಿಕ ರಾಜಕೀಯದಲ್ಲಿ ವ್ಯರ್ಥವಾಗಿ ಕಳೆದುಹೋಗುವ ಸಮಯ-ಶಕ್ತಿಯನ್ನು ಸಮೂಹ ಹಿತದ ದೊಡ್ಡ ಕೆಲಸಕ್ಕೆ ಯಾಕೆ ವಿನಿಯೋಗಿಸಬಾರದು?

ಕನ್ನಡಿಗರು ನಾಚಿಕೊಳ್ಳುವಂತೆ ಗಂಗೂಬಾಯಿ ಹಾನಗಲ್ ಅವರನ್ನು ಮಹಾರಾಷ್ಟ್ರ ಸರ್ಕಾರ ಕರೆದು ಸನ್ಮಾನ ಮಾಡುತ್ತದೆ. ನಾನಾ ಪಾಟೇಕರ್ ಅವರನ್ನು ಆಯೀ ಎಂದು ಮಾತೃವಾತ್ಸಲ್ಯದ ಮಳೆಗರೆಯುತ್ತಾನೆ. ಆದರೆ ಅದೇ ಆಯಿಯ ಹುಬ್ಬಳ್ಳಿ ಮನೆಯ ನಳದಲ್ಲಿ ವಾರಕ್ಕೊಮ್ಮೆ ಕುಡಿಯುವ ನೀರು ಬರುತ್ತದೆ. ಕುಡಿಯುವ ನೀರಿಗಾಗಿ ಕರ್ನಾಟಕ ಮಹದಾಯಿಯಿಂದ ಏಳು ಟಿಎಂಸಿ ನೀರು ಕೇಳಿದರೆ ಗೋವಾ ಸರ್ಕಾರದ ಜತೆಗೂಡಿ ಮಹಾರಾಷ್ಟ್ರ ಅಡ್ಡಗಾಲು ಹಾಕಿ ಕೂತಿದೆ. ನೀವು ಕೊಟ್ಟ ಮಾನ-ಸನ್ಮಾನಕ್ಕೆ ಋಣಿ. ಆದರೆ ನನ್ನ ಜನ ಬಾಯಾರಿಕೆಯಿಂದ

ಒಣಗಿಹೋಗುತ್ತಿದ್ದಾರೆ. ಅವರಿಗೆ ನೀರುಣಿಸುವ ಯೋಜನೆಗೆ ಯಾಕೆ ಅಡ್ಡಗಾಲು ಹಾಕ್ತೀ ತವಸ್ಮಾ ಎಂದು ಗಂಗೂಬಾಯಿ ಅವರು ಯಾಕೆ ಮಹಾರಾಷ್ಟ್ರದ ಮುಖ್ಯಮಂತ್ರಿಯ ಕಿವಿ ಹಿಂಡಬಾರದು?

ಬೆಂಗಳೂರಿನ ಮೂಲಸೌಕರ್ಯದ ಬಗ್ಗೆ ಸದಾ ದನಿ ಎತ್ತುವ ಎನ್. ಆರ್. ನಾರಾಯಣಮೂರ್ತಿ ಅವರು ಹಿಂದುಳಿದ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಎಂದಾದರೂ ಮಾತನಾಡಿದ್ದಿದೆಯೇ? ಬೆಂಗಳೂರಿನ ಜನರ ಮುಂಗೈಗೆ ಪ್ರಧಾನಿಯವರು ವಿಶೇಷ ಪ್ಯಾಕೇಜ್‌ನ ಬೆಣ್ಣೆ ಹಚ್ಚಿ ವರ್ಷ ಎರಡಾಗುತ್ತಾ ಬಂತು. ಭಾರತಕ್ಕಾಗಿ ಆಡುವ ಕ್ರಿಕೆಟಿಗ ರಾಹುಲ್–ದ್ರಾವಿಡ್ ಅವಕಾಶ ಸಿಕ್ಕಿದಾಗ ಈ ಬಗ್ಗೆ ಪ್ರಧಾನಿಯವರಿಗೆ ಯಾಕೆ ನೆನಪಿಸಬಾರದು? ರಾಜ್ಯದ ರೈತರ ಆತ್ಮಹತ್ಯೆ, ಅನಂತಮೂರ್ತಿ, ಕಾರ್ನಾಡ್, ಕಾಸರವಳ್ಳಿಯವರಿಗೆ ಸಂಬಂಧಿಸಿದ ವಿಷಯ ಅಲ್ಲವೆ? ಸಮಯ ಬಂದಾಗ ಇವರೆಲ್ಲ ಕೂಡಿ ನೆಲ–ಜಲ–ಭಾಷೆಯ ವಿವಾದದ ಹಿಂದಿನ ಸತ್ಯವನ್ನು ದೇಶದ ಜನರ ಮುಂದಿಡುವ ಪ್ರಯತ್ನ ಯಾಕೆ ಮಾಡಬಾರದು? ರಾಜಕಾರಣಿಗಳ ಬಗ್ಗೆ ಇಂದು ವಿಶ್ವಾಸ ಕಳೆದುಕೊಳ್ಳುತ್ತಿರುವ ಜನತೆ ಇವರ ಮಾತಿಗೆ ಕಿವಿಗೊಡಬಹುದೇನೋ?

ದುರದೃಷ್ಟವೆಂದರೆ ಸಮೂಹದ ಹಿತ ಕಾಯುವ ಸಾಮಾಜಿಕ ಜವಾಬ್ದಾರಿಯನ್ನು ಎಲ್ಲರೂ ರಾಜಕಾರಣಿಗಳಿಗೆ ಒಪ್ಪಿಸಿಬಿಟ್ಟಿದ್ದಾರೆ! ಒಳ್ಳೆಯದೊ, ಕೆಟ್ಟದೊ ಅವರೇ ಸದಾ ಸುದ್ದಿಯಲ್ಲಿರುತ್ತಾರೆ. ಅವರ ನಡೆ–ನುಡಿಯನ್ನು ನೋಡಿಯೇ ಹೊರಗಿನ ಜನ ರಾಜ್ಯದ ಬೆಲೆ ಕಟ್ಟುತ್ತಾರೆ, ಅದು ಎಂತಹ ಬೆಲೆ?

O

26-11-2006

ಶಾಸ್ತ್ರೀಯ ಭಾಷೆಯ ಕನಸು

ಕರ್ನಾಟಕದ ಸುವರ್ಣ ಮಹೋತ್ಸವ ಸಂಭ್ರಮದ ಸಮಯದಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಕಿರೀಟ ತೊಡಿಸಿ ಮೆರೆಸಬೇಕೆಂಬ ಕನ್ನಡಿಗರ ಕನಸು ಇನ್ನೂ ಕೈಗೂಡಿಲ್ಲ. ಕನ್ನಡಕ್ಕೆ ಈ ಕಿರೀಟಧಾರಣೆಯ ಭಾಗ್ಯ ಎಂದಾದರೂ ಒಂದು ದಿನ ಬರಬಹುದೇ? ತೆರೆಮರೆಯಲ್ಲಿನ ಕಾಣದ ಕೈಗಳ ಆಟ ಮತ್ತು ಅದನ್ನು ಎದುರಿಸಲಾಗದ ಕನ್ನಡಿಗರ ನಿಸ್ಸಹಾಯಕತೆಯನ್ನು ನೋಡಿದರೆ ಕನ್ನಡ ಈ ಗೌರವಕ್ಕೆ ಭಾಜನವಾಗಬಹುದೆಂಬ ಬಗ್ಗೆ ಭರವಸೆ ಮೂಡುವುದಿಲ್ಲ.

ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಬೇಡಿಕೆಗಳನ್ನು ಪರಿಶೀಲಿಸಲು ಕೇಂದ್ರ ಸಂಸ್ಕೃತಿ ಇಲಾಖೆ 2004ರ ನವೆಂಬರ್ ಒಂದರಂದು (ಎಂತಹ ಪ್ರಶಸ್ತ ದಿನ) ಐವರು ಭಾಷಾತಜ್ಞರ ಸಮಿತಿ ರಚಿಸಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೇ ಅದಕ್ಕೆ ಸಂಚಾಲಕರು. ಸರಿಯಾಗಿ ಎರಡು ವರ್ಷಗಳು ಕಳೆದಿವೆ. ಇಲ್ಲಿಯವರೆಗೆ ಸಮಿತಿ ಅಧಿಕೃತವಾಗಿ ತನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ನೀಡಿಲ್ಲ. ಸಮಿತಿ ಮೂರು ಬಾರಿ ಸೇರಿದೆ. ಕೊನೆಯ ಸಭೆ ನಡೆದದ್ದು ಆರು ತಿಂಗಳ ಹಿಂದೆ.

ತಮಿಳು ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಲು ಪ್ರಧಾನಿ ಕಾರ್ಯಾಲಯ ಖುದ್ದಾಗಿ ಆಸಕ್ತಿ ವಹಿಸಿ ರಚಿಸಿದ್ದ ಸಮಿತಿ ಹೆಚ್ಚುಕಡಿಮೆ ಮೂರು ತಿಂಗಳ ಅವಧಿಯಲ್ಲಿ ತನ್ನ ಕೆಲಸ ಮುಗಿಸಿತ್ತು. ತಮಿಳರ ಬೇಡಿಕೆಯನ್ನೊಳಗೊಂಡ

ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಘೋಷಣೆಯಾಗಿದ್ದು ಮೇ ತಿಂಗಳಲ್ಲಿ, ಅಕ್ಟೋಬರ್ ತಿಂಗಳಲ್ಲಿ ನಿರ್ಧಾರ ಹೊರಬಿದ್ದಿತು. ಆ ಸಮಿತಿಯಲ್ಲಿದ್ದ ಇಬ್ಬರು ಸದಸ್ಯರಲ್ಲೊಬ್ಬರು ಮೈಸೂರಿನ ಕೇಂದ್ರ ಭಾರತೀಯ ಭಾಷೆಗಳ ಸಂಸ್ಥೆಯ ನಿರ್ದೇಶಕ ಉದಯನಾರಾಯಣ್ ಸಿಂಗ್, ಇನ್ನೊಬ್ಬರು ವಿಶ್ವಖ್ಯಾತಿಯ ಭಾಷಾ ಶಾಸ್ತ್ರಜ್ಞ ಪ್ರೊ. ಬಿ.ಎಚ್. ಕೃಷ್ಣಮೂರ್ತಿ.

ಈಗಿನ ಸಮಿತಿಯಲ್ಲಿ ಹಿಂದಿನ ಇಬ್ಬರು ಭಾಷಾತಜ್ಞರ ಜತೆ ಜೆಎನ್‌ಯುನ ಡಾ. ಅನ್ವಿತಾ ಅಬ್ಬಿ, ದೆಹಲಿ ವಿಶ್ವವಿದ್ಯಾಲಯದ ಡಾ. ಕೆ.ವಿ. ಸುಬ್ಬಾರಾವ್, ಕಾನ್ಪುರ ಐಐಟಿಯ ನಿವೃತ್ತ ಪ್ರೊಫೆಸರ್ ಡಾ. ಬಿ.ಎನ್. ಪಟ್ನಾಯಕ್ ಕೂಡಾ ಸದಸ್ಯರು. ಈ ಮೂವರು ಸದಸ್ಯರು ಕೂಡಾ ಅಂತರರಾಷ್ಟ್ರೀಯ ಖ್ಯಾತಿಯ ಭಾಷಾತಜ್ಞರು. ಅವರ ಪಾಂಡಿತ್ಯ, ನಿಷ್ಪಕ್ಷಪಾತ ನಿಲುವು ಮತ್ತು ವಿಶ್ವಾಸಾರ್ಹತೆ ಪ್ರಶ್ನಾತೀತ. ಕನ್ನಡದ ಬೇಡಿಕೆಯನ್ನು ಪುಷ್ಟೀಕರಿಸುವ ಸಾವಿರಾರು ಪುಟಗಳ ದಾಖಲೆಪತ್ರಗಳು ಸಮಿತಿಯ ಮುಂದೆ ರಾಶಿ ಬಿದ್ದಿವೆ. ಸಮಿತಿ ನಿಗದಿಗೊಳಿಸಿರುವ ಎಲ್ಲ ಮಾನದಂಡಗಳನ್ನು ಕನ್ನಡ ಮೈಗೂಡಿಸಿಕೊಂಡಿದೆ ಎನ್ನುವುದು ಸಮಿತಿ ಸದಸ್ಯರ ಅಭಿಪ್ರಾಯ. ಕನ್ನಡದ ಅರ್ಹತೆ ಬಗ್ಗೆ ಕೆಲವು ಸದಸ್ಯರಲ್ಲಿ ಪ್ರಜಾವಾಣಿ ನಡೆಸಿದ ಮಾತುಕತೆಯಿಂದಲೂ ಸ್ಪಷ್ಟವಾಗುತ್ತದೆ. ಪ್ರಧಾನಿ ಕಾರ್ಯಾಲಯದ ಸೂಚನೆ ಮೇರೆಗೆ ಪ್ರೊ. ಉದಯನಾರಾಯಣ ಸಿಂಗ್ ನೀಡಿರುವ ಟಿಪ್ಪಣಿಯಲ್ಲಿಯೂ ಕನ್ನಡದ ಪರವಾಗಿರುವ ಅಂಶಗಳಿವೆ. ಅದನ್ನು ಸಿಐಐಎಲ್ ನಿರ್ದೇಶಕರಾಗಿ ತಾನು ನೀಡಿದ್ದು ಸಮಿತಿ ಸದಸ್ಯರಾಗಿ ಅಲ್ಲ ಎಂದು ಅವರು ಸ್ಪಷ್ಟಪಡಿಸಿದರೂ ಕನ್ನಡದ ಬೇಡಿಕೆಯನ್ನು ಆ ಪತ್ರ ಪುಷ್ಟೀಕರಿಸುತ್ತದೆ.

ಹೀಗಿದ್ದರೂ ಕನ್ನಡದ ಬೇಡಿಕೆಯ ಈಡೇರಿಕೆಗೆ ಈ ಪರಿಯ ವಿಳಂಬ ಯಾಕೆ? ಯಾವ ಸದಸ್ಯರೂ ಅಧಿಕೃತ ದನಿಯಲ್ಲಿ ಈ ಪ್ರಶ್ನೆಗೆ ಉತ್ತರ ನೀಡಲು ಬಯಸುವುದಿಲ್ಲ. ಇವರಲ್ಲಿ ಕೆಲವರು ಸಮಿತಿಯ ಸಭೆಯನ್ನು ಶೀಘ್ರವಾಗಿ ಕರೆಯುವಂತಹ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಗೋಪಿಚಂದ್ ನಾರಂಗ್ ಅವರಿಗೆ ತಿಳಿಸಿದ್ದಾರೆ. ಸದಸ್ಯರಂತೆ ನಾರಂಗ್ ಸಾಹೇಬರೂ ಅಸಹಾಯಕರು, ಸದಸ್ಯರ ಮೌನ, ಸಂಚಾಲಕರ ಅಸಹಾಯಕತೆಗೆ ರಾಜಕೀಯ ಅಲ್ಲದೆ ಬೇರೇನು ಕಾರಣ ಇದ್ದೀತು? ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಿಕೆ ಬಗ್ಗೆ ಅಂತಿಮವಾಗಿ ನಿರ್ಧಾರ ಕೈಗೊಳ್ಳಬೇಕಾಗಿರುವುದು ಪ್ರಧಾನಿ ಕಾರ್ಯಾಲಯ. ಅಂತಹ ಸೂಚನೆ ಅಲ್ಲಿಂದ ಬಂದ ಮರುದಿಸವೇ ಸಮಿತಿ ಸಭೆ ನಡೆಸಿ ತನ್ನ ಶಿಫಾರಸು ನೀಡಬಹುದು.

ಪ್ರಧಾನಿ ಮೇಲೆ ಈ ಒತ್ತಡ ಹೇರುವ ಶಕ್ತಿ ಕರ್ನಾಟಕದ ಆರು ಕೋಟಿ ಕನ್ನಡಿಗರಲ್ಲಿ ಯಾರಿಗಿದೆ? ತಮಿಳುನಾಡಿನಲ್ಲಿ ಶಾಸ್ತ್ರೀಯ ಭಾಷೆ ಸ್ಥಾನಮಾನಕ್ಕಾಗಿ ಯಾರೂ ಮನವಿ ನೀಡಿಲ್ಲ. ಬಂದ್, ಸತ್ಯಾಗ್ರಹ ನಡೆಸಿಲ್ಲ. ಸರ್ವಪಕ್ಷಗಳ ನಿಯೋಗ

ದೆಹಲಿಗೆ ಬರಲಿಲ್ಲ, ಅಲ್ಲಿನ ಯಾವ ಸಾಹಿತಿಯೂ ಉಪವಾಸ ಕೂರಲಿಲ್ಲ. ಡಿಎಂಕೆ ಎನ್ನುವ ರಾಜಕೀಯ ಪಕ್ಷ ಸದ್ದಿಲ್ಲದೆ ಬೇಡಿಕೆಯನ್ನು ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸೇರಿಸಿತು. ರಾಜಕೀಯ ಒತ್ತಡ ಹೇರಿ ಕಾರ್ಯಸಾಧನೆ ಮಾಡಿಕೊಂಡಿತು. ಕನ್ನಡಿಗರು ಗದ್ದಲಪ್ರಿಯರು. ನಮ್ಮ ನಾಯಕರು ಬೆಂಕಿಯಾಗುತ್ತಾರೆ. ಬೆಳಕಾಗುವುದಿಲ್ಲ. ಬೆಂಕಿ ಸುಟ್ಟುಹಾಕುತ್ತದೆ, ಬೆಳಕು ದಾರಿ ತೋರಿಸುತ್ತದೆ.

ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಬೇಡಿಕೆಯಲ್ಲಿ ಈಗ ತಳಕುಹಾಕಿಕೊಂಡಿರುವ ವಿವಾದಗಳನ್ನು ಗಮನಿಸಿದರೆ ಯಾವುದೋ ಕಾಣದ ಕೈಗಳು ಆಟವಾಡುತ್ತಿರುವ ಬಗ್ಗೆ ಸಂಶಯ ಮೂಡದೆ ಇರದು. ಈ ಬೇಡಿಕೆ ಬಗ್ಗೆ ಗೊಂದಲ ನಿರ್ಮಾಣಮಾಡುವ ಪ್ರಯತ್ನ ಮೊದಲ ದಿನದಲ್ಲಿಯೇ ನಡೆಯಿತು. ತಮಿಳು ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವಾಗ ನಿಗದಿಗೊಳಿಸಿದ್ದ ಎರಡು ಸಾವಿರ ವರ್ಷಗಳ ಲಿಖಿತ ಇತಿಹಾಸದ ಮಾನದಂಡವನ್ನು ಗೃಹ ಇಲಾಖೆ ಸಡಿಲಿಸಿ ಒಂದು ಸಾವಿರ ವರ್ಷಕ್ಕೆ ನಿಗದಿಪಡಿಸಿತು. ಆ ಮಾನದಂತ ಒಪ್ಪಿಕೊಂಡಿದ್ದರೆ ಕನ್ನಡ ಮಾತ್ರವಲ್ಲ ಸಂವಿಧಾನದ ಎಂಟನೇ ಶೆಡ್ಯೂಲ್‌ನಲ್ಲಿರುವ ಐದಾರು ಭಾಷೆಗಳು ಶಾಸ್ತ್ರೀಯ ಸ್ಥಾನಮಾನಕ್ಕೆ ಪೈಪೋಟಿ ಇಳಿಯುತ್ತಿದ್ದವು. ಆದರೆ ಸಂಸ್ಕೃತಿ ಇಲಾಖೆ ರಚಿಸಿದ ಭಾಷಾತಜ್ಞರ ಸಮಿತಿ ಅದನ್ನೊಪ್ಪದೆ ಲಿಖಿತ ಇತಿಹಾಸದ ಅವಧಿಯನ್ನು ಒಂದೂವರೆ ಸಾವಿರ ವರ್ಷಗಳಿಗೆ ಹೆಚ್ಚಿಸಿತು.

ಇತ್ತೀಚೆಗೆ ತೆಲುಗು ಭಾಷೆ ಸ್ಪರ್ಧೆಯಲ್ಲಿ ಸೇರಿಕೊಂಡಿದೆ. ಸಂಸ್ಕೃತಿ ಸಚಿವರಾಗಿದ್ದ ಜೈಪಾಲ್ ರೆಡ್ಡಿಯವರ ಕಾಲದಲ್ಲಿ ಮೆತ್ತಗೆ ಕೇಳಲಾರಂಭಿಸಿದ ಬೇಡಿಕೆ ಇತ್ತೀಚೆಗೆ ಬಿರುಸು ಪಡೆದಿದೆ. ಆದರೆ ಕರ್ನಾಟಕದಂತೆ ಆಂಧ್ರಪ್ರದೇಶದ ವಿಧಾನಸಭೆ ಈ ಬೇಡಿಕೆ ಬಗ್ಗೆ ಗೊತ್ತುವಳಿ ಅಂಗೀಕರಿಸಿಲ್ಲ. ಬೇಡಿಕೆಯನ್ನು ಸಮರ್ಥಿಸುವ ದಾಖಲೆಪತ್ರ, ಮಾಹಿತಿಗಳನ್ನು ಕೂಡಾ ಸಲ್ಲಿಸಿಲ್ಲ. ಆದರೆ ಅವರ ಬೇಡಿಕೆ ಕನ್ನಡದ ಬೇಡಿಕೆಯನ್ನು ಮುಂದೂಡಲು ನೆಪವಾಗಿ ಬಳಕೆಯಾಗುತ್ತಿದೆ.

ಈಗ ಮಲೆಯಾಳಿ ಭಾಷೆಗೆ ಕೂಡಾ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ಪ್ರಯತ್ನವೊಂದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಲವಾಗಿ ಬೇರು ಬಿಟ್ಟಿರುವ ಮಲೆಯಾಳಿ ರಾಜಕಾರಣಿಗಳು ಮತ್ತು ಸಾಹಿತಿಗಳಿಂದ ಪ್ರಾರಂಭವಾಗಿದೆ. ಇದಕ್ಕಾಗಿ ಭಾಷೆಯ ಮೂಲಕೃತಿಗಳ ಇತಿಹಾಸದ ಅವಧಿಯನ್ನು ಒಂದೂವರೆ ಸಾವಿರ ವರ್ಷಗಳಿಂದ ಒಂದು ಸಾವಿರ ವರ್ಷಕ್ಕೆ ಇಳಿಸುವ ಪ್ರಯತ್ನ ನಡೆದಿದೆ. ಹಾಗೇನಾದರೂ ನಡೆದುಹೋದರೆ ಬಂಗಾಳಿ, ಮರಾಠಿ ಸೇರಿದಂತೆ ಹಲವಾರು ಭಾಷೆಗಳು ಅರ್ಜಿ ಹಾಕುವುದು ಖಂಡಿತ.

ಈ ನಡುವೆ ಇಂತಹ ವಿವಾದಗಳನ್ನೇ ಬಳಸಿಕೊಂಡು ಬೇರೆ ಯಾವ ಭಾಷೆಗೂ ಈ ಸ್ಥಾನಮಾನ ನಡೆಸುತ್ತಿರುವುದೆಂಬ ಅನುಮಾನವನ್ನು ಸಮಿತಿಯ ಸದಸ್ಯರೇ ವ್ಯಕ್ತಪಡಿಸುತ್ತಿದ್ದಾರೆ. ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ಕಳೆದೆರಡು ವರ್ಷಗಳಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿ ನೆರವು ನೀಡಿದೆ. ಆರ್ಥಿಕ ನೆರವು ಸಾಲದು ಎನ್ನುವ ಅತೃಪ್ತಿ ತಮಿಳು ನಾಯಕರಲ್ಲಿದೆ. ತಮಿಳು ಭಾಷೆಯ ಸ್ಥಾನಮಾನದ ಅನುಷ್ಠಾನದ ಹೊಣೆ ಹೊತ್ತಿರುವ ಮೈಸೂರಿನ ಕೇಂದ್ರ ಭಾರತೀಯ ಭಾಷೆಗಳ ಸಂಸ್ಥೆ ರಚಿಸಿರುವ ತಮಿಳು ಅಭಿವೃದ್ಧಿ ಮಂಡಳಿ ಸಭೆಯಲ್ಲಿಯೂ ಇದು ಚರ್ಚೆಯಾಗಿದೆ. ತಮಿಳು ಭಾಷಾ ಪಂಡಿತರಿಗಾಗಿ ನೀಡುವ ಎರಡು ಅಂತರರಾಷ್ಟ್ರೀಯ ಪ್ರಶಸ್ತಿಯ ಮೊತ್ತವನ್ನು ಒಂದು ಲಕ್ಷ ರೂಪಾಯಿಗಳಿಂದ ಐದು ಲಕ್ಷಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆಯಿಂದಾಗಿ ಆ ನಿರ್ಧಾರ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಶಾಸ್ತ್ರೀಯ ಭಾಷೆಯ ಗುಂಪಿನಲ್ಲಿ ಹೆಚ್ಚು ಭಾಷೆಗಳು ಸೇರಿಕೊಂಡರೆ ನೆರವಿನ ಪಾಲು ಕಡಿಮೆಯಾಗಬಹುದೆಂಬ ಭೀತಿ ತಮಿಳರದ್ದು.

ಈ ರೀತಿ ಕನ್ನಡದ ಬೇಡಿಕೆ ಸೋದರ ದ್ರಾವಿಡ ಭಾಷೆಗಳ ಕಾಣದ ಕೈಗಳ ಆಟದ ನಡುವೆ ಸಿಕ್ಕಿಹಾಕಿಕೊಂಡಿದೆ. ಈ ಚಕ್ರವ್ಯೂಹವನ್ನು ಭೇದಿಸಿ ಬೇಡಿಕೆ ಈಡೇರಿಸಿಕೊಳ್ಳುವ ರಾಜಕೀಯ ನಾಯಕತ್ವ ನಮ್ಮಲ್ಲಿ ಇಲ್ಲ. ದುರದೃಷ್ಟದ ಸಂಗತಿ ಎಂದರೆ ಕನ್ನಡ ಸಾಂಸ್ಕೃತಿಕ ಲೋಕದ ನಾಯಕರಲ್ಲಿ ಕೂಡಾ ಈ ಬಗ್ಗೆ ಒಮ್ಮತ ಇಲ್ಲ. ಮುಂದೊಂದು ದಿನ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಸಚಿವರಾದ ಎಂ.ವಿ. ರಾಜಶೇಖರನ್, ಆಸ್ಕರ್ ಫರ್ನಾಂಡಿಸ್, ಅಂಬರೀಷ್, ಕೆ.ಎಚ್. ಮುನಿಯಪ್ಪ, ಮಾಜಿ ಸಚಿವ ಅನಂತಕುಮಾರ್, ಸಾಹಿತಿಗಳಾದ ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ದೇಜಗೌ, ಗಂಗೂಬಾಯಿ ಹಾನಗಲ್, ಯು.ಆರ್. ರಾವ್ ಸೇರಿದಂತೆ ಕರ್ನಾಟಕದ ವಿವಿಧ ಕ್ಷೇತ್ರಗಳ ನಾಯಕರೆಲ್ಲ ಒಟ್ಟಾಗಿ ಪ್ರಧಾನಿ ಮನೆಗೆ ದಾಳಿಯಿಟ್ಟರೆ, ಕನ್ನಡಿಗರ ಕನಸು ನನಸಾಗಬಹುದೇನೋ?

ಕನಸು ದುಬಾರಿಯಾಯಿತೇನೋ?

O

(01-11-2006)

ಕನ್ನಡ ಎಂದೊಡೆ

ದೆಹಲಿಯ ಜನರಲ್ಲಿ ಕನ್ನಡಿಗರ ಬಗ್ಗೆ ಒಳ್ಳೆಯ ಭಾವನೆ ಇಲ್ಲ. ಇದಕ್ಕೆ ಕನ್ನಡಿಗರಷ್ಟೇ ಅಲ್ಲ. ಕರ್ನಾಟಕದ ರಾಜಕಾರಣಿಗಳೂ ಕಾರಣ. ದೇವೇಗೌಡ, ಕುಮಾರಸ್ವಾಮಿ, ಯಡಿಯೂರಪ್ಪ, ಧರ್ಮಸಿಂಗ್ ಮುಂತಾದವರ ನಡವಳಿಕೆಗಳು ಹಾಗೂ ಅವರ ವೈಖರಿ ದೆಹಲಿಯ ಜನರ ಅಪಹಾಸ್ಯಕ್ಕೆ ಗುರಿಯಾಗಿದೆ. ಕರ್ನಾಟಕದ ಸದಾ ಜಗಳಗಂಟ ರಾಜ್ಯವೆಂಬ ಅಪಖ್ಯಾತಿಗೂ ಒಳಗಾಗಿದೆ.

ಕನ್ನಡಿಗರೆಂದರೆ ಜಗಳಗಂಟರು (ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾಗಳ ಜತೆಗಿನ ನೀರಿನ ಜಗಳ), ಕನ್ನಡಿಗರೆಂದರೆ ಭಾಷಾಂಧರು (ಇಂಗ್ಲಿಷ್ ಶಾಲೆಗಳ ಮಾನ್ಯತೆ ರದ್ದು, ಬೆಳಗಾವಿ ಗಡಿ ತಂಟೆ, ಕನ್ನಡಕ್ಕಾಗಿ ಕರ್ನಾಟಕ ಬಂದ್), ಕನ್ನಡಿಗರೆಂದರೆ ಅಭಿವೃದ್ಧಿ ವಿರೋಧಿಗಳು (ಬೆಂಗಳೂರು ಮೂಲಸೌಕರ್ಯದ ಬಗ್ಗೆ ಐಟಿ-ಬಿಟಿ ಉದ್ಯಮಿಗಳ ಟೀಕೆ, ಮೆಟ್ರೋ, ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ದೇವೇಗೌಡರ ವಿರೋಧ)..... ಎಂದು ಪಟ್ಟಿ ಬೆಳೆಸುತ್ತಾರೆ.

ಸುವರ್ಣ ಕರ್ನಾಟಕದ ಸಂಭ್ರಮದಲ್ಲಿರುವ ಕನ್ನಡಿಗರಿಗೆ ಈ ವಿಶೇಷಣಗಳು ಕರ್ಣಾನಂದವನ್ನುಂಟು ಮಾಡಲಾರವು. ಆದರೆ ದೇಶದ ರಾಜಧಾನಿಯ ಬಹುಸಂಖ್ಯಾತ ಜನರ ಮನದಲ್ಲಿ ಕನ್ನಡಿಗರ ಬಗ್ಗೆ ಇಂತಹದೊಂದು ದ್ವೇಷಮಯ

ಚಿತ್ರ ಇರುವುದು ಸತ್ಯ. ಇವರಲ್ಲಿ ಹೆಚ್ಚಿನವರು ಕರ್ನಾಟಕವನ್ನು ಕಣ್ಣಿಂದ ನೋಡಿದವರಲ್ಲ. ಕನ್ನಡಿಗರನ್ನು ಹತ್ತಿರದಿಂದ ಬಲ್ಲವರೂ ಅಲ್ಲ. ಇವರೆಲ್ಲ ರಾಜಧಾನಿಯನ್ನು ಕೇಂದ್ರವಾಗಿಟ್ಟುಕೊಂಡ ಪತ್ರಿಕೆಗಳಲ್ಲಿನ ಪೂರ್ವಾಗ್ರಹಪೀಡಿತ ಸುದ್ದಿ ಓದುತ್ತಾರೆ. ಟಿವಿಯಲ್ಲಿ ದೇವೇಗೌಡ – ಕುಮಾರಸ್ವಾಮಿ – ಯಡಿಯೂರಪ್ಪ-ಧರ್ಮಸಿಂಗ್ ಆಡುವುದನ್ನು, ಮಾಡುವುದನ್ನು ನೋಡಿರುತ್ತಾರೆ. ಮಾಧ್ಯಮಗಳನ್ನು ಬಳಸಿಕೊಂಡು ಬೇರೆ ರಾಜ್ಯಗಳು ಮಾಡುವ ಆರೋಪಗಳಿಗೆ ಕಿವಿಕೊಟ್ಟಿರುತ್ತಾರೆ. ಅವುಗಳನ್ನು ಆಧರಿಸಿ ಅಭಿಪ್ರಾಯವೊಂದನ್ನು ರೂಪಿಸಿಕೊಳ್ಳುತ್ತಾರೆ.

ಸುಳ್ಳು ಪ್ರಚಾರದ ಚಿತ್ರವೊಂದನ್ನು ಅಳಿಸಿಹಾಕಿ ಕನ್ನಡಿಗರ ಬಗ್ಗೆ ಸದ್ಭಾವನೆ ಮೂಡುವಂತಹ ಚಿತ್ರವನ್ನು ದೆಹಲಿ ಜನತೆಯಲ್ಲಿ ಮೂಡಿಸಲು ಕರ್ನಾಟಕಕ್ಕೆ ಈ ವರೆಗೂ ಸಾಧ್ಯವಾಗಿಲ್ಲ. ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳ ಕೇಂದ್ರಸ್ಥಾನಗಳ ಜತೆ ಅವುಗಳ ಮೇಲೆ ಪ್ರಭಾವ ಬೀರುವ ಶಕ್ತಿ ಉಳ್ಳ ಸಂವಿಧಾನದ ನಾಲ್ಕನೇ ಅಂಗವೆನಿಸಿದ ರಾಷ್ಟ್ರೀಯ ಮಾಧ್ಯಮಗಳು ಕೂಡಾ ಇಲ್ಲಿಯೇ ಇರುವುದರಿಂದ, ರಾಜ್ಯವೊಂದಕ್ಕೆ ದೆಹಲಿ ಅಭಿಪ್ರಾಯ ಬಹಳ ಮುಖ್ಯ. ಅಭಿಪ್ರಾಯ ರೂಪುಗೊಳ್ಳುವ ಬಗೆಗಳು ಹಲವಾರು. ಆ ಕಾರ್ಯದಲ್ಲಿ ಆಯಕಟ್ಟಿನ ಜಾಗಗಳಲ್ಲಿರುವ ವ್ಯಕ್ತಿಗಳ ಪಾತ್ರಕ್ಕೆ ಹೆಚ್ಚಿನ ಮಹತ್ವ ಇದೆ. ಸಚಿವ ಸಂಪುಟ, ರಾಜಕೀಯ ಪಕ್ಷಗಳು, ಸರ್ಕಾರಿ ಇಲಾಖೆಗಳು, ಸಾಂಸ್ಕೃತಿಕ ಸಂಘಟನೆಗಳು, ಸಮೂಹ ಮಾಧ್ಯಮ–ಇಲ್ಲವೆ ಅಭಿಪ್ರಾಯ ರೂಪಿಸುವ ಶಕ್ತಿಶಾಲಿ ಆಯಕಟ್ಟಿನ ಕೇಂದ್ರಗಳು.

ಇವುಗಳಲ್ಲಿ ಕರ್ನಾಟಕದ ಪ್ರಾತಿನಿಧ್ಯ ಎಷ್ಟು? ದೆಹಲಿಯಲ್ಲಿ ಹಿಂದಿ ಭಾಷಿಕರ ಸರ್ವಾಧಿಕಾರಕ್ಕೆ ದೀರ್ಘ ಇತಿಹಾಸ ಇದೆ. ಆದರೆ ಇತ್ತೀಚೆಗೆ ಇತರ ಭಾಷಿಕರು ಹಿಂದಿವಾಲಾಗಳಿಗೆ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಆದರೆ ಈ ಸೆಣಸಾಟದಲ್ಲಿ ಕನ್ನಡಿಗರು ಸ್ಪರ್ಧೆಯಲ್ಲಿಯೇ ಇಲ್ಲ! ಯಾವುದೇ ಸಚಿವಾಲಯ, ಸರ್ಕಾರಿ ಕಚೇರಿ, ಅಕಾಡೆಮಿ–ವಿಶ್ವವಿದ್ಯಾಲಯ, ಬೇರೆ ಭಾಷೆಗಳ ಮಾಧ್ಯಮಗಳ ಕಚೇರಿಗಳಿಗೆ ಹೋದರೂ ಬಹುಸಂಖ್ಯೆಯಲ್ಲಿರುವ ಹಿಂದಿ ವಾಲಾಗಳ ಜತೆಯಲ್ಲಿ ಒಂದಷ್ಟು ಅಯ್ಯರ್–ಮುಖರ್ಜಿ–ನಾಯರ್– ರೆಡ್ಡಿಗಳಿರುತ್ತಾರೆ. ಅಲ್ಲಿ ಗೌಡ–ಪಾಟೀಲರ ಹೆಸರು ಕೇಳುವವರೇ ಇಲ್ಲ. ಕನ್ನಡಿಗರನ್ನು ಹುಡುಕಬೇಕಾದರೆ ಮತ್ತೆ ಬ್ಯಾಂಕುಗಳಿಗೆ ಇಲ್ಲವೇ ಉಡುಪಿ ಹೊಟೇಲ್‌ಗಳಿಗೆ ಹೋಗಬೇಕು.

ಎನ್‌ಡಿಎ ಕಾಲದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತೆಲುಗು ಅಧಿಕಾರಿಗಳನ್ನು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕ ಮಾಡಿಸಿದ್ದಾರೆ. ಅವರೆಲ್ಲರೂ ಕೇಂದ್ರ ಸರ್ಕಾರದ ಉದ್ಯೋಗಿಗಳಾಗಿದ್ದರೂ ನಿಷ್ಠೆ ತಮ್ಮ ರಾಜ್ಯಕ್ಕೆ. ಆರು ವರ್ಷಗಳ ಅವಧಿಯಲ್ಲಿ ಸುಮಾರು 27 ಸಾವಿರ ಕೋಟಿ

ರೂಪಾಯಿಗಳ ಕೇಂದ್ರ ನೆರವನ್ನು ಆಂಧ್ರಪ್ರದೇಶ ಬಾಚಿಕೊಳ್ಳಲು ಸಾಧ್ಯವಾಗಿದ್ದು ಈ ಅಧಿಕಾರಿಗಳ ಮೂಲಕ ಅಧಿಕಾರಿ ವರ್ಗದಲ್ಲಿ ತಮಿಳರ ಅಧಿಪತ್ಯ ಮೊದಲಿನಿಂದಲೂ ಇದೆ. ಎಐಎಡಿಎಂಕೆ-ಡಿಎಂಕೆ ಪಕ್ಷಗಳ ರಾಜಕೀಯ ತೋಳ್ಬಲ ಆ ರಾಜ್ಯದ ಚೌಕಾಸಿ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಂಗಾಳಿಗಳದ್ದು ಮೊದಲಿನಿಂದಲೂ ಮೇಲುಗೈ. ಇತ್ತೀಚೆಗೆ ಅವರು ಬೇರೆ ಕ್ಷೇತ್ರಗಳನ್ನೂ ಪ್ರವೇಶಿಸುತ್ತಿದ್ದಾರೆ. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಂಗಾಳಿಗಳಿಗೆ ರಾಜಕೀಯ ಬಲ ಕೂಡಾ ಬಂದಿದೆ. ಪಂಜಾಬಿಗಳನ್ನು ಮೀರಿಸುವಷ್ಟು ಪ್ರಭಾವಿಗಳಾಗಿ ಬೆಳೆದ ಬಂಗಾಲಿಗಳಿಗೆ ಈಗ ಸಮ ಸ್ಪರ್ಧೆ ನೀಡುತ್ತಿರುವವರು ಮಲೆಯಾಳಿಗಳು. ಈಗಿನ ಸರ್ಕಾರದ ಎರಡು ಶಕ್ತಿ ಕೇಂದ್ರಗಳಾದ ಪ್ರಧಾನಿ ಕಾರ್ಯಾಲಯ ಮತ್ತು ಸೋನಿಯಾ ಗಾಂಧಿ ಕಚೇರಿಯಲ್ಲಿ ಮಲೆಯಾಳಿಗಳದ್ದೇ ಪಾರುಪತ್ಯ. ಇಲ್ಲೆಲ್ಲೂ ಕನ್ನಡಿಗರನ್ನು ಹುಡುಕಿದರೂ ಸಿಗಲಾರರು. ಇದ್ದವರು ಕೂಡಾ ಕೀಳರಿಮೆಯಲ್ಲಿ ತಮ್ಮನ್ನು ಕನ್ನಡಿಗರೆಂದು ಗುರುತಿಸಿಕೊಳ್ಳದೆ ಚಿಪ್ಪೊಳಗೆ ಸೇರಿಬಿಡುತ್ತಾರೆ.

ದೆಹಲಿಯಲ್ಲಿ ಕರ್ನಾಟಕ ಮೂಲೆ ಗುಂಪಾಗಲು ರಾಜಕೀಯ ನಿಶ್ಶಕ್ತಿ ಕೂಡಾ ಕಾರಣ. ಬೇರೆ ರಾಜ್ಯಗಳ ಪ್ರಾದೇಶಿಕ ಪಾಳೆಯಗಾರರ ಎದುರು ರಾಜ್ಯದ ರಾಜಕಾರಣಿಗಳು ದನಿ ಇಲ್ಲದ ದುರ್ಬಲ ನಾಯಕರು. ದೀರ್ಘ ಕಾಲ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆ ತೋರಿಸುತ್ತಾ ಬಂದ ಕರ್ನಾಟಕದಲ್ಲಿ ಬೇರೆ ರಾಜ್ಯಗಳಂತೆ ಪ್ರಾದೇಶಿಕ ಪಕ್ಷಗಳು ಬೆಳೆಯಲಿಲ್ಲ. ಆ ಅವಕಾಶ ಹೊಂದಿದ್ದ ಎಚ್.ಡಿ. ದೇವೇಗೌಡರು ಪ್ರಧಾನಿಯೇನೋ ಆಗಿಬಿಟ್ಟರು. ಆದರೆ ಹಳ್ಳಿ ರಾಜಕೀಯದಿಂದ ಮೇಲೆದ್ದು ಬರಲಿಲ್ಲ. ಹತ್ತು ವರ್ಷಗಳ ನಂತರ ಓಂದಿರುಗಿ ನೋಡಿದರೆ ಗೌಡರ ಪ್ರಧಾನಿಗಿರಿ ರಾಜ್ಯಕ್ಕೆ ಒಳಿತಿಗಿಂತ ಕೆಡುಕನ್ನೇ ಹೆಚ್ಚು ಮಾಡಿತೇನೋ ಎಂದು ಅನಿಸದಿರದು. ಪಂಚೆ-ಜುಬ್ಬಾ ತೊಟ್ಟ, ರಾಗಿಮುದ್ದೆ ತಿನ್ನುವ, ಕೂತಲ್ಲಿಯೇ ನಿದ್ದೆ ಮಾಡುವ, ತನ್ನನ್ನು ಮಣ್ಣಿನ ಮಗ ಎಂದು ಕರೆದುಕೊಳ್ಳುವ ಗೌಡರು ಪ್ರಧಾನಿಯಾಗಿದ್ದು ನೋಡಿ ಆಘಾತಕ್ಕೀಡಾದ ರಾಜಧಾನಿಯ ಪಂಚತಾರಾ ಸಂಸ್ಕೃತಿಯ ಪತ್ರಕರ್ತರು ಅವರನ್ನು ನಿರಂತರವಾಗಿ ತಮಾಷೆಯ ವಸ್ತುವಾಗಿಯೇ ಚಿತ್ರಿಸುತ್ತಾ ಹೋದರು. ರಾಜಕೀಯ ದ್ವೇಷ ಸಾಧನೆ, ಕುಟುಂಬ ಪ್ರೇಮ, ಸೈದ್ಧಾಂತಿಕ ಎಡೆಬಿಡಂಗಿತನದ ನಡವಳಿಕೆ ಮೂಲಕ ಗೌಡರು ಕೂಡಾ ತಮ್ಮ ಟೀಕಾಕಾರರಿಗೆ ಸುದ್ದಿಯ ಬರ ಇಲ್ಲದಂತೆ ನೋಡಿಕೊಂಡರು. ಇಂತಹ ಗೌಡರಿಗೆ ರಾಜಕೀಯ ಶಕ್ತಿ ಕೊಟ್ಟ ಕನ್ನಡಿಗರು ಕೂಡಾ ದೆಹಲಿ ಜನತೆಯ ಕಣ್ಣಿಗೆ ತಮಾಷೆಯ ವಸ್ತುವಾಗಿಬಿಟ್ಟರು.

ದೆಹಲಿ ಎನ್ನುವುದು ಮತ್ತೊಂದು ರಾಜ್ಯವಲ್ಲ. ಇದು ದೇಶದ ರಾಜಧಾನಿ. ಇದರಲ್ಲಿ ಎಲ್ಲರಿಗೂ ಸಮಪಾಲು ಇದೆ. ದೇಶದ ನೂರು ಕೋಟಿ ಜನಸಂಖ್ಯೆಯಲ್ಲಿ

ಆರು ಕೋಟಿ ಕನ್ನಡಿಗರಿದ್ದಾರೆ. ಆ ಲೆಕ್ಕದಲ್ಲಿ ದೆಹಲಿಯ ನೂರರಲ್ಲಿ ಆರರಷ್ಟು ಪಾಲು ನಮ್ಮದೂ ಇದೆ. ಆದರೆ ದೆಹಲಿಯ ಒಂದೂವರೆ ಕೋಟಿ ಜನಸಂಖ್ಯೆಯಲ್ಲಿ ಕನ್ನಡಿಗರ ಸಂಖ್ಯೆ ಒಂದು ಲಕ್ಷವನ್ನೂ ಮೀರುವುದಿಲ್ಲ. ಯಾಕೆ ಹೀಗೆ? ಕನ್ನಡಿಗರ ಪಾಲಿಗೆ ಹಳ್ಳಿಯ ವಿರೋಧ ಶಬ್ದದಲ್ಲಿ. ಅವರಿಗೆ ದೆಹಲಿ ಎನ್ನುವುದು ಅಂಡಮಾನ್ ಇದ್ದಂತೆ. ಇಲ್ಲಿನ ಹಿಂದಿ ಭಾಷೆಯಂತೆ, ಚಳಿ-ಬಿಸಿಲು ಕಂಡರೂ ಅವರಿಗೆ ಭಯ. ದೆಹಲಿಗೆ ಬಂದು ಎರಡು ದಿನ ಕಳೆಯುವುದಷ್ಟರಲ್ಲಿಯೇ ಅವರಿಗೆ ರಾಗಿಮುದ್ದೆ, ಜೋಳದ ರೊಟ್ಟಿ ಬಗ್ಗೆ ವಿರಹ ವೇದನೆ ಪ್ರಾರಂಭವಾಗಿಬಿಡುತ್ತೆ. ಮೂರನೇ ದಿನ ಅವರು ಕರ್ನಾಟಕ ಎಕ್ಸ್‌ಪ್ರೆಸ್ ಹತ್ತಿಬಿಡುತ್ತಾರೆ. ಸರೋಜಿನಿ ಮಹಿಷಿ ಅವರು ಹೇಳುವಂತೆ 'ಮುತ್ತಿನಂತಾ ಜೋಳ, ಹವಳದಂತಹ ರಾಗಿ ಉಂಡುಂಡು ಮಲಗಿದರು ಮನೆಯಲ್ಲಿಯೇ ಕನ್ನಡಿಗರು'. ಅವರು ಏಳುವುದು ಯಾವಾಗ?

ದೆಹಲಿಯಲ್ಲಿರುವ ವಿವಿಧ ರಾಜ್ಯಭವನಗಳಲ್ಲಿ ಆ ರಾಜ್ಯಗಳ ವಿಶೇಷ ಊಟ-ತಿಂಡಿ ಲಭ್ಯ. ಆಂಧ್ರಭವನದಲ್ಲಿ ಆಂಧ್ರ ಶೈಲಿಯ ಊಟ ಮಾತ್ರವಲ್ಲ ಸೋನಾಮಸೂರಿ ಅಕ್ಕಿಯಿಂದ ಹಿಡಿದ ಆ ರಾಜ್ಯದ ಎಲ್ಲ ಬಗೆಯ ಉಪ್ಪಿನಕಾಯಿ, ಚಟ್ನಿಪುಡಿಗಳು ಸಿಗುತ್ತವೆ. ಗೇಟಿನ ಹೊರಗೆ ಈ ನಾಡು ವಾರ್ತಾ ತೆಲುಗು ಪತ್ರಿಕೆಗಳ ಮಾರಾಟವೂ ಇದೆ. ಕೇರಳ ಭವನದಲ್ಲಿ ಕುಚ್ಚಲಕ್ಕಿ ಅನ್ನ ಮತ್ತು ಮೀನು ಸಾರಿನ ಊಟವನ್ನು ಚಪ್ಪರಿಸಬಹುದು. ತಮಿಳು ಭವನದಲ್ಲಿ ಇಡ್ಲಿ-ಸಾಂಬರ್ ಹೋಟೆಲ್ ಸಾರ್ವಜನಿಕರಿಗೆ ತೆರೆದಿರುತ್ತದೆ. ಆದರೆ ಕರ್ನಾಟಕ ಭವನದಲ್ಲಿ ರಾಗಿಮುದ್ದೆ-ಜೋಳದ ರೊಟ್ಟಿ ಬಿಡಿ, ಸಾರ್ವಜನಿಕರಿಗೆ ಅನ್ನಸಾರು ಕೂಡಾ ಸಿಗುವುದಿಲ್ಲ. ಭವನದ ಅಡುಗೆಮನೆಯೇನಿದ್ದರೂ ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಮೀಸಲು.

-ಏಕೆ ಹೀಗೆ?

(30-11-2006)

ಕನ್ನಡ ಹಕ್ಕಿ ಹಾರಲು ಬಿಡಿ

ಇದು ಮಾರುಕಟ್ಟೆ ಯುಗ. ಹಿಂದಿ ಮಾತ್ರವಲ್ಲ, ಬಂಗಾಳಿ, ಮಲೆಯಾಳಂ, ತಮಿಳು, ತೆಲುಗು ಭಾಷೆಗಳಿಗೆ ಹೋಲಿಸಿದರೆ ಕನ್ನಡದ್ದು ಸೀಮಿತ ಮಾರುಕಟ್ಟೆ. ಕನ್ನಡ ಸಾಹಿತ್ಯ, ನಾಟಕ, ಸಿನಿಮಾಗಳ ಬೆಳವಣಿಗೆ ಮಾರುಕಟ್ಟೆಯ ಕೊರತೆ ದೊಡ್ಡ ಅಡ್ಡಿ. ಕೇವಲ ಕರ್ನಾಟಕವನ್ನಷ್ಟೇ ನಂಬಿಕೂರುವ ಕಾಲ ಇದಲ್ಲ. ಕನ್ನಡವನ್ನೇ ನಂಬಿ ಒಬ್ಬ ಕಲಾವಿದ ಉಪವಾಸ ಬೀಳುವಂತಹ ಪರಿಸ್ಥಿತಿ ಎದುರಿಸುವುದಕ್ಕಿಂತ ಬೇರೆ ಭಾಷೆಯಲ್ಲಿ ಅವಕಾಶ ಪಡೆದು ತಿಂದುಂಡು ಸುಖವಾಗಿರುವುದು ಲೇಸು. ಇದರಿಂದ ಕಲಾವಿದನೂ ಉಳಿಯುತ್ತಾನೆ, ಕಲೆಯೂ ಬೆಳೆಯುತ್ತದೆ.

ಇತ್ತೀಚೆಗೆ ಇಲ್ಲಿನ ಆರ್‌ಕೆ ಪುರಂ ಬಳಿ ಹಾದುಹೋಗುವಾಗ ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿಬರುತ್ತಿದ್ದ ಚಂಡೆಯ ನಿನಾದಕ್ಕೆ ಕಿವಿ ನಿಮಿರಿತ್ತು. ಸದ್ದು ಬಂದ ದಿಕ್ಕು ಹಿಡಿದು ಹೊರಟರೆ ಅಗರ್‌ವಾಲ್- ಗುಪ್ತಾ-ಗೋಯಲ್‌ಗಳ ಅಂಗಡಿಗಳೇ ತುಂಬಿರುವ ಸೆಕ್ಟರ್ ಹನ್ನೆರಡರ ಮಾರುಕಟ್ಟೆಯ ಮಧ್ಯದ ಬಯಲಲ್ಲಿ ತಲೆಯೆತ್ತಿ ನಿಂತ ರಂಗಸ್ಥಳ. ಅಲ್ಲೊಂದು ಬಯಲಾಟ, ಭಾಗವತರಾದ ಪುತ್ತಿಗೆ ರಘುರಾಮ ಹೊಳ್ಳರು ತಮ್ಮ ಹಿಂದಿ ಬಗ್ಗೆ ಮುಜುಗರಪಡುತ್ತಾ ....ನಿರಕ್ ನಿರ್ಮಲ್, ಜಲಸಮೀಪ್‌ಮೇ, ರಚ್‌ಲಿಯಾ ನಿಜ ಪರ್ಣಕುಟಿಕೋ....... (ನೋಡಿ ನಿರ್ಮಲ, ಜಲಸಮೀಪದಿ, ಮಾಡಿಕೊಂಡರು ಪರ್ಣಶಾಲೆಯ) ಎಂಬ ಪಂಚವಟಿ ಪ್ರಸಂಗದ

ಪದ್ಯವನ್ನು ಹಿಂದಿಯಲ್ಲಿ ಹಾಡುತ್ತಿದ್ದರು. ಪದ್ಯಾಣ ಶಂಕರನಾರಾಯಣ ಭಟ್ಟರ ಚೆಂಡೆವಾದನ ನೆರೆದ ಜನರ ಮೈಮರೆಸಿತ್ತು.

ಸ್ವಲ್ಪ ಹೊತ್ತಿಗೆ ಸುಂದರ ಕನ್ಯೆಯ ಛದ್ಮವೇಷದಲ್ಲಿ ಶೂರ್ಪನಖಿ ಪ್ರವೇಶ. ತೆಹಚಾನಾ ಮುಜೇ? ನಹೀಂ ಪೆಹಚಾನಾ? ಕೈಸೇ ಪೆಹಚಾನೆಂಗೇ?... ಅಬ್ ಕಿತ್‌ನಿ ಕೋಮಲ್ ಬನ್‌ಗಯೀ ಹು..ಕ್ಯಾ ಕೋಯಿ ಬತಾ ಸಕ್‌ತೇ ಹೈ, ಮೈ ಕಿತ್‌ನಾ ಸಾಲ್ ಕಾ ಹು?... ಕಲಾವಿದೆ ವಿದ್ಯಾ ಕೊಳ್ಯೂರು ಸೇಲೆಯಿಂದ ಬಳುಕುತ್ತಾ ಕಣ್ಣಹುಬ್ಬು ಕುಣಿಸಿ ಪ್ರಶ್ನಿಸುತ್ತಿದ್ದರೆ, ಮುಂದಿನ ಸಾಲಿನಲ್ಲಿದ್ದ ಯುವಕರು ನಾಚಿಕೆಯಿಂದ ಮುದ್ದೆಯಾಗಿದ್ದರು. ಪ್ರಾರಂಭದಲ್ಲಿ ಕುತೂಹಲದಿಂದ ಸೇರಿದ್ದ 10–15 ಪ್ರೇಕ್ಷಕರ ಸಂಖ್ಯೆ ಪ್ರಸಂಗ ಮುಂದುವರಿದಂತೆ ಐನೂರು ದಾಟಿತ್ತು. ಪ್ರತಿಯೊಂದು ಪಾತ್ರಕ್ಕೂ ಮೆಚ್ಚುಗೆಯ ಕರತಾಡನ, ಸಿಳ್ಳು–ನಗು–ಕೇಕೆಯ ಪ್ರತಿಕ್ರಿಯೆ. ಥೇಟ್ ಊರ ಬಯಲಾಟದ ವಾತಾವರಣ. ಆಗಲೇ ಪಡ್ಡೆ ಹುಡುಗರು ಪೆಹಚಾನಾ ಮುಜೇ?. ಡೈಲಾಗ್ ಶುರುಮಾಡಿದ್ದರು. ಕರ್ನಾಟಕದ ಯಕ್ಷಗಾನ ಹಿಂದಿವಾಲಾಗಳ ಮನ ಮುಟ್ಟಿತು; ಗೆದ್ದಿತು.

ತೆಂಕುತಿಟ್ಟು ಯಕ್ಷಗಾನದ ಜನಪ್ರಿಯ ಕಲಾವಿದ ಕೊಳ್ಯೂರ್ ರಾಮಚಂದ್ರರಾವ್ ಅವರ ಪುತ್ರಿ ವಿದ್ಯಾಕೊಳ್ಯೂರ್ ನೇತೃತ್ವದ ಯಕ್ಷಮಂಜೂಷ ಕಳೆದೆರಡು ವರ್ಷಗಳಿಂದ ಉತ್ತರ ಭಾರತದಲ್ಲಿ ಯಕ್ಷ ಕ್ರಾಂತಿಯನ್ನೇ ನಡೆಸಿದೆ. ಯಕ್ಷಗಾನದ ಪದ್ಯ ಮತ್ತು ಅರ್ಥ ಎರಡನ್ನೂ ಹಿಂದಿಗೆ ಅನುವಾದಿಸಿ ನೀಡುತ್ತಿರುವ ಪ್ರದರ್ಶನ ಜನಪ್ರಿಯವಾಗುತ್ತಿದೆ. ಒರಿಸ್ಸಾ, ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯದ ರಾಜ್ಯಗಳನ್ನು ಹೊರತುಪಡಿಸಿ ದೇಶದ ಎಲ್ಲ ರಾಜ್ಯಗಳಲ್ಲಿ 80ಕ್ಕೂ ಹೆಚ್ಚು ಹಿಂದಿ ಯಕ್ಷಗಾನದ ಪ್ರದರ್ಶನ ನಡೆದಿದೆ. ಬೇರೆ ಭಾಷೆಯ ಜನರನ್ನೂ ರಂಜಿಸುವಂತೆ ಶಿವರಾಮ ಕಾರಂತರು ಐವತ್ತು ವರ್ಷಗಳ ಹಿಂದೆಯೇ ಅರ್ಥಗಾರಿಕೆ ಕಡಿಮೆ ಮಾಡಿ ಯಕ್ಷಗಾನಕ್ಕೆ ನೃತ್ಯ ನಾಟಕ–ಗೀತ ರೂಪಕಗಳ ರೂಪ ನೀಡಿದ್ದರೂ ಅದು ಪ್ರಯೋಗಮಟ್ಟದಲ್ಲಷ್ಟೇ ಉಳಿದಿತ್ತು. ಕೆಲವು ವರ್ಷಗಳ ಹಿಂದೆ ಮುಂಬೈನಲ್ಲಿ ಹಿಂದಿ ಯಕ್ಷಗಾನದ (ಪದ್ಯ ಮತ್ತು ಅರ್ಥಸಹಿತ) ಕೆಲವು ಪ್ರದರ್ಶನಗಳು ನಡೆದಿದ್ದವು. ಆದರೆ ಇಂತಹ ಪ್ರಯೋಗಕ್ಕೆ ವ್ಯವಸಾಯಿ ಮೇಳದ ರೂಪು ಕೊಟ್ಟು ಬೇರೆ ರಾಜ್ಯಗಳಲ್ಲಿ ಪ್ರದರ್ಶನ ನೀಡುತ್ತಿರುವುದು ಇದೇ ಮೊದಲು. ಈ ಯಕ್ಷಯಾತ್ರೆಯ ಸಾರಥ್ಯ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಕೃಷ್ಣಭಟ್ ಅವರದ್ದು.

ಇದಾದ ಕೆಲ ದಿನಗಳ ನಂತರ ಕೆಲವು ಕನ್ನಡಿಗರ ಆತಂಕಭರಿತ ಫೋನ್ ಕರೆಗಳು. ಸಾರ್, ಕನ್ನಡಕ್ಕೆ ಆಗುತ್ತಿರುವ ಅನ್ಯಾಯ ಸಹಿಸಲಾರದೆ ಇಲ್ಲೊಬ್ಬ

ಪೋಲೀಸ್‌ಪೇದೆ ಪ್ರಾಣಾಹುತಿ ಮಾಡಲು ಹೊರಟಿದ್ದಾನೆ. ಆತನ ಜೀವ ಉಳಿಸಿ ಎಂಬ ಕಳವಳದ ಕೋರಿಕೆ.

ಒಬ್ಬ ಸಾಮಾನ್ಯ ಪೊಲೀಸ್ ಪೇದೆ ಪ್ರಾಣ ತ್ಯಾಗಕ್ಕೆ ಸಿದ್ಧವಾಗುವಷ್ಟು ದೊಡ್ಡ ಅನ್ಯಾಯ ದೇಶದ ರಾಜಧಾನಿಯಲ್ಲಿ ಕನ್ನಡ ಭಾಷೆಗೆ ಆಗುತ್ತಿರುವಾಗಲೂ ಗೊತ್ತಾಗದೆ ಹೋಯಿತಲ್ಲಾ ಎಂಬ ಅಪರಾಧಿ ಭಾವ ಒಂದೆಡೆ. ಕನ್ನಡಕ್ಕಾಗಿ ಅಪಾಯಕ ವ್ಯಕ್ತಿಯೊಬ್ಬ ಅನ್ಯಾಯವಾಗಿ ಪ್ರಾಣ ಕಳೆದುಕೊಳ್ಳುತ್ತನಲ್ಲಾ ಎನ್ನುವ ಅನುಕಂಪ ಇನ್ನೊಂದೆಡೆ. ಆದರೆ ಪೊಲೀಸ್ ಪೇದೆ ಅಹುತಿ ತೆಗೆದುಕೊಳ್ಳಲು ಹೊರಟಿದ್ದು ಕನ್ನಡವನ್ನು, ತನ್ನ ಪ್ರಾಣವನಲ್ಲ ಎಂದು ಗೊತ್ತಾಗಿದ್ದು ವಿಷಯ ಕೆದಕಿ ನಿಜಸಂಗತಿ ತಿಳಿದುಕೊಂಡ ಮೇಲೆ.

ಇದರ ವಿವಾದದ ಮೂಲ ಹೀಗಿದೆ: ಇಲ್ಲಿಯ ಜನಕಪುರಿ ಕನ್ನಡ ಸಂಘ, ರಾಜ್ಯ ಸರ್ಕಾರದ ಅನುದಾನ ಬಳಸಿಕೊಂಡು ಆಯೋಜಿಸಿದ್ದ ಯಕ್ಷಮಂಜೂಷದ ಪಂಚವಟಿ ಹಿಂದಿ ಯಕ್ಷಗಾನ. ಉಗ್ರ ಕನ್ನಡಾಭಿಮಾನಿ ಪೊಲೀಸ್ ಪೇದೆ ಮತ್ತು ಆತನ ಬೆಂಬಲಿಗರಿಗೆ ಕರ್ನಾಟಕದ ಯಕ್ಷಗಾನ ಹಿಂದಿಯಲ್ಲಿ ಪ್ರದರ್ಶನಗೊಳ್ಳುವುದು ಕನ್ನಡಕ್ಕೆ ಆಗುತ್ತಿರುವ ಘನಘೋರ ಅನ್ಯಾಯ ಎಂಬಂತೆ ಕಂಡಿದೆ. ಅದೂ ಸುವರ್ಣ ಕರ್ನಾಟಕ ವರ್ಷಾಚರಣೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರದ ದುಡ್ಡು ಬಳಸಿಕೊಂಡು ಇಂತಹ ಈ ರೀತಿ ದ್ರೋಹವೆಸಗುವುದೇ? ಎನ್ನುವುದು ಈ ಉಗ್ರರ ಪ್ರಶ್ನೆ. ಈ ರೀತಿಯ ತಾಲಿಬಾನ್ ವಾದ ಬೆಳೆಯುತ್ತಾ ಹೋದರೆ ಕೊನೆ ಎಲ್ಲಿ? ನಮ್ಮ ಸಾಹಿತ್ಯ ನಾವೇ ಓದಬೇಕು. ನಮ್ಮ ಸಂಗೀತ ನಾವೇ ಕೇಳಬೇಕು. ನಮ್ಮ ನಾಟಕ, ಯಕ್ಷಗಾನ ನಾವೇ ನೋಡಬೇಕು ಎಂದು ಫರ್ಮಾನ್ ಹೊರಡಿಸುವಂತಹ ದಿನ ಬಂದರೂ ಬರಬಹುದು. ಇಂತಹ ಕೂಪಮಂಡೂಕ ಪ್ರವೃತ್ತಿಯಿಂದ ಕನ್ನಡವಾಗಲಿ, ಕನ್ನಡಿಗರಾಗಲಿ ಬೆಳೆಯಲು ಸಾಧ್ಯವೇ?

ಹೊರನಾಡಿನ ಜನಪ್ರಿಯತೆಯಲ್ಲಿ ಕರ್ನಾಟಕ ಬಹಳ ಹಿಂದಿದೆ. ಕನ್ನಡದ ಸಾಹಿತಿಗಳು- ಕಲಾವಿದರು ಬೇರೆ ಭಾಷೆಗಳಿಗೆ ಸಮನಾಗಿ ನಿಲ್ಲುವಷ್ಟು ಪ್ರತಿಭಾವಂತರಾಗಿದ್ದರೂ ಕರ್ನಾಟಕದಿಂದ ಹೊರಗೆ ಬೆರಳೆಣಿಕೆಯ ಮಂದಿಯಷ್ಟೇ ಜನಪ್ರಿಯರು. ಬೇರೆ ಭಾಷೆಗಳ ಸಾಹಿತ್ಯ ಅನುವಾದಗೊಂಡಷ್ಟು ಸಂಖ್ಯೆಯಲ್ಲಿ ಕನ್ನಡದ್ದು ನಡೆದಿಲ್ಲ. ಚಲನಚಿತ್ರ ಕ್ಷೇತ್ರದಲ್ಲಿಯೂ ತಾರೆಗಳ ಆಮದು ನಡೆದಷ್ಟು ರಫ್ತು ನಡೆದಿಲ್ಲ. ಶ್ರೀರಂಗ, ಬಿ.ವಿ.ಕಾರಂತ, ಪ್ರಸನ್ನ, ಗಿರೀಶ್ ಕಾರ್ನಾಡ್ ನಾಟಕಗಳು ಹಿಂದಿಯಲ್ಲಿ ಜನಪ್ರಿಯವಾಗಿದ್ದರೂ ಕನ್ನಡದ ನಟ-ನಟ-ನಿರ್ದೇಶಕರಿಗೆ ಆ ಭಾಷೆಯಲ್ಲಿ ಅವಕಾಶದ ಬಾಗಿಲು ತೆರೆದದ್ದು ಕಡಿಮೆ. ಇತ್ತೀಚೆಗೆ ಬಹಳಷ್ಟು ಸಂಖ್ಯೆಯಲ್ಲಿ ಉದ್ಯೋಗ ನೀಡುತ್ತಿರುವ ಟೀವಿ ಕ್ಷೇತ್ರದಲ್ಲಿಯೂ ಅಲ್ಲೊಂದು ಇಲ್ಲೊಂದು ರೆಟ್ಟೆ-ರೆಗಳ ಹೆಸರಷ್ಟೇ ಕಣ್ಣಿಗೆ ಬೀಳುತ್ತಿದೆ.

ಇದು ಮಾರುಕಟ್ಟೆ ಯುಗ. ಹಿಂದಿ ಮಾತ್ರವಲ್ಲ, ಬಂಗಾಳಿ, ಮಲೆಯಾಳಿ, ತಮಿಳು, ತೆಲುಗು ಭಾಷೆಗಳಿಗೆ ಹೋಲಿಸಿದರೂ ಕನ್ನಡದ್ದು ಸೀಮಿತ ಮಾರುಕಟ್ಟೆ. ಕನ್ನಡ ಸಾಹಿತ್ಯ ಮತ್ತು ಕಲೆಯ ಬೆಳವಣಿಗೆಗೆ ಮಾರುಕಟ್ಟೆಯ ಕೊರತೆ ದೊಡ್ಡ ಅಡ್ಡಿ. ಕೇವಲ ಕರ್ನಾಟಕವನ್ನಷ್ಟೇ ನಂಬಿ ಕೂರುವ ಕಾಲ ಇದಲ್ಲ. ಕನ್ನಡವನ್ನೇ ನಂಬಿ ಒಬ್ಬ ಕಲಾವಿದ ಉಪವಾಸ ಬೀಳುವಂತಹ ಪರಿಸ್ಥಿತಿ ಎದುರಿಸುವುದಕ್ಕಿಂತ ಬೇರೆ ಭಾಷೆಯಲ್ಲಿ ಅವಕಾಶ ಪಡೆದು ತಿಂದುಂಡು ಸುಖವಾಗಿರುವುದು ಲೇಸು. ಇದರಿಂದ ಕಲಾವಿದನೂ ಉಳಿಯುತ್ತಾನೆ, ಕಲೆಯೂ ಬೆಳೆಯುತ್ತದೆ. ಗುರುದತ್ ಹಿಂದಿ ಚಿತ್ರರಂಗದ ಉಜ್ವಲ ತಾರೆಯಾಗಿ ಮಿಂಚಿದ್ದಕ್ಕೆ, ರಜನಿಕಾಂತ್ ತಮಿಳು ಚಿತ್ರರಂಗದ ಸೂಪರ್ ಸ್ಟಾರ್ ಆಗಿ ಮೆರೆಯುತ್ತಿರುವುದಕ್ಕೆ ಕನ್ನಡಿಗರು ಹೆಮ್ಮೆಪಡಬೇಕು. ಈ ಪ್ರತಿಭಾಪಲಾಯನ ಕನ್ನಡಕ್ಕಾಗಿರುವ ನಷ್ಟ ಎಂದು ಕೊರಗಬಹುದು. ಆದರೆ ಕರ್ನಾಟಕದಲ್ಲಿಯೇ ಉಳಿದಿದ್ದರೆ ಅವರೇನಾಗುತ್ತಿದ್ದರೋ ಯಾರಿಗೆ ಗೊತ್ತು?

ಹೊರನಾಡಿನಲ್ಲಿ ಅವಕಾಶಗಳು ಸೃಷ್ಟಿಯಾಗಬೇಕಾದರೆ ಕನ್ನಡದ ಸಾಹಿತ್ಯ, ಕಲೆ, ಸಂಸ್ಕೃತಿಯ ಸೀಮೋಲ್ಲಂಘನ ನಡೆಯಬೇಕು. ಇದಕ್ಕೆ ಭಾಷೆ ಅಡ್ಡಿಯಾಗುವುದಿದ್ದರೆ ಅದನ್ನು ಮೀರಿ ಬೆಳೆಯುವ ಪ್ರಯತ್ನ ನಡೆಯಬೇಕು. ಈ ರೀತಿಯ ಪ್ರಯತ್ನ ಕಳೆದ 2–3 ವರ್ಷಗಳಿಂದ ದೆಹಲಿಯಲ್ಲಿ ನಡೆಯುತ್ತಿದೆ. ಕುವೆಂಪು ಸಾಹಿತ್ಯ, ದಕ್ಷಿಣ ಭಾರತದ ಮೌಖಿಕ ಪರಂಪರೆ, ಮೀಸಲಾತಿ ವಿವಾದ ಮೊದಲಾದ ವಿಷಯಗಳ ಬಗ್ಗೆ ದೆಹಲಿ ಕರ್ನಾಟಕ ಸಂಘ ನಡೆಸಿದ ಬಹುಭಾಷಾ ವಿಚಾರ ಸಂಕಿರಣಗಳು ಮತ್ತು ದಕ್ಷಿಣ ಭಾರತದ ಕಲಾಪ್ರಕಾರಗಳ ಪ್ರದರ್ಶನ ಬೇರೆ ಭಾಷಿಕರ ಗಮನ ಸೆಳೆದಿದೆ. ಈ ನಿಟ್ಟಿನಲ್ಲಿ ಇನ್ನೊಂದು ಪ್ರಯತ್ನ ಹಿಂದಿ ಭಾಷೆಯಲ್ಲಿ ಯಕ್ಷಗಾನ. ಇದು ಕನ್ನಡಕ್ಕೆ ಬಗೆವ ದ್ರೋಹ ಎಂದಾದರೆ ಕನ್ನಡದ ಹಿತಕ್ಕಾಗಿ ಇಂತಹ ದ್ರೋಹಗಳು ನಡೆಯುತ್ತಲೇ ಇರಬೇಕಾಗುತ್ತದೆ.

ಪ್ರತಿ ವರ್ಷ ರಾಷ್ಟ್ರಪ್ರಶಸ್ತಿ ಪಡೆದ ಚಲನಚಿತ್ರಗಳನ್ನು ಸಿರಿಫೋರ್ಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಹಿಂದಿ ಚಲನಚಿತ್ರಗಳಿಗೆ ಪ್ರೇಕ್ಷಕರು ಇದ್ದೇ ಇರುತ್ತಾರೆ. ಒಮ್ಮೊಮ್ಮೆ ಹಿಂದಿ ಭಾಷಿಕರನ್ನು ಮೀರಿಸುವಂತೆ ಬಂಗಾಳಿ, ಮಲೆಯಾಳಿ, ತಮಿಳು ಜನ ತಮ್ಮ ಭಾಷೆಯ ಚಿತ್ರಗಳ ವೀಕ್ಷಣೆಗೆ ನೆರೆದಿರುತ್ತಾರೆ. ಕನ್ನಡದ ಚಿತ್ರಗಳನ್ನು ನೋಡಲು ಬರುವ ಪ್ರೇಕ್ಷಕರ ಸಂಖ್ಯೆ ಒಂದಂಕಿ ದಾಟುವುದಿಲ್ಲ. ಆಗೆಲ್ಲಾ ಕನ್ನಡಕ್ಕಾಗಿ ಪ್ರಾಣ ಕೊಡುವವರು ಎಲ್ಲಿರುತ್ತಾರೋ? ಬೇಕಿದ್ದರೆ ಈ ಬಾರಿ ನೀವೇ ಬಂದು ಕನ್ನಡಿಗರ ತಲೆ ಎಣಿಸಿ. ಸೆಪ್ಟೆಂಬರ್ 18ರಂದು ಬರಗೂರು ರಾಮಚಂದ್ರಪ್ಪ ಅವರ ತಾಯಿ ಮತ್ತು 23ರಂದು ಪಿ. ಶೇಷಾದ್ರಿ ಅವರ ತುತ್ತೂರಿ ಚಿತ್ರಗಳ ಪ್ರದರ್ಶನ ಇದೆ.

(10-9-2007)

ಸಾಹಿತ್ಯ ಕ್ಷೇತ್ರವೆಂಬ ಕುಬ್ಜರ ಲೋಕ

ಭಾರತೀಯ ಸಾಹಿತ್ಯ ಎನ್ನುವುದು ಒಂದು ಎಂಬ ಆಶಯದೊಂದಿಗೆ ಸ್ಥಾಪನೆಗೊಂಡ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಸ್ಥಾನಕ್ಕೆ ಕನ್ನಡಿಗನೊಬ್ಬನ ನೇಮಕದ ವಿರುದ್ಧ ನಡೆಯುತ್ತಿರುವ ಸಂಚು ಕಳವಳಕಾರಿ ಬೆಳವಣಿಗೆ. ಕನ್ನಡದ ಪ್ರಶ್ನೆ ಎದುರಾದಾಗ ಅಭಿಮಾನದ ಕತ್ತಿ ಝಳಪಿಸುವ ಕನ್ನಡದ ಉಗ್ರರೂಪಿ ಸಾಹಿತಿಗಳು ಈ ಬಗ್ಗೆ ಮೌನವಹಿಸಿರುವುದು, ಈ ಸಂಚಿನಲ್ಲಿ ಕನ್ನಡದ ಮನೆಮಂದಿ ಕೂಡಾ ಷಾಮೀಲಾಗಿದ್ದಾರೆಂಬ ಆರೋಪವನ್ನು ಪುಷ್ಟೀಕರಿಸುತ್ತಿದೆ.

ಸಾಹಿತಿಗಳಂತೆ, ಸಾಹಿತ್ಯ ಕ್ಷೇತ್ರದ ಸಂಸ್ಥೆಗಳೂ ಕೂಡಾ ಸಾಹಿತ್ಯೇತರ ಕಾರಣಗಳಿಗಾಗಿ ಸುದ್ದಿ ಮಾಡುತ್ತಿರುವುದು ಸಾಮಾನ್ಯ ವಿದ್ಯಮಾನವಾಗಿಬಿಟ್ಟಿದೆ. ಸಾಹಿತ್ಯ ಕ್ಷೇತ್ರದಲ್ಲಿ ವಾದ-ವಿವಾದಗಳು ಹೊಸತೇನಲ್ಲ. ಎಷ್ಟೋ ಸಂದರ್ಭಗಳಲ್ಲಿ ಇಂತಹ ವಿವಾದಗಳು ಹುಟ್ಟುಹಾಕುವ ಚರ್ಚೆ-ಸಂವಾದಗಳೇ ಸಾಹಿತ್ಯ ಚಳವಳಿಗೆ ಹೊಸ ದಿಕ್ಕನ್ನು ತೋರಿಸಿರುವುದು ಕೂಡಾ ನಿಜ. ಆದರೆ ಇತ್ತೀಚಿನ ವಾದ-ವಿವಾದಗಳು ಸಾಹಿತ್ಯ ಕ್ಷೇತ್ರವನ್ನು ಅಡ್ಡದಾರಿಗೆ ಎಳೆಯುತ್ತಿರುವುದು ಮಾತ್ರವಲ್ಲ, ಸಾಹಿತಿಗಳನ್ನು ಸಾರ್ವಜನಿಕರ ಕಣ್ಣಲ್ಲಿ ಇನ್ನಷ್ಟು ಕುಬ್ಜರನ್ನಾಗಿ ಮಾಡುತ್ತಿವೆ. ರಾಜ್ಯದಲ್ಲಿ ನಡೆದ ಹಾವು-ಚೇಳು-ಘಟಸರ್ಪಗಳ ಕದನದ ಆಘಾತದಿಂದ

ಚೇತರಿಸಿಕೊಳ್ಳುವಷ್ಟರಲ್ಲಿ, ಹುಟ್ಟಿಕೊಂಡಿರುವ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ನೇಮಕದ ವಿವಾದ ಸಾಹಿತ್ಯ ಕ್ಷೇತ್ರವನ್ನು ರಾಡಿ ಮಾಡಿದೆ.

ಎರಡು ವರ್ಷಗಳ ಹಿಂದೆಯಷ್ಟೇ ಚಿನ್ನದ ಹಬ್ಬ ಆಚರಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿ, ಬೇರೆ ಬೇರೆ ಭಾಷೆ ಮತ್ತು ಲಿಪಿಗಳ ಮೂಲಕ ಬರೆದರೂ ಭಾರತೀಯ ಸಾಹಿತ್ಯ ಎನ್ನುವುದು ಒಂದು ಎನ್ನುವ ಆಶಯದೊಂದಿಗೆ ಸ್ಥಾಪನೆಗೊಂಡ ಸಂಸ್ಥೆ. ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಅಕಾಡೆಮಿ ತನ್ನ ಮೂಲ ಆಶಯಕ್ಕೆ ಕುಂದಾಗದಂತೆ ಈವರೆಗೆ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಇಲ್ಲಿಯವರೆಗೆ ನೀಡಿದ ಸುಮಾರು 900 ವಾರ್ಷಿಕ ಪ್ರಶಸ್ತಿಗಳಲ್ಲಿ ಕೇವಲ ಎಂಟು ಮಾತ್ರ ತಿರಸ್ಕೃತಗೊಂಡಿವೆ. ಸ್ವತಃ ಲೇಖಕರಾಗಿರುವ ಪಂಡಿತ ಜವಾಹರಲಾಲ ನೆಹರೂ ಅವರೇ ಇದರ ಸ್ಥಾಪಕ ಅಧ್ಯಕ್ಷರು, ಆಗ ಉಪಾಧ್ಯಕ್ಷರಾಗಿದ್ದವರು ಸರ್ವಪಲ್ಲಿ ರಾಧಾಕೃಷ್ಣನ್. ಇವರಿಗೆ ಹೆಗಲು ಕೊಟ್ಟು ನಿಂತವರು ಅಬ್ದುಲ್‌ಕಲಾಂ ಅಜಾದ್. ಪ್ರಾರಂಭದಿಂದ ಹದಿನೇಳು ವರ್ಷ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ಅಕಾಡೆಮಿಗೆ ಉನ್ನತ ಪರಂಪರೆಯನ್ನು ಹಾಕಿಕೊಟ್ಟವರು ಕೃಷ್ಣಕೃಪಲಾನಿ. ಇಂತಹ ಪರಂಪರೆಯನ್ನು ಹೊಂದಿರುವ ಸಂಸ್ಥೆಯ ಅಧ್ಯಕ್ಷ–ಕಾರ್ಯದರ್ಶಿಗಳ ನೇಮಕ ವಿವಾದಕ್ಕೆ ಕಾರಣವಾಗಿದ್ದು ಅಪರೂಪ. ಈಗ ಆ ಪರಂಪರೆಯೂ ಮುರಿದುಬಿದ್ದಿದೆ.

ಈಗಿನ ವಿವಾದದ ಕೇಂದ್ರ ವ್ಯಕ್ತಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಬೆಂಗಳೂರು ಶಾಖೆಯ ಪ್ರಾದೇಶಿಕ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ. ಈಗ ಕಾರ್ಯದರ್ಶಿಯಾಗಿರುವ ಮಲೆಯಾಳಿ ಸಾಹಿತಿ ಸಚ್ಚಿದಾನಂದ ಅವರು ಮೇ 31ರಂದು ನಿವೃತ್ತರಾಗಲಿರುವ ಕಾರಣಕ್ಕೆ ಅವರ ಸ್ಥಾನಕ್ಕೆ ಹೊಸಬರ ನೇಮಕ ನಡೆಯಬೇಕಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರದಿಂದ ನೇಮಕಗೊಂಡ ಆಯ್ಕೆ ಸಮಿತಿ ಹನ್ನೊಂದು ಅಭ್ಯರ್ಥಿಗಳ ಮೌಖಿಕ ಪರೀಕ್ಷೆ ನಡೆಸಿ ಅಗ್ರಹಾರ ಕೃಷ್ಣಮೂರ್ತಿ ಅವರ ಹೆಸರನ್ನು ಶಿಫಾರಸು ಮಾಡಿದೆ. ಈ ಸಮಿತಿಯಲ್ಲಿ ಖ್ಯಾತ ಗುಜರಾತಿ ಲೇಖಕ ಬೋಲಾಬಾಯಿ ಪಟೇಲ್, ಕನ್ನಡದ ಸಾಹಿತಿ ಡಾ. ಚಂದ್ರಶೇಖರ ಕಂಬಾರ, ಅಕಾಡೆಮಿಯ ಈಗಿನ ಅಧ್ಯಕ್ಷ–ಉಪಾಧ್ಯಕ್ಷರು ಸೇರಿ ಆರು ಮಂದಿ ಸದಸ್ಯರು. ಇವರೆಲ್ಲರೂ ಕೂಡಿ ಹಾಜರಾದ ಅಭ್ಯರ್ಥಿಗಳ ಅರ್ಹತೆ, ಸಾಧನೆ, ಪೂರ್ವಾಪರ ಇತಿಹಾಸವೆಲ್ಲವನ್ನೂ ಪರಿಶೀಲಿಸಿ ಅಗ್ರಹಾರ ಕೃಷ್ಣಮೂರ್ತಿ ಅವರ ಹೆಸರನ್ನು ಕಾರ್ಯದರ್ಶಿ ಸ್ಥಾನಕ್ಕೆ ಶಿಫಾರಸು ಮಾಡಿದ್ದಾರೆ.

ಕನ್ನಡದ ಒಬ್ಬ ವ್ಯಕ್ತಿ ಆಯ್ಕೆಯಾದ ಈ ಸುದ್ದಿ ಹೊರಬೀಳುತ್ತಿದ್ದಂತೆಯೇ ದೇಶದ ಸಾಂಸ್ಕೃತಿಕ ಯಜಮಾನರ ನಿದ್ದೆ ಕೆಟ್ಟಿದೆ. ಅಷ್ಟರಲ್ಲಿ ಕರ್ನಾಟಕದಲ್ಲಿನ ಹಾವು–ಘಟಸರ್ಪಗಳೆಲ್ಲ ಹೆಡೆಬಿಚ್ಚಿವೆ. ಕನ್ನಡದ ಸಾಹಿತಿಗಳನ್ನು ಮೂಸದ ಪತ್ರಿಕೆಗಳಿಗೂ ಅಗ್ರಹಾರ ಕೃಷ್ಣಮೂರ್ತಿ ಅವರ ಬಗ್ಗೆ ಪ್ರೀತಿ ಹುಟ್ಟಿಕೊಂಡಿದೆ. ಅವರದಲ್ಲದ

ಜಾತಕವನ್ನು ಅವರ ಹೆಸರಿಗೆ ಅಂಟಿಸಿ ಪ್ರಚಾರ ನೀಡತೊಡಗಿವೆ. ಪ್ರಚಾರ ಪ್ರಹಾರದ ಮೂಲಕವೇ ಕನ್ನಡಿಗನೊಬ್ಬ ರಾಷ್ಟ್ರಮಟ್ಟದ ಸಾಹಿತ್ಯಕ ಸಂಸ್ಥೆಯ ಉನ್ನತ ಸ್ಥಾನಕ್ಕೇರುವುದನ್ನು ತಡೆಯುವ ಹುನ್ನಾರ ಈಗ ಪ್ರಾರಂಭವಾಗಿದೆ.

ಅಗ್ರಹಾರ ಕೃಷ್ಣಮೂರ್ತಿ ಬಗ್ಗೆ ಸಿಬಿಐ ತನಿಖೆ ನಡೆಸಿದೆ ಮತ್ತು ಅಕಾಡೆಮಿಯ ಪ್ರಾದೇಶಿಕ ಕಚೇರಿಯ ಕಾರ್ಯದರ್ಶಿಯಾಗಿ ಅವರ ಕರ್ತವ್ಯನಿರ್ವಹಣೆ ತೃಪ್ತಿಕರವಾಗಿಲ್ಲ ಎನ್ನುವುದು ಅವರ ವಿರುದ್ಧದ ಆರೋಪಗಳು. ಕಾರ್ಯದರ್ಶಿಯವರ ನೇಮಕಪೂರ್ವದಲ್ಲಿ ಅಕಾಡೆಮಿ ಕೇಂದ್ರ ಸಂಸ್ಕೃತಿ ಇಲಾಖೆಯ ಅನುಮತಿ ಪಡೆದಿಲ್ಲ ಎನ್ನುವುದು ಇನ್ನೊಂದು ಕೊಕ್ಕೆ.

ಸ್ಟೇಷನರಿ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಆರೋಪದ ಬಗ್ಗೆ ಸಿಬಿಐ ತನಿಖೆ ನಡೆಸಿರುವುದು ನಿಜ. ಆ ತನಿಖೆಯಲ್ಲಿ ಅವರ ವಿರುದ್ಧದ ಆರೋಪ ಸಾಬೀತಾಗುವಂತಹ ಯಾವ ದಾಖಲೆಗಳು ಸಿಗದ ಕಾರಣ ಸಿಬಿಐ ಪ್ರಕರಣವನ್ನು ಕೇಂದ್ರ ಜಾಗ್ರತ ಆಯೋಗ(ಸಿವಿಸಿ)ಕ್ಕೆ ಒಪ್ಪಿಸಿತ್ತು. ಆದರೆ ಅಕಾಡೆಮಿಯೇ ತನಿಖೆ ನಡೆಸಲಿ ಎಂದು ಸಿವಿಸಿ ಹೇಳಿದ ಕಾರಣ ಸಿಬಿಐ, ಸಿವಿಸಿ ಮತ್ತು ಅಕಾಡೆಮಿಗೆ ಸೇರದ ಮೂರನೇ ವ್ಯಕ್ತಿ ತನಿಖೆ ನಡೆಸಿ ಆರೋಪಕ್ಕೆ ಆಧಾರಗಳಿಲ್ಲ ಎಂದು ವರದಿ ನೀಡಿದ ನಂತರ ಪ್ರಕರಣ ಅಂತ್ಯ ಕಂಡಿತು. ಅವರನ್ನು ಅಪರಾಧಿ ಎಂದು ಯಾವ ತನಿಖೆಯೂ ಹೇಳಿಲ್ಲ. ಅವರ ವಿರುದ್ಧ ಯಾವ ತನಿಖೆಯೂ ನಡೆಯುತ್ತಿಲ್ಲ. ಹೀಗಿದ್ದಾಗ ಸಿಬಿಐ ತನಿಖೆ ನಡೆಸಿತ್ತು ಎನ್ನುವುದೇ ಅನರ್ಹತೆ ಹೇಗಾಗುತ್ತದೆ? ಇದನ್ನು ಪರಿಶೀಲಿಸಿವ ನಂತರವೇ ಆಯ್ಕೆ ಸಮಿತಿ ಮೌಖಿಕ ಪರೀಕ್ಷೆಗೆ ಆಹ್ವಾನಿಸಿದ್ದಲ್ಲವೇ?

ಎರಡನೇ ಆರೋಪ : ಬೆಂಗಳೂರು ಪ್ರಾದೇಶಿಕ ಕಚೇರಿಯ ಕಾರ್ಯನಿರ್ವಹಣೆಯದ್ದು. ಚೆನ್ನೈನಲ್ಲಿದ್ದ ಪ್ರಾದೇಶಿಕ ಕಚೇರಿಯನ್ನು ಬೆಂಗಳೂರಿಗೆ ತಂದದ್ದೇ ಕೃಷ್ಣಮೂರ್ತಿ ಅವರು. ಕಳೆದ ಹದಿನಾರು ವರ್ಷಗಳಲ್ಲಿ ಅದು ಬಾಡಿಗೆ ರಹಿತ ಸರ್ಕಾರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾದೇಶಿಕ ಕಚೇರಿ ಈವರೆಗೆ ಕನ್ನಡ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 500ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಕಳೆದ ಹಣಕಾಸು ವರ್ಷದಲ್ಲಿಯೇ 85 ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಾದೇಶಿಕ ಕಚೇರಿಗಳ ಸಾಧನೆಯ ಪರಿಶೀಲನೆ ನಡೆಸಿದ ಕೇಂದ್ರ ಸಮಿತಿಯ ವರದಿಯೇ ಇದನ್ನು ಹೇಳಿದೆ. ಇದಕ್ಕಿಂತ ಘನ ಸಾಧನೆ ಇನ್ನೇನು ಬೇಕು?

ಈ ಆರೋಪಗಳು ಸಾಲದೆಂಬಂತೆ, ಕಾರ್ಯದರ್ಶಿ ನೇಮಕಕ್ಕೆ ಕೇಂದ್ರ ಸಂಸ್ಕೃತಿ ಇಲಾಖೆಯಿಂದ ಪೂರ್ವಾನುಮತಿ ಪಡೆದಿಲ್ಲ ಎನ್ನುವ ಕಾರಣವೊಡ್ಡಿ ಕೃಷ್ಣಮೂರ್ತಿ ನೇಮಕವನ್ನು ತಡೆಯುವ ಹತಾಶ ಪ್ರಯತ್ನವೊಂದು ದೆಹಲಿ ಮಟ್ಟದಲ್ಲಿ ನಡೆಯುತ್ತಿದೆ. ಈಗಿನ ಕಾರ್ಯದರ್ಶಿ ಸಚ್ಚಿದಾನಂದ ಅವರನ್ನಾಗಲಿ, ಅವರ ಪೂರ್ವಾಧಿಕಾರಿಯವರನ್ನಾಗಲಿ ನೇಮಕ ಮಾಡುವ ಮುನ್ನವೂ ಸಂಸ್ಕೃತಿ

ಇಲಾಖೆಯಿಂದ ಪೂರ್ವಾನುಮತಿ ಪಡೆದಿರಲಿಲ್ಲ ಎನ್ನುತ್ತಿವೆ ಅಕಾಡೆಮಿ ಮೂಲಗಳು. ಹಾಗಿದ್ದಾಗ ಇದ್ದಕ್ಕಿದ್ದಂತೆಯೇ ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರಿಗೆ ಇದು ಯಾಕೆ ನೆನಪಾಗಿದೆ?

ಸ್ವಾಯತ್ತ ರೂಪ ಹೊಂದಿರುವ ಸಾಹಿತ್ಯಕ ಸಂಸ್ಥೆಗಳ ಮೇಲೆ ರಾಜಕಾರಣಿಗಳು-ಅಧಿಕಾರಿಗಳು ಸವಾರಿ ಮಾಡಲು ಪ್ರಯತ್ನಿಸುತ್ತಿರುವುದು ಹೊಸದೇನಲ್ಲ. ಈ ಪ್ರಕರಣದಲ್ಲಿಯೂ ಪಟ್ಟಭದ್ರ ಸಾಂಸ್ಕೃತಿಕ ಯಜಮಾನರು ಕೆಲ ಅಧಿಕಾರಿಗಳೊಂದಿಗೆ ಕೂಡಿ ಸಂಸ್ಕೃತಿ ಸಚಿವೆ ಅಂಬಿಕಾಸೋನಿ ಅವರ ಹಾದಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಸೋನಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಸ್ಥಾಪಕ ಅಧ್ಯಕ್ಷ ಪಂಡಿತ ಜವಾಹರಲಾಲ ನೆಹರೂ ಅವರು ಹೇಳಿದ್ದು ಗೊತ್ತಿದ್ದರೆ, ಕೊಕ್ಕೆ ಹಾಕಿರುವ ಅಧಿಕಾರಿಯ ಕಿವಿ ಹಿಂಡುತ್ತಿದ್ದರೇನೋ? ನನ್ನ ಕೆಲಸದಲ್ಲಿ ಪ್ರಧಾನಿ ಹಸ್ತಕ್ಷೇಪವನ್ನು ಅಕಾಡೆಮಿಯ ಅಧ್ಯಕ್ಷನಾಗಿ ನಾನು ಸಹಿಸುವುದಿಲ್ಲ ಎಂದು ಜವಾಹರಲಾಲ ನೆಹರೂ ಹೇಳಿದ್ದರು. ಅದೇ ಬದ್ಧತೆಯಿಂದ ಅಕಾಡೆಮಿ ಅಧ್ಯಕ್ಷರಾಗಿ ನಡೆದುಕೊಂಡವರು ನೆಹರೂ.

ಅಗ್ರಹಾರ ಕೃಷ್ಣಮೂರ್ತಿ ಅವರು ಹಳ್ಳಿಯಲ್ಲಿ ಶಿಕ್ಷಣ ಪಡೆದ, ಕನ್ನಡದಲ್ಲಿ ಎಂ.ಎ. ಮಾಡಿದ, ಎರಡಂಕಿ ದಾಟದಷ್ಟು ಕಡಿಮೆ ಜನಸಂಖ್ಯೆಯ ಹಿಂದುಳಿತ ಜಾತಿಯೊಂದಕ್ಕೆ ಸೇರಿದ ವ್ಯಕ್ತಿ. ಅವರು ಈಗ ಹೊಂದಿರುವ ಹುದ್ದೆಯನ್ನಾಗಲಿ ಮತ್ತು ಆಯ್ಕೆಯಾಗಿರುವ ಹೊಸ ಹುದ್ದೆ ಅಲಂಕರಿಸುವ ಅರ್ಹತೆಗಳನ್ನು ಸ್ವಂತ ಸಾಧನೆಯಿಂದ ಗಳಿಸಿಕೊಂಡವರು. ಅದಕ್ಕೆ ಅವರು ಮೀಸಲಾತಿಯ ಏಣಿಯನ್ನು ಬಳಸಿಲ್ಲ. ಅರ್ಹತೆಯೊಂದೇ ಮಾನದಂಡವೆಂದಾದಲ್ಲಿ ಈಗಿನ ವಿವಾದ ಯಾಕೆ? ಮೀಸಲಾತಿ ವಿರೋಧಿಗಳು ಚಿಂತಿಸಬೇಕಾದ ಪ್ರಶ್ನೆ.

O

(01-05-2006

ರೋಷ ಬೆಂಕಿಯಾಗದೆ ಬೆಳಕಾಗಲಿ

ಕಾವೇರಿ–ಕೃಷ್ಣ ನದಿ ನೀರು ಹಂಚಿಕೆಯಿಂದ ಹಿಡಿದು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡುವ ವಿಷಯದವರೆಗೆ ದೆಹಲಿ ಮಟ್ಟದಲ್ಲಿ ವಿಭಿನ್ನ ಬಗೆಯ ಕನ್ನಡ–ಕರ್ನಾಟಕ ವಿರೋಧಿ ಲಾಬಿಗಳು ಕೆಲಸ ಮಾಡುತ್ತಿವೆ ಎನ್ನುವ ಭಾವನೆ ಕನ್ನಡಿಗರಲ್ಲಿದೆ, ಇದು ನಿಜ ಕೂಡ. ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಸ್ಥಾನಕ್ಕೆ ಕನ್ನಡಿಗನೊಬ್ಬ ನೇಮಕಗೊಳ್ಳುವುದನ್ನು ತಡೆಯಲು ನಡೆಯುತ್ತಿರುವ ಪ್ರಯತ್ನದ ಹಿಂದೆಯೂ ಇಂತಹ ಲಾಬಿ ಇದೆ.

ಸಿನಿಮಾದಲ್ಲಿ ನಾಯಕ ರಾಜ್‌ಕುಮಾರ್, ಖಳನಾಯಕ ವಜ್ರಮುನಿಯ ಮುಖ–ಮುಸುಡಿ ನೋಡದೆ ಗುದ್ದುತ್ತಿದ್ದರೆ ಚಿತ್ರಮಂದಿರದಲ್ಲಿದ್ದ ಪ್ರೇಕ್ಷಕರು ಶಿಳ್ಳೆ–ಕೇಕೆ ಹಾಕಿ ಕುಣಿದಾಡುತ್ತಾರೆ. ಆ ರೀತಿ ಕುಣಿದು–ಕುಪ್ಪಳಿಸುವವರಿಗೆ ಚಿತ್ರದ ಖಳನಾಯಕನಾಗಲಿ, ನಟ ವಜ್ರಮುನಿಯವರಾಗಲಿ ಏನೂ ಅನ್ಯಾಯ ಮಾಡಿಲ್ಲ. ಆದರೆ ಅವರೆಲ್ಲರ ತಲೆಯಲ್ಲಿ ಒಬ್ಬ ಖಳನಾಯಕ ಇರುತ್ತಾನೆ. ಆತ ಊರಿನ ಜಮೀನ್ದಾರ ಇರಬಹುದು, ಮನೆ ಹೆಂಗಸರಿಗೆ ಛೇಡಿಸಿದ ಬೀದಿ ಕಾಮಣ್ಣ ಇರಬಹುದು, ಬಸ್ಸಿನಲ್ಲಿ ಜಗಳವಾಡಿದ ಕಂಡಕ್ಟರ್ ಇರಬಹುದು, ಇಲ್ಲವೇ ಪ್ರೀತಿಗೆ ಅಡ್ಡಬಂದ ತನ್ನ ಹುಡುಗಿಯ ಅಪ್ಪ ಆಗಿರಬಹುದು, ರಾಜ್‌ಕುಮಾರ್ ಒದೆಯುತ್ತಿದ್ದರೆ ತಾನೇ ತನ್ನ ಮನಸ್ಸಲ್ಲಿದ್ದ ಖಳನಾಯಕನಿಗೆ ಒದ್ದ ತೃಪ್ತಿ ಅವರಿಗೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಆಯ್ಕೆಯ ಹಗರಣಕ್ಕೆ ಕನ್ನಡದ ಸಾಹಿತಿಗಳು ನೀಡುತ್ತಿರುವ ಪ್ರತಿಕ್ರಿಯೆಯಲ್ಲಿ ಇದೇ ರೀತಿಯ ಅದುಮಿಟ್ಟ ಅಸಹಾಯಕ ರೋಷ ಕಾಣುತ್ತಿದೆ. ಕಾವೇರಿ–ಕೃಷ್ಣ ನದಿ ನೀರು ಹಂಚಿಕೆಯಿಂದ ಹಿಡಿದು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ಮಾನ ನೀಡುವ ವಿಷಯದವರೆಗೆ ದೆಹಲಿ ಮಟ್ಟದಲ್ಲಿ ವಿಭಿನ್ನ ಬಗೆಯ ಕನ್ನಡ–ಕರ್ನಾಟಕ ವಿರೋಧಿ ಲಾಬಿಗಳು ಕೆಲಸ ಮಾಡುತ್ತಿವೆ ಎನ್ನುವ ಭಾವನೆ ಕನ್ನಡಿಗರಲ್ಲಿದೆ, ಇದು ನಿಜ ಕೂಡ. ಇದರ ಜತೆಗೆ ಹಲವಾರು ಸಂದರ್ಭಗಳಲ್ಲಿ ನಮ್ಮವರೇ ಅನಗತ್ಯ ವಿವಾದಗಳ ಮೂಲಕ ಕನ್ನಡದ ಕೆಲಸದಲ್ಲಿ ಗೊಂದಲ ಸೃಷ್ಟಿಸಿದ, ವೈಯಕ್ತಿಕ ಲಾಭ ಮತ್ತು ದ್ವೇಷದಿಂದ ಕನ್ನಡದ ಹಿತಕ್ಕೆ ವಿರುದ್ಧವಾಗಿ ಕೆಲಸಮಾಡಿದ ಪ್ರಕರಣಗಳೂ ಇವೆ. ಆದರೆ ನಮ್ಮವರ ದ್ರೋಹವನ್ನು ನೆನೆಸಿಕೊಂಡು ಸೇಡು ತೀರಿಸಿಕೊಳ್ಳುವ ಸಮಯ ಇದಲ್ಲ.

ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಆಯ್ಕೆಯಲ್ಲಿನ ವಿವಾದದ ಹಿಂದೆ ನಮ್ಮ ಅನೇಕ ಸಾಹಿತಿಗಳು ತಿಳಿದುಕೊಂಡಿರುವುದಕ್ಕಿಂತಲೂ ದೊಡ್ಡದಾದ ಕನ್ನಡ ವಿರೋಧಿ ಲಾಬಿ ಕೆಲಸ ಮಾಡುತ್ತಿದೆ. ಕನ್ನಡಿಗರೇ ಬಡಿದಾಡಿಕೊಂಡರೆ ಆ ಲಾಬಿಯ ಕೆಲಸ ಇನ್ನಷ್ಟು ಸುಲಭವಾಗುತ್ತದೆ. ಕನ್ನಡದ ಕೆಲವು ಲೇಖಕರು ಈ ಲಾಬಿಯ ಸ್ನೇಹದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆನ್ನುವ ಗುಮಾನಿಯೂ ಇದೆ. ಈ ಹಿನ್ನೆಲೆಯಲ್ಲಿ ವಿವಾದದ ಆಳ–ಅಗಲಕ್ಕೆ ಒಂದು ಇಣುಕುನೋಟ ಅನಿವಾರ್ಯವಾಗಿದೆ.

ಅಕಾಡೆಮಿಯ ಕಾರ್ಯದರ್ಶಿ ಆಯ್ಕೆಯನ್ನು ಪ್ರಶ್ನಿಸಿ ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ವರದಿಗಳ ಹಿನ್ನೆಲೆಯಲ್ಲಿರುವವರ ಗುರಿ ಕೇವಲ ಅಗ್ರಹಾರ ಕೃಷ್ಣಮೂರ್ತಿ ಅಲ್ಲ. ಅದರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಗೋಪಿಚಂದ ನಾರಂಗ ಕೂಡಾ ಸೇರಿದ್ದಾರೆ. ಎನ್‌ಡಿಎ ಕಾಲದಲ್ಲಿ ಅಧ್ಯಕ್ಷರಾದ ನಾರಂಗ ಅವರು ಬಿಜೆಪಿ ನೇಮಕ ಎನ್ನುವುದು ಅವರನ್ನು ವಿರೋಧಿಸುವವರ ಆರೋಪ. ಬಂಗಾಳಿ ಸಾಹಿತಿ ಮಹಾಶ್ವೇತಾದೇವಿ ಅವರನ್ನು ಸೋಲಿಸಿ ಅಧ್ಯಕ್ಷರಾದವರು ಅವರು. ಆ ಚುನಾವಣೆಯಲ್ಲಿ ಬಂಗಾಳಿ ಸಾಹಿತಿಗಳ ಗುಂಪು ನಾರಂಗ ಸೋಲಿಗೆ ಬಹಿರಂಗವಾಗಿ ಕೆಲಸ ಮಾಡಿತ್ತು. ಹಿಂದೆ ಕನ್ನಡ ಸಾಹಿತಿ ಡಾ. ಯು.ಆರ್. ಅನಂತಮೂರ್ತಿ ಅವರು ಗಂಗಾಧರ ಗಾಡ್ಗೀಳ್ ವಿರುದ್ಧ ಸ್ಪರ್ಧಿಸಿದಾಗಲೂ ಆಕಾಡೆಮಿ ಚುನಾವಣೆ ಇದೇ ರೀತಿ ಸುದ್ದಿ ಮಾಡಿತ್ತು. 93 ಸದಸ್ಯ ಬಲದ ಆಡಳಿತ ಮಂಡಳಿಯಲ್ಲಿ ನಾರಂಗ ಅವರು ಮಹಾಶ್ವೇತಾದೇವಿ ಅವರನ್ನು 26 ಮತಗಳಿಂದ ಸೋಲಿಸಿ ಅಧ್ಯಕ್ಷರಾಗಿ ಆಯ್ಕೆಯಾದವರು. ಅಗ್ರಹಾರ ಅವರು ಚುನಾವಣೆಯಲ್ಲಿ ನಾರಂಗ ಅವರಿಗೆ ನೆರವಾಗಿದ್ದಾರೆಂಬುದು ಈಗಿನ ಆರೋಪ.

ಕಳೆದ ಚುನಾವಣೆಯಲ್ಲಿ ಎನ್‌ಡಿಎ ಸೋತು ಯುಪಿಎ ಅಧಿಕಾರಕ್ಕೆ ಬಂದ ಕೂಡಲೇ ನಾರಂಗ ವಿರುದ್ಧದ ಆರೋಪಗಳು ಮತ್ತೆ ಕೇಳಿಬರತೊಡಗಿದವು.

ಅವರನ್ನು ಬದಲಾಯಿಸಬೇಕೆಂದು ಹಿಂದಿನ ಸಂಸ್ಕೃತಿ ಸಚಿವ ಜೈಪಾಲ್‌ರೆಡ್ಡಿ ಅವರ ಮೇಲೂ ಒಂದು ವರ್ಗದ ಬುದ್ಧಿಜೀವಿಗಳು ಒತ್ತಡ ಹೇರಿದ್ದರು. ಆದರೆ ಚುನಾಯಿತ ಅಧ್ಯಕ್ಷರ ವಜಾ ಮಾಡುವ ಸಾಹಸವನ್ನು ಅವರು ಮಾಡಲಿಲ್ಲ. ನಾರಂಗ ಅವರು ತಮ್ಮ ಕಚೇರಿಯಲ್ಲಿ ಶೌಚಾಲಯ ಕಟ್ಟಿಸಿಕೊಂಡಿದ್ದಾರೆ ಎನ್ನುವುದರಿಂದ ಹಿಡಿದು ಲೆಕ್ಕಪತ್ರದಲ್ಲಿನ ದೋಷದವರೆಗೆ ಒಂದಲ್ಲ ಒಂದು ಆರೋಪ ಅವರ ಮೇಲೆ ಸದಾ ಕೇಳಿಬರುತ್ತಲೇ ಇದೆ. ಇದೀಗ ಹೊಸ ಕಾರ್ಯದರ್ಶಿ ನೇಮಕಕ್ಕೆ ವಿವಾದದ ರೂಪ ಕೊಡಲಾಗುತ್ತಿದೆ. ಆದರೆ ಅಗ್ರಹಾರ ಅವರ ಆಯ್ಕೆ ಕೇವಲ ಗೋಪಿಚಂದ ನಾರಂಗ ಅವರದ್ದಲ್ಲ. ಅದು ನಾಲ್ಕು ಮಂದಿ ಸಾಹಿತಿಗಳನ್ನೊಳಗೊಂಡಂತೆ ಆರು ಮಂದಿ ತಜ್ಞರ ಸಮಿತಿಯ ನಿರ್ಧಾರ ಎನ್ನುವುದು ಉಲ್ಲೇಖನೀಯ.

ಇಷ್ಟಕ್ಕೂ ಎನ್‌ಡಿಎ ಕಾಲದಲ್ಲಿ ವಿವಿಧ ಹುದ್ದೆಗಳಿಗೆ ಆಯ್ಕೆ-ನೇಮಕ ಹೊಂದಿದವರೆಲ್ಲರನ್ನೂ ಕೋಮುವಾದಿಗಳೆನ್ನಬಹುದೆ? ದೆಹಲಿ ವಿಶ್ವವಿದ್ಯಾಲಯದಲ್ಲಿ ಉರ್ದು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ 75 ವರ್ಷದ ಗೋಪಿಚಂದ್ ನಾರಂಗ್ ಒಬ್ಬ ಹಿರಿಯ ಉರ್ದು ಲೇಖಕ. ದೇಶ-ವಿದೇಶಗಳ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಉರ್ದು ಮತ್ತು ಇಂಗ್ಲೀಷ್‌ನಲ್ಲಿ 60ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ದೆಹಲಿ ಹವೆಯನ್ನು ಉಸಿರಾಡಿ ಬದುಕಿದವರಾದ ಕಾರಣ, ಕಾರ್ಯಸಾಧನೆಗಾಗಿ ರಾಜಕಾರಣವನ್ನು ಹೇಗೆ ಬಳಸಬೇಕೆನ್ನುವುದನ್ನು ಕೂಡಾ ಅವರು ಕಲಿತಿರಬಹುದು. ಆದರೆ ಒಬ್ಬ ಉರ್ದು ಲೇಖಕನ್ನು ತಮ್ಮವನೆಂದು ಸ್ವೀಕರಿಸಿ ಬೆಂಬಲಿಸಬೇಕೆನ್ನುವಷ್ಟು ವಿಶಾಲವಾದ ಹೃದಯ ಉಳ್ಳವರು ಬಿಜೆಪಿಯಲ್ಲಿದ್ದಾರೆನ್ನುವುದನ್ನು ನಂಬುವುದು ಕಷ್ಟ.

ಯಾವುದೇ ಸಂಸ್ಥೆಯ ಕಾರ್ಯನಿರ್ವಹಣೆಯನ್ನು ಅಳೆಯಲು ಬೇರೆ ಬೇರೆ ಮಾನದಂಡಗಳಿರುತ್ತವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಎರಡು ಮುಖ್ಯ ಕಾರ್ಯಗಳೆಂದರೆ ಪುಸ್ತಕ ಪ್ರಕಟಣೆ ಮತ್ತು ಪ್ರಶಸ್ತಿ ನೀಡಿಕೆ.

ಅದರ ಅಧ್ಯಕ್ಷರು ಯಾವುದಾದರೂ ಒಂದು ಪಕ್ಷ ಇಲ್ಲವೇ ವರ್ಗದ ಕಾರ್ಯಸೂಚಿಯನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿದ್ದರೆ ಅದು ಅದರ ಕಾರ್ಯದಲ್ಲಿ ಪ್ರತಿಫಲನಗೊಳ್ಳುವುದು ಸಹಜ. ಗೋಪಿಚಂದ ನಾರಂಗ ವಿರುದ್ಧ ಇಂತಹ ಆರೋಪಗಳಿದ್ದರೆ ಅದು ಬಹಿರಂಗವಾಗಿ ಚರ್ಚೆಯಾಗಬೇಕು. ಆದರೆ ಇತ್ತೀಚೆಗೆ ಕೆಲವು ಪತ್ರಿಕೆಗಳಲ್ಲಿ ಚರ್ಚೆಯಾಗುತ್ತಿರುವುದು ಅಗ್ರಹಾರ ಕೃಷ್ಣಮೂರ್ತಿ ಅವರ ವಿರುದ್ಧ ಆರೋಪಗಳೇ ಹೊರತು ಗೋಪಿಚಂದ ನಾರಂಗ ಅವರ ಕಾರ್ಯನಿರ್ವಹಣೆಯಲ್ಲ.

ಅಕಾಡೆಮಿ ಕಾರ್ಯದರ್ಶಿ ಆಯ್ಕೆ ವಿವಾದದ ಹಿಂದೆ ಇನ್ನೊಂದು ಕಡೆಯಲ್ಲಿ ಮಲೆಯಾಳಿ ಸಾಹಿತಿಗಳು, ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನೊಳಗೊಂಡ ಗುಂಪು ಕೂಡಾ ಕೆಲಸ ಮಾಡುತ್ತಿದೆ ಎನ್ನುವ ಆರೋಪ ಇದೆ. ಮಲೆಯಾಳಿ ಲೇಖಕ ಸಚ್ಚಿದಾನಂದ ಅವರು ಅಕಾಡೆಮಿಯ ಈಗಿನ ಕಾರ್ಯದರ್ಶಿ. ಅವರ ಅವಧಿ ಮೇ 31ಕ್ಕೆ ಕೊನೆಗೊಳ್ಳಲಿದೆ. ಇನ್ನೊಂದು ಅವಧಿಗೆ ಅದೇ ಸ್ಥಾನದಲ್ಲಿ ಮುಂದುವರಿಯಬೇಕೆನ್ನುವ ಇಚ್ಛೆಯನ್ನು ಅವರು ಬಹಿರಂಗವಾಗಿ ವ್ಯಕ್ತಪಡಿಸಿದಿದ್ದರೂ ಮಲೆಯಾಳಿ ಲಾಬಿ ಈ ಉದ್ದೇಶದ ಜಾಲ ಹರಡುತ್ತಿದೆ.

ಅಗ್ರಹಾರ ಕೃಷ್ಣಮೂರ್ತಿ ಅವರ ಆಯ್ಕೆಯನ್ನು ಯಾವುದಾದರೂ ನೆಪದ ಮೂಲಕ ತಡೆಹಿಡಿದರೆ ಸಚ್ಚಿದಾನಂದ ಅವರೇ ಮುಂದುವರಿದುಕೊಂಡು ಹೋಗಲು ಅನುಕೂಲವಾಗಬಹುದು ಎನ್ನುವುದು ಆ ಗುಂಪಿನ ದುರಾಲೋಚನೆಯಾಗಿರಲೂಬಹುದು. ಇದಕ್ಕಾಗಿ ಮೊದಲು ಅಗ್ರಹಾರ ವಿರುದ್ಧದ ಆರೋಪದ ಬಗ್ಗೆ ತನಿಖೆ ನಡೆಸಿದ ಸಮಿತಿ ವರದಿ ನೀಡುವುದನ್ನು ಅನಗತ್ಯವಾಗಿ ವಿಳಂಬ ಮಾಡಲಾಯಿತು. ಕಾರ್ಯದರ್ಶಿ ಸ್ಥಾನಕ್ಕೆ ಅಗ್ರಹಾರ ಅವರು ಅರ್ಜಿ ಸಲ್ಲಿಸುವುದನ್ನೇ ತಡೆಯುವುದು ಈ ವಿಳಂಬದ ಹಿಂದಿನ ಹುನ್ನಾರ. ಆದರೆ ಕೊನೆಗೂ ಒತ್ತಡಕ್ಕೆ ಮಣಿದು ಕಳೆದ ಫೆಬ್ರವರಿಯಲ್ಲಿ ತನಿಖಾ ಸಮಿತಿಯ ವರದಿಯನ್ನು ಬಹಿರಂಗಗೊಳಿಸಲಾಯಿತು. ಅಗ್ರಹಾರ ಅವರನ್ನು ಆರೋಪದಿಂದ ಮುಕ್ತಗೊಳಿಸಿರುವ ತನಿಖಾ ಸಮಿತಿ, ಒಂದು ಪ್ರಕರಣದಲ್ಲಿ ಅವರ ನಿರ್ಲಕ್ಷ್ಯತನಕ್ಕೆ ಲಘು ಎಚ್ಚರಿಕೆ ನೀಡಿದೆ. ಈ ಬಗ್ಗೆ ಸಚ್ಚಿದಾನಂದ ಅವರೇ ಅಗ್ರಹಾರ ಅವರಿಗೆ ಪತ್ರ ಬರೆದಿದ್ದಾರೆ. ಈ ಪ್ರಯತ್ನ ವಿಫಲವಾದ ನಂತರ ಎ ದರ್ಜೆಯ ಹುದ್ದೆಯಾಗಿರುವ ಅಕಾಡೆಮಿ ಕಾರ್ಯದರ್ಶಿ ನೇಮಕಕ್ಕೆ ಪೂರ್ವಾನುಮತಿ ಪಡೆದಿಲ್ಲ ಎಂದು ಕೇಂದ್ರ ಸಂಸ್ಕೃತಿ ಇಲಾಖೆಯಿಂದಲೇ ಕೊಕ್ಕೆ ಹಾಕಿಸಲಾಗಿದೆ.

ಇದರ ಜತೆಗೆ ಅಗ್ರಹಾರ ವಿರುದ್ಧದ ಆರೋಪಗಳ ಬಗ್ಗೆ ಮರುತನಿಖೆ ನಡೆಸಬೇಕೆಂಬ ಬೇಡಿಕೆಗಳು ಕೂಡಾ ಕೇಳಿಬರುತ್ತಿವೆ.

ಕುಬ್ಜತನಕ್ಕೆ ಕೊನೆಯೆಲ್ಲಿ?

○

(08-05-2006)

ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ

ಸಂವಿಧಾನದ 371ನೇ ಪರಿಚ್ಛೇದದ ಅಡಿಯಲ್ಲಿ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಬೇಕೆಂಬ ಕೂಗಿಗೆ ಮತ್ತೆ ಚಾಲನೆ ಸಿಕ್ಕಿದೆ. ಹೈದರಾಬಾದ್ ಕರ್ನಾಟಕದ ಜನರ ಒಕ್ಕೊರಲ ದನಿಯಾಗಿ ಮೊದಲು ಕೇಳಿಬಂದ ಈ ಬೇಡಿಕೆ ಭಿನ್ನಭಿನ್ನ ರಾಜಕೀಯ ಬಣ್ಣ-ದನಿಗಳಿಂದ ಪ್ರೇರೇಪಣೆ ಪಡೆದು ಈಗ ವಿವಾದದ ರೂಪ ತಳೆಯುತ್ತಿದೆ. ಮುಖ್ಯಮಂತ್ರಿಗಳು ದೆಹಲಿಗೆ ನಿಯೋಗ ಒಯ್ಯುತರಲು ಟೊಂಕಕಟ್ಟಿ ನಿಂತಿದ್ದಾರೆ. ರಾಜ್ಯದ ಬಿಜೆಪಿ ನಾಯಕರು ತಮ್ಮ ಪಕ್ಷದ ದೆಹಲಿ ದೊರೆಗಳ ಮನ ಒಲಿಸಲು ಬೆವರು ಸುರಿಸುತ್ತಿದ್ದಾರೆ.

ಹೈದರಾಬಾದ್ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ರಾಯಚೂರು, ಗುಲ್ಬರ್ಗ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಪ್ರಾದೇಶಿಕ ಮೀಸಲಾತಿ ಕಲ್ಪಿಸುವುದು ಬೇಡಿಕೆಯ ಹಿಂದಿನ ಉದ್ದೇಶ. ಇದು ಸಾಧ್ಯವಾಗಬೇಕಾದರೆ ಸಂವಿಧಾನದ 371ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡಿ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಬೇಕಾಗುತ್ತದೆ.

ಒಂದು ರಾಜ್ಯಕ್ಕೆ ಇಂತಹ ಸ್ಥಾನಮಾನ ನೀಡಿದರೆ ಉಳಿದ ರಾಜ್ಯಗಳಿಂದಲೂ ಅದೇ ರೀತಿಯ ಬೇಡಿಕೆ ಎದುರಾಗಬಹುದು ಎಂಬ ಮೊಂಡುವಾದವನ್ನು ಇತ್ತೀಚೆಗೆ ಕೆಲವರು ಮಂಡಿಸತೊಡಗಿದಾರೆ. ಇದೇನು ದೇಶ ಕಂಡು ಕೇಳರಿಯದ

ಬೇಡಿಕೆಯಲ್ಲ. ಸಂವಿಧಾನದ 371ನೇ ಪರಿಚ್ಛೇದಕ್ಕೆ ಆಗಲೇ ಹತ್ತು ಬಾರಿ ತಿದ್ದುಪಡಿ ಮಾಡಲಾಗಿದೆ. ಅದರ ಮೂಲಕವೇ ಮಹಾರಾಷ್ಟ್ರ, ಗುಜರಾತ್, ನಾಗಲ್ಯಾಂಡ್, ಅಸ್ಸಾಂ, ಮಣಿಪುರ, ಆಂಧ್ರಪ್ರದೇಶ, ಸಿಕ್ಕಿಮ್, ಮಿಜೋರಾಮ್, ಅರುಣಾಚಲ ಪ್ರದೇಶ ಮತ್ತು ಗೋವಾ ರಾಜ್ಯಗಳು ಸಂವಿಧಾನದತ್ತ ವಿಶೇಷ ಸ್ಥಾನಮಾನ ಪಡೆದಿವೆ. ಪರಿಚ್ಛೇದ 370ರ ಅಡಿಯಲ್ಲಿ ಕಾಶ್ಮೀರಕ್ಕೆ ನೀಡಲಾಗಿರುವ ವಿಶೇಷ ಸ್ಥಾನಮಾನ ಜನಜನಿತ.

ಕರ್ನಾಟಕ ತನ್ನ ಬೇಡಿಕೆಯ ಸಮರ್ಥನೆಗೆ ಉಲ್ಲೇಖಿಸುತ್ತಿರುವುದು 1973ರಲ್ಲಿ ಸಂವಿಧಾನಕ್ಕೆ ಮಾಡಲಾದ 32ನೇ ತಿದ್ದುಪಡಿಯ ಮೂಲಕ ಅಸ್ತಿತ್ವಕ್ಕೆ ಬಂದ ಪರಿಚ್ಛೇದ 371 ಮತ್ತು 371–ಡಿ ಅನು. ಪರಿಚ್ಛೇದ 371ರ ಅಡಿಯಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿದೆ.

ಮಹಾರಾಷ್ಟ್ರ ಸರ್ಕಾರ ವಿದರ್ಭ, ಮರಾಠವಾಡ ಪ್ರದೇಶಕ್ಕಾಗಿ ಮತ್ತು ಗುಜರಾತ್ ಸರ್ಕಾರ ಸೌರಾಷ್ಟ್ರ ಮತ್ತು ಕಛ್ ಪ್ರದೇಶಗಳಿಗಾಗಿ ಪ್ರತ್ಯೇಕ ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಿದೆ.

ಪರಿಚ್ಛೇದ 371–ಡಿ ಅಡಿಯಲ್ಲಿ ಆಂಧ್ರಪ್ರದೇಶ ಸರ್ಕಾರ ತೆಲಂಗಾಣ ಪ್ರದೇಶದಲ್ಲಿ ಸ್ಥಳೀಯರಿಗಾಗಿ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದ ಪ್ರವೇಶದಲ್ಲಿ ಪ್ರತ್ಯೇಕ ಮೀಸಲಾತಿ ಕಲ್ಪಿಸಿದೆ. ಆ ಪ್ರದೇಶಕ್ಕಾಗಿಯೇ ಪ್ರತ್ಯೇಕ ಆಡಳಿತ ನ್ಯಾಯಮಂಡಳಿಯನ್ನು ಕೂಡಾ ಸ್ಥಾಪಿಸಿದೆ. ಕರ್ನಾಟಕ ಹೆಚ್ಚಿನ ಒತ್ತು ನೀಡುತ್ತಿರುವುದು ಪರಿಚ್ಛೇದ 371–ಡಿ ಮೇಲೆ.

ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನಕ್ಕೆ ಅವಕಾಶ ನೀಡಲು ಮುಖ್ಯ ಕಾರಣ ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ತೆಲಂಗಾಣ ಪ್ರದೇಶದ ಹಿಂದುಳಿಯುವಿಕೆ. ರಾಜ್ಯ ಪುನರ್ ವಿಂಗಡಣೆಗಿಂತ ಮೊದಲು ತೆಲಂಗಾಣದಂತೆ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿಯೂ ನಿಜಾಮರ ಆಳ್ವಿಕೆ ಇತ್ತು. ಆದರೆ ಆಂಧ್ರಪ್ರದೇಶಕ್ಕೆ ದಕ್ಕಿದ ವಿಶೇಷ ಸ್ಥಾನಮಾನ ಕರ್ನಾಟಕಕ್ಕೆ ದಕ್ಕಲಿಲ್ಲ. ಇದಕ್ಕೆ ಕಾರಣ ರಾಜ್ಯದ ಪ್ರಯತ್ನದ ಕೊರತೆಯೋ? ಕೇಂದ್ರದ ಉದ್ದೇಶಿತ ನಿರ್ಲಕ್ಷ್ಯವೋ ಗೊತ್ತಿಲ್ಲ. ಎರಡೂ ಕಾರಣ ಇದ್ದರೂ ಇರಬಹುದು.

ನಿಜಾಮರ ಆಳ್ವಿಕೆಯಿಂದ ಮುಕ್ತಿಪಡೆದರೂ ಹೈದರಾಬಾದ್ ಕರ್ನಾಟಕದ ಸ್ಥಿತಿಯಲ್ಲಿ ಹೆಚ್ಚೇನು ಸುಧಾರಣೆ ಆಗಿಲ್ಲ ಎಂಬುದು ಕಣ್ಣೆದುರಿನ ಸತ್ಯ. ನಮ್ಮಲ್ಲಿನ ಹಳ್ಳಿ ಶಾಲೆಗಳಲ್ಲಿ ಕಲಿತ ಹುಡುಗರು ಬೆಂಗಳೂರಿನ ಹೈಟೆಕ್ ಶಾಲೆಯ ವಿದ್ಯಾರ್ಥಿಗಳ ಜತೆ ಉದ್ಯೋಗ ಕ್ಷೇತ್ರದಲ್ಲಿ ಪೈಪೋಟಿ ನಡೆಸುವುದು ಸಾಧ್ಯವೇ? ಎಂಬ ಆ ಪ್ರದೇಶದ ಜನತೆಯ ಪ್ರಶ್ನೆಗೆ ಉತ್ತರ ಸುಲಭವಲ್ಲ. ಇಂದಿಗೂ ಹೈದರಾಬಾದ್ ಕರ್ನಾಟಕ

ಸರ್ಕಾರಿ ಕಚೇರಿ, ಶಾಲೆ, ಆಸ್ಪತ್ರೆಗಳ ಹುದ್ದೆಗಳು ಬಹುಸಂಖ್ಯೆಯಲ್ಲಿ ಖಾಲಿ ಇವೆ. ರಾಜ್ಯದ ಉಳಿದ ಭಾಗದ ಜನ ಅಲ್ಲಿಗೆ ಹೋಗಲು ಸಿದ್ಧ ಇಲ್ಲದಿರುವುದೇ ಇದಕ್ಕೆ ಕಾರಣ.

ಸ್ಥಳೀಯ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಟ್ಟರೆ ಈ ಸಮಸ್ಯೆಗಳು ಪರಿಹಾರವಾಗಬಹುದೆಂಬ ಆ ಪ್ರದೇಶದ ಜನರ ನಂಬಿಕೆ. ವಿಶೇಷ ಸ್ಥಾನಮಾನದ ಬೇಡಿಕೆಯ ಹಿಂದಿನ ಮುಖ್ಯ ಆಶಯ ಇದು. ಇದರಿಂದ ಕೇಂದ್ರ ಇಲ್ಲವೇ ರಾಜ್ಯ ಸರ್ಕಾರದ ಮೇಲೆ ಹೆಚ್ಚುವರಿ ಆರ್ಥಿಕ ಭಾರ ಬೀಳುವುದಿಲ್ಲ. ಬೇಡಿಕೆಯ ಪರವಾಗಿರುವ ಇನ್ನೊಂದು ಅಂಶ.

ರಾಜ್ಯ ಸರ್ಕಾರ ಅಧಿಕೃತವಾಗಿ ಈ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದು ಐದು ವರ್ಷಗಳ ಹಿಂದೆ. (ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ಸಿಕ್ಕಿದ 25 ವರ್ಷಗಳ ನಂತರ) ರಾಜ್ಯ ಸಚಿವ ಸಂಪುಟ ಸಭೆ (8–6–1998) ಈಗ್ಗೆ ನಿರ್ಣಯವೊಂದನ್ನು ಅಂಗೀಕರಿಸಿ ಆಂಧ್ರಪ್ರದೇಶದ ವಿಶೇಷ ಸ್ಥಾನಮಾನವನ್ನು ಉಲ್ಲೇಖಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿತ್ತು. ಅದಕ್ಕೆ ಎಂಟು ತಿಂಗಳ ನಂತರ ಉತ್ತರಿಸಿದ (23–2–1999) ಕೇಂದ್ರ ಸರ್ಕಾರ ವಿಶೇಷ ಸ್ಥಾನಮಾನವನ್ನು ಆಂಧ್ರಪ್ರದೇಶದ ಮಾದರಿಯಲ್ಲಿಯೇ ಕರ್ನಾಟಕ ಕೋರುತ್ತಿದೆಯೇ ಅಥವಾ ಇನ್ನಾವುದಾದರೂ ಕಾರಣಗಳಿವೆಯೇ? ಎಂಬ ಸ್ಪಷ್ಟೀಕರಣ ಕೇಳಿತ್ತು. ಅದರ ಜತೆಗೆ ಇದರಿಂದಾಗುವ ಆರ್ಥಿಕ ಹೊಣೆಗಾರಿಕೆಯ ವಿವರ ನೀಡಬೇಕೆಂದು ತಿಳಿಸಿತ್ತು. ಅದರ ನಂತರ ಕೇಂದ್ರ ಮತ್ತು ರಾಜ್ಯಗಳ ನಡುವೆ ನಿರಂತರ ಕೇಂದ್ರ ಮತ್ತು ರಾಜ್ಯಗಳ ನಡುವೆ ನಿರಂತರ ಪತ್ರ ವ್ಯವಹಾರ ನಡೆದಿದೆ. ಇದುವರೆಗೂ ರಾಜ್ಯ ಸರ್ಕಾರ ಕನಿಷ್ಠ ಹತ್ತು ಪತ್ರಗಳನ್ನು ಬರೆದಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಬಿಜೆಪಿ ರಾಜ್ಯ ಅಧ್ಯಕ್ಷ ಬಸವರಾಜ ಪಾಟೀಲ್ ಸೇಡಂ ನೇತೃತ್ವದಲ್ಲಿ ಬಂದ ನಿಯೋಗ, ಉಪಪ್ರಧಾನಿ ಎಲ್.ಕೆ. ಅಡ್ವಾಣಿಯವರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, ಅವರಿಂದ ಆಶ್ವಾಸನೆ ಪಡೆದು ಹಿಂದಿರುಗಿತ್ತು. ಈ ವಿಷಯದ ಮೇಲೆ ಸಾಕಷ್ಟು ಅಧ್ಯಯನ ನಡೆಸಿದ್ದ ಹಿರಿಯ ಬಿಜೆಪಿ ನಾಯಕ ಡಾ. ಎಂ.ಆರ್. ತಂಗಾ, ಆಗ ಅಡ್ವಾಣಿಯವರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದರು.

ಅದೇ ತಿಂಗಳು ಗುಲ್ಬರ್ಗಕ್ಕೆ ಹೋಗಿದ್ದ ಅಡ್ವಾಣಿಯವರು ಸಾರ್ವಜನಿಕ ಸಮಾರಂಭದಲ್ಲಿ ಆಶ್ವಾಸನೆ ನೀಡಿದ್ದಲ್ಲದೆ, ರಾಜ್ಯ ಸರ್ಕಾರ ಪರಿಷ್ಕೃತ ಪ್ರಸ್ತಾಪವನ್ನು ಕಳುಹಿಸಿಕೊಡಲು ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದ್ದರು.

ಇನ್ನೇನು ಆಗಿಯೇಬಿಟ್ಟಿತು ಎಂದು ಬಿಜೆಪಿ ನಾಯಕರು ವಿಜಯೋತ್ಸವಕ್ಕೆ ಅಣಿಯಾಗುತ್ತಿದಂತೆಯೇ, ಗುಲ್ಬರ್ಗ ಲೋಕಸಭಾ ಸದಸ್ಯ ಇಕ್ಬಾಲ್ ಅಹ್ಮದ್ ಸರಡಗಿ ಅವರ ಪ್ರಶ್ನೆಗೆ ಉತ್ತರಿಸಿದ ಗೃಹಖಾತೆ ರಾಜ್ಯ ಸಚಿವ ಐ.ಡಿ. ಸ್ವಾಮಿ ವಿಶೇಷ ಸ್ಥಾನಮಾನ ನೀಡಬೇಕೆಂಬ ರಾಜ್ಯದ ಪ್ರಸ್ತಾಪ ಅನುಷ್ಠಾನ ಯೋಗ್ಯವಲ್ಲ ಎಂದು ತಿಳಿಸಿ ಎಲ್ಲರನ್ನೂ ಆಘಾತಕ್ಕೀಡು ಮಾಡಿದರು.

ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಸಚಿವರು ಅಂತಹದ್ದೇ ಪ್ರಶ್ನೆಗೆ ಉತ್ತರಿಸಿ ವಿಶೇಷ ಸ್ಥಾನಮಾನ ನೀಡುವಾಗ ಆಂಧ್ರಪ್ರದೇಶದಲ್ಲಿದ್ದ ಪರಿಸ್ಥಿತಿ ಈಗ ಕರ್ನಾಟಕದಲ್ಲಿ ಇಲ್ಲದಿರುವ ಕಾರಣ ಪ್ರಸ್ತಾಪ ಅನುಷ್ಠಾನ ಯೋಗ್ಯವಾಗಿಲ್ಲ ಎಂದು ತಿಳಿಸಿದರು. ರಾಜ್ಯ ಸರ್ವಾಂಗೀಣ ಅಭಿವೃದ್ಧಿಯಿಂದ ಸಂಪನ್ನಗೊಂಡು ಪ್ರಗತಿಯ ಶಿಖರದಲ್ಲಿದೆ ಎಂದು ಇದರ ಅರ್ಥವೇ?

ವಿಶೇಷ ಸ್ಥಾನಮಾನದ ಪ್ರಸ್ತಾಪವನ್ನು ಯಾವ ಆಧಾರದ ಮೇಲೆ ನಿರಾಕರಿಸಿತು ಎಂಬುದನ್ನು ಕೇಂದ್ರ ಸರ್ಕಾರ ಇನ್ನೂ ಸ್ಪಷ್ಟಪಡಿಸಿಲ್ಲ. ಆದರೆ ಮಾನವ ಅಭಿವೃದ್ಧಿ ವರದಿಯಲ್ಲಿ, ಸರ್ವಾಂಗೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಹೈದರಾಬಾದ್ ಕರ್ನಾಟಕದ ಐದು ಜಿಲ್ಲೆಗಳಿಗೆ ಕೊನೆಯ ಸ್ಥಾನಗಳನ್ನು ನೀಡಲಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ. ಡಿ.ಎಂ. ನಂಜುಂಡಪ್ಪ ನೇತೃತ್ವದಲ್ಲಿ ನೇಮಿಸಲಾದ ಉನ್ನತಾಧಿಕಾರದ ಸಮಿತಿಯ ಶಿಫಾರಸುಗಳು ಅದೇ ಕತೆ ಹೇಳುತ್ತಿವೆ.

ಕರ್ನಾಟಕ ಆಂಧ್ರಪ್ರದೇಶದ ವಿಶೇಷ ಸ್ಥಾನಮಾನವನ್ನು ತನ್ನ ಬೇಡಿಕೆಗೆ ಸಮರ್ಥನೆಯಾಗಿ ಬಳಸಲು ಇನ್ನೊಂದು ಕಾರಣ ಇದೆ. ಹೈದರಾಬಾದ್‌ನ ನಿಜಾಮ್ 1918ರಲ್ಲಿ ಮುಲ್ಕಿ ಆಡಳಿತ (ಕೇವಲ ಸ್ಥಳೀಯರು)ವನ್ನು ಜಾರಿಗೆ ತರದಿದ್ದರು. ಅದರ ಪ್ರಕಾರ ಶೇಕಡ 80ರಷ್ಟು ಸರ್ಕಾರಿ ಹುದ್ದೆಗಳು ಸ್ಥಳೀಯರಿಗೆ ಮೀಸಲಾಗಿದ್ದವು.

ಲಕನೌ ಮತ್ತು ಆಲಿಘಡದಿಂದ ಉರ್ದು ಭಾಷೆಯಲ್ಲಿ ಪ್ರಾವೀಣ್ಯತೆ ಪಡೆದಿರುವ ಜನರು ವಲಸೆ ಬಂದು ಹೆಚ್ಚಿನ ಸರ್ಕಾರಿ ಹುದ್ದೆಗಳನ್ನು ಆಕ್ರಮಿಸತೊಡಗಿರುವುದರ ವಿರುದ್ಧ ಬಂಡೆದ್ದ ಸ್ಥಳೀಯರನ್ನು ಸಮಾಧಾನಗೊಳಿಸಲು ನಿಜಾಮ್ ಈ ಕ್ರಮ ಕೈಗೊಂಡಿದ್ದರು.

ಸುಪ್ರೀಮ್ ಕೋರ್ಟ್ ಕೂಡಾ ಮುಲ್ಕಿ ಆಡಳಿತವನ್ನು ಎತ್ತಿಹಿಡಿದಿತ್ತು. ಆದರೆ ಇದು ಕೇವಲ ಆಂಧ್ರಪ್ರದೇಶಕ್ಕಷ್ಟೇ ಸೀಮಿತವಾಗಿದ್ದು ತೆಲಂಗಾಣ ಪ್ರದೇಶದಲ್ಲಿ ಜಾರಿಯಲ್ಲಿದೆ. ಹೈದರಾಬಾದ್ ಕರ್ನಾಟಕದ ನಾಲ್ಕು ಜಿಲ್ಲೆಗಳು ಆಂಧ್ರಪ್ರದೇಶದಲ್ಲಿಯೇ ಉಳಿದುಕೊಂಡಿದ್ದರೆ ಅವುಗಳಿಗೂ ಈ ಸೌಲಭ್ಯ ಲಭ್ಯವಾಗುತ್ತಿತ್ತು. ಕೇಂದ್ರ ಸರ್ಕಾರದ ಗಮನಕ್ಕೆ ಇವೆಲ್ಲವೂ ಬಾರದೆ ಇಲ್ಲ, ಹಾಗಿದ್ದರೂ ಅದರ ವಿರೋಧಕ್ಕೆ ಏನು ಕಾರಣ?

ದೇಶದ ಹನ್ನೆರಡು ರಾಜ್ಯಗಳು ವಿಶೇಷ ಸ್ಥಾನಮಾನ ಹೊಂದಿದ್ದರೂ ಹೆಚ್ಚು ಸುದ್ದಿಯಲ್ಲಿರುವುದು ಸಂವಿಧಾನದ 370ನೇ ಪರಿಚ್ಛೇದದಡಿ ವಿಶೇಷ ಸ್ಥಾನಮಾನ ಪಡೆದಿರುವ ಜಮ್ಮು ಮತ್ತು ಕಾಶ್ಮೀರ ಮಾತ್ರ. ಆದರೆ ಕಾಶ್ಮೀರ ಇರಲಿ, ನಾಗಲ್ಯಾಂಡ್- ಅರುಣಾಚಲಪ್ರದೇಶಗಳಿರಲಿ, ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡುವುದನ್ನು ಬಿಜೆಪಿ ತಾತ್ವಿಕವಾಗಿ ವಿರೋಧಿಸುತ್ತಲೇ ಬಂದಿದೆ.

ಇತ್ತೀಚೆಗೆ ದೆಹಲಿಗೆ ವಿಶೇಷ ಸ್ಥಾನಮಾನ ನೀಡಬೇಕೆಂಬ ಪ್ರಸ್ತಾವಕ್ಕೆ ಮೊದಲು ಬಿಜೆಪಿಯ ಸ್ಥಳೀಯ ನಾಯಕರು ಕೈ ಎತ್ತಿ, ನಂತರ ಹಿಂದೆ ಸರಿದಿದ್ದರು.

ಈಶಾನ್ಯದ ರಾಜ್ಯಗಳಿಗೆ ನೀಡಲಾಗಿರುವ ವಿಶೇಷ ಸ್ಥಾನಮಾನದ ಬಗ್ಗೆ ಇತ್ತೀಚೆಗೆ ಅಲ್ಲಿ ನಡೆದ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ಬಿಜೆಪಿ ಪ್ರತಿಕ್ರಿಯಿಸಿಲ್ಲ ನಿಜ, ಆದರೆ ಅದರ ವಿರೋಧ ಇದ್ದೇ ಇದೆ. ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶ ಪ್ರವೇಶಕ್ಕೆ ಈಗಲೂ ವಿಶೇಷ ಪರವಾನಿಗೆ ಬೇಕು.

ನಾಗಾಲ್ಯಾಂಡ್ ಮತ್ತು ಮಿಜೋರಾಂ ರಾಜ್ಯಗಳಲ್ಲಿ ಅಲ್ಲಿನ ಧರ್ಮ, ಸಾಮಾಜಿಕ ಆಚರಣೆ, ಸಾಂಪ್ರದಾಯಿಕ ಕಾನೂನು, ಜಮೀನು ಮತ್ತು ಜಮೀನು ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸಂಸತ್ ರೂಪಿಸಿದ ಯಾವ ಕಾನೂನು ಕೂಡಾ ಆ ರಾಜ್ಯಗಳ ವಿಧಾನಮಂಡಲದ ಅಂಗೀಕಾರ ಇಲ್ಲದೆ ಅನುಷ್ಠಾನಗೊಳ್ಳುವಂತಿಲ್ಲ. ಇದನ್ನು ಬಿಜೆಪಿ ವಿರೋಧಿಸುತ್ತಲೇ ಬಂದಿದೆ.

ಭಾರತೀಯ ಜನತಾ ಪಕ್ಷದ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಯಾವುದೇ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನಕ್ಕೆ ತಿದ್ದುಪಡಿ ಮಾಡಲಾಗಿಲ್ಲ. ಹಾಗೆ ಮಾಡಿದರೆ ಸದ್ಯಕ್ಕೆ ಸ್ಥಗಿತ ಸ್ಥಿತಿಯಲ್ಲಿ ಇಡಲಾದ ಸಂವಿಧಾನದ 370ನೇ ಪರಿಚ್ಛೇದದ ರದ್ದತಿ (ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ)ಯ ಬೇಡಿಕೆ ದುರ್ಬಲಗೊಳ್ಳಬಹುದೆಂಬ ಭೀತಿ ಬಿಜೆಪಿಯನ್ನು ಕಾಡುತ್ತಿದೆ ಎಂದು ಹೇಳಲಾಗಿದೆ. ರಾಜ್ಯ ಬಿಜೆಪಿ ಅಡಕೊತ್ತಿನಲ್ಲಿ ಸಿಕ್ಕಿಹಾಕಿಕೊಂಡಿದೆ.

ಉತ್ತರ ಕರ್ನಾಟಕದ ಹಾದಿಯ ಮೂಲಕವೇ ತಮ್ಮ ಪಕ್ಷ ವಿಧಾನಸೌಧ ಪ್ರವೇಶಿಸಲು ಸಾಧ್ಯ ಎಂದು ರಾಜ್ಯದ ಬಿಜೆಪಿ ಮೊದಲಿನಿಂದಲೂ ನಂಬಿಕೊಂಡು ಬಂದಿದೆ. ಆದರೆ ಅದರ ದುರಾದೃಷ್ಟಕ್ಕೋ, ಇಲ್ಲವೆ ಅದರ ವಿರೋಧಿಗಳ ಅದೃಷ್ಟಕ್ಕೋ ಆ ಪಕ್ಷಕ್ಕೆ ಸಮಸ್ಯೆಗಳು ಎದುರಾಗುತ್ತಿರುವುದು ಅದೇ ಪ್ರದೇಶದಿಂದ. ಮೊದಲು ನೈರುತ್ಯ ರೈಲ್ವೆ ವಲಯದ ವಿವಾದ, ಅದರ ಬೆನ್ನಲ್ಲಿಯೇ ವಲಯ ವಿಂಗಡಣೆಗೆ ಎದುರಾದ ವಿರೋಧ, ಮೊನ್ನೆಯ ರೈಲ್ವೆ ಬಜೆಟ್ ನಂತರ

ಸೊಲ್ಲಾಪುರ-ಗದಗ ಬ್ರಾಡ್‌ಗೇಜ್ ಯೋಜನೆಯ ನಿರ್ಲಕ್ಷ್ಯದ ವಿರುದ್ಧ ಜನ ಬಂಡೆದಿದ್ದಾರೆ.

ಈಗ ಹೈದರಾಬಾದ್ ಕರ್ನಾಟಕದ ವಿಶೇಷ ಸ್ಥಾನಮಾನದ ಕೂಗು ಎದ್ದಿದೆ. ಪಕ್ಷದ ನಾಯಕರು ಉಕ್ಕಿನ ಮನುಷ್ಯನನ್ನು ಮೆದುವಾಡುವ ಕಸರತ್ತಿನಲ್ಲಿ ತೊಡಗಿದ್ದಾರಂತೆ.

O

(13-04-2003)

ರಾಷ್ಟ್ರೀಯ ಪಕ್ಷದೊಲವು!

ನೆರೆಯ ರಾಜ್ಯಗಳಲ್ಲೆಲ್ಲಾ ಪ್ರಾದೇಶಿಕ ಪಕ್ಷಗಳು ವಿಜೃಂಭಿಸುತ್ತಿರುವಾಗ ಕರ್ನಾಟಕದ ವಿಶಾಲ ಹೃದಯಿ ಮತದಾರರು ರಾಷ್ಟ್ರೀಯ ಪಕ್ಷದ ಅಭ್ಯರ್ಥಿಗಳನ್ನೇ ಆರಿಸಿ ಕಳುಹಿಸುತ್ತಾರೆ. ಅದರ ನಂತರ ಅವರು ತಮಗೆ ನಿಷ್ಠರಾಗಿಲ್ಲ ಎಂದು ಅವರನ್ನು ಕತ್ತೆ-ಕುರಿಗಳನ್ನಾಗಿ ಮಾಡಿ ಮೆರವಣಿಗೆ ಮಾಡುತ್ತಾರೆ. ತಪ್ಪು ಯಾರದ್ದು?

ಕರ್ನಾಟಕದ ಸಂಸದರು ಇಷ್ಟೊಂದು ದುಃಖಿಗಳಾಗಿದ್ದನ್ನು ಯಾರೂ ಎಂದೂ ಕಂಡಿರಲಾರರು. ಅವರ ಗೋಳಾಟ ನೋಡಿದರೆ ಶತ್ರುಗಳಿಗೂ ಅಯ್ಯೋ ಅನಿಸದಿರದು. ಜನ ನಮ್ಮನ್ನು ಕುರಿ-ಕತ್ತೆ ಮಾಡಿ ಬೀದಿ ಬೀದಿಗಳಲ್ಲಿ ಮಾನ ಹರಾಜು ಹಾಕಿದರು. ಜೀವಂತವಾಗಿರುವಾಗಲೇ ಚಟ್ಟಕಟ್ಟಿ ಶವಯಾತ್ರೆ ಮಾಡಿ ಬೆಂಕಿ ಇಟ್ಟರು, ತಿಥಿ ಊಟ ಮಾಡಿ ತೇಗಿದರು.... ಅಂತಹ ತಪ್ಪು ಏನು ಮಾಡಿದ್ದೇವೆ ಸ್ವಾಮಿ? ಅವನ್ನೆಲ್ಲಾ ನೆನೆಸಿಕೊಂಡರೆ ಹಾಳಾದ ರಾಜಕೀಯವೇ ಸಾಕು ಅನಿಸುವಷ್ಟು ಜುಗುಪ್ಸೆ ಬಂದುಬಿಟ್ಟಿದೆ, ಎಂದು ರಾಜ್ಯದ ಸಂಸದರೊಬ್ಬರು ಗೋಳು ತೋಡಿಕೊಂಡಾಗ ಅವರ ಕಣ್ಣು ತೇವಗೊಂಡಿದ್ದು ಕೇವಲ ಅಭಿನಯ ಇರಲಾರದು.

ಇಷ್ಟೊಂದು ಹೀನಾಯವಾಗಿ ಶಿಕ್ಷಿಸುವಂತಹ ಅಪರಾಧವನ್ನಾದರೂ ಕರ್ನಾಟಕದ ಸಂಸದರು ಏನು ಮಾಡಿದ್ದಾರೆ? ನಮ್ಮ ಸಂಸದರ ನಿರ್ಲಕ್ಷ್ಯ, ಸೋಮಾರಿತನ, ಕರ್ತವ್ಯ ಭ್ರಷ್ಟತೆ ಬಗ್ಗೆ ಹಲವಾರು ಬಾರಿ ಚರ್ಚೆಯಾಗಿದೆ.

ಎಲ್ಲರಲ್ಲದಿದ್ದರೂ ಒಂದಷ್ಟು ಸಂಸದರು ಈ ಆರೋಪಕ್ಕೆ ಅರ್ಹರು ಕೂಡಾ. ಪ್ರೀತಿಯಿಂದ ಆರಿಸಿದ ಜನತೆಗೆ ತಪ್ಪನ್ನು ಪ್ರಶ್ನಿಸುವ, ತಪ್ಪು ಮಾಡಿದ್ದೇ ಆದರೆ ಶಿಕ್ಷಿಸುವ ಹಕ್ಕು ಖಂಡಿತ ಇದೆ. ಆದರೆ ಕಾವೇರಿ ನ್ಯಾಯಮಂಡಳಿ ಐತೀರ್ಪು ರಾಜ್ಯದ ಹಿತಕ್ಕೆ ವಿರುದ್ಧವಾಗಿ ಬಂದಿರುವುದಕ್ಕೆ ಸಂಸದರನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯೇ? ಹೋರಾಟವೊಂದು ಸಮೂಹ ಸನ್ನಿಗೊಳಗಾದಾಗ ಇಂತಹ ಪ್ರಶ್ನೆಗಳ ಬಗ್ಗೆ ಉತ್ತರ ಕಂಡುಕೊಳ್ಳುವ ವ್ಯವಧಾನ ಯಾರಲ್ಲೂ ಇರುವುದಿಲ್ಲ.

ಐತೀರ್ಪಿನಿಂದಾಗಿರುವ ಅನ್ಯಾಯವನ್ನು ತಪ್ಪಿಸಲು ಸಂಸದರಾದರೂ ನ್ಯಾಯಮಾರ್ಗದ ಮೂಲಕ ಏನು ಮಾಡಲು ಸಾಧ್ಯ ಇತ್ತು? ಯಾವಾಗ ವಿ.ಪಿ. ಸಿಂಗ್ ಸರ್ಕಾರ ಕಾವೇರಿ ನ್ಯಾಯಮಂಡಳಿಯನ್ನು ರಚಿಸಿತೋ, ಆಗಲೇ ವಿವಾದದ ಚೆಂಡು ಕಾರ್ಯಾಂಗ ಮತ್ತು ಶಾಸಕಾಂಗದಿಂದ ನ್ಯಾಯಾಂಗದ ಮೈದಾನ ಪ್ರವೇಶಿಸಿತು. ಅದರ ನಂತರ ಸರ್ಕಾರ, ರಾಜಕೀಯ ಪಕ್ಷಗಳು ಇಲ್ಲವೇ ಸಂಸದರು ಸಕ್ರಮ ರೀತಿಯಲ್ಲಿ ಏನೂ ಮಾಡುವಂತಿರಲಿಲ್ಲ. ನ್ಯಾಯಾಂಗದ ಮೈದಾನವನ್ನು ಅವರು ಅಕ್ರಮ ಮಾರ್ಗದ ಮೂಲಕ ನಮ್ಮ ಸಂಸದರು ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಲು ಮುಂದಾಗಬೇಕಿತ್ತು ಎಂದು ಕರ್ನಾಟಕದ ನ್ಯಾಯನಿಷ್ಠ ಜನ ಖಂಡಿತ ಬಯಸಲಾರರು.

ಉತ್ತರದ ರಾಜ್ಯಗಳು ಮಾತ್ರವಲ್ಲ ನೆರೆಯ ತಮಿಳುನಾಡು ಮತ್ತು ಆಂಧ್ರಪ್ರದೇಶ ಸಂಸದರಿಗೆ ಹೋಲಿಸಿದರೆ ನಮ್ಮವರು ಸಭ್ಯರು-ಸುಸಂಸ್ಕೃತರು. ಒರಟುವರ್ತನೆಯ, ಗದ್ದಲಪ್ರಿಯ ಸಂಸದರ ನಡುವೆ ನಮ್ಮವರ ಸಭ್ಯ ಗುಣಗಳೇ ಒಮ್ಮೊಮ್ಮೆ ದೌರ್ಬಲ್ಯದ ರೀತಿ ಕಾಣಿಸುವುದುಂಟು. ಭಾಷೆ ಮತ್ತು ಪ್ರತಿನಿಧಿಸುವ ರಾಜಕೀಯ ಪಕ್ಷಗಳ ಮಿತಿ ನಮ್ಮವರ ಬಾಯಿ ಕಟ್ಟಿಹಾಕಿರುವುದೂ ನಿಜ.

ಆದರೆ ಲೋಕಸಭೆಯಿರಲಿ, ರಾಜ್ಯಸಭೆಯಿರಲಿ, ಮುಖ್ಯವಾಗಿ ನೀರಾವರಿಗೆ ಸಂಬಂಧಿಸಿದ ವಿವಾದಗಳು ಎದ್ದಾಗ ಸಿಕ್ಕ ಅವಕಾಶಗಳ ಮಿತಿಯಲ್ಲಿಯೇ ನಮ್ಮ ಸಂಸದರು ಕರ್ನಾಟಕದ ಜನತೆಯ ಅಂತರಾಳದ ಮಾತುಗಳಿಗೆ ದನಿ ನೀಡಿದ್ದಾರೆ. ದೇವೇಗೌಡರಿಗೆ ಇರುವ ಮಾಜಿ ಪ್ರಧಾನಿಯ ಕಿರೀಟ, ಬಿಜೆಪಿಯಲ್ಲಿ ಅನಂತಕುಮಾರ್ ಅವರಿಗೆ ನೀಡಲಾಗುತ್ತಿರುವ ಪ್ರೋತ್ಸಾಹ, ಬಂಗಾರಪ್ಪನವರಿಗಿರುವ ಮಾಜಿ ಮುಖ್ಯಮಂತ್ರಿ ಎಂಬ ಮಹತ್ವ, ತೇಜಸ್ವಿನಿ ರಮೇಶ್ ಅವರಿಗೆ ಮಹಿಳೆಯೆಂಬ ಕಾರಣಕ್ಕೆ ಸಿಗುತ್ತಿರುವ ವಿಶೇಷ ಅವಕಾಶ, ರಾಜ್ಯಸಭೆಯಲ್ಲಿ ಉಪ ಸಭಾಪತಿಯಾಗಿರುವ ರೆಹಮಾನ್ ಖಾನ್ ರಾಜ್ಯದ ಸಂಸದರ ಬಗ್ಗೆ ತೋರುತ್ತಿರುವ ಔದಾರ್ಯ- ಈ ಎಲ್ಲಾ ಕಾರಣಗಳಿಂದಾಗಿ ಇತ್ತೀಚೆಗೆ ಸಂಸತ್‌ನಲ್ಲಿ ರಾಜ್ಯದ ಸಂಸದರ ದನಿ ಕೇಳಿಬರುತ್ತಿದೆ. ಕೃಷ್ಣಾ, ಕಾವೇರಿ, ಪರಗೋಡು, ಮಹದಾಯಿ ಯೋಜನೆಗಳ

ವಿವಾದದ ಸಂದರ್ಭದಲ್ಲಿ ನಮ್ಮವರು ರಾಜ್ಯದ ನಿಲುವನ್ನು ಪರಿಣಾಮಕಾರಿಯಾಗಿಯೇ ಸಮರ್ಥಿಸಿಕೊಂಡಿದ್ದಾರೆ.

ಆದರೆ ಇದರ ಪರಿಣಾಮ ಕೇಂದ್ರ ಸರ್ಕಾರದ ಮೇಲೆ ಹೆಚ್ಚು ಆದಂತಿಲ್ಲ. ದಿನದಿಂದ ದಿನಕ್ಕೆ ಕೇಂದ್ರದ ದೃಷ್ಟಿಯಲ್ಲಿ ಕರ್ನಾಟಕ ನಗಣ್ಯವಾಗುತ್ತಾ ಹೋಗುತ್ತಿದೆ.

ಇದಕ್ಕೆ ಕಾರಣಗಳು ಎಲ್ಲೋ ಇವೆ. ಜನತೆ ತಮ್ಮ ಆಕ್ರೋಶ–ಅಸಮಾಧಾನವನ್ನು ಬೇರೆಲ್ಲೋ ಹರಿಯಬಿಡುತ್ತಿದ್ದಾರೆ. ಮದ್ರಾಸ್ ಮತ್ತು ಮೈಸೂರು ನಡುವೆ 1924ರಲ್ಲಿ ನಡೆದ ಒಪ್ಪಂದ 1947ರಲ್ಲಿ ಕೊನೆಗೊಂಡಿತು. ಅದರ ನಂತರ ಸುಮಾರು ಹದಿನಾರು ವರ್ಷಗಳ ಕಾಲ ಮತ್ತೊಂದು ಒಪ್ಪದ ಇಲ್ಲವೇ ನ್ಯಾಯಮಂಡಳಿ ರಚನೆ ಆಗಲಿಲ್ಲ. ಆಗಲೂ ಕೇಂದ್ರ ಸರ್ಕಾರದ ಮೇಲೆ ತಮಿಳುನಾಡು ಒತ್ತಡ ಹೇರಿಲ್ಲವೆಂದಲ್ಲ. ಆದರೆ ಅದಕ್ಕೆ ಕರ್ನಾಟಕದ ಕಡೆಯಿಂದ ಪ್ರತಿ ಒತ್ತಡ ಇತ್ತು. ಎಲ್ಲರೂ ಕೈಬಿಟ್ಟಾಗ ಕೈಹಿಡಿದ ರಾಜ್ಯ ಕರ್ನಾಟಕ ಎಂಬ ಅಭಿಮಾನ ಇಲ್ಲವೇ ರಾಜಕೀಯ ಸ್ವಾರ್ಥ ಕಾಂಗ್ರೆಸ್ ಪಕ್ಷಕ್ಕೂ ಇತ್ತು. ಸ್ವಂತ ಬಲದಿಂದಲೇ ಸರ್ಕಾರ ರಚಿಸಿದ್ದ ಇಂದಿರಾಗಾಂಧಿ ಮತ್ತು ರಾಜೀವ್‌ಗಾಂಧಿಯವರು ಯಾವುದೇ ಪ್ರಾದೇಶಿಕ ಪಕ್ಷದ ಔದಾರ್ಯದ ಉರುಳಲ್ಲಿ ಇರಲಿಲ್ಲ. ಕಿರು ಅವಧಿಗೆ ಪ್ರಧಾನಿಗಳಾಗಿದ್ದ ಮೊರಾರ್ಜಿ ದೇಸಾಯಿ ಮತ್ತು ಚರಣ್‌ಸಿಂಗ್ ಅವರಿಗೂ ತಮಿಳುನಾಡು ಒತ್ತಡಕ್ಕೆ ಮಣಿಯಬೇಕಾದ ಅನಿವಾರ್ಯ ಎದುರಾಗಲಿಲ್ಲ. ಆದರೆ 1989 ಲೋಕಸಭಾ ಚುನಾವಣೆಯ ನಂತರ ಯಾವಾಗ ಮೈತ್ರಿ ಕೂಟದ ಹೊಸ ಶಕೆ ಪ್ರಾರಂಭವಾಯಿತೋ, ಆಗ ರಾಜಕೀಯದ ಗಣಿತವೇ ಬದಲಾಗಿಹೋಯಿತು. ಇದರಲ್ಲಿ ಕರ್ನಾಟಕ ಹಿಂದೆ ಬಿತ್ತು.

ಅಂದು ಪ್ರಧಾನಿ ವಿ.ಪಿ.ಸಿಂಗ್ ಅವರೂ ಡಿಎಂಕೆಗೆ ಮಣಿಯಲೇ ಬೇಕಾಗಿರಲಿಲ್ಲ. ಒಂಬತ್ತು (1989) ಮತ್ತು ಹತ್ತನೇ (1991) ಲೋಕಸಭಾ ಚುನಾವಣೆಗಳಲ್ಲಿ ಡಿಎಂಕೆ ಧೂಳೀಪಟವಾಗಿ ಹೋಗಿತ್ತು. ಈ ಎರಡೂ ಲೋಕಸಭೆಗಳಲ್ಲಿಯೂ ಡಿಎಂಕೆಗೆ ಸೇರಿದ ಒಬ್ಬನೇ ಒಬ್ಬ ಸದಸ್ಯ ಇರಲಿಲ್ಲ. ಆದ್ದರಿಂದ ಸಿಂಗ್ ಅವರು ತಮ್ಮ ಸರ್ಕಾರ ಉಳಿಸುವ ಅನಿವಾರ್ಯದಿಂದ ಡಿಎಂಕೆ ಬೇಡಿಕೆಗೆ ತಲೆಯಾಡಿಸಿದ್ದಲ್ಲ, ಅದೊಂದು ಸರಳ ರಾಜಕೀಯ ಲೆಕ್ಕಾಚಾರ.

ಆಗಿನ ಡಿಎಂಕೆ ಕಾಂಗ್ರೆಸ್‌ಗೆ ಮಿತ್ರಪಕ್ಷವಾದ ಕಾರಣ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಡಿಎಂಕೆ ಹತ್ತಿರವಾಯಿತು. 1989ರ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಕೊಪ್ಪಳವೊಂದನ್ನು ಬಿಟ್ಟು ಉಳಿದೆಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ್ದರು. ಇದರಿಂದಾಗಿ ವಿ.ಪಿ.ಸಿಂಗ್ ಅವರಿಗೆ ಕರ್ನಾಟಕದ ಬಗ್ಗೆ ಪ್ರೀತಿ ಇರಲು ಸಾಧ್ಯವೇ ಇರಲಿಲ್ಲ.

1989ರ ನಂತರದ ಕೇಂದ್ರ ಸರ್ಕಾರಗಳಲ್ಲಿ ಒಂದಲ್ಲ ಒಂದು ದ್ರಾವಿಡ ಪಕ್ಷ ಮಿತ್ರಪಕ್ಷವಾಗಿತ್ತು. ಜಯಲಲಿತಾ ಕೈಕೊಟ್ಟ ನಂತರ ಸಂಪೂರ್ಣ ತದ್ವಿರುದ್ಧವಾಗಿರುವ ರಾಜಕೀಯ ಸಿದ್ಧಾಂತದ ಜತೆಗೆ, ಹೊಂದಾಣಿಕೆ ಮಾಡಿಕೊಂಡ ಡಿಎಂಕೆ, ಎನ್‌ಡಿಎ ಜತೆ ಸೇರಿಕೊಂಡಿತು. ಕಳೆದ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಕೈ ಹಿಡಿಯಿತು. ಆಗಲೇ ಎಐಎಡಿಎಂಕೆ ಒಂದೆಡೆ ತೃತೀಯ ಶಕ್ತಿಗಳ ಜತೆ, ಇನ್ನೊಂದೆಡೆ ಎನ್‌ಡಿಎ ಕಡೆ ಕಣ್ಣು ಮಿಟುಕಿಸುತ್ತಿದೆ. ಕೃಷ್ಣಾನದಿ ನೀರು ಹಂಚಿಕೆಯ ಜಗಳ ಜೀವಂತವಾಗಿರುವ ಆಂಧ್ರಪ್ರದೇಶದಲ್ಲಿ ತೆಲುಗುದೇಶಂ ತಲೆ ಎತ್ತತೊಡಗಿದೆ. ನೀರಿನ ಜತೆ ಗಡಿ ವಿವಾದವನ್ನೂ ಕೆದಕುತ್ತಿರುವ ಮತ್ತೊಂದು ನೆರೆರಾಜ್ಯ ಮಹಾರಾಷ್ಟ್ರದಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಸರ್ಕಾರದ ಮೇಲೆ ಒಂದೋ ಎನ್‌ಸಿಪಿ ಇಲ್ಲವೇ ಶಿವಸೇನೆಯ ನಿಯಂತ್ರಣ ಇದ್ದೇ ಇರುತ್ತದೆ. ಕರ್ನಾಟಕದ ವಿಶಾಲ ಹೃದಯದ ಮತದಾರರು ರಾಷ್ಟ್ರೀಯ ಪಕ್ಷಗಳಿಗೆ ನಿಷ್ಠರಾಗಿರುವ ಪ್ರತಿನಿಧಿಗಳನ್ನೇ ಆರಿಸಿ ಕಳುಹಿಸುತ್ತಾರೆ. ಅದರ ನಂತರ ಅವರು ತಮಗೆ ನಿಷ್ಠರಾಗಿಲ್ಲ ಎಂದು ಅವರನ್ನು ಕತ್ತೆ–ಕುರಿಗಳನ್ನಾಗಿ ಮಾಡಿ ಮೆರವಣಿಗೆ ಮಾಡುತ್ತಾರೆ. ತಪ್ಪು ಯಾರದ್ದು?

ಕಾವೇರಿ ನ್ಯಾಯಮಂಡಳಿ ರಚನೆಯೇ ಕರ್ನಾಟಕದ ಪಾಲಿಗೆ ಅನ್ಯಾಯ ಎಂದಾದರೆ ಆಗ ಅದನ್ನು ಪ್ರತಿಭಟಿಸದ ಒಂಬತ್ತನೇ ಲೋಕಸಭೆಯ ಸಂದಸರೆಲ್ಲರೂ ಅದಕ್ಕೆ ಹೊಣೆಗಾರರಾಗುತ್ತಾರೆ. ಈಗ ಅವರನ್ನೆಲ್ಲಾ ಎಲ್ಲಿ ಹುಡುಕಲು ಸಾಧ್ಯ? ಒಂಬತ್ತನೇ ಲೋಕಸಭಾ ಸದಸ್ಯರಾಗಿದ್ದ ನರಸಿಂಗರಾವ್ ಸೂರ್ಯವಂಶಿಯೊಬ್ಬರೇ ಈಗಿನ ಹದಿನಾಲ್ಕನೇ ಲೋಕಸಭೆಯಲ್ಲಿಯೂ ಸದಸ್ಯರು. ಆಗ ಯಾಕೆ ರಾಜೀನಾಮೆ ನೀಡಿಲ್ಲ ಎಂದು ಅವರನ್ನೂ ಕೇಳುವ ಹಾಗಿಲ್ಲ, ಯಾಕೆಂದರೆ ಅವರ ಜತೆ ಸದಸ್ಯರಾಗಿದ್ದ ಗುರುದೇವನಹಳ್ಳಿ ವಾದೇಗೌಡರು ಕೂಡಾ ಸುಮ್ಮನಿದ್ದರು. ನ್ಯಾಯಮಂಡಳಿಯಿಂದ ಇಷ್ಟೆಲ್ಲಾ ಅನಾಹುತವಾಗಲಿದೆ ಎಂದು ಆಗ ಅವರಿಗೂ ಗೊತ್ತಿರಲಿಲ್ಲ. ಮಧ್ಯಂತರ ಐತೀರ್ಪು ಹೊರಬಿದ್ದಾಗಲೇ ಅನಾಹುತದ ಅರಿವಾಗಿದ್ದು.

O

(12-03-2007)

ಮತ್ತೊಂದು ಆಯೋಗ?

ಅಸ್ಸಾಂ ಮತ್ತು ನಾಗಾಲ್ಯಾಂಡ್ ಗಡಿ ವಿವಾದ ಇತ್ಯರ್ಥಕ್ಕೆ 1971ರಲ್ಲಿ ನೇಮಿಸಲಾಗಿದ್ದ ಸಮಿತಿಯ ಶಿಫಾರಸ್ಸನ್ನು ಅಸ್ಸಾಂ ಒಪ್ಪಿಕೊಂಡರೂ ನಾಗಾಲ್ಯಾಂಡ್ ತಿರಸ್ಕರಿಸಿತ್ತು. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಎರಡನೇ ಆಯೋಗವನ್ನು ರಚಿಸಿತ್ತು. ಮಹಾರಾಷ್ಟ-ಕರ್ನಾಟಕ ಗಡಿವಿವಾದದ ವಿಚಾರದಲ್ಲಿ ಇದೇ ರೀತಿಯ ಪ್ರಸ್ತಾಪವನ್ನು ಸುಪ್ರೀಂ ಕೋರ್ಟ್ ಮುಂದಿಡಲು ಗೃಹ ಸಚಿವ ಶಿವರಾಜ್ ಪಾಟೀಲ್ ಯೋಚಿಸುತ್ತಿರಬಹುದೇ?

ಒತ್ತಡಕ್ಕೆ ಮಣಿದು ಮಂಡಿ ಊರುವವರು ದುರ್ಬಲರು ಮಾತ್ರ. ದೇಶದ ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ದುರ್ಬಲರಾಗಿದ್ದಿದ್ದರೆ, ಹರಿದು ಹಂಚಿಹೋಗಿದ್ದ ಭಾರತ ಈಗಿನಂತೆ ಒಂದಾಗಿ ಇರುತ್ತಿರಲಿಲ್ಲ. ಸುಮಾರು 600 ರಾಜ ಸಂಸ್ಥಾನಗಳ ಮನವೊಲಿಸಿ, ಅನಿವಾರ್ಯವಾದ ಕಡೆ ಮಣಿಸಿ ಅವುಗಳನ್ನು ಭಾರತದ ಜತೆ ಒಗ್ಗೂಡಿಸಲು ಮಾಡಿದ ಅವರ ಸಾಹಸ ಸ್ವಾತಂತ್ರ್ಯೋತ್ತರ ಇತಿಹಾಸದ ರೋಚಕ ಕಥಾನಕ. ಆಂತರಿಕ ಭದ್ರತೆಯೇ ದೇಶದ ದೊಡ್ಡ ಸವಾಲಾಗಿ ಭೀತಿ ಹುಟ್ಟಿಸುತ್ತಿರುವ ಇಂದಿನ ದಿನಗಳಲ್ಲಿ ದೇಶಕ್ಕೆ ಎಂತಹ ಗೃಹ ಸಚಿವರು ಸಿಕ್ಕಿದ್ದಾರೆ ನೋಡಿ. ಸ್ಥಳೀಯ ಪುಂಡಾಟಿಕೆಯ ರಾಜಕೀಯವನ್ನು ಉಕ್ಕಿನ ಮನುಷ್ಯನಂತೆ

ಎದುರಿಸಿ ನಿಲ್ಲಬೇಕಾಗಿದ್ದ ಗೃಹ ಸಚಿವ ಶಿವರಾಜ್ ವಿಶ್ವನಾಥ್ ಪಾಟೀಲ್ ತುಕ್ಕು ಹಿಡಿದ ಕಬ್ಬಿಣದಂತೆ ಮುರಿದುಕೊಂಡು ಬಿದ್ದಿದ್ದಾರೆ.

ಗಡಿ ವಿವಾದದ ರಿಟ್ ಅರ್ಜಿಗೆ ಪ್ರತಿಕ್ರಿಯೆ ರೂಪದ ಪ್ರಮಾಣಪತ್ರ ಸಿದ್ಧಪಡಿಸಿದ್ದು ನಿಜ. ಆದರೆ ಅದನ್ನು ಸಲ್ಲಿಸಿಲ್ಲ ಎಂದು ಗೃಹಸಚಿವರೇ ಕೂಗಿಕೂಗಿ ಹೇಳಿದ ನಂತರ ಅದನ್ನು ಸುಳ್ಳೆಂದು ಸಾಧಿಸುವುದು ಕಷ್ಟ. ಅದಕ್ಕಿಂತಲೂ ಕಷ್ಟ ಅದನ್ನು ನಂಬುವುದು. ನ್ಯಾಯಾಲಯಕ್ಕೆ ನೀಡಿರುವ ಹೇಳಿಕೆಯಲ್ಲಿ ಯಾವುದೆಲ್ಲವೂ ಸತ್ಯ ಅದರಲ್ಲಿನ ಸುಳ್ಳಿನ ಅಂಶ ಇಲ್ಲ. ಯಾವುದೇ ವಿಷಯವನ್ನು ಕೂಡಾ ಬಚ್ಚಿಟ್ಟಿಲ್ಲ ಎಂದು ಗೃಹ ಖಾತೆಯ ಉನ್ನತಾಧಿಕಾರಿಯೇ ಪ್ರಮಾಣ ಮಾಡಿದ ಹೇಳಿಕೆಯ ಪ್ರತಿಗಳನ್ನು ಎರಡು ರಾಜ್ಯಗಳ ಕೈಗೆ ಕೊಟ್ಟ ಏಳು ದಿನಗಳ ನಂತರವೂ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಗೃಹಸಚಿವರು ಯಾಕೆ ಮರೆತರೋ? ಏಳು ದಿನಗಳ ನಂತರ ಹೇಳಲು ಬಾಕಿ ಇರುವ ವಿಷಯಗಳು ಅವರಿಗೆ ಯಾಕೆ ನೆನಪಾಯಿತೋ? ಈ ರೀತಿಯ ಮರೆಗುಳಿ ಸಚಿವರ ಕೈಗೆ ದೇಶದ ಆಂತರಿಕ ಭದ್ರತೆಯ ಹೊಣೆ ಒಪ್ಪಿಸಿ ನಿಶ್ಚಿಂತೆಯಿಂದಿರುವುದು ಸಾಧ್ಯವೆ?

ಪಕ್ಷಪಾತವನ್ನು ಇಷ್ಟೊಂದು ನಗ್ನವಾಗಿ ಪ್ರದರ್ಶಿಸಿದ ಗೃಹಸಚಿವರಿಗೆ, ಬೆಳಗಾವಿಯ ಒಂದಿಂಚು ನೆಲವನ್ನಾದರೂ ತನ್ನ ರಾಜ್ಯಕ್ಕೆ ಕೊಡಿಸಲು ಸಾಧ್ಯವಾಗಬಹುದೇ? ಅಂತಹ ನಿರೀಕ್ಷೆಯನ್ನೇನಾದರೂ ಇಟ್ಟುಕೊಂಡಿದ್ದರೆ ಅವರು ದುರ್ಬಲರು ಮಾತ್ರವಲ್ಲ ಅಜ್ಞಾನಿಗಳು ಕೂಡಾ. ಕಳೆದ 50 ವರ್ಷಗಳಲ್ಲಿ ರಾಜ್ಯಗಳ ನಡುವಿನ ಗಡಿ ವಿವಾದ ಎದುರಾದಾಗಲೆಲ್ಲ ಕೇಂದ್ರ ಸರ್ಕಾರ ವ್ಯಕ್ತಪಡಿಸಿದ ನಿಲುವನ್ನು ಅಧ್ಯಯನ ಮಾಡಿದರೆ ಬಹುಶಃ ಪಾಟೀಲರಿಗೆ ಜ್ಞಾನೋದಯವಾಗಬಹುದೇನೊ?

ಗಡಿ ವಿವಾದವನ್ನು ಆಯಾ ರಾಜ್ಯಗಳೇ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕಾಗುತ್ತದೆ. ರಾಜ್ಯಗಳು ಅಪೇಕ್ಷೆಪಟ್ಟರೆ ಸಂಧಾನಕಾರರ ಪಾತ್ರವನ್ನು ಮಾತ್ರ ತಾನು ವಹಿಸಲು ಸಾಧ್ಯ ಎನ್ನುವ ಸಿದ್ಧ ಹೇಳಿಕೆಯನ್ನು ಕೇಂದ್ರ ಸರ್ಕಾರ ಕಳೆದ 50 ವರ್ಷಗಳಲ್ಲಿ ನೂರಾರು ಸಲ ನೀಡಿದೆ. ಒಂದೊಮ್ಮೆ ಶಿವರಾಜ್ ಪಾಟೀಲ್ ಅವರಲ್ಲಿ ಕೇಳಿರುವ ಮಾತೃಭೂಮಿಯ ಪ್ರೇಮದ ಸುಳಿಯಲ್ಲೇನಾದರೂ ಕೇಂದ್ರ ಸರ್ಕಾರಕ್ಕೆ ಸಿಕ್ಕಿ ಈವರೆಗಿನ ಘೋಷಿತ ನಿಲುವನ್ನು ಬದಲಾಯಿಸಲು ಹೊರಟರೆ ಎರಡು ರಾಜ್ಯಗಳಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಅರಾಜಕ ಪರಿಸ್ಥಿತಿಯ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಇದಕ್ಕೆ ಕಾರಣ ಇದೆ. ಗಡಿ ವಿವಾದ ಎನ್ನುವುದು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಸೀಮಿತವಾದ ವಿಶೇಷ ಜಾಡ್ಯವೇನಲ್ಲ. ಶಿವರಾಜ್ ಪಾಟೀಲರು ತಮ್ಮ ಸಚಿವ ಖಾತೆಯ ಹಿತ್ತಲಿಗೊಮ್ಮೆ ಇಣುಕಿನೋಡಿದರೆ, ದೂಳು

ಹಿಡಿದು ಬಿದ್ದಿರುವ ಗಡಿ ತಂಟೆಗಳ ಕಡತಗಳ ರಾಶಿ ಅವರಿಗೆ ಕಾಣಬಹುದು. ಎನ್‌ಡಿಎ ಕಾಲದ ಗೃಹಖಾತೆ ರಾಜ್ಯ ಸಚಿವ ಐ.ಡಿ. ಸ್ವಾಮಿ. ಸಂಸತ್ತಿಗೆ ತಿಳಿಸಿರುವ ಪ್ರಕಾರ ಬಿಹಾರ-ಉತ್ತರಪ್ರದೇಶ, ಹರ್ಯಾಣ-ಉತ್ತರಪ್ರದೇಶ, ಮಹಾರಾಷ್ಟ್ರ-ಕರ್ನಾಟಕ-ಕೇರಳ, ಒರಿಸ್ಸಾ-ಆಂಧ್ರಪ್ರದೇಶ, ಒರಿಸ್ಸಾ-ಛತ್ತೀಸ್‌ಗಢ, ಒರಿಸ್ಸಾ-ಹರ್ಯಾಣ, ಉತ್ತರಾಂಚಲ-ಹಿಮಾಚಲಪ್ರದೇಶ, ಅಸ್ಸಾಂ-ನಾಗಲ್ಯಾಂಡ್-ಮಣಿಪುರ-ಅರುಣಾಚಲ ಪ್ರದೇಶಗಳ ನಡುವೆ ಗಡಿ ವಿವಾದ ಇದೆ.

ಪಂಜಾಬ್ ಮತ್ತು ಹರ್ಯಾಣಗಳನ್ನು ಪ್ರತ್ಯೇಕ ರಾಜ್ಯಗಳನ್ನಾಗಿ ಪುನರ್‌ವಿಂಗಡಿಸಿದಾಗ ಚಂಡೀಗಢವನ್ನು ಹರ್ಯಾಣಕ್ಕೆ ಬಿಟ್ಟುಕೊಡಲು ನಿರ್ಧರಿಸಲಾಗಿತ್ತು. ಅದರ ಬದಲಿಗೆ ಅಬೋಹರ್-ಫಾಝಿಲ್ಕದ ಹಿಂದಿ ಭಾಷಿಕರಿರುವ 114 ಗ್ರಾಮಗಳನ್ನು ಹರ್ಯಾಣಕ್ಕೆ ಬಿಟ್ಟುಕೊಡಲು ನಿರ್ಧರಿಸಲಾಗಿತ್ತು. ಆದರೆ ಈ ನಿರ್ಧಾರ ಇಂದಿಗೂ ಅನುಷ್ಠಾನಕ್ಕೆ ಬಂದಿಲ್ಲ.

ಅಸ್ಸಾಂ ಮತ್ತು ನಾಗಾಲ್ಯಾಂಡ್ ನಡುವಿನ ಗಡಿ ವಿವಾದ ಹಲವಾರು ಬಾರಿ ಭೀಕರ ಹಿಂಸಾಚಾರಕ್ಕೆ ಕಾರಣವಾಗಿದೆ. ಎರಡೂ ರಾಜ್ಯಗಳು ಪರಸ್ಪರ ಅತಿಕ್ರಮಣದ ಆರೋಪ ಮಾಡುತ್ತಿವೆ. ತಮಗೆ ಸೇರಿದ 50,000 ಹೆಕ್ಟೇರ್ ಭೂಮಿಯನ್ನು ನಾಗಾಲ್ಯಾಂಡ್ ಆಕ್ರಮಿಸಿಕೊಂಡಿದೆ ಎನ್ನುವುದು ಅಸ್ಸಾಂ ಆರೋಪ. ಇತ್ತೀಚೆಗಷ್ಟೇ ಕೇರಳ ಸರ್ಕಾರ ತನ್ನ ರಾಜ್ಯದ ಪಾಲ್ಘಾಟ್ ಜಿಲ್ಲೆಯ ಮುಲ್ಲೈ ಪ್ರದೇಶದ ನಾಲ್ಕು ಸಾವಿರ ಎಕರೆ ಜಮೀನನ್ನು ತಮಿಳುನಾಡು ಆಕ್ರಮಿಸಿಕೊಂಡಿದೆ ಎಂದು ಕೇಂದ್ರಕ್ಕೆ ದೂರು ನೀಡಿದೆ. ಹೊಗೇನಕಲ್ ಜಲಪಾತದ ಸಮೀಪದ ನಡುಗಡ್ಡೆಯ ಬಗ್ಗೆ ಕರ್ನಾಟಕ ಮತ್ತು ತಮಿಳುನಾಡು ಆರೋಪ-ಪ್ರತ್ಯಾರೋಪದಲ್ಲಿ ತೊಡಗಿವೆ. ಗಡಿ ವಿವಾದವೆಲ್ಲವನ್ನೂ ಬಗೆಹರಿಸಲು ಹೊರಟರೆ ಶಿವರಾಜ್ ಪಾಟೀಲರಿಗೆ ಕೈತುಂಬಾ ಕೆಲಸ ಇದೆ. ಅವರು ಬೆಳಗಾವಿ ಗಡಿ ವಿವಾದವನ್ನಷ್ಟೇ ಬಗೆಹರಿಸಿ ಸುಮ್ಮನಿರಲು ಅವರೇನು ಮಹಾರಾಷ್ಟ್ರದ ಗೃಹ ಸಚಿವರಲ್ಲವಲ್ಲ.

ನ್ಯಾಯಾಲಯ ನೀಡುವ ನೋಟೀಸಿಗೆ ಪ್ರತಿಕ್ರಿಯೆ ರೂಪದ ಪ್ರಮಾಣಪತ್ರ ಸಲ್ಲಿಸಿ, ಆಮೇಲೆ ಅದನ್ನು ಹಿಂದಕ್ಕೆ ಪಡೆದು ಬದಲಾವಣೆ ಮಾಡುವುದು ಅಪರೂಪದ ಸಂಗತಿಯೇನಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶವೂ ಇದೆ. ಆ ರೀತಿ ಮಾಡುವ, ತಿದ್ದುಪಡಿ ಒಪ್ಪಿಕೊಂಡ ವಿವರಗಳಿಗೆ ವ್ಯತಿರಿಕ್ತವಾಗಿರಬಾರದು ಎನ್ನುವುದಷ್ಟೇ ಕಾನೂನು ಹೇಳುತ್ತದೆ. ಅದರ ಬಗ್ಗೆ ಅಂತಿಮ ತೀರ್ಮಾನ ನೀಡಬೇಕಾಗಿರುವುದು ನ್ಯಾಯಾಲಯ. ಈ ಪ್ರಕರಣದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿಯೇ ಇಲ್ಲ ಎಂದು ಕೇಂದ್ರ ಹೇಳುತ್ತಿದೆ. ಆದ್ದರಿಂದ ಒಪ್ಪಿಕೊಂಡ ವಿವರಗಳಾದ-ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸುವುದಿಲ್ಲ. ಕಾಲ ಮೀರಿದ ಅರ್ಜಿ, ಕಾನೂನು ಪ್ರಕಾರ ಊರ್ಜಿತವಲ್ಲ ಇತ್ಯಾದಿ ಅಂಶಗಳನ್ನು ಕೂಡಾ ಕೇಂದ್ರ ಸರ್ಕಾರ

ಬದಲಾವಣೆ ಮಾಡಲು ಸಾಧ್ಯ. ಪ್ರಮಾಣಪತ್ರ ಸಲ್ಲಿಸಿಯೇ ಇಲ್ಲ ಎಂದು ಹೇಳಿದ ಗೃಹಸಚಿವರ ತಲೆಯಲ್ಲಿ ಈ ದುರುದ್ದೇಶ ಇದ್ದರೂ ಇರಬಹುದು.

ಅಸ್ಸಾಂ ಮತ್ತು ನಾಗಾಲ್ಯಾಂಡ್ ಗಡಿ ಪ್ರಕರಣದಲ್ಲಿ ಮಾಡಿದಂತೆ ಮತ್ತೊಂದು ಸಮಿತಿ ರಚಿಸುವ ಪ್ರಸ್ತಾವನ್ನೇನಾದರೂ ನ್ಯಾಯಾಲಯದ ಮುಂದಿಡುವ ಹುನ್ನಾರವನ್ನು ಗೃಹ ಸಚಿವರು ಮಾಡುತ್ತಿದ್ದಾರೆಯೇ? ಶಿವರಾಜ್ ಪಾಟೀಲ್ ಒಬ್ಬ ದುರ್ಬಲ ಗೃಹಸಚಿವರೆನ್ನುವುದು ನಿಜ. ಆದರೆ ಕರ್ನಾಟಕದಲ್ಲಿರುವುದು ಅವರಿಗಿಂತಲೂ ದುರ್ಬಲವಾದ ಸರ್ಕಾರವಾದ ಕಾರಣ ಕನ್ನಡಿಗರಲ್ಲಿ ಹುಟ್ಟಿಕೊಂಡಿರುವ ಆತಂಕ ಸಹಜವಾದದ್ದು.

ಗೃಹಸಚಿವ ಶಿವರಾಜ್ ಪಾಟೀಲ್ ಮರೆಗುಳಿ ಎನ್ನುವುದು ಸರಿಯಲ್ಲವೇನೋ? ಯಾಕೆಂದರೆ ಅವರೆಂದೂ ಮರೆಯದ ಹಲವಾರು ವೈಯಕ್ತಿಕ ವಿಷಯಗಳಿವೆ. ಅವರು ತಲೆ ಬಾಚುವುದನ್ನು ಎಂದು ಮರೆತವರಲ್ಲ. ಕೆದರಿದ ಕೂದಲಿನಲ್ಲಿ ಅವರನ್ನು ನೋಡಿದವರಿಲ್ಲ. ಪ್ರತಿ ಬಾರಿ ಸಂದರ್ಶಕರನ್ನು ಭೇಟಿ ಮಾಡಿದ ನಂತರ ಒಳ ಚೇಂಬರಿಗೆ ಹೋಗಿ ತಲೆಬಾಚಿಕೊಂಡು ಬಂದರಷ್ಟೇ ಅವರಿಗೆ ಸಮಧಾನ. ಆಗಾಗ ತಮ್ಮ ಸೂಟ್ ಬದಲಿಸುವುದನ್ನು ಕೂಡಾ ಅವರು ಮರೆತವರಲ್ಲ. ಇದು ಗೊತ್ತಾಗಬಾರದೆಂದು ಒಂದೇ ಬಣ್ಣದ ಎರಡು–ಮೂರು ಜತೆ ಸೂಟ್‌ಗಳನ್ನು ಅವರು ಇಟ್ಟುಕೊಂಡಿದ್ದಾರಂತೆ. ಈ ಕಾರ್ಯಬಾಹುಳ್ಯದಿಂದಾಗಿಯೇ ಪ್ರಮಾಣಪತ್ರವನ್ನು ಸಿದ್ಧಪಡಿಸಿಟ್ಟುಕೊಂಡು ನ್ಯಾಯಾಲಯಕ್ಕೆ ಸಲ್ಲಿಸಲು ಅವರು ಮರೆತುಬಿಟ್ಟರೇ?

–ಸತ್ಯ ಅವರಿಗೆ ಮಾತ್ರ ಗೊತ್ತಿತ್ತು.

○

04-09-2006

ನಾಟಕ ಶಾಲೆಯೊಳಗೊಂದು ನಾಟಕ

ದೆಹಲಿ ರಾಜಕೀಯದಲ್ಲಿ ರಾಷ್ಟ್ರೀಯ ಪಕ್ಷಗಳ ನಿಯಂತ್ರಣ ಕಡಿಮೆಯಾಗಿದ್ದರೂ, ಸಾಂಸ್ಕೃತಿಕ ಕ್ಷೇತ್ರದಲ್ಲಿ ರಾಷ್ಟ್ರೀಯ ಶಕ್ತಿಗಳ ಯಜಮಾನಿಕೆ ಇನ್ನೂ ಮುಂದುವರಿದಿದೆ. ದೆಹಲಿ ರಾಷ್ಟ್ರೀಯ ನಾಟಕ ಶಾಲೆಗೆ ನಿರ್ದೇಶಕರನ್ನು ಆಯ್ಕೆ ಮಾಡುವ ವಿಚಾರದಲ್ಲಿ ಈಗ ಮತ್ತೆ ವಿವಾದ ಆರಂಭವಾಗಿದೆ. ಕನ್ನಡಿಗರೊಬ್ಬರು ಆ ಸ್ಥಾನಕ್ಕೆ ಬರದಂತೆ ಮಾಡುವ ಪ್ರಯತ್ನಗಳು ಮತ್ತೆ ನಡೆಯುತ್ತಿವೆ. ಈ ಪ್ರಯತ್ನದಲ್ಲಿ ಹಿಂದಿವಾಲಾಗಳು ಯಶಸ್ವಿಯಾಗುವರೇ?

ದೆಹಲಿ ಕೇವಲ ರಾಜಕೀಯ ರಾಜಧಾನಿಯಲ್ಲ, ದುರದೃಷ್ಟವಶಾತ್ ಸಾಂಸ್ಕೃತಿಕ ರಾಜಧಾನಿ ಕೂಡಾ ಹೌದು. ಪ್ರಾದೇಶಿಕ ಪಕ್ಷಗಳ ಉದಯದಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ರಾಷ್ಟ್ರೀಯ ಪಕ್ಷಗಳ ಯಜಮಾನಿಕೆ ಇನ್ನೂ ಮುಂದುವರಿದಿದೆ. ಈ ಶಕ್ತಿಗಳ ದೊಡ್ಡ ಅಸ್ತ್ರ–ಹಿಂದಿ. ಹಿಂದಿಯಲ್ಲಿ ನಡೆದದ್ದೆಲ್ಲ ರಾಷ್ಟ್ರೀಯ, ರಾಜ್ಯಭಾಷೆಗಳಲ್ಲಿ ನಡೆದದ್ದು ಪ್ರಾದೇಶಿಕ. ಈ ಯಜಮಾನಿಕೆಯನ್ನು ಪ್ರಶ್ನಿಸಿದವರ ಮೇಲೆ ರಾಷ್ಟ್ರೀಯ ಶಕ್ತಿಗಳು ಎರಗಿಬೀಳುತ್ತವೆ. ಸಂಚು–ಕಾರಸ್ತಾನಗಳು ದೆಹಲಿಯಲ್ಲಿ ಬೀಸುತ್ತಿರುವ ಗಾಳಿಯಲ್ಲಿಯೇ ಇದೆ. ಈ ಗಾಳಿ ದೇಶದ ಹೆಮ್ಮೆಯ ರಾಷ್ಟ್ರೀಯ ಶಕ್ತಿಗಳು ಎರಗಿಬೀಳುತ್ತವೆ. ಸಂಚು–ಕಾರಸ್ತಾನಗಳು ದೆಹಲಿಯಲ್ಲಿ ಬೀಸುತ್ತಿರುವ ಗಾಳಿಯಲ್ಲಿಯೇ ಇದೆ. ಈ ಗಾಳಿ ದೇಶದ ಹೆಮ್ಮೆಯ ರಾಷ್ಟ್ರೀಯ

ನಾಟಕ ಶಾಲೆಯನ್ನೂ ಪ್ರವೇಶಿಸಿದಂತಿದೆ.

ಎಂಟನೇ ಶೆಡ್ಯೂಲ್‌ನಲ್ಲಿರುವ ಎಲ್ಲ ಭಾಷೆಗಳಿಗೂ ಸಂವಿಧಾನ ರಾಷ್ಟ್ರೀಯ ಭಾಷೆಯ ಮಾನ್ಯತೆ ನೀಡಿದೆ. ಇದರ ಪ್ರಕಾರ ಕನ್ನಡ ಕೂಡಾ ರಾಷ್ಟ್ರೀಯ ಭಾಷೆ. ಆದರೆ ದೆಹಲಿಯಲ್ಲಿ ಕೂತು ದೇಶದ ಸಾಂಸ್ಕೃತಿಕ ನೀತಿಯನ್ನು ರೂಪಿಸುವ ರಾಜಕೀಯ ಯಜಮಾನರ ರಾಷ್ಟ್ರೀಯ ಕಲ್ಪನೆ ಹಿಂದಿ ಭಾಷೆಯನ್ನು ದಾಟಿ ಹೋಗುವುದಿಲ್ಲ. ರಾಷ್ಟ್ರೀಯ ನಾಟಕ ಶಾಲೆ ಕೂಡಾ ಈ ಪೂರ್ವಾಗ್ರಹದಿಂದ ಪೀಡಿತವಾಗಿದೆ ಎನ್ನುವುದು ಹಳೆಯ ಆರೋಪ. ಎನ್‌ಎಸ್‌ಡಿ ರಾಷ್ಟ್ರೀಯ ರಂಗಭೂಮಿಯ ನಕ್ಷೆಯಲ್ಲಿರುವುದು ಹಿಂದಿ ರಂಗಭೂಮಿ ಮಾತ್ರ.

ಕೇಂದ್ರ ಸಂಸ್ಕೃತಿ ಇಲಾಖೆ ರಂಗಭೂಮಿ ಕ್ಷೇತ್ರಕ್ಕೆ ನೀಡುವ ಅನುದಾನದ ಸಿಂಹಪಾಲನ್ನು ರಾಷ್ಟ್ರೀಯ ರಂಗಭೂಮಿಯ ಹೆಸರಲ್ಲಿ ದೆಹಲಿಯ ಹಿಂದಿ ರಂಗಭೂಮಿ ಕಬಳಿಸುತ್ತಿದೆ. ಪ್ರತ್ಯಕ್ಷ–ಪರೋಕ್ಷ ಅನುದಾನದ ಮೂಲಕ ಎನ್‌ಎಸ್‌ಡಿಗೆ ಕೇಂದ್ರ ಸರ್ಕಾರ ವಾರ್ಷಿಕ ಸುಮಾರು 20 ಕೋಟಿ ರೂಪಾಯಿ ನೀಡುತ್ತಿದೆ. ದೇಶದ ರಂಗಭೂಮಿ ಕ್ಷೇತ್ರದಲ್ಲಿ ಹಿಂದಿಯನ್ನು ಹಿಂದಕ್ಕೆ ಅಟ್ಟಿ ಮರಾಠಿ, ಕನ್ನಡ, ಬಂಗಾಳಿ ರಂಗಭೂಮಿ ಬೆಳೆದಿದೆ. ಪಂಜಾಬಿ, ತಮಿಳು, ಮಲೆಯಾಳಿ, ಮಣಿಪುರಿ, ರಾಜಸ್ತಾನಿ ರಂಗಭೂಮಿಗಳೂ ಅಷ್ಟೇ ಸಮೃದ್ಧವಾಗಿವೆ. ಒಂದು ಅಂದಾಜಿನ ಪ್ರಕಾರ ಬೇರೆಬೇರೆ ರಾಜ್ಯಗಳಲ್ಲಿ ರಂಗತರಬೇತಿಯ ಸುಮಾರು 40 ಸಂಸ್ಥೆಗಳಿವೆ. ಅವೆಲ್ಲವೂ ರಾಜ್ಯ ಸರ್ಕಾರಗಳ ಹಂಗಿನಲ್ಲಿದ್ದು ಹಣದ ಕೊರತೆಯಿಂದ ನರಳುತ್ತಿವೆ.

ಎನ್‌ಎಸ್‌ಡಿಯ ಮೂಲಭೂತ ತರಬೇತಿ ವಿಧಾನವೇ ಪೂರ್ವಾಗ್ರಹ ಪೀಡಿತ ಎನ್ನುವ ಆರೋಪ ಇದೆ. ರಂಗಭೂಮಿಗೂ ಮಾತೃಭಾಷೆಗೂ ಕರುಳುಬಳ್ಳಿಯ ಸಂಬಂಧ ಇದೆ. ಆದರೆ ಎನ್‌ಎಸ್‌ಡಿಗೆ ಆಯ್ಕೆಯಾಗಬೇಕಾದರೆ ಬೇಕಾದ ಮೊದಲ ಅರ್ಹತೆಯೇ ಹಿಂದಿ ಭಾಷಾ ಜ್ಞಾನ. ಹಿಂದಿ ಗೊತ್ತಿಲ್ಲ ಎನ್ನುವ ಕಾರಣಕ್ಕೆ ಬೇರೆ ಭಾಷೆಗಳ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿದ ಪ್ರಕರಣಗಳು ನಡೆದಿವೆ. ಆಯ್ಕೆಯಾದ ನಂತರ ನೀಡಲಾಗುವ ಪದಪ್ರಯೋಗ (ಡಿಕ್ಷನ್) ತರಬೇತಿಯ ಮುಖ್ಯ ಉದ್ದೇಶ ವಿದ್ಯಾರ್ಥಿಗಳು ತನ್ನ ಮಾತೃಭಾಷೆಯನ್ನು ಮರೆಯುವಂತೆ ಮಾಡುವುದು. ಈ ತರಬೇತಿ ಯಾವ ರಾಷ್ಟ್ರೀಯ ರಂಗಭೂಮಿ ಬೆಳವಣಿಗೆಗೆ? ಎಂದು ಕೇಳುತ್ತಾರೆ ಬೇರೆ ಭಾಷೆಗಳ ರಂಗತಜ್ಞರು.

ಇಂತಹ ಹಲವಾರು ಆರೋಪಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿಯೇ ನಿರ್ದೇಶಕರ ನೇಮಕ ವಿಧಾನವನ್ನೇ ಬದಲಾಯಿಸಿ, ಎನ್‌ಎಸ್‌ಡಿ ಇನ್ನೊಂದು ಆರೋಪಕ್ಕೆ ತಲೆ ಒಡ್ಡಿಕೊಂಡಿದೆ. ಮುಂದಿನ ಕೆಲವು ದಿನಗಳಲ್ಲಿ ಎನ್‌ಎಸ್‌ಡಿಯ ಹೊಸ ನಿರ್ದೇಶಕರ ಆಯ್ಕೆಯಾಗಬೇಕಾಗಿದ್ದು, ಸೋಮವಾರ ಆಯ್ಕೆ ಮಂಡಳಿ

ಸದಸ್ಯರು ಅಭ್ಯರ್ಥಿಗಳ ಸಂದರ್ಶನ ನಡೆಸಲಿದ್ದಾರೆ. ಸ್ವಾಯತ್ತ ಸಂಸ್ಥೆಯಾಗಿರುವ ಎನ್‌ಎಸ್‌ಡಿಯದ್ದು ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನ. ವಿಶ್ವವಿದ್ಯಾಲಯದ ಕುಲಪತಿಯನ್ನು ಹೇಗೆ ಅರ್ಜಿ ಕರೆದು ಸಂದರ್ಶನ ನಡೆಸಿ ಆಯ್ಕೆ ಮಾಡುವುದಿಲ್ಲವೋ ಹಾಗೆ ಎನ್‌ಎಸ್‌ಡಿಯ ನಿರ್ದೇಶಕ ಅರ್ಜಿ ಹಾಕಿ ಸಂದರ್ಶನಕ್ಕೆ ಹಾಜರಾಗಿ ನೇಮಕಗೊಂಡದ್ದಿಲ್ಲ. ದೇಶದ ಪ್ರಸಿದ್ಧ ರಂಗಕರ್ಮಿಗಳನ್ನೊಳಗೊಂಡ ಶೋಧನಾ ಸಮಿತಿ ನೀಡುವ ಹೆಸರುಗಳ ಪಟ್ಟಿಯಿಂದ ಒಂದನ್ನು ಆಡಳಿತ ಮಂಡಳಿ ಆಯ್ಕೆ ಮಾಡುತ್ತದೆ. ಇದೇ ಮೊದಲ ಬಾರಿಗೆ ಕಳೆದ 47 ವರ್ಷಗಳ ಈ ಸಂಪ್ರದಾಯವನ್ನು ಮುರಿದು ನಿರ್ದೇಶಕ ಹುದ್ದೆಗೆ ಎನ್‌ಎಸ್‌ಡಿ ಅರ್ಜಿ ಕರೆದಿದೆ.

ಈ ಹೊಸ ಸಂಪ್ರದಾಯದ ಹಿಂದೆ ಯಾವ ಸದುದ್ದೇಶ ಇತ್ತೋ ಗೊತ್ತಿಲ್ಲ. ಆದರೆ ಕನಿಷ್ಠ ಒಬ್ಬ ಕನ್ನಡಿಗನನ್ನು ಸ್ಪರ್ಧೆಯಿಂದ ಹೊರಗಿಡುವಲ್ಲಿ ಈ ಸದುದ್ದೇಶ ಯಶಸ್ಸು ಕಂಡಿದೆ. ಈ ಬಾರಿ ನಿರ್ದೇಶಕನ ಹುದ್ದೆಗೆ ಬಲವಾಗಿ ಕೇಳಿಬರುತ್ತಿದ್ದ ಹೆಸರು ಕನ್ನಡಿಗರಾದ ಖ್ಯಾತ ರಂಗನಿರ್ದೇಶಕ ಪ್ರಸನ್ನ ಅವರದ್ದು, ಇನ್ನೊಂದು ಹೆಸರು ಹಿಂದಿಯ ಇನ್ನೊಬ್ಬ ರಂಗಕರ್ಮಿ ಎಂ.ಕೆ. ರೈನಾ ಅವರದ್ದು. ಬಿ.ವಿ.ಕಾರಂತ ನಂತರ ನಾಟಕ ನಿರ್ದೇಶಕರಾಗಿ ರಾಷ್ಟ್ರಮಟ್ಟದಲ್ಲಿ ಗೌರವ-ಮಾನ್ಯತೆಗಳಿಸಿದವರು ಪ್ರಸನ್ನ. ಎರಡು ವಾರಗಳ ಹಿಂದೆಯಷ್ಟೇ ಪ್ರದರ್ಶನ ಕಂಡ ಅವರ ನಿರ್ದೇಶನದ ಹಿಂದಿ ನಾಟಕ ಉತ್ತರಚರಿತಮಾನಸಂ ರಂಗಭೂಮಿ ವಲಯದಲ್ಲಿ ಸಂಚಲನವನ್ನುಂಟುಮಾಡಿತ್ತು. ಪ್ರತಿಭಾಶಾಲಿಯಾದರೇನಂತೆ, ಕನ್ನಡಿಗರ ದುರ್ಗುಣಗಳಲ್ಲೊಂದಾದ ಸ್ವಾಭಿಮಾನ ಪ್ರಸನ್ನ ಅವರಿಗೂ ಅಂಟಿಕೊಂಡಿದೆ. ಅವರು ನಿರ್ದೇಶಕ ಹುದ್ದೆಗೆ ಅರ್ಜಿ ಹಾಕಿ ಹೋಗುವವರಲ್ಲ ಎನ್ನುವುದು ಅವರನ್ನು ಬಲ್ಲವರಿಗೆಲ್ಲ ಗೊತ್ತು. ಹಾಗೆಯೇ ಆಗಿದೆ.

ಕನ್ನಡಿಗರ ಸ್ಪರ್ಧೆ ಪ್ರಸನ್ನ ಅವರಲ್ಲಿಗೆ ಮುಗಿದುಹೋಗಿಲ್ಲ. ಕನ್ನಡದ ಇನ್ನೊಬ್ಬ ಪ್ರತಿಭಾವಂತ ನಿರ್ದೇಶಕರ ಸಿ. ಬಸವಲಿಂಗಯ್ಯ ಎನ್‌ಎಸ್‌ಡಿ ನಿರ್ದೇಶಕರ ಸ್ಪರ್ಧೆಯಲ್ಲಿದ್ದಾರೆ. ಎರಡು ಅವಧಿಗೆ ರಂಗಾಯಣದ ನಿರ್ದೇಶಕರಾಗಿ ಕಾರಂತರ ಕನಸಿನ ರೆಪರ್ಟರಿಯನ್ನು ಯಶಸ್ವಿಯಾಗಿ ಮುನ್ನಡೆಸಿದವರು ಅವರು. ಆದರೆ ಇಂತಹ ಸ್ಪರ್ಧೆಯನ್ನು ಎದುರಿಸಲು ಪ್ರತಿಭೆಯೊಂದೇ ಸಾಕಾಗುವುದಿಲ್ಲವಲ್ಲಾ? ರಾಷ್ಟ್ರಮಟ್ಟದ ಇಂತಹ ಸ್ಥಾನಕ್ಕೆ ಆಯ್ಕೆಯಾಗಲು ಬೇಕಾದ ಗಾಡ್‌ಫಾದರ್‌ಗಳಾಗಲೀ, ಸಂಪರ್ಕಜಾಲವಾಗಲಿ ಬಸವಲಿಂಗಯ್ಯನವರಲ್ಲಿ ಇಲ್ಲ. ಎನ್‌ಎಸ್‌ಡಿಗೂ ಕರ್ನಾಟಕಕ್ಕೂ ಗಾಢವಾದ ಸಂಬಂಧ ಇದೆ.

ಈ ಶಾಲೆಯಿಂದ ಕರ್ನಾಟಕದ 54 ಮಂದಿ ಪದವಿ ಪಡೆದಿದ್ದಾರೆ. ಎನ್‌ಎಸ್‌ಡಿ ನಿರ್ದೇಶಕರಾಗಿ ಐದು ವರ್ಷ ಕಾರ್ಯ ನಿರ್ವಹಿಸಿದ ಬಿ.ವಿ. ಕಾರಂತ ಆ ಸ್ಥಾನವನ್ನಲಂಕರಿಸಿದ ಮೊದಲ ಮತ್ತು ಈ ವರೆಗಿನ ಕೊನೆಯ ವ್ಯಕ್ತಿ. ಎನ್‌ಎಸ್‌ಡಿ

ಅಧ್ಯಕ್ಷರಾಗಿ ಇಂತಹದ್ದೇ ಗೌರವ ಪಡೆದ ಕನ್ನಡದ ಇನ್ನೊಬ್ಬ ಕವಿ ಮತ್ತು ನಾಟಕಕಾರ ಚಂದ್ರಶೇಖರ ಕಂಬಾರ.

ಒಂದು ಕಾಲದಲ್ಲಿ ದೇಶದ ವಿವಿಧ ಭಾಷೆಗಳ ರಂಗಭೂಮಿಯಲ್ಲಿ ಕೆಲಸಮಾಡುತ್ತಿರುವ ಖ್ಯಾತನಾಮರನ್ನು ನಿರ್ದೇಶಕರಾಗಿ ನೇಮಿಸುವ ಪರಿಪಾಠ ಇತ್ತು. ಕರ್ನಾಟಕದ ಬಿ.ವಿ.ಕಾರಂತ, ರಾಜಸ್ತಾನದ ಮೋಹನ್ ಮಾಹರ್ಷಿ, ಮಣಿಪುರದ ರತನ್ ಥಿಯಂ ಮೊದಲಾದವರು ಅವಕಾಶ ಪಡೆದದ್ದು ಹಾಗೆ. ಆದರೆ ಇತ್ತೀಚೆಗೆ ಎನ್‌ಎಸ್‌ಡಿಯೊಳಗೆ ಬೋಧ ವರ್ಗದಲ್ಲಿದ್ದವರನ್ನೇ ನಿರ್ದೇಶಕರನ್ನಾಗಿ ನೇಮಿಸುವ ಪರಂಪರೆಯನ್ನು ಪ್ರಾರಂಭಿಸಲಾಗಿದೆ. ಈಗಿನ ನಿರ್ದೇಶಕ ದೇವೇಂದ್ರರಾಜ್ ಅಂಕುರ್ ಅವರಿಗಿಂತ ಹಿಂದಿನ ರಾಮ್‌ಗೋಪಾಲ್ ಬಜಾರ್ ಮತ್ತು ಕೀರ್ತಿ ಜೈನ್ ಎಲ್ಲರೂ ಈ ಗುಂಪಿಗೆ ಸೇರಿದವರು. ಈ ಬಾರಿಯೂ ನಿರ್ದೇಶಕರ ಸ್ಥಾನದ ಆಕಾಂಕ್ಷಿಗಳ ಪಟ್ಟಿಯಲ್ಲಿರುವ ಒಂದು ಹೆಸರು ಎನ್‌ಎಸ್‌ಡಿಯಲ್ಲಿ ಅಭಿನಯ ಮತ್ತು ನಿರ್ದೇಶನದ ಪಾಠ ಹೇಳುತ್ತಿರುವ ಡಾ. ಅನುರಾಧ ಕಪೂರ್ ಅವರದ್ದು. ಅವರ ಪರವಾಗಿ ಬಸವಲಿಂಗಯ್ಯನವರನ್ನು ಸ್ಪರ್ಧೆಯಿಂದ ಹಿಂದಕ್ಕೆ ಸರಿಯುವಂತೆ ಮಾಡುವ ಪ್ರಯತ್ನವೂ ನಡೆಯುತ್ತಿದೆಯೆನ್ನಲಾಗಿದೆ. ಇನ್ನೊಂದೆಡೆ ಇಂದಿರಾಗಾಂಧಿ ಅವರ ಆಪ್ತಕಾರ್ಯದರ್ಶಿಯಾಗಿದ್ದ ಪಿ.ಎನ್. ಹಕ್ಸರ್ ಅವರ ಮಗಳು ಅನಾಲಿಪ್ತ ಹಕ್ಸರ್ ಕೂಡಾ ನಿರ್ದೇಶಕ ಸ್ಥಾನದ ಆಕಾಂಕ್ಷಿಗಳಲ್ಲೊಬ್ಬರು.

ಇಂತಹ ಪ್ರಭಾವಿಗಳು ಸುತ್ತುವರಿದಿರುವ ಆಯ್ಕೆ ಪ್ರಕ್ರಿಯೆಯ ಚಕ್ರವ್ಯೂಹವನ್ನು ದಿಲ್ಲಿ ಸಮರಕಲೆಯನ್ನು ಅರಿಯದ ಕನ್ನಡಿಗ ಅಭಿಮನ್ಯು ಕೇವಲ ಪ್ರತಿಭೆಯ ಬಲದಿಂದಲೇ ಭೇದಿಸಲು ಸಾಧ್ಯವಾಗಬಹುದೇ? ಆಯ್ಕೆ ಮಂಡಳಿಯಲ್ಲಿ ಕನ್ನಡಿಗರಾದ ಗಿರೀಶ್ ಕಾರ್ನಾಡ್ ಇರುವುದರಿಂದ ಕನ್ನಡಿಗನೊಬ್ಬನಿಗೆ ಅನ್ಯಾಯವಾಗದು ಎಂದು ಸಮಾಧಾನಪಟ್ಟುಕೊಳ್ಳಬಹುದು.

ರಾಷ್ಟ್ರೀಯ ನಾಟಕ ಶಾಲೆಯ ಹಿಂದಿಯೇತರ ಭಾಷಾ ರಂಗಭೂಮಿಗಳ ಬಗೆಗಿನ ಪೂರ್ವಾಗ್ರಹದ ವಿರುದ್ಧ ವ್ಯಾಪಕ ಆಂದೋಲನ ನಡೆದದ್ದು ಎರಡು ವರ್ಷಗಳ ಹಿಂದೆ ಅಭಿವ್ಯಕ್ತಿ–ಅಭಿಯಾನದ ಹೆಸರಲ್ಲಿ ನಡೆದ ಈ ಆಂದೋಲನದ ನೇತೃತ್ವ ವಹಿಸಿದ್ದವರು ರಂಗಕರ್ಮಿ ಪ್ರಸನ್ನ. ಅದರ ನಂತರ ಸಂಸ್ಕೃತಿ ಇಲಾಖೆ ಸಚಿವೆ ಅಂಬಿಕಾ ಸೋನಿ ಅವರು ಕರ್ನಾಟಕ ಸರ್ಕಾರ ನಿವೇಶನ ನೀಡಿದರೆ ಬೆಂಗಳೂರಿನಲ್ಲಿ ಮೊದಲ ರಾಷ್ಟ್ರೀಯ ನಾಟಕ ಶಾಲೆ ತೆರೆಯುವ ಭರವಸೆಯನ್ನೂ ನೀಡಿದ್ದರು. ಈ ಆಂದೋಲನದಿಂದಾಗಿ ಪ್ರಸನ್ನ ದೆಹಲಿ ದೊರೆಗಳ ಕೆಂಗಣ್ಣಿಗೆ ಗುರಿಯಾದರೇ?

06-11-2006

ಸಂಸ್ಕೃತಿಯ ಗುತ್ತಿಗೆ

ದೆಹಲಿಗೂ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೂ ಏನು ಸಂಬಂಧ? ಸಕಲ ಕಲಾ ವಲ್ಲಭರಾದ ರಾಜಕಾರಣಿಗಳನ್ನು 'ಕಲಾವಿದರು' ಎಂದು ಪರಿಗಣಿಸಿದರೆ ಮಾತ್ರ ಇಲ್ಲಿ ಇಂತಹ ಸಾಂಸ್ಕೃತಿಕ ಉತ್ಸವಗಳನ್ನು ನಡೆಸುವುದನ್ನು ಸಮರ್ಥಿಸಿಕೊಳ್ಳಬಹುದೇ ವಿನಃ, ಬೇರೆ ಯಾವುದೇ ಕಾರಣಗಳು ತಕ್ಷಣಕ್ಕೆ ಹೊಳೆಯುವುದಿಲ್ಲ.

ಬಾಲಿವುಡ್ ಎಂದೇ ಪ್ರಸಿದ್ಧಿ ಪಡೆದಿರುವ ಮುಂಬೈನಂತೆ ಇಲ್ಲಿ ಚಲನ ಚಿತ್ರಗಳ ನಿರ್ಮಾಣವಾಗುತ್ತಿಲ್ಲ. ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕ ರಾಜ್ಯಗಳಿಗೆ ಇರುವ ಸಾಂಸ್ಕೃತಿಕ ಪರಂಪರೆ ಕೂಡ ಈ ಮಹಾನಗರಕ್ಕೆ ಇಲ್ಲ. ರಾಜಕೀಯ ಭಾಷೆಯ ಹೊರತಾಗಿ ಇಲ್ಲಿನ ಹೆಚ್ಚಿನ ಮಂದಿಗೆ ಬೇರೆ ಏನೂ ಅರ್ಥವಾಗದು. ದೇಶದ ರಾಜಕೀಯ ರಾಜಧಾನಿ ಎನ್ನುವ ಕಾರಣಕ್ಕೆ ಸಾಂಸ್ಕೃತಿಕ ಲೋಕದ ಗುತ್ತಿಗೆ ಪಡೆದ ಮಹಾನಗರ ದೆಹಲಿ.

ರಾಷ್ಟ್ರೀಯ ನಾಟಕ ಶಾಲೆ, ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಆರ್ಟ್ ಗ್ಯಾಲರಿ, ಆಧುನಿಕ ಕಲೆಗಳ ರಾಷ್ಟ್ರೀಯ ಗ್ಯಾಲರಿ, ರಾಷ್ಟ್ರೀಯ ವಸ್ತುಸಂಗ್ರಹಾಲಯ, ಸಾಂಸ್ಕೃತಿಕ ಸಂಬಂಧಗಳ ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿಯ ಭಾರತೀಯ ಮಂಡಳಿಯ ಕೇಂದ್ರ (ಐಸಿ.ಸಿ.ಆರ್), ವಿಜ್ಞಾನ ವಸ್ತುಸಂಗ್ರಹಾಲಯದ ರಾಷ್ಟ್ರೀಯ ಮಂಡಳಿ, ಸಾಂಸ್ಕೃತಿಕ ಸೊತ್ತಿನ ಸಂರಕ್ಷಣೆಯ ರಾಷ್ಟ್ರೀಯ ಸಂಶೋಧನ ಪ್ರಯೋಗಾಲಯ, ರಾಜಾರಾಂ ಮೋಹನ ರಾಯ್ ಪ್ರತಿಷ್ಠಾನ ಹೀಗೆ ಸಾಂಸ್ಕೃತಿಕ ಕ್ಷೇತ್ರದ ಸುಮಾರು 25ಕ್ಕೂ ಸಂಸ್ಥೆಗಳು

ಇಲ್ಲಿ ಬೀಡು ಬಿಟ್ಟಿವೆ. ಈ ಬಿಳಿ ಆನೆಗಳನ್ನು ಸಾಕುವ ಹೊಣೆ ಹೊತ್ತಿರುವುದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ. ಇದಕ್ಕೆ ಖರ್ಚಾಗುವ ಹಣ ಕೋಟಿ ರೂಪಾಯಿಗಳ ಲೆಕ್ಕದಲ್ಲಿ.

ಈ ಬಿಳಿ ಆನೆಗಳ ಮೇಲೇರಿ ಕೂತವರು ಸಾಹಿತ್ಯ-ಸಂಸ್ಕೃತಿಕ ಸಾಮಾನ್ಯ ಜ್ಞಾನ, ಇಲ್ಲವೇ ಆಸಕ್ತಿ ಇಲ್ಲದ ಸರ್ಕಾರಿ ಅಧಿಕಾರಿಗಳು. ಸಂಸ್ಥೆಗಳ ಆಧ್ಯಕ್ಷ ಸ್ಥಾನದಲ್ಲಿ ಯಾರೇ ಕೂತಿರಲಿ, ತಮ್ಮ ಮರ್ಜಿಯನ್ನು ಉಲ್ಲಂಘಿಸಿ ಯಾರೂ ಏನನ್ನೂ ಮಾಡಲಾಗದಂತಹ ಚಕ್ರವ್ಯೂಹವನ್ನು ರಚಿಸಿಕೊಂಡಿದ್ದಾರೆ ಸರ್ಕಾರಿ ಬಾಬುಗಳು. ಆದ್ದರಿಂದಲೇ ಇಂತಹ ಸಂಸ್ಥೆಗಳ ನೇಮಕಗಳು ರಾಜಕೀಯವಾಗಿ ನಡೆಯುತ್ತವೆ ಮತ್ತು ಅವುಗಳ ಚಟುವಟಿಕೆಗಳು ಸರ್ಕಾರಿ ಕಾರ್ಯಕ್ರಮಗಳಾಗುತ್ತವೆ. ಅಲ್ಲಿ ಬಡಪಾಯಿ ನಟ-ಕಲಾವಿದ-ಸಾಹಿತಿಗಳಿಗೆ ಜಾಗವಿಲ್ಲ.

ಚಲನಚಿತ್ರೋತ್ಸವವನ್ನು ನಡೆಸುವ ಚಲನಚಿತ್ರೋತ್ಸವ ನಿರ್ದೇಶನಾಲಯ ಹೆಸರಿಗೆ ಮಾತ್ರ ಸ್ವಾಯತ್ತ ಸಂಸ್ಥೆ! ಇದರ ಅಧ್ಯಕ್ಷರಾಗುವವರು ಪಿಐಬಿ ಅಧಿಕಾರಿಗಳು. ಕುರ್ಚಿಹಿಡಿದ ಒಬ್ಬೊಬ್ಬರು ನಾಲ್ಕೈದು ವರ್ಷ ಬಿಟ್ಟುಕೊಡುವುದಿಲ್ಲ. ವಿಶ್ವದಾದ್ಯಂತ ನಡೆಯುವ ಚಲನಚಿತ್ರೋತ್ಸವಗಳಲ್ಲಿ ಭಾಗವಹಿಸುವ ಸೌಭಾಗ್ಯ ಅವರಿಗೆ. ಜತೆಗೆ ಕೋಟಿಗಟ್ಟಲೆ ವೆಚ್ಚದ ಭಾರತಿಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆಸುವ ಹೊಣೆ. ಇಂತಹ ಅವಕಾಶ ಉಳಿಸಿಕೊಳ್ಳಲಿಕ್ಕಾಗಿ ಅವರು ಸದಾ ರಾಜಕೀಯ ಭಟ್ಟಂಗಿತನ ಮಾಡುತ್ತಾರೆ.

ಚಲನಚಿತ್ರೋತ್ಸವದ ಹೊಣೆ ಹೊತ್ತ ಈ ಅಧಿಕಾರಿಗಳಿಗೆ ಜನಪ್ರಿಯ ಬಾಲಿವುಡ್ ತಾರೆಗಳ ಹೊರತಾಗಿ ಬೇರೆ ಯಾರ ಪರಿಚಯವೂ ಇರುವುದಿಲ್ಲ. ಕಳೆದ ವರ್ಷ ಪಾಸ್ ಕೇಳಲು ಹೋಗಿದ್ದ ಅಡೂರು ಗೋಪಾಲಕೃಷ್ಣನ್ ಅವರ ಪರಿಚಯವಿಲ್ಲವೆಂದು ಹೇಳಿ ಅಧಿಕಾರಿಯೊಬ್ಬ ವಾಪಾಸು ಅವರನ್ನು ಕಳುಹಿಸಿದ್ದ. ಕೇರಳದ ಇನ್ನೊಬ್ಬ ಖ್ಯಾತ ನಿರ್ದೇಶಕ ಶಾಜಿ ಎನ್. ಕರುಣ್ ಪತ್ರಿಕಾಗೋಷ್ಠಿ ನಡೆಸಲು ಎದುರಿಗೆ ಬಂದು ಕೂತಿದ್ದರೂ ಅವರನ್ನೂ ಗುರುತಿಸಲಾಗದ ಪಿಐಬಿ ಅಧಿಕಾರಿ, ಅವರು ಬಂದಿಲ್ಲವೆಂದು ಹೇಳಿ ಪತ್ರಿಕಾಗೋಷ್ಠಿಯನ್ನು ರದ್ದು ಮಾಡಿದ್ದರು. ಅದಕ್ಕಿಂತ ಹಿಂದಿನ ವರ್ಷ ಆಯ್ಕೆ ಮಂಡಳಿ ಸದಸ್ಯೆಯಾಗಿದ್ದ ನಟಿ ಶರ್ಮಿಳಾ ಠಾಗೋರ್ ಅವರಿಗೆ ಹೊರಗೇಟ್‌ನಲ್ಲಿಯೇ ಒಳಬಿಟ್ಟಿರಲಿಲ್ಲ. ಅದಕ್ಕಾಗಿ ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದರು.

ಚಲನಚಿತ್ರೋತ್ಸವ ಆಕರ್ಷಣೆ ಕಳೆದುಕೊಳ್ಳಲು ಪ್ರದರ್ಶಿತ ಚಿತ್ರಗಳ ಕಳಪೆ ಗುಣಮಟ್ಟ ಕೂಡಾ ಕಾರಣ. ಈ ಚಿತ್ರಗಳ ಆಯ್ಕೆಯಲ್ಲಿ ಕೂಡಾ ಚಿತ್ರ ನಿರ್ದೇಶಕರಿಗಿಂತ ಅಧಿಕಾರಿಗಳ ಹಸ್ತಕ್ಷೇಪವೇ ಹೆಚ್ಚು. ಕಳೆದ ವರ್ಷ ವಾರ್ತಾ ಸಚಿವೆ ಸುಷ್ಮಾಸ್ವರಾಜ್ 30 ಅಧಿಕಾರಿಗಳ ತಂಡದೊಂದಿಗೆ ತಾನೆ ಚಿತ್ರೋತ್ಸವಕ್ಕೆ ಹೋಗಿದ್ದರು. ಆದರೆ ಅಲ್ಲಿ ಆಯ್ಕೆ ಮಾಡಿ ತಂದ ಚಿತ್ರಗಳು ಎಷ್ಟೊಂದು ಕಳಪೆಯಾಗಿತ್ತೆಂದರೆ, ಆಯ್ಕೆ ಮಂಡಳಿಯ ಅಧ್ಯಕ್ಷರಾಗಿದ್ದ ಲಿಂಡ್ಸೆ ಆ್ಯಂಡರ್‌ಸನ್ ಉತ್ತಮ ಚಿತ್ರದ ಆಯ್ಕೆ ಸಾಧ್ಯ ಇಲ್ಲ ಎಂದು

ಕೂತುಬಿಟ್ಟಿದ್ದರು. ಈವರೆಗೆ ಪ್ರದರ್ಶನಗೊಂಡ ಚಿತ್ರಗಳನ್ನು ವೀಕ್ಷಿಸಿದರೆ ಸಚಿವ ಪ್ರಸಾದ್ ಅವರೂ ಸುಷ್ಮಾ ಸ್ವರಾಜ್ ದಾರಿಯನ್ನೇ ಹಿಡಿದಂತಿದೆ.

ಚಲನಚಿತ್ರೋತ್ಸವಕ್ಕೆ ಉತ್ತಮ ಚಿತ್ರಗಳು ಯಾಕೆ ಬರುತ್ತಿಲ್ಲ? ಹಿರಿಯ ಚಿತ್ರ ವಿಮರ್ಶಕಿ ಅಮಿತಾ ಮಲಿಕ್ ನೀಡುವ ಕಾರಣ ಕೂಡಾ ಮತ್ತೆ ರಾಜಕೀಯ ಹಸ್ತಕ್ಷೇಪದತ್ತ ಬೆಟ್ಟು ಮಾಡುತ್ತದೆ. ಅತ್ಯಂತ ಉತ್ತಮ ಚಲನಚಿತ್ರೋತ್ಸವ ನಡೆದದ್ದು 1975ರ ತುರ್ತುಪರಿಸ್ಥಿತಿಯ ವರ್ಷದಲ್ಲಿ ಎನ್ನುತ್ತಾರೆ ಅವರು. ಆ ಉತ್ಸವಕ್ಕೆ ಅಕಿರಾ ಕುರೋಸಾವಾ, ಎಲಿಯಾ ಕಾಝುನ್ ಮತ್ತು ಮೈಕೆಲೆಂಜೆಲೊ ಆ್ಯಂಟೋನಿಯಾನಿ ಗೌರವಾನ್ವಿತ ಅತಿಥಿಗಳಾಗಿ ಬಂದಿದ್ದರು.

ಅದಕ್ಕೆ ಕಾರಣ ಆ ವರ್ಷ ನಿರ್ದೇಶಕರಾಗಿದ್ದ ಪೊಲೀಸ್ ಅಧಿಕಾರಿ ಎ.ಎನ್. ವರ್ಮಾ ಅವರು ಚಲನಚಿತ್ರೋತ್ಸವದ ಆಡಳಿತವನ್ನಷ್ಟೇ ತಮ್ಮ ಕೈಯಲ್ಲಿರಿಸಿಕೊಂಡು ಚಿತ್ರಗಳ ಆಯ್ಕೆಯ ಹೊಣೆಯನ್ನು ಸಿನಿಮಾ ತಜ್ಞರಿಗೆ ನೀಡಿದ್ದರು. ಆ ಹೊಣೆ ಹೊತ್ತ ಶ್ಯಾಮ್ ಬೆನೆಗಲ್, ಯುರೋಪ್ ಮತ್ತು ಅರಬ್ ದೇಶಗಳನ್ನು ಮತ್ತು ಅಮಿತಾ ಮಲಿಕ್‌ಹ ಮೆಕ್ಸಿಕೊ, ಅರ್ಜಂಟೈನಾ ಮತ್ತು ಬ್ರೆಜಿಲ್ ದೇಶಗಳನ್ನು ಸುತ್ತಿ ಚಿತ್ರಗಳನ್ನು ಆಯ್ಕೆ ಮಾಡಿ ಬಂದಿದ್ದರು.

ಅದೇ ರೀತಿ ಚಿತ್ರಗಳ ಆಯ್ಕೆಯನ್ನು ಗೌತಮ್ ಘೋಷ್, ಗಿರೀಶ್ ಕಾಸರವಳ್ಳಿ, ಅಡೂರು ಮೊದಲಾದವರಿಗೆ ಯಾಕೆ ಬಿಟ್ಟುಬಿಡಬಾರದು ಎನ್ನುವ ಅಭಿಪ್ರಾಯ ಇದೆ. ಇಂತಹವರು ಉತ್ತಮ ಚಿತ್ರಗಳನ್ನು ಆಯ್ಕೆ ಮಾಡಬಲ್ಲರು. ಜತೆಗೆ ವಿಶ್ವದ ಯಾವುದೇ ದೇಶದ ಚಿತ್ರ ನಿರ್ದೇಶಕ-ನಿರ್ಮಾಪಕನನ್ನು ನೇರವಾಗಿ ಸಂಪರ್ಕಿಸಿ ಚಿತ್ರ ಕಳುಹಿಸಿಕೊಡುವಂತೆ ಮಾಡಬಲ್ಲರು. ತಮ್ಮ ಚಿತ್ರಗಳ ಗಂಧ-ಗಾಳಿ ಇಲ್ಲದ ಸರ್ಕಾರಿ ಅಧಿಕಾರಿಯೊಬ್ಬ ಸಂಪರ್ಕಿಸಿದರೆ ವಿದೇಶದ ಯಾವ ನಿರ್ದೇಶಕ ತಾನೆ ಕಿವಿಕೊಡಬಲ್ಲ?

ಚಲನಚಿತ್ರೋತ್ಸವದ ನಿರ್ವಹಣೆಯನ್ನೆ ಚಿತ್ರರಂಗಕ್ಕೆ ಬಿಟ್ಟುಕೊಡಬೇಕೆಂಬ ಬೇಡಿಕೆ ಕೂಡಾ ಇದೆ. ಭಾರತ ಹೊರತುಪಡಿಸಿದರೆ ಬೇರೆ ಯಾವ ದೇಶದಲ್ಲಿ ಕೂಡಾ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಗಳನ್ನು ಸರ್ಕಾರ ಖುದ್ದಾಗಿ ನಡೆಸುತ್ತಿಲ್ಲ. ಅಲ್ಲಿನ ಚಿತ್ರ ನಿರ್ದೇಶಕರು ಮಾಡುತ್ತಿರುವ ಕೆಲಸವನ್ನು ಇಲ್ಲಿ ಮೃಣಾಲ್‌ಸೇನ್, ಗಿರೀಶ್ ಕಾರ್ನಾಡ್, ಗೋವಿಂದ್ ನಿಹಲಾನಿಯಂತಹವರು ಮಾಡಬಲ್ಲರು. ಆದರೆ ಸರ್ಕಾರಿ ಬಾಬುಗಳು ತಮ್ಮ ಕಪಿಮುಷ್ಠಿಯನ್ನು ಅಷ್ಟು ಸುಲಭದಲ್ಲಿ ಸಡಿಲಿಸಲಾರರು.

ಮುಂದಿನ ವರ್ಷದಿಂದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಕಾಯಂ ಆಗಿ ಗೋವಾದಲ್ಲಿ ನಡೆಸಲು ಸರ್ಕಾರ ನಿರ್ಧರಿಸಿದೆ. ಇದರಿಂದ ಚಲನಚಿತ್ರೋತ್ಸವ ದೆಹಲಿಯಿಂದೇನೋ ಬಿಡುಗಡೆ ಪಡೆಯಬಹುದು. ಆದರೆ ಸರ್ಕಾರಿ ಬಾಬುಗಳಿಂದ ಬಿಡುಗಡೆ ಪಡೆಯಬಹುದೇ? ಅಂದಹಾಗೆ ಚಲನಚಿತ್ರೋತ್ಸವವನ್ನು ಕಾಯಂ ಆಗಿ ಒಂದೇ ಸ್ಥಳದಲ್ಲಿ ಯಾಕೆ ನಡೆಸಬೇಕು? ಅದು ಇನ್ನೊಂದು ಸಿನಿಮಾ ಕತೆ.

ವಾರ್ತಾ ಸಚಿವ ರವಿಶಂಕರ್ ಪ್ರಸಾದ್ ಈ ಬಾರಿ ಹೊಸ ಸಂಪ್ರದಾಯ ಹಾಕಿದ್ದಾರೆ. ಚಲನಚಿತ್ರೋತ್ಸವವನ್ನು ಚಿತ್ರರಂಗದ ಗಣ್ಯರು ಉದ್ಘಾಟಿಸುವುದು ರೂಢಿ. ಕಳೆದ ವರ್ಷ ಗಾನಕೋಕಿಲೆ ಲತಾ ಮಂಗೇಶ್ಕರ್ ಉದ್ಘಾಟಿಸಿದ್ದರು. ಈ ಬಾರಿ ಆ ಕೆಲಸಕ್ಕಾಗಿ ಸಚಿವ ಪ್ರಸಾದ್ ಉಪ ಪ್ರಧಾನಿ ಲಾಲ್‌ಕೃಷ್ಣ ಅಡ್ವಾಣಿ ಅವರನ್ನು ಕರೆ ತಂದಿದ್ದಾರೆ.

ಅಡ್ವಾಣಿ ಅವರು ಒಂದು ಕಾಲದಲ್ಲಿ ಪತ್ರಕರ್ತರಾಗಿದ್ದರು ಮತ್ತು ಚಲನಚಿತ್ರದ ಬಗ್ಗೆಯೂ ಬರೆದಿದ್ದರು ಎಂದು ಪ್ರಸಾದ್ ಸಮಜಾಯಿಷಿ ನೀಡಿದ್ದಾರೆ. ಅದನ್ನು ಅಡ್ವಾಣಿ ಅವರೂ ತಮ್ಮ ಭಾಷಣದಲ್ಲಿ ಪುಷ್ಟೀಕರಿಸಿದರು. 1965ರ ಚಲನಚಿತ್ರೋತ್ಸವವನ್ನು ವರದಿ ಮಾಡಿದ್ದನ್ನು ಅವರು ನೆನಪಿಸಿಕೊಂಡರು. ಆದರೆ ಅದರ ಹೊರತಾಗಿ ಚಿತ್ರರಂಗದ ಒಳನೋಟಗಳು ಅವರ ಮಾತುಗಳಲ್ಲಿ ಎಲ್ಲೂ ಕಾಣಲಿಲ್ಲ.

ಒಂದಾನೊಂದು ಕಾಲದಲ್ಲಿ ಪತ್ರಿಕೆಗಳಲ್ಲಿ ಚಲನಚಿತ್ರದ ಬಗ್ಗೆ ಬರೆದಿದ್ದಾರೆ ಎನ್ನುವ ಕಾರಣಕ್ಕೆ ಅಡ್ವಾಣಿ ಅವರು ಈ ಬಾರಿ ಚಲನಚಿತ್ರೋತ್ಸವವನ್ನು ಉದ್ಘಾಟಿಸಿದರೆ, ಮುಂದಿನ ವರ್ಷ ಚಲನಚಿತ್ರಗಳನ್ನು ನೋಡುತ್ತಿದ್ದಾರೆ ಎನ್ನುವ ಕಾರಣಕ್ಕೆ ಇನ್ನೊಬ್ಬ ರಾಜಕಾರಣಿ ಚಲನಚಿತ್ರೋತ್ಸವವನ್ನು ಉದ್ಘಾಟಿಸಬಹುದು! ಹೊಸ ಸಂಪ್ರದಾಯ ಪ್ರಾರಂಭವಾಗಿದೆ.

O

(13-10-2003)

ಭಗ್ನಗೊಂಡ ಕನಸು

ದೆಹಲಿಯ ಗುಲಾಮಗಿರಿಯಿಂದ ಮುಕ್ತವಾದ, ರಾಜ್ಯದ ಜನರ ಬದುಕು-ಬವಣೆಗಳಿಗೆ ಸ್ಪಂದಿಸುವ ಪ್ರಾದೇಶಿಕ ಪಕ್ಷವನ್ನು ಕಟ್ಟಬೇಕೆಂಬ ಪ್ರಯತ್ನ ಕನ್ನಡದ ನೆಲದಲ್ಲಿ ಯಶಸ್ಸು ಕಾಣಲೇ ಇಲ್ಲ. ಇತ್ತೀಚೆಗೆ ಅಂತಹ ಒಂದು ನಿರೀಕ್ಷೆ ಹುಟ್ಟಿಸಿದವರು ಸಿದ್ದರಾಮಯ್ಯ. ಅವರು ಕಾಂಗ್ರೆಸ್ ಪಕ್ಷ ಸೇರುವುದರೊಂದಿಗೆ ಆ ನಿರೀಕ್ಷೆ ಕೂಡಾ-ಇಂದು ಹುಸಿಯಾಗಿದೆ.

ಭ್ರಮನಿರಸನದ ಕಹಿಪಾಠಗಳನ್ನಷ್ಟೇ ಉಂಡರೂ ಭರವಸೆಯ ಆಶಾಕಿರಣಕ್ಕಾಗಿ ಮನಸ್ಸು ತುಡಿಯುತ್ತಲೇ ಇರುತ್ತದೆ. ಅಸಹನೀಯವಾದ ಬದುಕನ್ನು ಸಹ್ಯಗೊಳಿಸುವುದೇ ಕನಸುಗಳು. ಆದರೆ ಕನಸುಗಳು ಭಗ್ನಗೊಳ್ಳುತ್ತಲೇ ಹೋದರೆ? ಬೆಳಕಿಲ್ಲದ ಹಾದಿಗಿಂತ ಕನಸುಗಳಿಲ್ಲದ ಹಾದಿಯ ಪಯಣ ಕಷ್ಟ. ಕರ್ನಾಟಕದ ರಾಜಕೀಯ ಇಂದು ಆ ಹಾದಿಯಲ್ಲಿ ಬಂದು ನಿಂತಿದೆ.

ರಾಜ್ಯದ ನೆಲ-ಜಲ-ಭಾಷೆಯನ್ನು ಪ್ರೀತಿಸುವ, ಪೋಷಿಸುವ ಮತ್ತು ರಕ್ಷಿಸುವ ಪ್ರಾದೇಶಿಕ ಪಕ್ಷದ ಕನಸು ಕಂಡ ಕನ್ನಡಿಗರ ಸಂಖ್ಯೆ ಕಡಿಮೆಯೇನಲ್ಲ. ಆ ನಿರೀಕ್ಷೆಯನ್ನು ಸಾಕಾರಗೊಳಿಸಬಲ್ಲರೆಂಬ ಭರವಸೆ ಹುಟ್ಟಿಸಿದ ನಾಯಕರೆಲ್ಲ ಒಬ್ಬೊಬ್ಬರಾಗಿ ಬೇರೆ ದಾರಿ ಹಿಡಿಯುತ್ತಿದ್ದಾರೆ. ಆ ಸಾಲಿನ ಕೊನೆಯ ನಾಯಕ ಸಿದ್ದರಾಮಯ್ಯ ಕೂಡ ರಾಷ್ಟ್ರೀಯ

ಪಕ್ಷವೊಂದರಲ್ಲಿ ಲೀನವಾಗಿ ಹೋಗಿದ್ದಾರೆ. ಇದರಿಂದ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವೊಂದರ ಕನಸಿನ ಶವಪೆಟ್ಟಿಗೆಗೆ ಕೊನೆಯ ಮೊಳೆ ಬಡಿದಂತಾಗಿದೆ.

ಎಐಸಿಸಿ ಕಚೇರಿಯ ಸಭಾಂಗಣದಲ್ಲಿ ಕಾಂಗ್ರೆಸ್ ನಾಯಕರನ್ನು ಎಡಬಲದಲ್ಲಿ ಕೂರಿಸಿಕೊಂಡು ಸಿದ್ದರಾಮಯ್ಯ ತೋರಿಸಿದಾ ಆತ್ಮವಿಶ್ವಾಸವನ್ನು ಸಂಸತ್ ಎದುರಿನ ಬೋಟ್ ಕ್ಲಬ್ ಆವರಣದಲ್ಲಿ ತನ್ನ ಕಾಲ ಮೇಲೆ ನಿಂತು ತೋರಿಸಿದ್ದರೆ, ಈ ದಿನ ಅವರು ರಾಷ್ಟಮಟ್ಟದಲ್ಲಿ ಹಿರೋ ಆಗುತ್ತಿದ್ದರು. 'ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷಕ್ಕೆ ಭವಿಷ್ಯವೇ ಇಲ್ಲ. ರಾಷ್ಟೀಯ ಪಕ್ಷವೇ ಗತಿ. ಅದಕ್ಕಾಗಿ ಸೋನಿಯಾಜಿ ಕೈ ಬಲಪಡಿಸಲು ಹೊರಟಿದ್ದೇನೆ' ಎನ್ನುವುದರ ಬದಲಿಗೆ 'ರಾಜ್ಯದ ಹಿತಕಾಯಲು ರಾಷ್ಟೀಯ ಪಕ್ಷಗಳು ವಿಫಲವಾಗಿವೆ. ಪ್ರಾದೇಶಿಕ ಪಕ್ಷದಿಂದ ಮಾತ್ರ ಅದು ಸಾಧ್ಯ' ಎಂದು ಗುಡುಗಿದ್ದರೆ, ವಿಮಾನದ ಟಿಕೆಟ್ ಖರೀದಿಸಿ ಬಂದ ಅವರ ಚೇಲಾಗಳ ಜೈಕಾರದ ಜತೆ, ಊರಲ್ಲಿ ಈಗಲೂ ಕುರಿ ಕಾಯುತ್ತಿರುವ, ಹೊಲದಲ್ಲಿ ಗೇಯ್ಮೆ ಮಾಡುತ್ತಿರುವ ಬಡ ಬೋರೆಗೌಡ ಕೂಡ 'ಗಂಡು ಮಗ ಅಂದರೆ, ನಮ್ ಸಿದ್ರಾಮಣ್ಣ' ಎಂದು ಕುಣಿದು ಕುಪ್ಪಳಿಸುತ್ತಿದ್ದನೋ ಏನೋ?

ದೇಶವಿಂದು ಪ್ರಾದೇಶಿಕ ಪಕ್ಷಗಳ ನಿಯಂತ್ರಣದಲ್ಲಿದೆ. ಬೆರಳೆಣಿಕೆಯ ರಾಜ್ಯಗಳನ್ನು ಹೊರತುಪಡಿಸಿ ದೇಶದ ಬಹು ಸಂಖ್ಯೆಯ ರಾಜ್ಯಗಳಲ್ಲಿ ಪ್ರದೇಶಿಕ ಪಕ್ಷಗಳು ಸರ್ಕಾರದ ಆಗು–ಹೋಗುಗಳಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿವೆ. ಕೇಂದ್ರದಲ್ಲಿ ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ಮೈತ್ರಿ ಕೂಟದ ಸರ್ಕಾರ ಇದೆ. ಈ ಹೊಸ ಬೆಳವಣಿಗೆಯಲ್ಲಿ ಬಲಿಷ್ಠ ಪ್ರಾದೇಶಿಕ ಪಕ್ಷಗಳು ರಾಜಕೀಯವಾಗಿ ಹೆಚ್ಚು ಲಾಭ ಪಡೆಯುತ್ತಿವೆ.

ಪ್ರಾದೇಶಿಕ ಪಕ್ಷಗಳ ಹಿಡಿತದಲ್ಲಿರುವ ರಾಜ್ಯಗಳನ್ನು ನೆರೆಮನೆಗಳಾಗಿ ಹೊಂದಿರುವ ಕರ್ನಾಟಕ ಬಲಿಷ್ಠ ಪ್ರಾದೇಶಿಕ ಪಕ್ಷದ ಕೊರತೆಯಿಂದಾಗಿ ರಾಜಕೀಯವಾಗಿ ದುರ್ಬಲವಾಗಿದೆ ಎನ್ನುವ ಅಭಿಪ್ರಾಯವನ್ನು ಸುಲಭದಲ್ಲಿ ತಳ್ಳಿಹಾಕುವಂತಿಲ್ಲ. ಆಂಧ್ರಪ್ರದೇಶದ ಕೃಷ್ಣಾ ಕಣಿವೆಯಲ್ಲಿ ಅಕ್ರಮ ನೀರಾವರಿ ಯೋಜನೆಗಳಿಗೆ ಎನ್‌ಡಿಎ ಸರ್ಕಾರ ಅನುಮತಿ ನೀಡಿರುವುದು ತೆಲುಗು ದೇಶಂ ಪಕ್ಷದ ಒತ್ತಡದಿಂದ. ಕಾವೇರಿ ವಿವಾದದಲ್ಲಿ ಡಿಎಂಕೆ ಮತ್ತು ಎಐಡಿಎಮ್‌ಕೆ ಪರಸ್ಪರ ಪೈಪೋಟಿಯಿಂದ ಕೇಂದ್ರದ ಮೇಲೆ ಒತ್ತಡ ಹೇರಿ ಕರ್ನಾಟಕಕ್ಕೆ ಅನ್ಯಾಯವೆಸಗುತ್ತಾ ಬಂದಿವೆ. ಮಹಾರಾಷ್ಟ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಪತ್ರ ಬರೆದ ಕಾರಣಕ್ಕೆ ವಿವಾದ ನ್ಯಾಯ ಮಂಡಳಿಯಲ್ಲಿದ್ದರೂ ಕೇಂದ್ರ ಸರ್ಕಾರ ಕೃಷ್ಣಾ ಕಣಿವೆ ರಾಜ್ಯಗಳ ಸಭೆ ಕರೆಯಲು ಹೊರಟಿದ್ದು ಎನ್‌ಸಿಪಿ ಪ್ರಭಾವದಿಂದ.

ಕನ್ನಡ ಭಾಷೆಗೆ ಸಿಗಬೇಕಾದ ಗೌರವ, ಗಡಿ ವಿವಾದ, ಅಭಿವೃದ್ಧಿ ಯೋಜನೆಗಳಿಗೆ ಸಿಗಬೇಕಾದ ಹಣದ ಪಾಲು ಮೊದಲಾದ ವಿಷಯಗಳಲ್ಲಿ ಎರಡು ರಾಷ್ಟೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಕರ್ನಾಟಕದ ಜತೆ ಹೇಗೆ ವ್ಯವಹರಿಸುತ್ತಾ ಬಂದಿದೆ ಎನ್ನುವುದನ್ನು ರಾಜ್ಯದ ಜನತೆ ಕಂಡಿದ್ದಾರೆ. ಈ ರಾಷ್ಟೀಯ ಪಕ್ಷಗಳನ್ನು ನೆರೆಯ ರಾಜ್ಯಗಳ ಪ್ರಾದೇಶಿಕ

ಪಕ್ಷಗಳು ತಮ್ಮ ರಾಜ್ಯಗಳ ಹಿತರಕ್ಷಣೆಗಾಗಿ ಯಶಸ್ವಿಯಾಗಿ ಬಳಸಿಕೊಳ್ಳುತ್ತಾ ಬಂದಿವೆ. ಈ ಸೆಣಸಾಟದಲ್ಲಿ ರಾಷ್ಟ್ರೀಯ ಪಕ್ಷದ ಮೋಹ ಹೇಗೆ ಕರ್ನಾಟಕದ ಮುನ್ನಡೆಗೆ ಕಾಲ್ತೊಡಕಾಗಿದೆ ಎನ್ನುವುದನ್ನು ಕನ್ನಡಿಗರು ಬಲ್ಲದವರೇನಲ್ಲ.

ಕರ್ನಾಟಕದ ಜನತೆ ಸದಾ ರಾಷ್ಟ್ರೀಯ ಪಕ್ಷವನ್ನು ಬೆಂಬಲಿಸುತ್ತಾ ಬಂದವರು. ಪ್ರಾದೇಶಿಕ ಪಕ್ಷದ ಬಗ್ಗೆ ಒಲವು ತೋರಿಲ್ಲ ಎನ್ನುವ ಸಿದ್ದರಾಮಯ್ಯನವರ ಅಭಿಪ್ರಾಯ ನಿಜವೆಂಬಂತೆ ಕಂಡರೂ ಅದು ಪೂರ್ಣ ಸತ್ಯ ಅಲ್ಲ. ಕರ್ನಾಟದಲ್ಲಿ ಪ್ರಾದೇಶಿಕ ಪಕ್ಷ ರಚನೆಯ ಗಂಭೀರ ಪ್ರಯತ್ನವಾದರೂ ಎಲ್ಲಿ ನಡೆದಿದೆ? ಗುಂಡೂರಾವ್ ದುರಾಡಳಿತದ ನಂತರ ನಟ ರಾಜಕುಮಾರ್ ಒಪ್ಪಿಕೊಂಡಿದ್ದರೆ ಇಲ್ಲಿಯೂ ಒಂದು ಪ್ರಾದೇಶಿಕ ಪಕ್ಷ ರಚನೆಯಾಗುತ್ತಿತ್ತೋ ಏನೋ? ರೈತ, ದಲಿತ ಮತ್ತು ಭಾಷಾ ಚಳುವಳಿಗಳಿಂದ ಪಕ್ವಗೊಂಡಿದ್ದ ಕನ್ನಡದ ಆಗಿನ ನೆಲ ಪ್ರಾದೇಶಿಕ ಪಕ್ಷವನ್ನು ಪಡೆಯಲು ಸಿದ್ಧವಾಗಿತ್ತು. ಆದರೆ ರಾಜಕೀಯ ಪ್ರವೇಶಿಸಲು ರಾಜ್‌ಕುಮಾರ್ ನಿರಾಕರಿಸಿದ ಕಾರಣದಿಂದಾಗಿ ಆ ಅವಕಾಶ ತಪ್ಪಿಹೋಯಿತು.

ಅದರ ಲಾಭವನ್ನು 'ಜನತಾ-ರಂಗ' ಎನ್ನುವ ಮೈತ್ರಿಕೂಟ ಪಡೆಯಿತು. ಆ ಮೈತ್ರಿ ಕೂಟಕ್ಕೆ ಸಂಪೂರ್ಣವಾಗಿ ಪ್ರಾದೇಶಿಕ ಪಕ್ಷದ ರೂಪ ಇರಲಿಲ್ಲ. ಅದರೊಳಗಿದ್ದ ಕ್ರಾಂತಿರಂಗ ಪ್ರಾದೇಶಿಕ ಪಕ್ಷವಾದರೂ ಒಟ್ಟು ಜನತಾರಂಗ ಎನ್ನುವುದು ಕ್ರಾಂತಿರಂಗ, ಜನತಾಪಕ್ಷ, ಸಿಪಿಎಂ ಮತ್ತು ಸಿಪಿಐಗಳು ಕೂಡಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಕಟ್ಟಿದ ಮೈತ್ರಿಕೂಟವಾಗಿತ್ತು. ಆ ರಂಗದ ಮೇಲಿನ ರಾಷ್ಟ್ರೀಯ ಪ್ರಭಾವದಿಂದಲೇ ಅಲ್ಲವೇ ಚುನಾವಣೆಯಲ್ಲಿ ಕನಿಷ್ಠ ಪ್ರಚಾರವನ್ನೂ ಮಾಡದ ರಾಮಕೃಷ್ಣ ಹೆಗಡೆ ಅವರು ದಿಢೀರ್ ಪ್ರತ್ಯಕ್ಷವಾಗಿ ಮುಖ್ಯಮಂತ್ರಿಗಳಾಗಿ ಇತಿಹಾಸ ಸೃಷ್ಟಿಸಿದ್ದು?

ಕೆಂಗಲ್ ಹನುಮಂತಯ್ಯನವರಿಂದ ಹಿಡಿದು ಗುಂಡೂರಾವ್‌ವರೆಗೆ ಹಲವರು ಪ್ರಾದೇಶಿಕ ಪಕ್ಷ ಕಟ್ಟಲು ಪ್ರಯತ್ನ ನಡೆಸಿದರೂ ಅದು ಯಶಸ್ವಿಯಾಗಲಿಲ್ಲ ಎನ್ನುವುದು ನಿಜ. ಕೊನೆಗಾಲದಲ್ಲಿ ದೇವರಾಜ ಅರಸು 'ಕ್ರಾಂತಿರಂಗ'ವನ್ನು ಕಟ್ಟಿದರೂ ಅದನ್ನು ಮುನ್ನಡೆಸಲು ಅವರು ಉಳಿಯಲಿಲ್ಲ. ಈ ನಡುವೆ ಪ್ರೊ. ಎಂ.ಡಿ. ನಂಜುಂಡಸ್ವಾಮಿ ರೈತಸಂಘದ ರಾಜಕೀಯ ಮುಖವಾಗಿ ಕಟ್ಟಿದ 'ಕನ್ನಡ ದೇಶ' ಮತ್ತು ಸಾಹಿತಿ ಪಿ.ಲಂಕೇಶ್ ಅವರ ರಾಜಕೀಯ ಪ್ರಯೋಗ 'ಪ್ರಗತಿರಂಗ' ಕೂಡ ಪ್ರಾದೇಶಿಕ ಪಕ್ಷ ರಚನೆಯ ಗಂಭೀರ ಪ್ರಯತ್ನವಾಗಿರಲಿಲ್ಲ. ಈ ಪ್ರಯತ್ನದಲ್ಲಿ ಸೀಮಿತ ರೂಪದಲ್ಲಿಯಾಧರೂ ಯಶಸ್ಸು ಕಂಡದ್ದು ಎಸ್. ಬಂಗಾರಪ್ಪ ಮಾತ್ರ. 1994ರಲ್ಲಿ ಅವರು ಕಟ್ಟಿದ 'ಕರ್ನಾಟಕ ಕಾಂಗ್ರೆಸ್ ಪಕ್ಷ' ಶೇಕಡ ಏಳೂವರೆಯಷ್ಟು ಮತಗಳಿಸಿ ಹತ್ತು ಸ್ಥಾನಗಳನ್ನು ಗೆದ್ದಿತ್ತು ಆದರೆ ಅವರ ಪ್ರಯತ್ನ ಕಾಂಗ್ರೆಸ್ ಸೋಲಿಗೆ ನೆರವಾಯಿತೇ ಹೊರತು ಅದರಿಂದ ರಾಜ್ಯಕ್ಕೆ ಲಾಭವಾಗಲಿಲ್ಲ.

ಪ್ರಾದೇಶಿಕ ಪಕ್ಷ ಕಟ್ಟುವ ಛಾತಿ ಇದ್ದ ಇನ್ನೊಬ್ಬ ನಾಯಕ ಎಚ್.ಡಿ. ದೇವೇಗೌಡರು. ಒಂದು ಹಂತದಲ್ಲಿ ಕರ್ನಾಟಕ ವಿಕಾಸ ವೇದಿಕೆ ಕಟ್ಟಿ ಆ ಸಂದೇಶ ನೀಡಿದರೂ ಕೊನೆಗೆ ಜನತಾ ನಾಮಬಲಕ್ಕೆ ಜೋತುಬಿದ್ದರು. ರಾಷ್ಟ್ರ ರಾಜಕಾರಣದ ಸೆಳೆತವೂ ಅದಕ್ಕೆ ಕಾರಣ ಇರಬೇಕು. ಅದೇ ರೀತಿ ರಾಮಕೃಷ್ಣ ಹೆಗಡೆಯವರು ಲೋಕಶಕ್ತಿ ಸ್ಥಾಪಿಸಿದರೂ ಪ್ರಾದೇಶಿಕ ಪಕ್ಷ ಕಟ್ಟಿ ಬೆಳೆಸುವ ಶ್ರಮಜೀವಿ ಅವರಾಗಿರಲಿಲ್ಲ. ಪ್ರಸಕ್ತ ರಾಜಕೀಯ ಪರಿಸ್ಥಿತಿಯಲ್ಲಿ ಪ್ರಾದೇಶಿಕ ಪಕ್ಷವೊಂದನ್ನು ಕಟ್ಟುವ ಸಾಮರ್ಥ್ಯ ಇದ್ದ ನಾಯಕ ಸಿದ್ಧರಾಮಯ್ಯ ಮಾತ್ರ. ಅಹಿಂದ ಚಳುವಳಿ ರೈತಸಂಘ ಮತ್ತು ದಲಿತ ಸಂಘಟನೆಗಳ ನೆರವಿನಿಂದ ಅಂತಹ ಒಂದು ಪ್ರಯೋಗಕ್ಕೆ ಅವರು ಇಳಿಯಲು ಸಾಧ್ಯ ಇತ್ತು. ಆದರೆ ಅವರು ಸುಲಭದ ದಾರಿ ಹಿಡಿದರು. ಸಿದ್ಧರಾಮಯ್ಯ ಸೇರ್ಪಡೆಯಿಂದಾಗಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಲಾಭವಾಗಬಹುದು. ಆದರೆ ರಾಜ್ಯಕ್ಕೆ?

ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷ ಕಟ್ಟುವ ಸಾಮರ್ಥ್ಯ ಹೊಂದಿರುವವರು ಎಚ್.ಡಿ. ದೇವೇಗೌಡ, ಎಸ್. ಬಂಗಾರಪ್ಪ ಮತ್ತು ಸಿದ್ಧರಾಮಯ್ಯ. ದೇವೇಗೌಡರು ರಾಷ್ಟ್ರ ರಾಜಕಾರಣದ ಸೆಳೆತಕ್ಕೆ ಸಿಕ್ಕಿ ಅವಕಾಶ ಕಳೆದುಕೊಂಡರು. ಬಂಗಾರಪ್ಪ ಪ್ರಯತ್ನ ನಡೆಸಿ ವಿಫಲವಾಗಿ ಈ ಬಾರಿ ಆ ಸಾಹಸ ಬೇಡವೆಂದು ಸಮಾಜವಾದಿ ಪಕ್ಷ ಸೇರಿಕೊಂಡಿದ್ದಾರೆ. ಸಿದ್ಧರಾಮಯ್ಯ ಆಟದ ಕಣಕ್ಕೆ ಇಳಿಯುವ ಮುನ್ನವೇ ಸೋಲೊಪ್ಪಿಕೊಂಡು ಗೆಲ್ಲುವ ತಂಡ ಸೇರಿಕೊಂಡಿದ್ದಾರೆ.

O

(24-07-2006)

ಹೆಡೆ ಬಿಚ್ಚುತ್ತಿರುವ ನೆರೆ ರಾಜ್ಯಗಳು

ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪು ಹೊರಬರುವುದನ್ನು ಇನ್ನಷ್ಟು ವಿಳಂಬ ಮಾಡಲು ಬೇಕಾದ ಎಲ್ಲ ತಂತ್ರಗಳನ್ನು ತಮಿಳುನಾಡು ಮಾಡುತ್ತಲೇ ಇದೆ. ನೀರಿನ ಹಕ್ಕು ಕಾಪಾಡಿಕೊಳ್ಳುವ ವಿಷಯದಲ್ಲಿ ಅನ್ಯಾಯವಾಗುತ್ತಿದ್ದರೂ ಕರ್ನಾಟಕ ಕುರುಡಾಗಿ ಕೂತಿದೆ.

ಆಂಧ್ರಪ್ರದೇಶ ತಮ್ಮ ರಾಜ್ಯದವರಾದ ಜೆ. ಹರಿನಾರಾಯಣ್ ಅವರನ್ನು ಕೇಂದ್ರ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಸ್ಥಾನದಲ್ಲಿ ಪ್ರತಿಷ್ಠಾಪಿಸಿ ವರ್ಷ ಕಳೆದಿದೆ. ಅದಾದ ಮೇಲೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಉಪಸಮಿತಿಯ ಕಾರ್ಯತಂಡದ ಅಧ್ಯಕ್ಷರಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್ ನೇಮಕಗೊಂಡರು. ಕೃಷಿ, ನೀರಾವರಿ ಮತ್ತು ಸಂಬಂಧಿತ ವಿಷಯದ ಮೇಲೆ ಎನ್‌ಡಿಸಿಗೆ ಈ ಕಾರ್ಯ ತಂಡ ಶಿಫಾರಸುಗಳನ್ನು ಮಾಡಲಿದೆ. ಡಿಎಂಕೆ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಕಾವೇರಿ ವಿವಾದದ ಬಗ್ಗೆ ತಮಿಳುನಾಡು ಹೊಸ ರಾಗ ಹೊರಡಿಸಲು ತೊಡಗಿದೆ. ಬೆಂಗಳೂರು-ಮೈಸೂರು ರಸ್ತೆಯಲ್ಲಿ ವಿವಾದದ ದೂಳೆಬ್ಬಿಸಿ ಅದನ್ನು ಕಣ್ಣಲ್ಲಿ ಹಾಕಿಕೊಂಡ ಕರ್ನಾಟಕ ಸರ್ಕಾರ ಮಾತ್ರ ಕುರುಡಾಗಿ ಕೂತಿದೆ.

ಆಂಧ್ರಪ್ರದೇಶ ನಮ್ಮೊಡನೆ ಜಲವಿವಾದದಲ್ಲಿ ಭಾಗಿಯಾಗಿರುವುದರಿಂದ ಆ ರಾಜ್ಯಕ್ಕೆ ಸೇರಿದ ಅಧಿಕಾರಿ ಜಲಸಂಪನ್ಮೂಲ ಇಲಾಖೆಯ ಪ್ರಮುಖ ಹುದ್ದೆಯಲ್ಲಿರುವುದು

ಸರಿಯಲ್ಲ ಎಂದು ಧರ್ಮಸಿಂಗ್ ಸರ್ಕಾರ ಪ್ರಧಾನಿಯವರಿಗೆ ದೂರು ನೀಡಿತ್ತು. ಆದರೆ ಆಂಧ್ರದ ಕಾಂಗ್ರೆಸ್ ನಾಯಕರು ಆ ಅಧಿಕಾರಿಯ ಕೂದಲು ಕೊಂಕಲು ಬಿಡಲಿಲ್ಲ. ಆ ನಂತರ ಕರ್ನಾಟಕ ಕೂಡಾ ಬಾಯಿ ಬಿಚ್ಚಲಿಲ್ಲ.

ಸಾಂಗ್ಲಿ ನೆರೆಗೆ ಆಲಮಟ್ಟಿ ನೀರು ಸಂಗ್ರಹ ಕಾರಣ ಎಂದು ಸಂಸತ್‌ನಲ್ಲಿ ಮಹಾರಾಷ್ಟ್ರ ಕೂಗು ಹಾಕುತ್ತಿರುವಾಗಲೇ ಆ ರಾಜ್ಯದ ಮುಖ್ಯಮಂತ್ರಿ ದೇಶಮುಖ್ ಎನ್‌ಡಿಸಿ ಕಾರ್ಯ ತಂಡದ ಅಧ್ಯಕ್ಷ ಸ್ಥಾನದಲ್ಲಿ ಕೂತರು. ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ತಗ್ಗಿಸುವಂತೆ ಮಾಡಲೇಬೇಕೆಂಬ ಹಠಕ್ಕೆ ಬಿದ್ದಿರುವ ಆಂಧ್ರದ ಜತೆಗೂಡಿರುವ ಮಹಾರಾಷ್ಟ್ರ ಆ ಬಗ್ಗೆ ಚರ್ಚಿಸಲು ಕೃಷ್ಣಾ ಕಣಿವೆಯ ರಾಜ್ಯಗಳ ಸಭೆ ಕರೆಯುವಂತೆ ಮಾಡುವ ಸಂಚಿನಲ್ಲಿ ಯಶಸ್ವಿಯಾಯಿತು. ಆದರೆ ಅಷ್ಟರಲ್ಲಿ ಎರಡನೇ ಕೃಷ್ಣಾ ನ್ಯಾಯ ಮಂಡಳಿಯ ಮಧ್ಯಂತರ ಐತೀರ್ಪು ಹೊರಬಿದ್ದು ಆ ಸಂಚು ವಿಫಲಗೊಂಡಿದೆ.

ಕಾವೇರಿ ನ್ಯಾಯ ಮಂಡಳಿ ಇನ್ನೇನು ಅಂತಿಮ ಐತೀರ್ಪು ನೀಡಲಿದೆ ಎಂದು ಅಂದುಕೊಳ್ಳುತ್ತಿರುವಂತೆಯೇ ಇಬ್ಬರು ನ್ಯಾಯಮೂರ್ತಿಗಳು 'ತಜ್ಞರ ಸಮಿತಿ' ನೇಮಕದ ಪ್ರಸ್ತಾವ ಮುಂದಿಟ್ಟು ಚಕಿತಗೊಳಿಸಿದ್ದಾರೆ. ಅಂತಿಮ ತೀರ್ಪು ಏನೇ ಇದ್ದರೂ, ತಮಿಳು ನಾಡಿಗೆ ಹರಿಸಬೇಕಾದ ನೀರಿನ ಪಾಲು 205 ಟಿಎಂಸಿಯನ್ನು ಮೀರಲಾರದು ಎಂಬ ವಿಶ್ವಾಸದಲ್ಲಿ ಈ ಬಾರಿ ಕರ್ನಾಟಕದ ವಕೀಲರೂ ಇದ್ದರು. 'ತಜ್ಞರ ಸಮಿತಿ' ನೇಮಕದ ಪ್ರಸ್ತಾವವನ್ನು ಬೆಂಬಲಿಸಿ ವಿವಾದವನ್ನು ಮುಂದುವರಿಸಿಕೊಂಡು ಹೋಗಲು ತಮಿಳುನಾಡು ನಿರ್ಧರಿಸಬಹುದು ಎಂಬ ಅಭಿಪ್ರಾಯವೂ ಆಗ ಕೇಳಿಬಂದಿತ್ತು. ಆದರೆ ಕಾವೇರಿ ಕಣಿವೆಯ ಉಳಿದ ಮೂರು ರಜ್ಯಗಳು ತಜ್ಞರ ಸಮಿತಿ ನೇಮಕವನ್ನು ವಿರೋಧಿಸಿದಾಗ ತಮಿಳುನಾಡು ಕೂಡಾ ಅದಕ್ಕೆ ದನಿಗೂಡಿಸಿತ್ತು.

ಈಗ 'ನ್ಯಾಯದರ್ಶಿಗಳ ವರದಿ'ಯಲ್ಲಿನ ಹೆಚ್ಚಿನ ಅಂಶಗಳನ್ನು ವಿರೋಧಿಸಿ ತಮಿಳುನಾಡು ವಿವಾದವನ್ನು ಮುಂದುವರಿಸುವ ಸೂಚನೆ ನೀಡಿದೆ. ತಜ್ಞರ ಸಮಿತಿ ನೇಮಕಕ್ಕೆ ಪಟ್ಟು ಹಿಡಿದಿರುವ ಇಬ್ಬರು ನ್ಯಾಯಮೂರ್ತಿಗಳೇ ಹಿಂದೆ ಕಾವೇರಿ ಪ್ರದೇಶದಲ್ಲಿ ಪ್ರವಾಸ ಹೋಗುವ ಇಚ್ಛೆ ವ್ಯಕ್ತಪಡಿಸಿದ್ದರು. ಈಗಿನಂತೆ ಆಗಲೂ ಅಧ್ಯಕ್ಷರು ವಿರೋಧಿಸಿದ್ದರು. ನ್ಯಾಯ ಮಂಡಳಿ ಒಳಗಡೆಯೇ ಭಿನ್ನಮತ ಕಾಣಿಸಿಕೊಂಡಿತ್ತು. ಈ ಬಿರುಕಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಬಹುದೆಂದು ಹೇಳಿ ಆಗ ದೇವೇಗೌಡರು ಸುಪ್ರೀಂ ಕೋರ್ಟ್ ಮೊರೆಹೋಗಿ ವಿವಾದಕ್ಕೆ ತಿರುವುಕೊಡುವ ಪ್ರಯತ್ನ ಮಾಡಿದ್ದರು.

'ತಜ್ಞರ ಸಮಿತಿ' ನೇಮಿಸುವ ಪ್ರಸ್ತಾಪಕ್ಕೆ ತಮಿಳುನಾಡು ಬೆಂಬಲ ಸೂಚಿಸಿಲ್ಲ. ಆದರೆ ನ್ಯಾಯದರ್ಶಿ ವರದಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಮೂಲಕ ಆ ರಾಜ್ಯ ಇಬ್ಬರು ನ್ಯಾಯಮೂರ್ತಿಗಳ ಅಭಿಪ್ರಾಯವನ್ನು ಬೆಂಬಲಿಸಿದೆ.

'ನ್ಯಾಯದರ್ಶಿಗಳ ವರದಿಯನ್ನು ವಿಶ್ಲೇಷಿಸಲು ನಾವೇನು ತಜ್ಞರಲ್ಲ. ಅದರ ಸತ್ಯಾಸತ್ಯತೆಯ ಬಗ್ಗೆ ಕೃಷಿ, ಹವಾಮಾನ, ಮಳೆ ಬಗ್ಗೆ ತಾಂತ್ರಿಕ ಜ್ಞಾನ ಹೊಂದಿರುವ ತಜ್ಞರು ಮಾತ್ರ ತಿಳಿಹೇಳಬಲ್ಲರು. ಆದ್ದರಿಂದ ಮೂವರು ಸದಸ್ಯರ ತಜ್ಞರ ಸಮಿತಿ ನೇಮಿಸಬೇಕು' ಎಂದು ಕಳೆದ ತಿಂಗಳು ಇಬ್ಬರು ನ್ಯಾಯಮೂರ್ತಿಗಳು ನೀಡಿದ್ದ ಆದೇಶದಲ್ಲಿ ತಿಳಿಸಿದ್ದರು. ತಮಿಳುನಾಡು ಪರೋಕ್ಷವಾಗಿ ಇಬ್ಬರು ನ್ಯಾಯಮೂರ್ತಿಗಳು ಹೇಳಿದ್ದನ್ನೇ ಹೇಳುತ್ತಿದೆ ಎಂದರೆ ಏನು ಅರ್ಥ?

'ನ್ಯಾಯದರ್ಶಿ ವರದಿ'ಯ ಆಧಾರದಲ್ಲಿಯೇ ಅಂತಿಮ ಐತೀರ್ಪು ಹೊರಬಿದ್ದರೂ ಕರ್ನಾಟಕ ಕೊರಗಬೇಕಾಗಿಲ್ಲ. ಕಾವೇರಿ ಕಣಿವೆಯಲ್ಲಿ 27 ಲಕ್ಷ ಎಕರೆ ಅಚ್ಚುಕಟ್ಟು ಅಭಿವೃದ್ಧಿ ಪಡಿಸುವ ಉದ್ದೇಶ ಕರ್ನಾಟಕ ಹೊಂದಿದ್ದರೂ ನ್ಯಾಯಮಂಡಳಿಗೆ ತಿಳಿಸಿರುವುದು 25 ಲಕ್ಷ ಎಕರೆಯ ಗುರಿ. ನ್ಯಾಯದರ್ಶಿಗಳು ರಾಜ್ಯದ ಅಚ್ಚುಕಟ್ಟು ಪ್ರದೇಶ 18.85 ಲಕ್ಷ ಎಕರೆ ಎಂದು ಗುರುತಿಸಿ 251 ಟಿ.ಎಮ್.ಸಿ. ನೀರು ನಿಗದಿಗೊಳಿಸಿದ್ದಾರೆ. ವಾಸ್ತವದಲ್ಲಿ ಅಷ್ಟು ಪ್ರದೇಶವನ್ನು ಕೂಡಾ ಕರ್ನಾಟಕ ಅಭಿವೃದ್ಧಿಪಡಿಸಿಲ್ಲ ಎನ್ನುವುದು ತಮಿಳುನಾಡು ಆರೋಪ. ಇದನ್ನು ನಿರಾಕರಿಸುವ ಸ್ಥಿತಿಯಲ್ಲಿ ಕರ್ನಾಟಕ ಇದೆಯೇ?

ತಮಿಳುನಾಡು 29.29 ಲಕ್ಷ ಎಕರೆ ಅಚ್ಚಕಟ್ಟು ಪ್ರದೇಶ ಇದೆ ಎಂದು ತಿಳಿಸಿದ್ದರೂ ನ್ಯಾಯದರ್ಶಿಗಳು ಗುರುತಿಸಿರುವುದು 24.70 ಲಕ್ಷ ಎಕರೆ ಮಾತ್ರ. ಆ ರಾಜ್ಯಕ್ಕೆ ನಿಗದಿಪಡಿಸಿರುವ ನೀರಿನ ಪ್ರಮಾಣ 384 ಟಿ.ಎಮ್.ಸಿ. ಇದರ ಪ್ರಕಾರ ಮೆಟ್ಟೂರು ಜಲಾಶಯಕ್ಕೆ ಕರ್ನಾಟಕ ಹರಿಸಬೇಕಾದ ನೀರಿನ ಪ್ರಮಾಣ ಈಗಿನ 205 ಟಿಎಮ್‌ಸಿ ಯಿಂದ ಸುಮಾರು 180 ಟಿಎಮ್‌ಸಿಗೆ ಇಳಿಯಬಹುದು. ಅಂತರ್ಜಲದ ಪ್ರಮಾಣವನ್ನು ಲೆಕ್ಕಹಾಕಿದರೆ ಅದು ಇನ್ನೂ ಕಡಿಮೆಯಾಗಲೂಬಹುದು. ನ್ಯಾಯದರ್ಶಿ ವರದಿ ಬಗ್ಗೆ ತಮಿಳುನಾಡು ಅಸಮಾಧಾನಕ್ಕೆ ಇದು ಕಾರಣ.

ವಿಜಯೋತ್ಸವ ನಡೆಸುವಂತಹ ಅಂತಿಮ ಐತೀರ್ಪು ಈಗ ಬರಲಾರದೆಂದು ಅರಿತಿರುವ ತಮಿಳುನಾಡು, ವಿವಾದವನ್ನು ನ್ಯಾಯ ಮಂಡಳಿಯಲ್ಲಿಯೇ ಇನ್ನಷ್ಟು ಕಾಲ ಕಟ್ಟಿಹಾಕಲು ಬಯಸಬಹುದು. ಈ ಅವಧಿಯಲ್ಲಿ ಯುಪಿಎ ಸರ್ಕಾರದ ಮೇಲಿನ ತನ್ನ ಪ್ರಭಾವವನ್ನು ಬಳಸಿಕೊಂಡು ಕೆಲಸ ಸಾಧಿಸಿಕೊಳ್ಳುವ ಪ್ರಯತ್ನವನ್ನು ಡಿಎಂಕೆ ಪ್ರಾರಂಭಿಸಬಹುದು. ಯುಪಿಎ ಮಿತ್ರಪಕ್ಷ ಅಲ್ಲದೆ ಎಐಡಿಎಂಕೆ ಅಧಿಕಾರದಲ್ಲಿದ್ದಾಗ ಈ ಭಯ ಇರಲಿಲ್ಲ. ಆದರೆ ಈಗ ಡಿಎಂಕೆ ಮತ್ತು ಪಿಎಂಕೆಗೆ ಸೇರಿದ 20 ಸದಸ್ಯರು ಯುಪಿಎ ಸರ್ಕಾರವನ್ನು ಬೆಂಬಲಿಸುತ್ತಿದ್ದಾರೆ. ಅವರಲ್ಲಿ 13 ಮಂದಿ ಸಚಿವರು ಈ ಅವಕಾಶವನ್ನು ಕರುಣಾನಿಧಿ ಬಳಸಿಕೊಳ್ಳದೆ ಬಿಡಲಾರರು.

ಇನ್ನೊಂದೆಡೆ ಮಹಾರಾಷ್ಟ್ರದಲ್ಲಿ ಶರದ್‌ಪವಾರ್ ನೇತೃತ್ವದ ಎನ್‌ಸಿಪಿ ಅದೇ ದಾರಿಯಲ್ಲಿದೆ. ನೀರಿನ ವ್ಯಾಜ್ಯವನ್ನೆತ್ತಿಕೊಂಡು ಕಾಂಗ್ರೆಸ್ ಪಕ್ಷಕಿಂತ ತಮ್ಮ ಪಕ್ಷಕ್ಕೆ ಹೆಚ್ಚಿನ ಕಾಳಜಿ ಎನ್ನುವ ಸಂದೇಶವನ್ನು ರಾಜ್ಯದ ಜನತೆಗೆ ಕಳುಹಿಸಲು ಎನ್‌ಸಿಪಿ

ಪ್ರಯತ್ನಿಸಬಹುದು. ಪವಾರ್ ಇಂತಹ ಆಟಗಳಲ್ಲಿ ನಿಷ್ಣಾತರು. ಕೃಷ್ಣಾ ನೀರು ಹಂಚಿಕೆ ವಿವಾದ ನ್ಯಾಯಮಂಡಳಿಯಲ್ಲಿ ವಿಚಾರಣೆಯಲ್ಲಿರುವಾಗಲೇ ಆದರ ಬಗ್ಗೆ ಚರ್ಚಿಸಲು ಸಂಪುಟ ಕಾರ್ಯದರ್ಶಿಗಳೇ ಖುದ್ದಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿಗಳ ಸಭೆ ಕರೆಯುತ್ತಾರೆಂದರೆ ಸಂಚಿನ ಆಳವನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಅಲ್ಲ.

ಕೇಂದ್ರ ಸರ್ಕಾರವನ್ನೊಳಗೊಂಡಿರುವ ರಾಜ್ಯದ ಸಮಸ್ಯೆ ಯಾವುದೇ ಇರಲಿ, ಕರ್ನಾಟಕಕ್ಕೆ ಗೊತ್ತಿರುವುದು ಒಂದೇ ಪರಿಹಾರದ ಮಾರ್ಗ–ದೆಹಲಿಗೆ ಸರ್ವಪಕ್ಷಗಳ ನಿಯೋಗ. ವಿಮಾನದಲ್ಲಿ ಹಾರಿ ಬಂದು ಪಂಚತಾರ ಹೋಟೆಲ್‌ನ ಆತಿಥ್ಯ ಸವಿದು ಪ್ರಧಾನಿ ಭೇಟಿ ಮಾಡಿದ ನಂತರ ವಿರೋಧ ಪಕ್ಷಗಳ ನಾಯಕರು ಖುಷಿಯಲ್ಲಿ ಮೈಮರೆತು ಒಂದಷ್ಟು ದಿನ ಸಮಸ್ಯೆಯನ್ನು ಮರೆತುಬಿಡುತ್ತಾರೆ. ಅಲ್ಲಿಗೆ ಆಡಳಿತ ಪಕ್ಷದ ಅರ್ಧ ಉದ್ದೇಶ ಈಡೇರಿದಂತಾಗುತ್ತದೆ. ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶದ ಸರ್ಕಾರಗಳು ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ತರದೆ ಕೆಲಸ ಸಾಧಿಸಿಕೊಳ್ಳುತ್ತವೆ. ಇದು ಹೇಗೆ ಎಂಬುದನ್ನು ತಿಳಿಯಲು ಆ ರಾಜ್ಯಗಳಿಗೊಂದು ಸರ್ವಪಕ್ಷಗಳ ನಿಯೋಗವನ್ನು ಕರ್ನಾಟಕ ಸರ್ಕಾರ ಕಳುಹಿಸಿದರೆ ಹೇಗೆ?

○

ಹೈಕೋರ್ಟ್ ಪೀಠ ಏಕಿಲ್ಲ?

ಉತ್ತರ ಕರ್ನಾಟಕಕ್ಕೊಂದು ಹೈಕೋರ್ಟ್ ಪೀಠ ಬೇಕು ಎಂಬ ಬೇಡಿಕೆ ಮೊದಲ ಬಾರಿ ಗಟ್ಟದನಿಯಲ್ಲಿ ಕೇಳಿ ಬಂದದ್ದು 1969ರಲ್ಲಿ. ಆಗ ಇಡೀ ದೇಶದಲ್ಲಿದ್ದ ಹೈಕೋರ್ಟ್ ಪೀಠಗಳ ಸಂಖ್ಯೆ ಕೇವಲ ನಾಲ್ಕು. (ಲಖನೌ, ಗ್ವಾಲಿಯರ್, ನಾಗಪುರ ಮತ್ತು ಇಂದೋರ್) ಈಗ ಅವುಗಳ ಸಂಖ್ಯೆ ಹದಿನಾರು. ಆದರೆ ಉತ್ತರ ಕರ್ನಾಟಕದ ಜನತೆಯ ಬೇಡಿಕೆ ಮಾತ್ರ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ.

1969 ರಲ್ಲಿ ಗುಲ್ಬರ್ಗದಿಂದ ಪೀಠದ ಬೇಡಿಕೆ ಬಂದಾಗ ಅದನ್ನು ತಿರಸ್ಕರಿಸಲು ರಾಜ್ಯ ಹೈಕೋರ್ಟ್ ಸಮರ್ಥನೆಗೆ ಬಳಸಿದ್ದು 1956ರ ಕಾನೂನು ಆಯೋಗದ ನಾಲ್ಕನೇ ವರದಿಯನ್ನು. 1975ರಲ್ಲಿ ಮತ್ತೆ ಧಾರವಾಡದಿಂದ ಅದೇ ಬೇಡಿಕೆ ಕೇಳಿಬಂದಾಗ ಕಾನೂನು ಆಯೋಗದ ವರದಿ ಮತ್ತು ಅದನ್ನೇ ಪುಷ್ಟೀಕರಿಸಿದ 1972ರ ಹೈಕೋರ್ಟ್ ಬಾಕಿ ಮೊಕದ್ದಮೆಗಳ ಸಮಸ್ಯೆ ಪರಿಹಾರ ಸಮಿತಿ ನೀಡಿದ ವರದಿಯನ್ನು ಮುಂದಿಟ್ಟು ಹೈಕೋರ್ಟ್ ಅನುಮತಿ ನಿರಾಕರಿಸಿತು.

"ನ್ಯಾಯಾಂಗದ ಔನ್ನತ್ಯ, ಹೈಕೋರ್ಟ್‌ನ ಸಮಗ್ರ ಸ್ವರೂಪ ಮತ್ತು ನ್ಯಾಯದಾನದ ಗುಣಮಟ್ಟದ ಪಾಲನೆಯ ದೃಷ್ಟಿಯಿಂದ ಹೈಕೋರ್ಟ್ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುವುದು ಅವಶ್ಯ. ಪೀಠ ವಿಚಾರಣೆಯ ವಿಷಯವನ್ನು ಕೇವಲ ನ್ಯಾಯದಾನದ ದೃಷ್ಟಿಯಿಂದ ಪರಿಶೀಲಿಸಬೇಕೆ ವಿನಃ ಅದಕ್ಕೆ ರಾಜಕೀಯ ಇಲ್ಲವೇ

ಭಾವನಾತ್ಮಕ ವಿಚಾರಗಳು ಕಾರಣವಾಗಬಾರದು" ಎಂದು ಕಾನೂನು ಆಯೋಗದ ವರದಿ ಹೇಳಿತ್ತು.

ಆ ವರದಿ ಸಲ್ಲಿಕೆಯ ಸಮಯದಲ್ಲಿ ಉತ್ತರ ಪ್ರದೇಶದ ಲಖನೌ(1948)ದಲ್ಲಿ ಮಾತ್ರ ಹೈಕೋರ್ಟ್ ಪೀಠ ಇತ್ತು. 1956ರಲ್ಲಿ ಮಧ್ಯಪ್ರದೇಶದ ಗ್ವಾಲಿಯರ್ ಮತ್ತು ಇಂದೋರ್‌ಗಳಲ್ಲಿ ಪೀಠಗಳನ್ನು ಸ್ಥಾಪಿಸಲಾಯಿತು. 1960ರಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿ ಪೀಠ ಅಸ್ತಿತ್ವಕ್ಕೆ ಬಂತು.

1976ರಲ್ಲಿ ಬಿಹಾರದ ರಾಂಚಿಯಲ್ಲಿದ್ದ ಸರ್ಕೀಟ್ ಪೀಠವನ್ನು ಪೂರ್ಣಪ್ರಮಾಣದ ಪೀಠವನ್ನಾಗಿ ಪರಿವರ್ತಿಸಲು ಅನುಮತಿ ನೀಡಲಾಯಿತು. 1977ರಲ್ಲಿ ಜೈಪುರದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಯಿತು. ಆ ಪೀಠ ರಾಜಸ್ತಾನದ ಹನ್ನೊಂದು ಜಿಲ್ಲೆಗಳ ಕಾರ್ಯವ್ಯಾಪ್ತಿಯನ್ನು ಹೊಂದಿದೆ. ಜೈಪುರ, ರಾಜಸ್ತಾನದ ರಾಜಧಾನಿಯಾದರೂ ಅಲ್ಲಿನ ಹೈಕೋರ್ಟ್ ಇರುವುದು ಜೋಧ್‌ಪುರದಲ್ಲಿ. ಮರುವರ್ಷ ಕಲ್ಕತ್ತಾ ಹೈಕೋರ್ಟ್ ಪೀಠವನ್ನು ಅಂಡಮಾನ್, ನಿಕೋಬಾರ್ ದ್ವೀಪಗಳಿಗಾಗಿ ಪೋರ್ಟ್ ಬ್ಲೇರ್‌ನಲ್ಲಿ ಸ್ಥಾಪಿಸಲಾಯಿತು.

ಅದರ ನಂತರ ಮಹಾರಾಷ್ಟ್ರ ಹೈಕೋರ್ಟ್‌ನ ಎರಡು ಪೀಠಗಳನ್ನು ಪಣಜಿ (1981) ಮತ್ತು ಔರಂಗಬಾದ್ (1984) ಗಳಲ್ಲಿ ಸ್ಥಾಪಿಸಲಾಯಿತು. 90ರ ದಶಕದಲ್ಲಿ ಈಶಾನ್ಯ ರಾಜ್ಯಗಳಲ್ಲಿ ಗುವಾಹಟಿ ಹೈಕೋರ್ಟ್‌ನ ಐದು ಪೀಠಗಳ ಸ್ಥಾಪನೆಗೆ ಅನುಮತಿ ನೀಡಲಾಯಿತು. 1990ರಲ್ಲಿ ಕೊಹಿಮಾ ಮತ್ತು ಐಜಾಲ್, 1992ರಲ್ಲಿ ಇಂಫಾಲ್ ಮತ್ತು ಅಗರ್ತಲ ಹಾಗೂ 1995ರಲ್ಲಿ ಶಿಲ್ಲಾಂಗ್‌ನಲ್ಲಿ ಪೀಠಗಳು ಅಸ್ತಿತ್ವಕ್ಕೆ ಬಂದಿವೆ.

2000ನೇ ವರ್ಷದಲ್ಲಿ ಇಟಾನಗರ್‌ನಲ್ಲಿ ಗುವಾಹಟಿ ಹೈಕೋರ್ಟ್ ಪೀಠ ಸ್ಥಾಪನೆಗೆ ಅನುಮತಿ ನೀಡಲಾಯಿತು. ಈ ಪೀಠ ಸ್ಥಾಪನೆಯ ಚರ್ಚೆ ನಡೆಯುತ್ತಿದ್ದಾಗ ಉತ್ತರ ಕರ್ನಾಟಕದ ಪೀಠಕ್ಕೂ ಅದರಂತೆ ಸಿಕ್ಕಿಯೇ ಬಿಟ್ಟಿತು ಎನ್ನುವ ನಿರೀಕ್ಷೆ ಇತ್ತು. ಆದರೆ ಅನುಮತಿ ಇಟಾನಗರಕ್ಕಷ್ಟೇ ಸೀಮಿತವಾಗಿ ಹೋಯಿತು.

2001ರಲ್ಲಿ ತಮಿಳುನಾಡಿನ ಮಧುರೈನಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಅನುಮತಿ ನೀಡಲಾಯಿತು. ಅಲ್ಲಿ ನ್ಯಾಯಾಲಯದ ಕಟ್ಟಡ, ವಸತಿಸೌಕರ್ಯ ಮೊದಲಾದ ಮೂಲಸೌಲಭ್ಯಗಳು ಇನ್ನೂ ನಿರ್ಮಾಣಗೊಳ್ಳದಿರುವ ಕಾರಣ ಪೀಠ ಕಾರ್ಯಾರಂಭಗೊಂಡಿಲ್ಲ. ಈ ಎಲ್ಲಾ ಪೀಠಗಳ ಸ್ಥಾಪನೆಗೆ 'ನ್ಯಾಯದಾನದ ಗುಣಮಟ್ಟ ಕುಸಿತ'ದ ಆತಂಕ ಅಡ್ಡಿಯಾಗಲಿಲ್ಲ ಎನ್ನುವುದು ಗಮನಾರ್ಹ.

ಪೀಠ ಸ್ಥಾಪನೆಯನ್ನು ವಿರೋಧಿಸಿದ ಕಾನೂನು ಆಯೋಗ ಮತ್ತು ಹೈಕೋರ್ಟ್ ಬಾಕಿ ಸಮಿತಿ ವರದಿಗಳ ನಂತರ ಪೀಠ ಸ್ಥಾಪನೆಯನ್ನು ಸಮರ್ಥಿಸಿ ಮೂರು ವರದಿಗಳು ಬಂದವು. ಆದರೆ ಪೀಠ ಸ್ಥಾಪನೆಯ ವಿಚಾರದಲ್ಲಿ ಕಾನೂನು ಆಯೋಗ 1956ರಲ್ಲಿ ನೀಡಿದ ವರದಿಯನ್ನೇ ಈಗಲೂ 'ಬೈಬಲ್' ಎಂದು ಪರಿಗಣಿಸಿದೆ.

ಕಾನೂನು ಆಯೋಗ ವರದಿ ನೀಡಿದ ಕೆಲವೇ ತಿಂಗಳಲ್ಲಿ ಜಾರಿಗೆ ಬಂದ ರಾಜ್ಯ ಪುನರ್‌ವಿಂಗಡಣಾ ಕಾಯಿದೆಯ ಸೆಕ್ಷನ್ 51 "ರಾಷ್ಟ್ರಪತಿಗಳು ಹೊಸ ರಾಜ್ಯಗಳ ರಾಜ್ಯಪಾಲರು ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಜತೆ ಸಮಾಲೋಚನೆ ನಡೆಸಿ ಹೈಕೋರ್ಟ್ ಪೀಠಗಳನ್ನು ಸ್ಥಾಪನೆಗೆ ಆದೇಶ ನೀಡಬಹುದು" ಎಂದು ಹೇಳುತ್ತದೆ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ವಿಚಾರವನ್ನು 1979ರಲ್ಲಿ ಮುದ್ದಾಗಿ ಅಧ್ಯಯನ ಮಾಡಿದ ರಾಜ್ಯ ಹೈಕೋರ್ಟ್‌ನ ಆಗಿನ ಮುಖ್ಯ ನ್ಯಾಯಮೂರ್ತಿ ಡಿ.ಎಂ. ಚಂದ್ರಶೇಖರ್ "ಅಗತ್ಯ ಸೌಕರ್ಯಗಳನ್ನು ರಾಜ್ಯ ಸರ್ಕಾರ ಒದಗಿಸಿದರೆ ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬಹುದು" ಎಂದು ವರದಿ ನೀಡಿದ್ದರು.

ಅಂತಿಮವಾಗಿ ನ್ಯಾಯಮೂರ್ತಿ ಜಸ್ವಂತ್ ಸಿಂಗ್ ಸಮಿತಿ ವರದಿ. 1981ರಲ್ಲಿ ರಚಿಸಲಾದ ಈ ಸಮಿತಿ ಹೈಕೋರ್ಟ್ ಪೀಠ ಸ್ಥಾಪನೆಯ ವಿಚಾರವನ್ನು ಸಮಗ್ರವಾಗಿ ಅಧ್ಯಯನ ನಡೆಸಿ 1985 ಏಪ್ರಿಲ್ 30ರಂದು ವರದಿ ನೀಡಿತು. ಕಾನೂನು ಆಯೋಗ ಮತ್ತು ಹೈಕೋರ್ಟ್ ಬಾಕಿ ಸಮಿತಿಯ ವರದಿಯ ನಂತರದ ದಿನಗಳ ಬೆಳವಣಿಗೆಗಳನ್ನು ಪಟ್ಟಿ ಮಾಡಿದ ಸಮಿತಿ ಪೀಠ ಸ್ಥಾಪನೆಯ ಬೇಡಿಕೆಗೆ ಸಮರ್ಥನೆಯನ್ನು ಒದಗಿಸಿದೆ.

"ಕಾನೂನು ಆಯೋಗ ಮತ್ತು ಹೈಕೋರ್ಟ್ ಬಾಕಿ ಸಮಿತಿಯ ವರದಿಗಳ ನಂತರದ ದಿನಗಳಲ್ಲಿ ಬೇರೆಬೇರೆ ರಾಜ್ಯಗಳಲ್ಲಿ ಪೀಠಗಳು ಸ್ಥಾಪನೆಗೊಂಡಿವೆ. ಈ ಅವಧಿಯಲ್ಲಿ ಪೀಠ ಸ್ಥಾಪನೆ ಬಗ್ಗೆ ನ್ಯಾಯಮೂರ್ತಿಗಳು ಮತ್ತು ಕಾನೂನು ತಜ್ಞರ ಅಭಿಪ್ರಾಯಗಳು ಬದಲಾಗಿವೆ ಮತ್ತು ರಾಜ್ಯ ಪುನರ್‌ವಿಂಗಡಣಾ ಕಾಯಿದೆಯೂ ಸೇರಿದಂತೆ ಹಲವಾರು ಹೊಸ ಕಾಯಿದೆಗಳು ಜಾರಿಗೆ ಬಂದಿವೆ." – ಈ ಹಿನ್ನೆಲೆಯಲ್ಲಿ ಕಾನೂನು ಆಯೋಗ ಮತ್ತು ಹೈಕೋರ್ಟ್ ಬಾಕಿ ಸಮಿತಿಯ ಅಭಿಪ್ರಾಯಗಳನ್ನು ಒಪ್ಪುವುದು ಸಾಧ್ಯವಾಗದು ಎಂದು ಜಸ್ವಂತ್ ಸಿಂಗ್ ಹೇಳಿದರು.

ಈ ವರದಿಯಲ್ಲಿರುವ ಹೇಗ್‌ನ ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿ ನಾಗೇಂದ್ರಸಿಂಗ್ ಅವರ ಅಭಿಪ್ರಾಯ ಉಲ್ಲೇಖನೀಯ. "ಕಾನೂನು ಆಯೋಗ ಮತ್ತು ಹೈಕೋರ್ಟ್ ಬಾಕಿ ಸಮಿತಿ ವರದಿಯನ್ನು ಆ ಕಾಲದಲ್ಲಿ ಒಪ್ಪಿದವರು ಕೂಡಾ ನಂತರದ ದಿನಗಳಲ್ಲಿ ನಡೆದ ಬದಲಾವಣೆಗಳನ್ನು ನಿರ್ಲಕ್ಷಿಸುವ ಹಾಗಿಲ್ಲ. ಈ ಹಿನ್ನೆಲೆಯಲ್ಲಿ ಹೈಕೋರ್ಟ್‌ಗಳಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸಬೇಕು. ಬಾಕಿ ಉಳಿದಿರುವ ಮೊಕದ್ದಮೆಗಳ ಇತ್ಯರ್ಥಕ್ಕೆ ಹೆಚ್ಚುವರಿ ನ್ಯಾಯಾಧೀಶರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರವಾಸ ಮಾಡಬೇಕು ಮತ್ತು ಪ್ರಾದೇಶಿಕ ಪೀಠಗಳನ್ನು ಸ್ಥಾಪಿಸಬೇಕು" ಎಂಬುದು ಸಿಂಗ್ ಅವರ ಅಭಿಪ್ರಾಯವಾಗಿತ್ತು.

ಮಾಜಿ ಉಪರಾಷ್ಟ್ರಪತಿ ನ್ಯಾಯಮೂರ್ತಿ ಹಿದಾಯತ್ ಉಲ್ಲಾ, ಕಾನೂನು ಆಯೋಗದ ಮಾಜಿ ಅಧ್ಯಕ್ಷ ನ್ಯಾಯಮೂರ್ತಿ ಕೆ.ಕೆ. ಮ್ಯಾಥ್ಯೂ, ಅಂತರರಾಜ್ಯ ಸಂಬಂಧ

ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಆರ್.ಎಸ್. ಸರ್ಕಾರಿಯಾ, ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಮೊದಲಾದವರು ನ್ಯಾಯಮೂರ್ತಿ ನಾಗೇಂದ್ರ ಸಿಂಗ್ ಅಭಿಪ್ರಾಯ ಕೇಳಿದ ನಂತರ ಪೀಠ ಸ್ಥಾಪನೆಯ ಪರವಾಗಿ ತಮ್ಮ ನಿಲುವು ಬದಲಾಯಿಸಿದರು ಎಂದು ಜಸ್ವಂತಸಿಂಗ್ ವರದಿಯಲ್ಲಿ ತಿಳಿಸಿದ್ದಾರೆ.

ಹೈಕೋರ್ಟ್ ಪೀಠ ಸ್ಥಾಪನೆಗೆ ಮೊದಲು ಉದ್ದೇಶಿತ ಸ್ಥಳದಲ್ಲಿ ಅಗತ್ಯ ಇರುವ ಎಲ್ಲಾ ಮೂಲಸೌಕರ್ಯಗಳನ್ನು ಕಲ್ಪಿಸಬೇಕೆಂಬ ಷರತ್ತನ್ನು ಜಸ್ವಂತ್‌ಸಿಂಗ್ ವರದಿ ಹಾಕಿತ್ತು.

ಈಗ ಕನಿಷ್ಠ ಮೂರು ಪೀಠಗಳ ಬೇಡಿಕೆ ಕೇಂದ್ರ ಸರ್ಕಾರದ ಮುಂದಿದೆ. ಪಶ್ಚಿಮ ಬಂಗಾಳದ ಜಲಪಾಯ್‌ಗುರಿಯಲ್ಲಿ ಪೀಠ ಸ್ಥಾಪನೆಗೆ ರಾಜ್ಯ ಸರ್ಕಾರ ಮತ್ತು ಹೈಕೋರ್ಟ್ ಸಹಮತ ವ್ಯಕ್ತಪಡಿಸಿವೆ. ಉಳಿದಿರುವುದು ಔಪಚಾರಿಕ ಪ್ರಕಟಣೆ ಮಾತ್ರ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂಬುದು ಹಳೆಯ ಬೇಡಿಕೆ.

ತಿರುವನಂತಪುರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂಬ ಬೇಡಿಕೆ ಕೇರಳ ರಾಜ್ಯ ಉದಯವಾದ ದಿನದಿಂದಲೇ ಇದೆ. ಈಗ ಆ ರಾಜ್ಯದ ಹೈಕೋರ್ಟ್ ಕೊಚ್ಚಿಯಲ್ಲಿದೆ. ಈ ಮೂರು ಪೀಠಗಳು ಸ್ಥಾಪನೆಯಾದ ನಂತರವೂ ಉತ್ತರ ಕರ್ನಾಟಕದ ಹೈಕೋರ್ಟ್ ಪೀಠದ ಬೇಡಿಕೆ ಹಾಗೆಯೇ ಉಳಿದುಬಿಡಬಹುದೇನೋ?

ಕಳೆದ ವರ್ಷದ ಮಾರ್ಚ್ ಅಂತ್ಯದವರೆಗೆ ಕರ್ನಾಟಕ ಹೈಕೋರ್ಟ್‌ನಲ್ಲಿ ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ 95236. ಒಬ್ಬ ನ್ಯಾಯಾಧೀಶರು ಒಂದು ವರ್ಷದ ಅವಧಿಯಲ್ಲಿ ಜವಾಬ್ದಾರಿಯುತವಾಗಿ 650 ಮೊಕದ್ದಮೆಗಳನ್ನು ಇತ್ಯರ್ಥ ಮಾಡಬಹುದು ಎಂದು ಮುಖ್ಯ ನ್ಯಾಯಾಧೀಶರ ಸಮ್ಮೇಳನ ರಚಿಸಿದ ಮಾರ್ಗಸೂಚಿ ಹೇಳುತ್ತದೆ. ಈ ಮಾರ್ಗಸೂಚಿ ಪ್ರಕಾರ ರಾಜ್ಯ ಹೈಕೋರ್ಟ್‌ನಲ್ಲಿ ಈಗ ಬಾಕಿ ಉಳಿದಿರುವ ಮೊಕದ್ದಮೆಗಳನ್ನು ಮುಂದಿನ ಒಂದು ವರ್ಷದಲ್ಲಿ ಇತ್ಯರ್ಥಗೊಳಿಸಬೇಕಾದರೆ 145 ನ್ಯಾಯಾಧೀಶರ ಅಗತ್ಯ ಇದೆ. ಈಗ ಇರುವ ನ್ಯಾಯಾಧೀಶರ ಸ್ಥಾನ 37, ಎರಡು ದಿನಗಳ ಹಿಂದೆಯಷ್ಟೇ ನೇಮಕಗೊಂಡ ನಾಲ್ವರು ಹೆಚ್ಚುವರಿ ನ್ಯಾಯಾಧೀಶರನ್ನು ಸೇರಿಸಿಕೊಂಡರೆ ಕಾರ್ಯನಿರತ ನ್ಯಾಯಾಧೀಶರ ಒಟ್ಟು ಸಂಖ್ಯೆ 35.

O

(08-09-2003)

ಕೃಷ್ಣೆಯ ಶತ್ರುಗಳು

ರಾಜ್ಯದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಮೂವರು 'ಶತ್ರುಗಳು', ಇಬ್ಬರು ಹೊರಗಿನವರು– ಒಬ್ಬರು ಮೇಲ್ದಂಡೆಯಲ್ಲಿ ಕೂತಿರುವ ಮಹಾರಾಷ್ಟ್ರದವರು ಮತ್ತು ಇನ್ನೊಬ್ಬರು ಕೆಳದಂಡೆಯಲ್ಲಿರುವ ಆಂಧ್ರಪ್ರದೇಶದವರು. ಮೂರನೆಯವರು ಒಳಗಿನವರು. ಅವರು ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರು. ಹೊರಗಿನ ಶತ್ರುಗಳನ್ನು ಮಣಿಸಲು ಯುದ್ಧಕ್ಕಿಳಿಯಬಹುದು. ಒಳಗಿನ ಶತ್ರುಗಳನ್ನು ಎದುರಿಸುವುದು ಹೇಗೆ?

ಸರಳವಾಗಿ ಹೇಳುವುದಾದರೆ ಕಳೆದ 31 ವರ್ಷಗಳಲ್ಲಿ ಕೃಷ್ಣಾನದಿಯ 734 ಟಿಎಂಸಿ ನೀರನ್ನು ಬಳಸಿಕೊಳ್ಳಲು ಕರ್ನಾಟಕ ವಿಫಲವಾಗಿದೆ. ಈ ನೀರನ್ನು ಬಳಸಲು ಬಚಾವತ್ ಆಯೋಗ 27 ವರ್ಷಗಳ ದೀರ್ಘ ಗಡುವನ್ನು ನೀಡಿತ್ತು. ಆ ಗಡುವು ಮುಗಿದು ನಾಲ್ಕು ವರ್ಷಗಳು ಕಳೆದುಹೋಗಿವೆ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಅನ್ಯಾಯಕ್ಕೆ ಪ್ರಭಲವಾದ ಪ್ರತಿರೋಧವನ್ನು ಒಡ್ಡಲು ಕೂಡಾ ಸಾಧ್ಯವಾಗಿಲ್ಲ.

ಗುಲ್ಬರ್ಗ, ಬಿಜಾಪುರ, ರಾಯಚೂರು, ಬಾಗಲಕೋಟೆ ಜಿಲ್ಲೆಗಳ 6.22 ಲಕ್ಷ ಹೆಕ್ಟೇರ್‌ಗೆ ನೀರುಣಿಸುವ, ವರ್ಷಕ್ಕೆ 672 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸುವ ಮತ್ತು ಪ್ರತಿ ವರ್ಷ ದೇಶಕ್ಕೆ 6000 ಕೋಟಿ ರೂಪಾಯಿ ಆದಾಯವನ್ನು ತಂದು ಕೊಡಬಹುದೆಂಬ ನಿರೀಕ್ಷೆ ಇರುವ ಕೃಷ್ಣಾ ಮೇಲ್ದಂಡೆ ಯೋಜನೆ ಭಾಗ್ಯದ ಬಾಗಿಲು ತೆರೆಯಲಿದೆ ಎಂದು

ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಜನತೆ ದಶಕಗಳಿಂದ ಕಾದು ಕೂತಿದ್ದಾರೆ. ಆದರೆ ಆಗಿರುವುದೇನು?

ಆಲಮಟ್ಟಿ ಜಲಾಶಯದಲ್ಲಿ ನೀರು ತುಂಬಿ ತುಳುಕುತ್ತಿದೆ. ಅದನ್ನು ರೈತರ ಹೊಲಗಳಿಗೆ ಹರಿಸುವ ಕಾಲುವೆ ನಿರ್ಮಾಣ ಕೆಲಸ ಇನ್ನೂ ಪೂರ್ಣಗೊಂಡಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಎರಡು ಹಂತಗಳಲ್ಲಿ ಪೂರ್ಣಗೊಳಿಸಲು ಸರ್ಕಾರ ಯೋಜಿಸಿತ್ತು. ಮೊದಲ ಹಂತದಲ್ಲಿ 119 ಟಿಎಂಸಿ ನೀರು ಬಳಸಿಕೊಂಡು 4.25 ಲಕ್ಷ ಹೆಕ್ಟೇರ್‌ಗಳಲ್ಲಿ ಅಚ್ಚುಕಟ್ಟು ನಿರ್ಮಾಣ.

ಎರಡೂ ಹಂತಗಳನ್ನು 2000ನೇ ವರ್ಷದೊಳಗೆ ಮುಗಿಸಬೇಕಾಗಿತ್ತು. ಆದರೆ ಕಷ್ಟಪಟ್ಟು ಈವರೆಗೆ ಮುಗಿಸಿರುವುದು ಮೊದಲ ಹಂತ ಮಾತ್ರ. ಅದರಲ್ಲಿಯೂ ಪೂರ್ಣವಾಗಿ ಮುಗಿದಿರುವುದು ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯ. ನಾರಾಯಣಪುರ ಎಡದಂಡೆ ಕಾಲುವೆ, ಶಹಾಪುರ ಶಾಖಾ ಕಾಲುವೆ ಮತ್ತು ಮುಡಬಾಲ ಶಾಖಾ ಕಾಲುವೆ ಮಾತ್ರ. ಇಂಡಿ ಮತ್ತು ಜೇವರ್ಗಿ ಶಾಖಾ ಕಾಲುವೆಗಳ ಒಂದಷ್ಟು ಭಾಗ ಇನ್ನೂ ಬಾಕಿ ಉಳಿದುಕೊಂಡಿದೆ.

ಎರಡನೇ ಹಂತದಲ್ಲಿನ ನಾರಾಯಣಪುರ ಬಲದಂಡೆ ಕಾಲುವೆ, ಆಲಮಟ್ಟಿ ಎಡ ಮತ್ತು ಬಲದಂಡೆ ಕಾಲುವೆಗಳ ಅರ್ಧ ಕೆಲಸವಷ್ಟೇ ಮುಗಿದಿವೆ. ಮುಳವಾಡ, ರಾಮಾಪುರ ಮತ್ತು ಇಂಡಿ ಏತ ನೀರಾವರಿ ಯೋಜನೆಗಳ ಕಾಮಗಾರಿ ಇತ್ತೀಚೆಗಷ್ಟೆ ಪ್ರಾರಂಭವಾಗಿವೆ. ಕರ್ನಾಟಕಕ್ಕೆ ತನ್ನ ಪಾಲಿನ ನೀರನ್ನು ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಆಂಧ್ರಪ್ರದೇಶ ನಿಗದಿತ ಪಾಲನ್ನು ಬಳಸಿಕೊಂಡು ನಿಗದಿಯಾಗದಿರುವ ನೀರನ್ನೂ ಕಬಳಿಸಲು ಹೊರಟಿದೆ.

ಇನ್ನಷ್ಟು ಅನ್ಯಾಯವೆಸಗಿತೇ ವಿನಾ ಪರಿಹಾರ ತಂದುಕೊಡಲಿಲ್ಲ. 1973 ಮತ್ತು 1976ರಲ್ಲಿ ಎರಡು ಭಾಗಗಳಲ್ಲಿ ಐತೀರ್ಪು ನೀಡಿದ ಆಯೋಗ ಕೃಷ್ಣೆಯಲ್ಲಿರುವ ಒಟ್ಟು 2,740 ಟಿಎಂಸಿ ನೀರಿನ ಶೇಕಡ 75ರಷ್ಟು ಅಂದರೆ 2030 ಟಿಎಂಸಿ ನೀರನ್ನು ಮೂರು ರಾಜ್ಯಗಳಿಗೆ ಹಂಚಿಕೊಟ್ಟಿತು. ಅದರಂತೆ ಮಹಾರಾಷ್ಟ್ರ 585 ಟಿಎಂಸಿ ಕರ್ನಾಟಕ 734 ಟಿಎಂಸಿ ಮತ್ತು ಆಂಧ್ರಪ್ರದೇಶ 811 ಟಿಎಂಸಿ ನೀರನ್ನು ಬಳಸಿಕೊಳ್ಳುವ ಅವಕಾಶ ಪಡೆದವು–ಇದು ಸ್ಕೀಮ್ 'ಎ'.

ಜಲಾನಯನ ಪ್ರದೇಶಕ್ಕೆ ಅನುಗುಣವಾಗಿ ರಾಜ್ಯಕ್ಕೆ 1,049 ಟಿಎಂಸಿ ನೀರು ಸಿಗಬೇಕಿತ್ತು. ದಕ್ಕಿದ್ದು 734 ಟಿಎಂಸಿ. ಇದು ಬಚಾವತ್ ಆಯೋಗದಿಂದಾದ ಮೊದಲನೇ ಅನ್ಯಾಯ. ನೀಡಿದ ನೀರಿನ ಪಾಲನ್ನು ಕೂಡಾ 2000ನೇ ವರ್ಷದೊಳಗೆ ಬಳಸಿಕೊಳ್ಳಬೇಕೆಂಬ ಗಡುವು ವಿಧಿಸಿತು. ಗಡುವಿನೊಳಗೆ ಪಾಲನ್ನು ಬಳಸಿಕೊಂಡರೆ ಮಾತ್ರ ಸ್ಕೀಮ್ 'ಬಿ' ಅಡಿಯಲ್ಲಿ ಗುರುತಿಸಲಾದ ಹೆಚ್ಚುವರಿ 330 ಟಿಎಂಸಿ ನೀರಿನ ಅರ್ಧವನ್ನು ಪಡೆಯುವ ಹಕ್ಕನ್ನು ಪಡೆಯುತ್ತದೆ. ಇದು ಎರಡನೇ ಅನ್ಯಾಯ.

ಬಚಾವತ್ ನ್ಯಾಯಮಂಡಳಿ ರಚನೆಯಾಗುವ ಹೊತ್ತಿನಲ್ಲಿ ಕೇಂದ್ರದ ಮಾಜಿ ನೀರಾವರಿ ಸಚಿವ ಡಾ. ಕೆ.ಎಲ್. ರಾವ್ ಮಾರ್ಗದರ್ಶನದಲ್ಲಿ ಆಂಧ್ರಪ್ರದೇಶ ತನ್ನ ಪಾಲಿನ ನೀರನ್ನು ಬಳಸಿಕೊಂಡು ಸ್ಕೀಮ್ 'ಬಿ' ಮೇಲೆ ಕಣ್ಣು ಹಾಕತೊಡಗಿತ್ತು. ಆದರೆ ಕರ್ನಾಟಕದಲ್ಲಿ ಸ್ಕೀಮ್ 'ಎ' ಯೋಜನೆಗಳು ಕಾಗದದ ಮೇಲೆ ಕೂಡಾ ಇರಲಿಲ್ಲ. ಆಯೋಗ ಮನಸ್ಸು ಮಾಡಿದ್ದರೆ ಸ್ಕೀಮ್ 'ಬಿ'ಯ ದುರ್ಬಳಕೆಯನ್ನು ತಡೆಯಬಹುದಿತ್ತು. ಆದರೆ ಆಂಧ್ರ ಸಹಕರಿಸದ ಕಾರಣ ಸ್ಕೀಮ್ 'ಎ' ಯಂತೆ ಸ್ಕೀಮ್ 'ಬಿ'ಯನ್ನು ಐತೀರ್ಪಿನ ಭಾಗವಾಗಿ ಮಾಡಲು ಆಯೋಗಕ್ಕೆ ಸಾಧ್ಯವಾಗಲಿಲ್ಲ.

ಸ್ಕೀಮ್ 'ಎ' ಅನ್ನು ಮಾತ್ರ ಅನುಷ್ಠಾನಗೊಳಿಸಿದ ಆಯೋಗ ಸ್ಕೀಮ್ 'ಬಿ' ಅನುಷ್ಠಾನಕ್ಕೆ ಜಲಾನಯನ ಪ್ರದೇಶದ ರಾಜ್ಯಗಳು ಸಹಮತದೊಡನೆ ಕೃಷ್ಣಾ ಕಣಿವೆ ಪ್ರಾಧಿಕಾರವನ್ನು ರಚಿಸಬಹುದೆಂದು ತಿಳಿಸಿತು. ಆದರೆ ಅದನ್ನು ನೋಟಿಫೈ ಮಾಡಲಿಲ್ಲ– ಇದು ರಾಜ್ಯಕ್ಕೆ ಆದ ಮೂರನೇ ಅನ್ಯಾಯ. ಈ ಅನ್ಯಾಯಗಳ ಸರಮಾಲೆ ವಿರುದ್ಧ ದಿಟ್ಟ ಪ್ರತಿರೋಧವನ್ನು ಕರ್ನಾಟಕ ಒಡ್ಡಲೇ ಇಲ್ಲ.

ಮೂರು ರಾಜ್ಯಗಳಿಗೆ ನಿಗದಿಗೊಳಿಸಲಾದ 2060 ಟಿಎಂಸಿಗಿಂತ ಹೊರತಾದ ನೀರನ್ನು ನದಿ ಕಣಿವೆ ರಾಜ್ಯಗಳು ತಾತ್ಕಾಲಿಕ ನೆಲೆಯಲ್ಲಿ ಬಳಸಿಕೊಳ್ಳಬಹುದು. ಆದರೆ ಅದರ ಮೇಲೆ ಶಾಶ್ವತ ಹಕ್ಕು ಸ್ಥಾಪನೆ ಮಾಡುವಂತಿಲ್ಲ ಎಂದು ಆಯೋಗ ಸ್ಪಷ್ಟವಾಗಿ ಹೇಳಿದೆ. ಆದರೆ ಐತೀರ್ಪಿನ ನ್ಯೂನತೆಗಳನ್ನು ಬಳಸಿಕೊಂಡ ಆಂಧ್ರಪ್ರದೇಶ ಹೆಚ್ಚುವರಿ 330 ಟಿಎಂಸಿ ನೀರನ್ನು ಬಳಸಿಕೊಂಡು ಸಾಲುಸಾಲಾಗಿ ಯೋಜನೆಗಳ ನಿರ್ಮಾಣಕ್ಕೆ ತೊಡಗಿದೆ.

ಇದರ ವಿರುದ್ಧ ಸುಪ್ರೀಮ್ ಕೋರ್ಟ್‌ಗೆ ಮೊರೆ ಹೋದರೂ ರಾಜ್ಯಕ್ಕೆ ನಿರೀಕ್ಷಿತ ಪರಿಹಾರ ಸಿಗಲಿಲ್ಲ. ಸ್ಕೀಮ್ 'ಬಿ'ಯನ್ನು ನೋಟಿಫೈ ಮಾಡಬೇಕು ಮತ್ತು ಆಂಧ್ರ ಪ್ರದೇಶ ಅನುವಾಗಿ ನಿರ್ಮಿಸುತ್ತಿರುವ ಯೋಜನೆ ಪಡೆಯಬೇಕು. ಎಂಬ ರಾಜ್ಯದ ಪೂರ್ಣಪ್ರಮಾಣದ ....ಮುಂದಾದಾಗ ಕೇಂದ್ರ ಸರ್ಕಾರ ವಿವೇಚನಾಧಿಕಾರವನ್ನು ಬಳಸಿಕೊಂಡು ಅದನ್ನು ತಡೆಯಬೇಕು ಎಂದು ಸುಪ್ರೀಂ ಕೋರ್ಟ್ 2000ನೇ ಏಪ್ರಿಲ್ ನಾಲ್ಕರಂದು ನೀಡಿದ ತೀರ್ಪಿನಲ್ಲಿ ಹೇಳಿತ್ತು.

ಕೃಷ್ಣಾ ಕಣಿವೆಯಲ್ಲಿ ಆಂಧ್ರಪ್ರದೇಶದಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಈಗ ಬೊಬ್ಬಿಯಿಡುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವೇ ಆಗ ಕೇಂದ್ರದಲ್ಲಿ ಅಧಿಕಾರದಲ್ಲಿತ್ತು. ಆದರೆ ಅದು ತನ್ನ ವಿವೇಚನಾಧಿಕಾರವನ್ನು ಬಳಸಿಕೊಂಡು ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯವನ್ನು ತಡೆಯಲು ಹೋಗಲಿಲ್ಲ. ತೆಲುಗುದೇಶಂ ಬೆಂಬಲದ ಬಲದಿಂದ ಅಸ್ತಿತ್ವದಲ್ಲಿದ್ದ ಎನ್‌ಡಿಎ ಕೊನೆವರೆಗೂ ಆಂಧ್ರಪ್ರದೇಶದಿಂದಾಗುತ್ತಿದ್ದ ಅನ್ಯಾಯಕ್ಕೆ ಕುರುಡಾಗಿಯೇ ಉಳಿಯಿತು.

ಕೇಂದ್ರ ಜಲ ಆಯೋಗ, ಪರಿಸರ ಇಲಾಖೆ, ಯೋಜನಾ ಆಯೋಗಗಳ ಅನುಮತಿ ಇಲ್ಲದೆ ಆಂಧ್ರಪ್ರದೇಶ ತೆಲುಗು ಗಂಗಾ, ಭೀಮಾ ಏತ ನೀರಾವರಿ, ಶ್ರೀಶೈಲಂ ಎಡ–ಬಲ

ಮತ್ತು ಪುಲಚಿಂತಲ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಿದೆ. ಇದರ ವಿರುದ್ಧ ಕರ್ನಾಟಕ ಸಲ್ಲಿಸಿದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಹೊಸ ನ್ಯಾಯಮಂಡಳಿ ರಚಿಸಲು ಎರಡೂ ರಾಜ್ಯಗಳು ಕೇಂದ್ರ ಸರ್ಕಾರವನ್ನು ಕೋರಬಹುದೆಂದು ತಿಳಿಸಿತು. ಜವಾಬ್ದಾರಿಯಿಂದ ಜಾರಿಕೊಳ್ಳಲು ಹವಣಿಸುತ್ತಿದ್ದ ಕೇಂದ್ರ ಸರ್ಕಾರ ತಕ್ಷಣ ಓಗೊಟ್ಟು ಎರಡನೇ ಕೃಷ್ಣ ಜಲವಿವಾದ ನ್ಯಾಯ ಮಂಡಳಿಯನ್ನು ನೇಮಿಸಿದೆ.

ಅಂತರರಾಜ್ಯ ನದಿ ವಿವಾದ ಕಾಯಿದೆಯ ಹೊಸ ನಿಯಮಾವಳಿ ಪ್ರಕಾರ ಕಳೆದ ವರ್ಷದ ಏಪ್ರಿಲ್‌ನಲ್ಲಿ ಅಸ್ತಿತ್ವಕ್ಕೆ ಬಂದ ಮೊದಲ ನ್ಯಾಯಮಂಡಳಿ ಇದು. ನಿಯಮಾವಳಿ ಪ್ರಕಾರ ಇದು ಮೂರು ವರ್ಷಗಳ ಅವಧಿಯಲ್ಲಿ ತನ್ನ ಕೆಲಸ ಮುಗಿಸಬೇಕಾಗಿದೆ. ಆದರೆ ನ್ಯಾಯಮೂರ್ತಿಗಳ ನೇಮಕ, ಕಚೇರಿ ಮತ್ತು ಕಲಾಪ ಸಭಾಂಗಣಕ್ಕೆ ಕಟ್ಟಡ, ನ್ಯಾಯಮೂರ್ತಿಗಳಿಗೆ ವಸತಿ-ಇಷ್ಟರಲ್ಲಿಯೇ ಒಂದು ವರ್ಷ ಕಳೆದುಹೋಗಿದೆ.

ನ್ಯಾಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಒಂದು ಬಾರಿ ಸಭೆ ಸೇರಿ ಪರಸ್ಪರ ಸಮಾಲೋಚನೆ ನಡೆಸಿದ್ದಾರೆ. ನದಿ ಕಣಿವೆಯ ಮೂರು ರಾಜ್ಯಗಳಿಗೆ ಇನ್ನೂ ನೋಟೀಸ್ ಜಾರಿಗೊಳಿಸಿಲ್ಲ. ನ್ಯಾಯ ಮಂಡಳಿ ಶೀಘ್ರವಾಗಿ ಕಾರ್ಯಾರಂಭಿಸುವಂತೆ ರಾಜ್ಯಗಳು ಅರ್ಜಿ ಸಲ್ಲಿಸಲು ಅವಕಾಶ ಇದೆ. ಆದರೆ ಯಾವ ರಾಜ್ಯವೂ ಅದನ್ನು ಮಾಡಿಲ್ಲ. ಅನ್ಯಾಯದ ಪಾಲನ್ನು ಅನುಭವಿಸುತ್ತಿರುವ ಆಂಧ್ರಪ್ರದೇಶದ ನಿಶ್ಚಿಂತೆಯ ಧೋರಣೆ ಅರ್ಥವಾಗುವಂತಹದ್ದು. ಆದರೆ ಅನ್ಯಾಯಕ್ಕೀಡಾಗಿರುವ ಕರ್ನಾಟಕದ ಮೌನ ಮಾತ್ರ ಅರ್ಥವಾಗುವಂತಹದ್ದಲ್ಲ.

ಕೃಷ್ಣೆ ಮತ್ತು ಗೋದಾವರಿಯಲ್ಲಿ ಕರ್ನಾಟಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಲು ರಾಜ್ಯದ ಇಡೀ ಬಿಜೆಪಿ ಆಂತರಿಕ ಭಿನ್ನಮತ ಮರೆತು ಒಂದಾಗಿ ಎದ್ದು ನಿಂತಿದೆ. ಆದರೆ 'ರಾಜ್ಯಕ್ಕೆ ಸೇರಿದ' ಒಬ್ಬ ನಾಯಕನ ದನಿ ಮಾತ್ರ ಇಲ್ಲಿಯ ವರೆಗೂ ಕೇಳಿಲ್ಲ.

ಬಾಬಾಬುಡನ್‌ಗಿರಿ-ತಿರಂಗಾ ಯಾತ್ರೆಯಂಥ ವಿವಾದಗಳ ಸಂದರ್ಭದಲ್ಲಿ ರಾಜ್ಯದಲ್ಲಿ ವಿವಾದಗಳ ಸಂದರ್ಭದಲ್ಲಿ ರಾಜ್ಯದಲ್ಲಿ ಕಾಣಿಸಿಕೊಳ್ಳುವ ಈ ನಾಯಕ ಕರ್ನಾಟಕಕ್ಕೆ ಆಂಧ್ರಪ್ರದೇಶದಿಂದ ಆಗುವ ಅನ್ಯಾಯ ಸುದ್ದಿಯಾಗುತ್ತಿದ್ದಂತೆಯೇ ತೆರೆಮರೆಗೆ ಸರಿದುಬಿಡುತ್ತಾರೆ. ಈ ನಾಯಕನನ್ನು ರಾಜ್ಯಸಭೆಗೆ ಆರಿಸಿ ಕಳುಹಿಸಿದ ರಾಜ್ಯದ ಬಿಜೆಪಿ ಶಾಸಕರಿಗೂ ಅವರ ಉದ್ದೇಶ ತಿಳಿದಹಾಗಿಲ್ಲ.

O

ಕತ್ತಿ ಇನ್ನೂ ನೆತ್ತಿ ಮೇಲೆ

ಕೃಷ್ಣಾ ಎರಡನೇ ನ್ಯಾಯಮಂಡಳಿಯ ಅವಧಿ ಮುಗಿಯುವುದರೊಳಗಾಗಿ ಯಾದರು ಸ್ಕೀಮ್ 'ಎ'ನಲ್ಲಿ ನಿಗದಿತ 700 ಟಿಎಂಸಿ ನೀರನ್ನು ಬಳಸಿಕೊಳ್ಳಲು ಕರ್ನಾಟಕಕ್ಕೆ ಸಾಧ್ಯವಾಗಬಹುದೇ? ವಿಸ್ತರಣೆಯ ಅವಧಿ ಸೇರಿಸಿಕೊಂಡರೂ ಉಳಿದಿರುವುದು ಮೂರು ಮುಕ್ಕಾಲು ವರ್ಷ ಮಾತ್ರ. ಯೋಜನೆಗಳ ಪ್ರಗತಿ ಈಗಿನ ಗತಿಯಲ್ಲಿಯೇ ಮುಂದುವರಿದರೆ ನ್ಯಾಯಮಂಡಳಿ ಕೂಡಾ ಅಸಹಾಯಕವಾಗಬಹುದು. ಸ್ಕೀಮ್ 'ಬಿ'ಯ ನೀರು ಆಂಧ್ರಪ್ರದೇಶದ ಪಾಲಾಗಬಹುದು.

ಆಲಮಟ್ಟಿ ಅಣೆಕಟ್ಟಿನ ಎತ್ತರ ಅಬಾಧಿತ. ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಎರಡನೇ ಕೃಷ್ಣಾ ನ್ಯಾಯಮಂಡಳಿ ಕೂಡಾ ಎತ್ತಿ ಹಿಡಿದಿದೆ. ಸಾಂಗ್ಲಿಯಲ್ಲಿಯನ ನೆರೆ ಪರಿಸ್ಥಿತಿಗೆ ಆಲಮಟ್ಟಿ ಅಣೆಕಟ್ಟಿನ ಎತ್ತರ ಕಾರಣ ಎಂಬ ಮಹಾರಾಷ್ಟ್ರದ ಮೊಂಡುವಾದ ಕೂಡಾ ಮುರಿದುಬಿದ್ದಿದೆ. ತುಂಗಾಭದ್ರಾ ಕಣಿವೆಯಲ್ಲಿನ ಕರ್ನಾಟಕದ ಯೋಜನೆಗಳನ್ನು ತಡೆಯುವವರು ಈಗ ಯಾರೂ ಇಲ್ಲ. ಆದರೆ ಆಂಧ್ರಪ್ರದೇಶದ ಅಕ್ರಮ ನೀರಾವರಿ ಯೋಜನೆಗಳನ್ನು ತಡೆಯಬೇಕೆಂಬ ಕರ್ನಾಟಕದ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ. ಉಳಿದಿರುವುದು ಇದೊಂದೇ ಕೊರಗು. ಕತ್ತಿ ಇನ್ನೂ ನೆತ್ತಿ ಮೇಲೆ ತೂಗುತ್ತಿದೆ. ಅದು ಸರಿದುಹೋಗಿಲ್ಲ.

ಈ ಹಿನ್ನಡೆಗೆ ಏನು ಕಾರಣ? ಆಂಧ್ರಪ್ರದೇಶದ ನೀರಾವರಿ ಯೋಜನೆಗಳು ಅಕ್ರಮ ಎನ್ನುವ ಆರೋಪವೇ ಸುಳ್ಳಿರಬಹುದೇ. ಇಲ್ಲವೇ ಅ ರಾಜ್ಯದ ದುರುದ್ದೇಶವನ್ನು ಬಯಲುಗೊಳಿಸಲು ಕರ್ನಾಟಕದ ವಕೀಲರ ತಂಡ ಸೋತುಹೋಯಿತೇ? ಇವೆರಡೂ ಕಾರಣ ಅಲ್ಲ ಎಂದು ಐತೀರ್ಪಿನಲ್ಲಿನ ಕೆಲವು ಸಾಲುಗಳೇ ಹೇಳುತ್ತಿದೆ.

ಕೃಷ್ಣಾ ಕಣಿವೆಯು ಇತರ ರಾಜ್ಯಗಳಿಗೆ ಹೋಲಿಕೆಯಲ್ಲಿ ಕರ್ನಾಟಕದ ಜನಸಂಖ್ಯೆಯೇ ಹೆಚ್ಚು. ಆಂಧ್ರಪ್ರದೇಶದ ನೀರಿನ ಕೊರತೆ ಇರುವ ಪ್ರದೇಶ 1929 ಚದರ ಮೈಲುಗಳಾದರೆ ಕರ್ನಾಟಕದಲ್ಲಿ ಅದು 6113 ಚದರ ಮೈಲು. ಕೃಷ್ಣಾ ಕಣಿವೆಗೆ ಕರ್ನಾಟಕದ ಕೊಡುಗೆ 769 ಟಿಎಂಸಿಗಳಾದರೆ ಆಂಧ್ರಪ್ರದೇಶದ ಕೊಡುಗೆ 336.6 ಟಿಎಂಸಿ–ಹೀಗಿದ್ದರೂ ಬಚಾವತ್ ನ್ಯಾಯ ಮಂಡಳಿ ಆಂಧ್ರಪ್ರದೇಶಕ್ಕೆ ಹೆಚ್ಚು ನೀರಿನ ಪಾಲನ್ನು ನಿಗದಿಗೊಳಿಸಿತು.....

ಸ್ಕೀಮ್ 'ಬಿ' ಒಂದು ಉತ್ತಮ ಯೋಜನೆ ಆದರೆ ಅದರ ಅನುಷ್ಠಾನಕ್ಕೆ 'ಕೃಷ್ಣಾ ಕಣಿವೆ ಪ್ರಾಧಿಕಾರ' ರಚಿಸುವುದನ್ನು ಆಂಧ್ರಪ್ರದೇಶ ಒಪ್ಪಲಿಲ್ಲ. ಹೆಚ್ಚುವರಿ ನೀರು ವ್ಯರ್ಥವಾಗಿ ಸಮುದ್ರಕ್ಕೆ ಹರಿದುಹೋಗಲಿದೆ ಎಂಬ ಕಾರಣಕ್ಕಾಗಿ ಸ್ಕೀಮ್ 'ಬಿ' ಯ ನೀರನ್ನು ಬಳಸಿಕೊಳ್ಳುವ ಅವಕಾಶವನ್ನು ತಮಗೆ ನೀಡಬಹುದು ಎಂಬ ಕಾರಣಕ್ಕಾಗಿಯೇ ಆ ರಾಜ್ಯ, ಪ್ರಾಧಿಕಾರ ರಚನೆಯನ್ನು ವಿರೋಧಿಸಿತು. ತಮಗೆ ನಿಗದಿಪಡಿಸಿದ ಪಾಲಿಗಿಂತ ಹೆಚ್ಚಿನ ನೀರನ್ನು ಬಳಸಿಕೊಳ್ಳಬಾರದೆಂದು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಆದೇಶಿಸಿದ್ದ ನ್ಯಾಯಮಂಡಳಿ ಶಾಶ್ವತ ಹಕ್ಕು ಸ್ಥಾಪಿಸಬಾರದೆಂಬ ಷರತ್ತಿನ ಮೇಲೆ ಹೆಚ್ಚುವರಿ ನೀರು ಬಳಸುವ ಅವಕಾಶವನ್ನು ಆಂಧ್ರಪ್ರದೇಶಕ್ಕೆ ನೀಡಿತು....

'ಆಂಧ್ರಪ್ರದೇಶದ ಈ ಎಲ್ಲಾ (ಹಿಂದೆ ಉಲ್ಲೇಖಿಸಿರುವ) ನಡವಳಿಕೆಗಳನ್ನು ಗಮನಿಸಿದರೆ, ಆ ರಾಜ್ಯದ ಉದ್ದೇಶದ ಬಗ್ಗೆ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಸಂಶಯಪಡಲು ಕಾರಣಗಳು ಇಲ್ಲ ಎನ್ನುವ ಹಾಗಿಲ್ಲ' ಎಂದು ನ್ಯಾಯಮೂರ್ತಿ ಬೃಜೇಶ್ ಕುಮಾರ್ ಖುದ್ದಾಗಿ ಬರೆದಿದ್ದಾರೆ. ಇಂತಹ ಅಭಿಪ್ರಾಯಕ್ಕೆ ಬಂದ ನಂತರವು ಆ ರಾಜ್ಯದ ಅಕ್ರಮ ಯೋಜನೆಗಳನ್ನು ತಡೆಯಲು ನ್ಯಾಯಮಂಡಳಿ ಯಾಕೆ ಮುಂದಾಗಿಲ್ಲ? ಇದಕ್ಕೆ ಕಾರಣವನ್ನು ವಿಧಾನಸೌಧದಲ್ಲಿ ಕುಳಿತಿರುವವರನ್ನು ಕೇಳಬೇಕು.

ಬಚಾವತ್ ನ್ಯಾಯಮಂಡಳಿ ಕೃಷ್ಣಾ ನದಿಯಲ್ಲಿ ಲಭ್ಯ ಇರುವ ನೀರನ್ನು ಎರಡು ಭಾಗಗಳಾಗಿ ವಿಂಗಡಿಸಿ ಐತೀರ್ಪು ನೀಡಿತ್ತು. ಸ್ಕೀಮ್ 'ಎ'ನಲ್ಲಿ ಲಭ್ಯ ಇದ್ದ 2060 ಟಿಎಂಸಿ ನೀರಿನಲ್ಲಿ ಆಂಧ್ರಪ್ರದೇಶಕ್ಕೆ 800, ಕರ್ನಾಟಕಕ್ಕೆ 700 ಮತ್ತು ಮಹಾರಾಷ್ಟ್ರಕ್ಕೆ 560 ಉಳಿದಿರುವ 517 ಟಿಎಂಸಿ ನೀರನ್ನು 'ಸ್ಕೀಮ್ ಬಿ ಯಲ್ಲಿ ಸೇರಿಸಿದ್ದ ನ್ಯಾಯಮಂಡಳಿ ಅದನ್ನು ಹಂಚಿಕೆ ಮಾಡಿರಲಿಲ್ಲ. ಆ ಬಗ್ಗೆ ಅಧಿಸೂಚನೆ ಹೊರಡಿಸಬೇಕೆಂಬ ಕರ್ನಾಟಕದ ಪ್ರಯತ್ನ ಆಂಧ್ರದ ಅಡ್ಡಗಾಲಿನಿಂದ ಸಾಧ್ಯವಾಗಿರಲಿಲ.

ನೀರಿನ ಪಾಲನ್ನು 200ನೇ ಮಾರ್ಚ್ 31ರ ನಂತರ ಪುನರ್‌ಪರಿಶೀಲಿಸಿ ಸ್ಕೀಮ್ 'ಬಿ' ಯ ನೀರನ್ನು ಹಂಚಿಕೊಳ್ಳಬಹುದು ಎಂದು ಕೂಡಾ ನ್ಯಾಯಮಂಡಳಿ ಹೇಳಿತ್ತು. ಬಚಾವತ್ ಐತೀರ್ಪು ಹೊರಬೀಳುವಷ್ಟರಲ್ಲಿಯೇ ಸ್ಕೀಮ್ 'ಎ'ನ 800 ಟಿಎಂಸಿ ನೀರನ್ನು ಬಳಸಿಕೊಂಡಿದ್ದ ಆಂಧ್ರಪ್ರದೇಶ ಆಗಲೇ ಸ್ಕೀಮ್ 'ಬಿ' ಮೇಲೆ ಕಣ್ಣಿಟ್ಟು ಯೋಜನೆಗಳನ್ನು ನಿರ್ಮಿಸತೊಡಗಿತ್ತು. ನಿರ್ಮಾಣ ಹಂತದಲ್ಲಿರುವ ಯೋಜನೆಗಳ ನೀರಿನ ಅವಶ್ಯಕತೆಯನ್ನು ಪೂರೈಸಬೇಕೆಂಬ ಬೇಡಿಕೆಯ ಆಧಾರದಲ್ಲಿಯೇ ಅದು ಸ್ಕೀಮ್ 'ಎ'ಯಲ್ಲಿ 800 ಟಿಎಂಸಿ ನೀರಿನ ಪಾಲು ಪಡೆದದ್ದು.

ಈಗ ಅದೇ ಕಾರ್ಯತಂತ್ರವನ್ನು ಸ್ಕೀಮ್ 'ಬಿ'ಯಲ್ಲೂ ಮಾಡತೊಡಗಿದೆ. ಇದರಲ್ಲಿ ಲಭ್ಯ ಇರುವ ಹೆಚ್ಚುವರಿ ನೀರಿನ ಪ್ರಮಾಣ ಸುಮಾರು 517 ಟಿಎಂಸಿ. ಆಂಧ್ರಪ್ರದೇಶ ಅಕ್ರಮ ಯೋಜನೆಗಳ ಮೂಲಕ ಬಳಸಲು ಹೊರಟಿರುವುದು 346 ಟಿಎಂಸಿ. ಅದನ್ನು ಕಳೆದುಕೊಂಡ ಮೇಲೆ ಕರ್ನಾಟಕಕ್ಕೆ ಉಳಿಯುವುದೆಷ್ಟು? ಬಚಾವತ್ ನ್ಯಾಯಮಂಡಳಿಯ ಪ್ರಕಾರ ಹೆಚ್ಚುವರಿ ನೀರಿನಲ್ಲಿ ಅರ್ಧಭಾಗ ಕರ್ನಾಟಕಕ್ಕೆ ಸೇರಿದ್ದು. ಉಳಿದರ್ಧದಲ್ಲಿ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಕ್ಕೆ ಸಮಪಾಲು. ಅದರಂತೆ 258.50 ಟಿಎಂಸಿ ಕರ್ನಾಟಕಕ್ಕೆ, ತಲಾ 129.50 ಟಿಎಂಸಿ ಉಳಿದೆರಡು ರಾಜ್ಯಗಳಿಗೆ. ಈ ಎಲ್ಲ 'ಅಕ್ರಮ' ಯೋಜನೆಗಳನ್ನು ನೀರು ಅನುಭೋಗದ ಹಕ್ಕು ಇಲ್ಲವೇ ಮಾನವೀಯತೆಯ ದೃಷ್ಟಿಯಿಂದ 'ಸಕ್ರಮ' ಎಂದು ಘೋಷಿಸಲು ಆಂಧ್ರಪ್ರದೇಶ ಮುಂದೊಂದು ದಿನ ಈಗಿನ ನ್ಯಾಯಮಂಡಳಿಯ ಮುಂದೆ ಮೊರೆ ಇಡಬಹುದು. ಅದನ್ನು ಎದುರಿಸಲು ಕರ್ನಾಟಕದಲ್ಲಿ ಸಿದ್ಧತೆ ನಡೆದಿದೆಯೇ?

ಕರ್ನಾಟಕದ ಪರಿಸ್ಥಿ ಇದಕ್ಕೆ ತದ್ವಿರುದ್ಧ. 33 ವರ್ಷಗಳಾದರೂ ಕರ್ನಾಟಕಕ್ಕೆ ಸ್ಕೀಮ್ 'ಎ' ಪಾಲನ್ನೇ ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ ಕಳೆದ ಏಪ್ರಿಲ್ ಅಂತ್ಯದವರೆಗಿನ ಅಧಿಕೃತ ಮಾಹಿತಿ ಪ್ರಕಾರ ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳು, ಶಹಪುರ, ಮುಡಬಾಲ ಮತ್ತು ಇಂಡಿ ಶಾಖಾ ಕಾಲುವೆಗಳು ಹಾಗೂ ನಾರಾಯಣಪುರ ಎಡದಂಡೆ ಕಾಲುವೆಗಳಷ್ಟೇ ಪೂರ್ಣಗೊಂಡಿರುವ ಯೋಜನೆಗಳು. ಜೇವರ್ಗಿ ಶಾಖಾ ಕಾಲುವೆ, ನಾರಾಯಣಪುರ ಬಲದಂಡೆ ಕಾಲುವೆ, ಆಲಮಟ್ಟಿ ಬಲ ಮತ್ತು ಎಡದಂಡೆ ಕಾಲುವೆಗಳು, ಮುಳವಾಡ, ರಾಮಾಪುರ ಮತ್ತು ಇಂಡಿ ಏತ ನೀರಾವರಿ ಯೋಜನೆಗಳು ನಿರ್ಮಾಣ ಹಂತದಲ್ಲಿವೆ.

ಅಂತರರಾಜ್ಯ ಜಲವಿವಾದ ಕಾಯಿದೆಗೆ ಮಾಡಲಾಗಿರುವ ತಿದ್ದುಪಡಿ ಪ್ರಕಾರ ನ್ಯಾಯ ಮಂಡಳಿಯ ಅವಧಿ ಮೂರು ವರ್ಷಗಳು ಮಾತ್ರ. ಅದರ ನಂತರ ಅಗತ್ಯಬಿದ್ದರೆ ಕೇವಲ ಎರಡು ವರ್ಷಗಳ ವಿಸ್ತರಣೆ ಪಡೆದುಕೊಳ್ಳಬಹುದು. ಎರಡನೇ ಕೃಷ್ಣಾ ನ್ಯಾಯ ಮಂಡಳಿ ಈಗಾಗಲೆ ಒಂದು ವರ್ಷ ಪೂರ್ಣಗೊಳಿಸಿದೆ. ವಿಸ್ತರಣೆಯ ಅವಧಿಯನ್ನೂ ಸೇರಿಸಿಕೊಂಡರೆ ಉಳಿದಿರುವುದು ನಾಲ್ಕು ವರ್ಷಗಳಿಗೂ ಕಡಿಮೆ ಅವಧಿ. ಈ ಅವಧಿಯಲ್ಲಿ ಸ್ಕೀಮ್ 'ಎ' ಪಾಲಿನ 700 ಟಿಎಂಸಿ ನೀರನ್ನು ಪೂರ್ಣವಾಗಿ ಬಳಸಿಕೊಂಡಿದೇವೆ ಎಂದು

ನ್ಯಾಯ ಮಂಡಳಿಯ ಮುಂದೆ ಹೇಳಲು ಕರ್ನಾಟಕಕ್ಕೆ ಸಾಧ್ಯವಾಗಬಹುದೇ? ಈ ಸತ್ಯವನ್ನು ರಾಜ್ಯಕ್ಕೆ ಹೇಳಲು ಸಾಧ್ಯವಾಗದಿದ್ದರೆ ಆಂಧ್ರದ ಸುಳ್ಳಿಗೆ ಮಾನ್ಯತೆ ಸಿಕ್ಕರೂ ಸಿಗಬಹುದು.

ಕೃಷ್ಣಾ ನ್ಯಾಯ ಮಂಡಳಿಯ ಮಧ್ಯಂತರ ಐತೀರ್ಪಿನಲ್ಲಿನ ಸಣ್ಣ ಗೆಲುವಿನ ಒಂದು ಸಣ್ಣ ಭಾಗ ರಾಜ್ಯದ ಜೆಡಿ(ಎಸ್)–ಬಿಜೆಪಿ ಮೈತ್ರಿಕೂಟ ಸರ್ಕಾರಕ್ಕೂ ಸಲ್ಲಬೇಕು. ಆದರೆ ಅನಗತ್ಯ ವಿವಾದದ ಕೆಸರಲ್ಲಿ ಉರುಳಾಡುತ್ತಿರುವ ನಾಯಕರಿಗೆ ಆ ಕಡೆ ಗಮನ ಕೊಡಲು ಪುರುಸೊತ್ತಿಲ್ಲ. ಒಂದು ಹಂತದಲ್ಲಿ ಕರ್ನಾಟಕವನ್ನು ನ್ಯಾಯ ಮಂಡಳಿಯಲ್ಲಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲ ಎಫ್.ಎಸ್. ನಾರಿಮನ್ ಮತ್ತು ಅಡ್ವಕೇಟ್ ಜನರಲ್ ಆರ್.ಎನ್. ನರಸಿಂಹಮೂರ್ತಿ ಅವರ ನಡುವೆ ಯಾರನ್ನು ಉಳಿಸಿಕೊಳ್ಳಬೇಕೆಂಬ ಸಂದಿಗ್ಧತೆಯಲ್ಲಿ ರಾಜ್ಯ ಸರ್ಕಾರ ಸಿಕ್ಕಿಹಾಕಿಕೊಂಡಿತ್ತು. ಕೊನೆಗೂ ತಕ್ಕಡಿ ವಾಲಿದ್ದು ನಾರಿಮನ್ ಕಡೆ.

ಆಂಧ್ರದ ಅಕ್ರಮ ಯೋಜನೆಗಳನ್ನು ತಡೆಯಲು ಸಾಧ್ಯವಾಗದೆ ಹೋಗಿರಬಹುದು. ಆದರೆ ನಾರಿಮನ್ ಅವರು ಕರ್ನಾಟಕ ಮೊದಲಿನಿಂದಲೂ ವಿರೋಧಿಸುತ್ತಾ ಬಂದ ಹನ್ನೊಂದು ಯೋಜನೆಗಳ ಬದಲಿಗೆ ಕೇವಲ ಐದು ಯೋಜನೆಗಳನ್ನಷ್ಟೇ ನ್ಯಾಯ ಮಂಡಳಿಯಲ್ಲಿ ವಿರೋಧಿಸಿ ಆಶ್ಚರ್ಯಹುಟ್ಟಿಸಿದರು. ಉಳಿದೆರಡು ರಾಜ್ಯಗಳಿಗೆ ಹೋಲಿಸಿದರೆ ಅವರ ವಾದ ಸಂಕ್ಷಿಪ್ತ ಮತ್ತು ಸಂಯಮಭರಿತವಾಗಿತ್ತು. ಕರ್ನಾಟಕ ಎಂದರೆ 'ಜಗಳಗಂಟ', 'ಆಸೆಬುರುಕ', 'ಸ್ವಾರ್ಥಿ' ರಾಜ್ಯ ಎಂಬ ಅಪಪ್ರಚಾರವನ್ನು ಈ ಬದಲಾದ ನಿಲುವು ಸ್ವಲ್ಪಮಟ್ಟಿಗೆ ಬದಲಾಯಿಸಿದ್ದು ನಿಜ. ಕರ್ನಾಟಕದ ಬಗ್ಗೆ ಎಲ್ಲಿಯೂ ಕಟುಮಾತುಗಳಿಲ್ಲದ ಮಧ್ಯಂತರ ಐತೀರ್ಪು ನೋಡಿದಾಗ ನಾರಿಮನ್ ಪ್ರಭಾವ ನ್ಯಾಯಮಂಡಳಿ ಮೇಲೆ ಆದಂತಿದೆ.

○

ಅಕ್ರಮ ಯೋಜನೆ

ಕರ್ನಾಟಕ 'ಅಕ್ರಮ' ಎಂದು ಆರೋಪಿಸುತ್ತಿರುವ ಆಂಧ್ರಪ್ರದೇಶದ ಶ್ರೀಶೈಲಂ ಬಲದಂಡೆ ಕಾಲುವೆ ಯೋಜನೆಗೆ ಬಂಡವಾಳ ಹೂಡಿಕೆಯ ಅನುಮತಿ ಕೇಂದ್ರ ಯೋಜನಾ ಆಯೋಗ ನೀಡಿದ್ದು ಪ್ರಧಾನಿ ಇಂದಿರಾಗಾಂಧಿಯವರ ಕಾಲದಲ್ಲಿ. ಉಳಿದೆರಡು 'ಅಕ್ರಮ' ಯೋಜನೆಗಳಾದ ಪುಲಿಂಚಿತಲ ಮತ್ತು ಭೀಮಾ ಏತ ನೀರಾವರಿ ಯೋಜನೆಗಳಿಗೆ ಕೇಂದ್ರ ಜಲಸಂಪನ್ಮೂಲ ಇಲಾಖೆಯ ಸಲಹಾ ಸಮಿತಿ ಒಪ್ಪಿಗೆ ನೀಡಿದ್ದು ಪ್ರಧಾನಿ ನರಸಿಂಹರಾವ್ ಕಾಲದಲ್ಲಿ.

ಈ ಐದೂ 'ಅಕ್ರಮ' ಯೋಜನೆಗಳಿಗೆ ಅಂಧ್ರಪ್ರದೇಶ 'ಉಳಿತಾಯದ ನೀರು' ಬಳಸುತ್ತಿದೆಯೇ ಹೊರತು ಕರ್ನಾಟಕ ಆರೋಪಿಸುವಂತೆ ಕೃಷ್ಣಾ ನದಿಯ 'ಹೆಚ್ಚುವರಿ ನೀರು' ಬಳಸುತ್ತಿಲ್ಲ ಎಂಬ ಸರ್ಟಿಫಿಕೇಟ್ ನೀಡಿ ಕರ್ನಾಟಕದ ಬಾಯಿ ಮುಚ್ಚಿಸಿದ್ದು ಪ್ರಧಾನಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ.

ಕದಡಿದ ಕೃಷ್ಣೆಯ ನೀರನ್ನು ಬಳಸಿಕೊಂಡು ರಾಜಕೀಯ ಲಾಭದ ಬೆಳೆ ತೆಗೆಯಲು ಹವಣಿಸುತ್ತಿರುವ ಕಾಂಗ್ರೆಸ್ ಮತ್ತು ಬಿಜೆಪಿ ಅನುಸರಿಸಿಕೊಂಡು ಬಂದ 'ಅನೂಕೂಲ ಶಾಸ್ತ್ರ'ದ ಧೋರಣೆಯನ್ನು ಎನ್‌ಡಿಎ ಆಡಳಿತದ ಕಾಲದಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಅರ್ಜುನ್ ಚರಣ್ ಸೇಠಿ ಅವರ ಪತ್ರವೇ ಬಯಲುಗೊಳಿಸುತ್ತದೆ. 'ಪ್ರಜಾವಾಣಿ' ಕೈಯಲ್ಲಿರುವ ಈ ಪತ್ರವನ್ನು ಸೇಠಿ ಅವರು ಆಗಿನ ಮುಖ್ಯಮಂತ್ರಿ

ಎಸ್.ಎಂ. ಕೃಷ್ಣ ಅವರ ಆಕ್ಷೇಪಕ್ಕೆ ಪ್ರತ್ಯುತ್ತರದ ರೂಪದಲ್ಲಿ ಬರೆದಿದ್ದರು. (ದಿನಾಂಕ : 20.2.2001). ಇದೇ ಅಭಿಪ್ರಾಯವನ್ನು ಸಚಿವ ಸೇಠಿ ಅವರು ರಾಜ್ಯಸಭೆಯಲ್ಲಿ ನೀಡಿದ ಉತ್ತರದಲ್ಲಿ (21.8.2001) ಕೂಡಾ ಪುನರುಚ್ಚರಿಸಿದ್ದರು.

ಸೇಠಿ ಪತ್ರದ ಆಯ್ದ ಭಾಗಗಳು ಹೀಗಿವೆ : ಕೃಷ್ಣಾ ಕಣಿವೆಯ 19 ಟಿಎಂಸಿ ನೀರು ಬಳಸಿಕೊಳ್ಳುವ ಶ್ರೀಶೈಲಂ ಬಲದಂಡೆ ಕಾಲುವೆ ಯೋಜನೆಗೆ ಕೇಂದ್ರ ಯೋಜನಾ ಆಯೋಗ 1981ರ ಮೇ ನಲ್ಲಿ (ಆಗ ಅಧಿಕಾರದಲ್ಲಿದ್ದದ್ದು ಕಾಂಗ್ರೆಸ್) ಬಂಡವಾಳ ಹುಡಿಕೆಯ ಅನುಮತಿ ನೀಡಿದೆ. ಈ ಯೋಜನೆಯಲ್ಲಿ ಬಳಸಲು ಉದ್ದೇಶಿಸಲಾದ 19 ಟಿಎಂಸಿ ನೀರಿನಲ್ಲಿ 11 ಟಿಎಂಸಿ ಹಿಂದಿರುಗಿ ಹರಿವ ನೀರಿನಿಂದ ಸಂಗ್ರಹಿಸಿದ್ದು. ಈ ನೀರಿನ ಮೇಲೆ ಆಂಧ್ರಪ್ರದೇಶಕ್ಕೆ ಬಚಾವತ್ ಆಯೋಗವೇ ಅಧಿಕಾರ ನೀಡಿದೆ. ಉಳಿದ ಎಂಟು ಟಿಎಂಸಿ ನೀರನ್ನು ಕರ್ನೂಲ್-ಕಡಪ (ಕೆ.ಸಿ) ಕಾಲುವೆಯ ಆಧುನೀಕರಣದಿಂದ ಗಳಿಸಿದ್ದು. ಆಂಧ್ರಪ್ರದೇಶಕ್ಕೆ ನೀಡಲಾದ 800 ಟಿಎಂಸಿ ನೀರಿನ ಪಾಲಿನಲ್ಲಿ ಕೆ.ಸಿ.ಕಾಲುವೆ 39.9 ಟಿಎಂಸಿ ನೀರು ಬಳಸಿಕೊಳ್ಳಹುದು ಎಂದು ಬಚಾವತ್ ಆಯೋಗವೇ ಹೇಳಿದೆ. ಆದ್ದರಿಂದ ಆಂಧ್ರಪ್ರದೇಶ 'ಹೆಚ್ಚುವರಿ ನೀರು' ಬಳಸುತ್ತಿದೆ ಎನ್ನುವುದು ಸರಿಯಿಲ್ಲ.

ಉಳಿದೆರಡು ಯೋಜನೆಗಳ ಬಗ್ಗೆ ಸೇಠಿ ಸ್ಪಷ್ಟನೆ ಹೀಗಿದೆ: 'ಪುಲಿಂಚಿತಲ ಮತ್ತು ಭೀಮಾ ಏತ ನೀರಾವರಿ' ಯೋಜನೆಗಳಿಗೆ ಕ್ರಮವಾಗಿ 9 ಟಿಎಂಸಿ ಮತ್ತು 20 ಟಿಎಂಸಿ ನೀರನ್ನು ಬಳಸಿಕೊಳ್ಳಲು ಕೇಂದ್ರ ಜಲ ಆಯೋಗ ತಾಂತ್ರಿಕ-ಆರ್ಥಿಕ ಪರವಾನಿಗೆ ನೀಡಿದ ಆಧಾರದಲ್ಲಿ ಎರಡೂ ಯೋಜನೆಗಳಿಗೆ 1996 ರ ಏಪ್ರಿಲ್‌ನಲ್ಲಿ ಸಲಹಾ ಸಮಿತಿ (ಕೇಂದ್ರ ಜಲಸಂಪನ್ಮೂಲ) ಒಪ್ಪಿಗೆ ನೀಡಿದೆ. (ಆಗ ಅಧಿಕಾರದಲ್ಲಿದ್ದ ಪಕ್ಷ ಕಾಂಗ್ರೆಸ್).

ಇದಕ್ಕೆ ಬಳಸಲು ಉದ್ದೇಶಿಸಲಾದ ನೀರನ್ನು ಕೃಷ್ಣಾನದಿ ಮುಖಜ ಭೂಮಿಯ ಆಧುನೀಕರಣದ ಮೂಲಕ ಆಂಧ್ರಪ್ರದೇಶ ಗಳಿಸಿದೆ. ತನ್ನ 800 ಟಿಎಂಸಿ ನೀರಿನ ಪಾಲಿನಲ್ಲಿ ಕೃಷ್ಣಾನದಿ ಮುಖಜ ಭೂಮಿಗೆ 181.2 ಟಿಎಂಸಿ ನೀರು ಬಳಸಲು ಬಚಾವತ್ ಆಯೋಗ ಅನುಮತಿ ನೀಡಿದೆ. ಆದ್ದರಿಂದ ಈ ಯೋಜನೆಗಳು ಕೂಡ 'ಹೆಚ್ಚುವರಿ ನೀರು' ಬಳಸುತ್ತಿಲ್ಲ. ಆಂಧ್ರಪ್ರದೇಶ ಪರಿಸರ ಮತ್ತಿತರ ಇಲಾಖೆಗಳ ಪರವಾನಿಗೆಯನ್ನು ಇನ್ನೂ ಪಡೆಯದಿರುವ ಕಾರಣ ಈ ಯೋಜನೆಗಳಿಗೆ ಕೇಂದ್ರ ಯೋಜನಾ ಆಯೋಗ ಬಂಡವಾಳ ಹೂಡಿಕೆಗೆ ಅನುಮತಿ ನೀಡಿಲ್ಲ.

ಇಷ್ಟು ಹೇಳಿರುವ ಸಚಿವ ಅರ್ಜುನ್ ಚರಣ್ ಸೇಠಿ 'ತೆಲುಗು ಗಂಗಾ ಯೋಜನೆ ಮತ್ತು ಶ್ರೀಶೈಲಂ' ಎಡದಂಡೆ ಕಾಲುವೆ ಯೋಜನೆಗೆ ಮಾತ್ರ ಕೇಂದ್ರ ಜಲ ಆಯೋಗ ಅನುಮತಿ ನೀಡದಿರುವ ಕಾರಣ ಅದು ಅಕ್ರಮ ಎಂದು ಒಪ್ಪಿಕೊಂಡಿದ್ದರು. ಆದರೆ ಅದನ್ನು ತಡೆಯಬೇಕೆಂಬ ರಾಜ್ಯದ ಮೊರೆಗೆ ಎನ್‌ಡಿಎ ಸರ್ಕಾರ ಕೊನೆವರೆಗೂ ಕಿವಿಗೊಡಲೇ ಇಲ್ಲ.

ಕರ್ನಾಟಕಕ್ಕೆ ನ್ಯಾಯ ಒದಗಿಸುವ ಪ್ರಾಮಾಣಿಕ ಉದ್ದೇಶ ಎನ್‌ಡಿಎ ಸರ್ಕಾರಕ್ಕೆ ಇದ್ದಿದ್ದರೆ ಸುಪ್ರೀಮ್ ಕೋರ್ಟ್ ತೀರ್ಪನ್ನು ಅದು ಬಳಸಿಕೊಳ್ಳಬಹುದಿತ್ತು. ನದಿ

ಕೆಳದಂಡೆಯ ಬೃಹತ್ ಯೋಜನೆಗಳಿಗೆ ಅನುಮತಿ ನೀಡುವಾಗ ಮೇಲ್ದಂಡೆ ರಾಜ್ಯದ ಹಿತಾಸಕ್ತಿಯನ್ನು ಕೇಂದ್ರ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ 2000 ನೇ ಏಪ್ರಿಲ್ ನಾಲ್ಕರ ತೀರ್ಪಲ್ಲಿ ಹೇಳಿತ್ತು.

ಆಂಧ್ರದ ಅಕ್ರಮ ಯೋಜನೆಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಮುಖ್ಯಮಂತ್ರಿ ಕೃಷ್ಣ ಬರೆದ ಪತ್ರಕ್ಕೆ ಒಂದು ತಿಂಗಳೊಳಗೆ ಅರ್ಜುನ್ ಚರಣ್ ಸೇಠಿ ಉತ್ತರ ನೀಡಿದ್ದರೆ, ಆಂಧ್ರದ ಅಕ್ರಮ ಸಮರ್ಥಿಸಿ ಸೇಠಿ ಬರೆದ ಪತ್ರಕ್ಕೆ ಉತ್ತರ ನೀಡಲು ಎಸ್.ಎಂ. ಕೃಷ್ಣ ಅವರು ನಾಲ್ಕು ತಿಂಗಳ ದೀರ್ಘಾವಧಿ ತೆಗೆದುಕೊಂಡಿದ್ದರು.

ಆದರೆ ಆ ಉತ್ತರ ಕೂಡ ಅಷ್ಟೇ ಮೆದು ಮತ್ತು ಸಪ್ಪೆ. 'ಅಷ್ಟೊಂದು ಪ್ರಮಾಣದ 'ಖಚಿತಾಯದ ನೀರು' ಬಳಸಿಕೊಂಡು ಯೋಜನೆ ರೂಪಿಸುತ್ತಿದೆ ಎನ್ನುವ ಆಂಧ್ರಪ್ರದೇಶದ ನಿಲುವು ನಂಬುವುದು ಕಷ್ಟ' ಎನ್ನುವ ಒಂದು ವಾಕ್ಯವನ್ನು ಹೊರತುಪಡಿಸಿದರೆ ಸೇಠಿ ನಿಲುವನ್ನು ತರ್ಕಬದ್ಧವಾಗಿ ಖಂಡಿಸುವ ಪ್ರಯತ್ನ ಆ ಪತ್ರದಲ್ಲಿ (ದಿ.14.6.2001) ಇಲ್ಲ.

ಎರಡನೇ ಕೃಷ್ಣಾ ನ್ಯಾಯ ಮಂಡಳಿಯ ಮುಂದೆ ಕೃಷ್ಣಾ ಕಣಿವೆಯ ಅಕ್ರಮ ಯೋಜನೆಗಳ ವಿರುದ್ಧ ಕರ್ನಾಟಕ ದಾಳಿ ನಡೆಸಿದಾಗ ತನ್ನ ರಕ್ಷಣೆಗಾಗಿ ಆಂಧ್ರಪ್ರದೇಶ 'ಹಿಂದಿನ ಸರ್ಕಾರಗಳು ನೀಡಿರುವ ಅನುಮತಿ' ಮತ್ತು 'ಅರ್ಜುನ್‌ಚರಣ್ ಸೇಠಿ ಅವರ ಪತ್ರದ ಗುರಾಣಿಯನ್ನು ಬಳಸಲಿರುವುದು ಖಂಡಿತ.

ಇದಕ್ಕೆ ಪ್ರತಿ ಅಸ್ತ್ರ ಕರ್ನಾಟಕದಲ್ಲಿ ಏನಿದೆಯೋ ಗೊತ್ತಿಲ್ಲ? ಅಂತಹ ಒಂದು ತಯಾರಿ ನಡೆಸುತ್ತಿರುವ ಸೂಚನೆಯೂ ಎಲ್ಲೂ ಕಾಣುಸುತ್ತಿಲ್ಲ. ಇಷ್ಟು ಮಾತ್ರವಲ್ಲ ಕೃಷ್ಣಾ ಕಣಿವೆಯಲ್ಲಿ ಕರ್ನಾಟಕ 'ಅಕ್ರಮ'ವಾಗಿ ಕೈಗೊಂಡಿರುವ ನೀರಾವರಿ ಯೋಜನೆಗಳ ಪಟ್ಟಿಯನ್ನು ಕೂಡ ಆಂಧ್ರಪ್ರದೇಶ ಸಿದ್ಧವಾಗಿಟ್ಟುಕೊಂಡು ಪ್ರತಿದಾಳಿಗಾಗಿ ಕಾಯುತ್ತಿದೆ.

ಕೃಷ್ಣಾ ಸ್ಕೀಮ್ 'ಬಿ'ಯಲ್ಲಿ ಕರ್ನಾಟಕಕ್ಕೆ ಉಳಿದಿರುವುದೆಷ್ಟು?

ಬಚಾವತ್ ಐತೀರ್ಪಿನ ಪ್ರಕಾರ ಸ್ಕೀಮ್ 'ಬಿ'ಯಲ್ಲಿ ಲಭ್ಯ ಇರುವ ಹೆಚ್ಚುವರಿ ನೀರಿನ ಪ್ರಮಾಣ ಸುಮಾರು 517 ಟಿಎಂಸಿ. ಆಂಧ್ರಪ್ರದೇಶ ಎಂಟು ಅಕ್ರಮ ಯೋಜನೆಗಳ ಮೂಲಕ ಬಳಸಲು ಹೊರಟಿರುವುದು 346 ಟಿಎಂಸಿ. ಅದನ್ನು ಕಳೆದುಕೊಂಡ ಮೇಲೆ ಕರ್ನಾಟಕಕ್ಕೆ ಉಳಿಯುವುದೆಷ್ಟು?

ಈ ಲೆಕ್ಕದೊಳಗೊಂದು ಲೆಕ್ಕ ಇದೆ. ಸ್ಕೀಮ್ 'ಎ' ಪ್ರಕಾರ ಮೂರು ರಾಜ್ಯಗಳಿಗೆ ಹಂಚಿಕೊಡಲಾದ 2130 ಟಿಎಂಸಿಗಿಂತ ಹೆಚ್ಚುವರಿಯಾಗಿ ಇರುವ ನೀರಿನ ಅರ್ಧ ಭಾಗ ಕರ್ನಾಟಕದ್ದು ಎಂದು ಬಚಾವತ್ ಐತೀರ್ಪು ಹೇಳಿದೆ. ಉಳಿದರ್ಧವನ್ನು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸಮಾನಾಗಿ ಹಂಚಿಕೊಳ್ಳಬೇಕು. ಇದರ ಪ್ರಕಾರ ಹೆಚ್ಚುವರಿ ನೀರು 517 ಟಿಎಂಸಿಯಲ್ಲಿ 258.50 ಟಿಎಂಸಿ ಕರ್ನಾಟಕಕ್ಕೆ. ತಲಾ 129.50 ಟಿಎಂಸಿ ಉಳಿದೆರಡು

ರಾಜ್ಯಗಳಿಗೆ. ಆದರೆ ಆಂಧ್ರಪ್ರದೇಶ 30 ಲಕ್ಷ ಎಕರೆ ಭೂಮಿಗೆ ನೀರುಣಿಸಲು ಎಂಟು ಅಕ್ರಮ ಯೋಜನೆಗಳನ್ನು ನಿರ್ಮಿಸುತ್ತಿರುವುದು 346 ಟಿಎಂಸಿ ನೀರು ಬಳಸಿಕೊಳ್ಳಲು.

ಆಂಧ್ರದ ಅಕ್ರಮ ಯೋಜನೆಗಳಲ್ಲಿ ಐದರ ಬಗ್ಗೆ ಮಾತ್ರ ವ್ಯಾಪಕ ಚರ್ಚೆಯಾಗುತ್ತಿದೆ. ಅವುಗಳೆಂದರೆ ತೆಲುಗುಗಂಗಾ, ಶ್ರೀಶೈಲಂ ಬಲದಂಡೆ ಕಾಲುವೆ, ಭೀಮಾ ಏತ ನೀರಾವರಿ ಮತ್ತು ಪುಲಿಂಚಿತಲ. ಇವುಗಳ ಜತೆ ಇನ್ನೂ ಮೂರು ಯೋಜನೆಗಳು ಪ್ರಗತಿಯಲ್ಲಿವೆ. ಅವು 128.4 ಟಿಎಂಸಿ ನೀರು ಬಳಕೆ ಉದ್ದೇಶದ ವೆಲಿಗೊಂಡ, ಹಂದ್ರಿನಿವಾ ಮತ್ತು ಗಾಲೆಯ ನಗರಿ ಯೋಜನೆ.

ತೆಲುಗುಗಂಗಾ ಯೋಜನೆ : ಚೆನ್ನೈ ನಗರಕ್ಕೆ ಕುಡಿಯುವ ನೀರು ಒದಗಿಸಲು 15 ಟಿಎಂಸಿ ನೀರನ್ನು ಶ್ರೀಶೈಲಂನಿಂದ ಹರಿಸುವುದು. ಈ ಯೋಜನೆ ಅಕ್ರಮ ಎಂದು ಎನ್‌ಡಿಎ ಸರ್ಕಾರವೇ ಒಪ್ಪಿಕೊಂಡಿದೆ. ಮೂಲ ಯೋಜನೆ ಕೃಷ್ಣಾ ಕಣಿವೆಯ ಮೂರು ರಾಜ್ಯಗಳು ತಮಿಳುನಾಡು ಜತೆಗೂಡಿ ಮಾಡಿಕೊಂಡ ಒಪ್ಪಂದ ಆಧಾರಿತವಾದುದು. ಇದರ ಪ್ರಕಾರ ಕರ್ನಾಟಕ ತನ್ನ ಪಾಲಿನ 5 ಟಿಎಂಸಿ ನೀರನ್ನು ನೀಡಲು ಒಪ್ಪಿಕೊಂಡಿತ್ತು.

ಈ ಕುಡಿಯುವ ನೀರಿನ ಯೋಜನೆಯನ್ನು ಆಂಧ್ರಪ್ರದೇಶ ಅಕ್ರಮವಾಗಿ ನೀರಾವರಿ ಯೋಜನೆಯಾಗಿ ಪರಿವರ್ತಿಸಿದೆ. ಮೂಲತಃ 29 ಟಿಎಂಸಿ ಬಳಕೆ ಸಾಮರ್ಥ್ಯದ ಈ ಯೋಜನೆಗೆ ನಿತ್ಯ ಒಂದು ಟಿಎಂಸಿ ನೀರು ಹರಿಯುವ ಕಾಲುವೆ ನಿರ್ಮಿಸಿದೆ.

ಶ್ರೀಶೈಲಂ ಎಡದಂಡೆ ಕಾಲುವೆ : ಇದನ್ನು ಕೂಡಾ ಅಕ್ರಮ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಸಿಕಂದರಾಬಾದ್ ಮತ್ತು ಹೈದರಬಾದ್ ಅವಳಿ ನಗರಗಳಿಗೆ ಕುಡಿಯುವ ನೀರು ಪೂರೈಕೆ ಮತ್ತು ನೀರಾವರಿ ಇದರ ಉದ್ದೇಶ.

ಹೆಚ್ಚುವರಿ ನೀರು ಬಳಕೆಯ ಈ ಯೋಜನೆಗೆ ಕೇಂದ್ರ ಜಲ ಆಯೋಗವಾಗಲಿ, ಯೋಜನಾ ಆಯೋಗವಾಗಲಿ ಅನುಮತಿ ನೀಡಿಲ್ಲ. ಆದರೆ ನಿರ್ಮಾಣ ಕಾರ್ಯ ಮುಂದುವರೆದಿದೆ.

ಶ್ರೀಶೈಲಂ ಬಲದಂಡೆ ಕಾಲುವೆ : ಕೇಂದ್ರ ಜಲ ಆಯೋಗ ಬಂಡವಾಳ ಹೂಡಿಕೆಗೆ ಅವಕಾಶ ನೀಡಿರುವ ಈ ಯೋಜನೆಗೆ ಹಿಂದಕ್ಕೆ ಹರಿದು ಬರುವ (ರಿಟರ್ನ್‌ಫ್ಲೊ) ಟಿಎಂಸಿ ಮತ್ತು ಕರ್ನೂಲ್-ಕಡಪಾ ಕಾಲುವೆಯ ಆಧುನೀಕರಣದಿಂದ ಉಳಿತಾಯವಾಗುವ 8 ಟಿಎಂಸಿ ನೀರನ್ನು ಬಳಸಿಕೊಳ್ಳುವುದಾಗಿ ಆಂಧ್ರಪ್ರದೇಶ ಹೇಳಿಕೊಂಡಿದೆ. ಬಚಾವತ್ ಐತೀರ್ಪಿನಲ್ಲಿ ಕೆ.ಸಿ.ಕಾಲುವೆ 39.90 ಟಿಎಂಸಿ ನೀರು ಹಂಚಿಕೆ ಮಾಡಿದೆ. ಈ ಕಾಲುವೆ ಇತ್ತೀಚೆಗಷ್ಟೇ ಕಾರ್ಯಾರಂಭ ಮಾಡಿದ್ದು ಈವರೆಗೆ ಉಳಿತಾಯದ ನೀರು ದಾಖಲೆಯಾಗಿಲ್ಲ. ಹಿಂದಕ್ಕೆ ಹರಿದು ಬರುವ 11 ಟಿಎಂಸಿ ನೀರನ್ನು ಆಂಧ್ರಪ್ರದೇಶ ಈಗಾಗಲೇ ಬಳಸಿಕೊಂಡಿದೆ.

ಭೀಮಾ ಏತ ನೀರಾವರಿ ಮತ್ತು ಪುಲಿಂಚಿತಲ ಯೋಜನೆ : ಕೃಷ್ಣಾನದಿ ಮುಖಜಭೂಮಿಯಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಿ ಉಳಿಸುವ 42.53 ಟಿಎಂಸಿ

ನೀರಿನಲ್ಲಿ 29 ಟಿಎಂಸಿಯನ್ನು ಈ ಎರಡು ಯೋಜನೆಗಳಿಗೆ ಬಳಸಲಾಗುವುದು ಎನ್ನುತ್ತಿದೆ ಆಂಧ್ರಪ್ರದೇಶ.

ಕೃಷ್ಣಾ ಮುಖಜ ಭೂಮಿಗೆ ಬಚಾವತ್ ಐತೀರ್ಪಿನಲ್ಲಿ 181.2 ಟಿಎಂಸಿ ನೀರು ನಿಗದಿಗೊಳಿಸಲಾಗಿದೆ. ಆದರೆ ಅಲ್ಲಿ ಬಳಕೆಯಾಗುತ್ತಿರುವ ನೀರು 194.73 ಟಿಎಂಸಿ ಎಂದು 'ಕೃಷ್ಣಾ ಮುಖಜ ಭೂಮಿಯ ಆಧುನೀಕರಣ ಯೋಜನಾ ವರದಿ ಹೇಳುತ್ತಿದೆ.

ಬಚಾವತ್ ಆಯೋಗದ ಎದುರು ಭೀಮಾ ಯೋಜನೆಯ ಬದಲಿಗೆ ಜುರಾಲ ಯೋಜನೆಗೆ ನೀರು ಕೊಡಿ ಎಂದು ಆಂಧ್ರಪ್ರದೇಶ ಕೇಳಿತ್ತು. ಅದರಂತೆ ಆಯೋಗ ಜುರಾಲ ಯೋಜನೆಗೆ 17.84 ಟಿಎಂಸಿ ನೀರು ನಿಗದಿಗೊಳಿಸಿತು. ಈಗತಾನೇ ಬೇಡ ಎಂದು ಕೈಬಿಟ್ಟ ಭೀಮಾ ಏತ ನೀರಾವರಿ ಯೋಜನೆಯನ್ನು ಆ ರಾಜ್ಯ ಅಕ್ರಮಮವಾಗಿ ಕೈಗೆತ್ತಿಕೊಂಡಿದೆ.

ಈ ಐದು ಯೋಜನೆಗಳ ಜೊತೆ 128.4 ಟಿಎಂಸಿ ನೀರನ್ನು ಅಕ್ರಮವಾಗಿ ಬಳಸಿಕೊಂಡು ವೆಲಿಗೊಂಡ, ಗಾಲೇರುನಗರಿ ಮತ್ತು ಹಾಂಡ್ರಿನಿವಾ ಯೋಜನೆಗಳನ್ನು ನಿರ್ಮಿಸಲು ಆಂಧ್ರಪ್ರದೇಶ ಹೊರಟಿದೆ. ಈ ಎಲ್ಲ 'ಅಕ್ರಮ' ಯೋಜನೆಗಳನ್ನು ನೀರು ಅನುಭೋಗದ ಹಕ್ಕು ಇಲ್ಲವೇ ಮಾನವೀತೆಯ ದೃಷ್ಟಿಯಿಂದ 'ಸಕ್ರಮ' ಎಂದು ಘೋಷಿಸಲು ಆಂಧ್ರಪ್ರದೇಶ ನೂತನ ನ್ಯಾಯ ಮಂಡಳಿಯ ಮುಂದೆ ಮೊರೆ ಇಡಬಹುದು.

ಕರ್ನಾಟಕ ಇನ್ನೂ ಸ್ಕೀಮ್ 'ಎ' ಯ ನೀರನ್ನೇ ಬಳಸಿಕೊಂಡಿಲ್ಲವಾದ ಕಾರಣ ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುವ ನೀರು ಆಂಧ್ರದ ಯೋಜನೆಗಳಲ್ಲಿಯಾದರೂ ಬಳಕೆಯಾಗಲಿ ಎನ್ನುವ ಅಭಿಪ್ರಾಯ ಕ್ರಮೇಣ ಮೂಡಿದರೆ ಕೇವಲ ಆಂಧ್ರಪ್ರದೇಶವನ್ನು ತಪ್ಪಿತಸ್ಥರ ಕಟಕಟೆಯಲ್ಲಿ ನಿಲ್ಲಿಸಲಾದೀತೆ?

(08-04-2005)

ಕೃಷ್ಣಾ ನದಿ ವಿವಾದ

ಕೃಷ್ಣಾ ಜಲ ವಿವಾದದ ನಿರ್ವಹಣೆಯಲ್ಲಿ ಕರ್ನಾಟಕ ಮೊದಲ ಹೆಜ್ಜೆಯಲ್ಲಿಯೇ ಎಡವುತ್ತಿದೆಯೇ? ಕೇಂದ್ರ ಸರ್ಕಾರವೇ ಸ್ಥಾಪಿಸಿದ ನ್ಯಾಯಮಂಡಳಿ ಆಸ್ಥಿತ್ವದಲ್ಲಿರುವಾಗ ಅದನ್ನು ಧಿಕ್ಕರಿಸಿ ಪ್ರಧಾನಿಗೆ ದೂರು ನೀಡಲು ಸರ್ವಪಕ್ಷಗಳ ನಿಯೋಗ ಕರೆತರುವುದು ಸರಿಯಲ್ಲ ಎಂಬ ಕಾನೂನು ಸಲಹೆಯನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸುತ್ತಿರುವುದು ಈ ಸಂಶಯಕ್ಕೆ ಕಾರಣ. ಕೃಷ್ಣಾ ಕಣಿವೆಯಲ್ಲಿ ಆಂಧ್ರ ಸರ್ಕಾರ ಅಕ್ರಮವಾಗಿ ನಿರ್ಮಿಸುತ್ತಿರುವ ನೀರಾವರಿ ಯೋಜನೆಗಳ ವಿವಾದ ಭುಗಿಲೆದ್ದಾಗ ರಾಜ್ಯ ಸರ್ಕಾರ 'ಸರ್ವರೋಗಗಳ ಶಮನಕ್ಕೂ ದಿವ್ಯೌಷಧ'ವಾದ ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಿಯಲ್ಲಿಗೆ ಕರೆದೊಯ್ಯುವುದಾಗಿ ಘೋಷಿಸಿತು. ಈ ವಿವಾದವನ್ನು ಬಗೆಹರಿಸಲೆಂದೇ ಸ್ಥಾಪಿಸಿರುವ ನ್ಯಾಯಮಂಡಳಿ ಆಸ್ತಿತ್ವದಲ್ಲಿರುವಾಗ ಪ್ರಧಾನಿಯಾದರೂ ಏನು ಮಾಡಿಯಾರು?

ನ್ಯಾಯಮಂಡಳಿಯನ್ನು ಧಿಕ್ಕರಿಸಿ ಅಕ್ರಮ ಯೋಜನೆಗಳನ್ನು ನಿಲ್ಲಿಸುವಂತೆ ಅವರು ಆಂಧ್ರಪ್ರದೇಶಕ್ಕೆ ಆದೇಶ ನೀಡಲು ಸಾಧ್ಯವಿಲ್ಲ. ಹೆಚ್ಚೆಂದರೆ ನ್ಯಾಯ ಮಂಡಳಿಯ ಮುಂದೆ ಮನವಿ ಸಲ್ಲಿಸಲು ಕರ್ನಾಟಕಕ್ಕೆ ಸಲಹೆ ನೀಡಬಹುದು. ಅದನ್ನು ಪ್ರಧಾನಿಯವರಿಂದ ಹೇಳಿಕೊಂಡು ಯಾಕೆ ಮಾಡಬೇಕು? ನೇರವಾಗಿ ನ್ಯಾಯ ಮಂಡಳಿಗೆ ದೂರು ನೀಡಬಾರದೇಕೆ?

ಕಾನೂನು ಪ್ರಕಾರ ಪ್ರಧಾನಿಗೆ ದೂರು ನೀಡುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಪ್ರಧಾನಿಯವರಿಗೆ ನೇರವಾಗಿ ದೂರು ನೀಡುವುದರಿಂದ ನ್ಯಾಯಮಂಡಳಿಗೆ ತಪ್ಪುಸಂದೇಶವನ್ನು ರವಾನಿಸಿದಂತಾಗುತ್ತದೆ ಎನ್ನುತ್ತಾರೆ ಕಾನೂನು ತಜ್ಞರು. ಸೋಮವಾರ ಮುಖ್ಯಮಂತ್ರಿ ಎನ್. ಧರ್ಮಸಿಂಗ್ ಫೋನಿನಲ್ಲಿ ಸಂಪರ್ಕಿಸಿ ಸಲಹೆ ಕೇಳಿದಾಗ ಹಿರಿಯ ವಕೀಲ ಎಫ್.ಎಸ್.ನಾರಿಮನ್ ಈ ವಿಷಯದಲ್ಲಿನ ಸೂಕ್ಷ್ಮಗಳನ್ನೆಲ್ಲಾ ವಿವರಿಸಿ 'ಈ ಕ್ರಮ ಅನುಚಿತ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನ್ಯಾಯಮಂಡಳಿ ಮುಂದೆ ವಾದಿಸಲು ರಾಜ್ಯ ಸರ್ಕಾರ ಇತ್ತೀಚೆಗಷ್ಟೆ ನೇಮಿಸಿದ ವಕೀಲರ ತಂಡ ಕೂಡಾ ಇದೇ ಆಭಿಪ್ರಾಯ ನೀಡಿದೆ. ಪೆಟ್ಟೇಕೆ ಪ್ರಧಾನಿಯವರು ಖುದ್ದಾಗಿ ಈ ಸಂಶಯವನ್ನು ವ್ಯಕ್ತಪಡಿಸಿದ್ದಾರೆನ್ನಲಾಗಿದೆ.

ಈ ಎಲ್ಲ ಅಭಿಪ್ರಾಯಗಳನ್ನು ಪಡೆದ ನಂತರ ಮುಖ್ಯಮಂತ್ರಿಗಳಿಗೂ ಮನವರಿಕೆಯಾಗಿತ್ತು. ಮಂಗಳವಾರ ಬೆಳಿಗ್ಗೆ ದೆಹಲಿ ಬಿಡುವವರೆಗೆ ಅವರ ಮನಸ್ಸಿನಲ್ಲಿ ಕೂಡ ಸರ್ವಪಕ್ಷಗಳ ನಿಯೋಗ ಕರೆತರುವುದು ಸರಿಯಲ್ಲ ಎನ್ನುವ ಭಾವನೆ ಇತ್ತು. ಮಂಗಳವಾರ ಸಂಜೆ ಕೆಲವು ಪತ್ರಕರ್ತರಲ್ಲಿಯೂ ಅವರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದರೆ ಬೆಂಗಳೂರಿನಲ್ಲಿ ಕಾಲೂರಿದ ನಂತರ 'ಸ್ಥಳೀಯ ರಾಜಕಾರಣದ ಪವ' ಮುಖಕ್ಕೆ ಬಡಿಯುತ್ತಿದ್ದಂತೆಯೇ ಅವರ ಮನಸ್ಸು ಬದಲಾಗಿ ಹೋಯಿತು.

ಅಂತರಾಜ್ಯ ಜಲವಿವಾದ ರಾಜ್ಯಗಳಿಗೆ ಸಂಬಂಧಿಸಿದ ವಿಚಾರ, ಅದರಲ್ಲಿ ಕೇಂದ್ರದ ಪಾತ್ರವಿಲ್ಲ ಎನ್ನುವ ನಿಲುವನ್ನು ಕಳೆದ ಕೆಲವು ವರ್ಷಗಳಿಂದ ಕೇಂದ್ರ ಸರ್ಕಾರ ನಿರಂತರವಾಗಿ ಹೇಳುತ್ತಲೇ ಬಂದಿದೆ. ಆಂಧ್ರ ಸರ್ಕಾರ ಸ್ಕೀಮ್ 'ಬಿ'ಯ ಹೆಚ್ಚುವರಿ ನೀರನ್ನು ಅಕ್ರಮವಾಗಿ ಬಳಸಿಕೊಂಡು ಯೋಜನೆಗಳನ್ನು ಪ್ರಾರಂಭಿಸಿದೆ ಎಂದು 2002 ರಲ್ಲಿ ಕರ್ನಾಟಕ ಸುಪ್ರೀಮ್ ಕೊರ್ಟ್‌ನಲ್ಲಿ ದೂರು ಸಲ್ಲಿಸಿದ್ದ ಸಂದರ್ಭದಲ್ಲಿ ಆಗಿನ ಎನ್‌ಡಿಎ ಸರ್ಕಾರ ಇದೇ ನಿಲುವನ್ನು ವ್ಯಕ್ತಪಡಿಸಿ ಪ್ರಮಾಣಪತ್ರ ಸಲ್ಲಿಸಿತ್ತು.

'ಅಂತರರಾಜ್ಯ ಜಲವಿವಾದ ರಾಜ್ಯಗಳಿಗೆ ಸಂಬಂಧಿಸಿದ ವಿಚಾರ. ಇದನ್ನು ಇತ್ಯರ್ಥಪಡಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇಲ್ಲ ಎಂದು ಆ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರ ತಿಳಿಸಿತ್ತು. ಆ ಹಿನ್ನೆಲೆಯಲ್ಲಿಯೇ ಇನ್ನೊಂದು ನ್ಯಾಯಮಂಡಳಿ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲು ಸುಪ್ರೀಮ್ ಕೋರ್ಟ್ ಮೂರು ರಾಜ್ಯಗಳಿಗೆ ಸಲಹೆ ನೀಡಿದ್ದು. ರಾಜ್ಯದ ವಕೀಲರ ತಂಡ ಈ ಪ್ರಮಾಣ ಪತ್ರದ ವಿಷಯವನ್ನು ಕೂಡ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದೆ. ನ್ಯಾಯಮಂಡಳಿ ಶೀಘ್ರವಾಗಿ ಕಾರ್‍ಯಾರಂಭ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಸರ್ವಪಕ್ಷಗಳ ನಿಯೋಗ ಕರೆತರುವುದಿದ್ದರೆ ಅದೊಂದು ಒಳ್ಳೆಯ ಕ್ರಮ ಎನ್ನುತ್ತಾರೆ ನೀರಾವರಿ ತಜ್ಞರು.

ನ್ಯಾಯಮಂಡಳಿ ಸ್ಥಾಪನೆಯಾದ ಒಂದು ವರ್ಷದ ನಂತರ ಕೇಂದ್ರ ಸರ್ಕಾರ ಅದರ ಕಛೇರಿಗೊಂದು ಕಟ್ಟಡವನ್ನು ಒದಗಿಸಿದೆ. ಆದರೆ ಕಛೇರಿ ಸಜ್ಜುಗೊಂಡಿಲ್ಲ. ಪೂರ್ಣಪ್ರಮಾಣದ ಸಿಬ್ಬಂದಿ ನೇಮಕವಾಗಿಲ್ಲ. ಈವರೆಗೂ ಮೂವರು

ನ್ಯಾಯಮೂರ್ತಿಗಳಿಗೆ ವಸತಿ ಸೌಕರ್ಯ ಕಲ್ಪಿಸಿಲ್ಲ. ಇವೆಲ್ಲವೂ ಕೇಂದ್ರ ಜಲಸಂಪನ್ಮೂಲ ಇಲಾಖೆಯ ಕೆಲಸ. ಇದನ್ನು ತುರ್ತಾಗಿ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ಹೇರಬೇಕು.

ಆದರೆ ನ್ಯಾಯ ಮಂಡಳಿಯಲ್ಲಿ ರಾಜ್ಯದ ಪರ ವಾದಿಸಲು ವಕೀಲರನ್ನು ನೇಮಿಸಲು ದೀರ್ಘ ಅವಧಿಯನ್ನು ತೆಗೆದುಕೊಂಡ ರಾಜ್ಯ ಸರ್ಕಾರ ಆ ಒತ್ತಡ ಹೇರುವಂತಹ ಸ್ಥಿತಿಯಲ್ಲಿ ಕೂಡಾ ಇಲ್ಲ. ರಾಜ್ಯ ಸರ್ಕಾರದ ಮೂಲಗಳ ಪ್ರಕಾರ ವಕೀಲರ ತಂಡದ ನೇಮಕದ ಆದೇಶ ಇಂದು ಹೊರಬಿದ್ದಿದೆ. ಹಿರಿಯ ವಕೀಲ ಎಫ್.ಎಸ್. ನಾರಿಮನ್ ನೇತೃತ್ವದ ಈ ತಂಡದಲ್ಲಿ ವಕೀಲರಾದ ಮೋಹನ್ ಕಾತರಕಿ, ಎಸ್.ಎಸ್. ಜವಳಿ, ಬಸವರಾಜ್ ಪಾಟೀಲ್ (ಸುಪ್ರೀಮ್‌ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮಗ) ಬ್ರಜೇಶ್ ಕಾಳಪ್ಪ ಮತ್ತು ಎಸ್.ಎಸ್. ಕೊಪ್ಪ ಇದ್ದಾರೆ. ಪಾಟೀಲ್ ಮತ್ತು ಕೊಪ್ಪ ಅವರನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ ಕಾವೇರಿ ನ್ಯಾಯಮಂಡಳಿಯಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿದ್ದಾರೆ.

ಕಾವೇರಿ ನ್ಯಾಯ ಮಂಡಳಿಯ ಇಬ್ಬರು ಸದಸ್ಯರ ಉದ್ದೇಶಿತ ಕಾವೇರಿ ಕಣಿವೆ ಪ್ರವಾಸದ ವಿವಾದದ ಸಂದರ್ಭದಲ್ಲಿ ನ್ಯಾಯ ಮಂಡಳಿಯನ್ನೇ ರದ್ದುಗೊಳಿಸಲು ರಾಜ್ಯ ಸರ್ಕಾರ ಪ್ರಮಾಣ ಪತ್ರವನ್ನು ಸಲ್ಲಿಸುವಾಗಲೂ ವಕೀಲ ಎಫ್.ಎಸ್. ನಾರಿಮನ್ ಸ್ಪಷ್ಟವಾಗಿ ವಿರೋಧಿಸಿದ್ದರು. ಅಷ್ಟು ಮಾತ್ರವಲ್ಲ, ಆ ಪ್ರಕರಣದಲ್ಲಿ ಅವರು ಸರ್ಕಾರದ ಪರವಾಗಿ ವಾದಿಸಲು ನಿರಾಕರಿಸಿದ್ದರು. ಅಂತಿಮವಾಗಿ ಸುಪ್ರೀಮ್ ಕೋರ್ಟ್ ರಾಜ್ಯ ಸರ್ಕಾರದ ಮನವಿಯನ್ನು ತಿರಸ್ಕರಿಸಿ ಮುಖಭಂಗ ಮಾಡಿತು. ರಾಜ್ಯ ಸರ್ಕಾರಕ್ಕೆ ಇದನ್ನು ನೆನಪಿಸಿ ಕೊಡುವ ಅಗತ್ಯ ಇದೆಯೇ?

O

(20-04-2005)

ಕಾವೇರಿಯಲ್ಲಿ ಸಂಘರ್ಷದ ಸುಳಿ

ಜೂನ್‌ನಿಂದ ಸೆಪ್ಟಂಬರ್‌ವರೆಗಿನ ನಿರ್ಣಾಯಕ ಕಾಲದಲ್ಲಿ ತಮಿಳುನಾಡಿಗೆ ರಾಜ್ಯ ಹರಿಸಬೇಕಾಗಿರುವ ನೀರಿನ ಪ್ರಮಾಣ ತಗ್ಗಿಲ್ಲ. ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ ಹಿಗ್ಗಿರುವ ಸಾಧ್ಯತೆಗಳು ಕೂಡ ಕಾಣುತ್ತಿಲ್ಲ. ಕಾವೇರಿ ನ್ಯಾಯಮಂಡಳಿಯ ಅಂತಿಮ ಐತೀರ್ಪು 'ಘನಘೋರ ಅನ್ಯಾಯ' ಆಗಿದೆ ಎಂದು ಬೊಬ್ಬಿಡುವಂತಿಲ್ಲವಾದರೂ ನಿರೀಕ್ಷಿತ ನ್ಯಾಯ ಸಿಕ್ಕಿಲ್ಲ ಎಂದು ರಾಜ್ಯದ ಕಾವೇರಿಯ ರೈತ ಮರುಗುವಂತಿದೆ.

ಜೂನ್‌ನಿಂದ ಸೆಪ್ಟಂಬರ್ ವರೆಗಿನ ಅವಧಿಯಲ್ಲಿ ತಮಿಳುನಾಡಿಗೆ ಬಿಡಬೇಕಾದ ನೀರಿನ ಪ್ರಮಾಣವನ್ನು ಕಡಿಮೆ ಮಾಡದೆ ನ್ಯಾಯಮಂಡಳಿ ನಿರಾಶೆಗೊಳಿಸಿದೆ. ಕಾವೇರಿ ನದಿಯಲ್ಲಿ ಸಂಘರ್ಷದ ಸುಳಿಗಳು ಏಳುವ ಕಾಲ ಅದು. ಆ ಅವಧಿಯಲ್ಲಿ ಒಟ್ಟು 137 ಟಿಎಂಸಿ ನೀರು ಹರಿಸಬೇಕೆಂದು ಮಧ್ಯಂತರ ಐತೀರ್ಪು ಹೇಳಿತ್ತು. ಅದರಲ್ಲಿ ಮೂರು ಟಿಎಂಸಿಯಷ್ಟೇ ಕಡಿಮೆ ಮಾಡಿರುವ ನ್ಯಾಯಮಂಡಳಿ ವಿವಾದದ ಮೂಲವನ್ನು ಇನ್ನೂ ಜೀವಂತವಾಗಿಟ್ಟಿದೆ.

ತಮಿಳುನಾಡಿಗೆ ಬಿಡಬೇಕಾದ ನೀರಿನ ಪ್ರಮಾಣ 205 ಟಿಎಂಸಿಯಿಂದ 192 ಟಿಎಂಸಿಗೆ ಇಳಿದಿರುವುದರಿಂದ ರಾಜ್ಯಕ್ಕೆ ಲಾಭವಾಗಿದೆ ಎಂದು ಮೇಲ್ನೋಟಕ್ಕೆ ಕಂಡರೂ ಲೆಕ್ಕದೊಳಗಿನ ಲೆಕ್ಕವೊಂದು ಇದು ನಿಜ ಅಲ್ಲವೆಂದು ಹೇಳುತ್ತಿದೆ. ಮಧ್ಯಂತರ ಐತೀರ್ಪಿನಲ್ಲಿ ಮೆಟ್ಟೂರು ಜಲಾಶಯಕ್ಕೆ ನೀರು ಹರಿಸಬೇಕೆಂದು ಹೇಳಿದ್ದ ನ್ಯಾಯಮಂಡಳಿ ಅಂತಿಮ

ಐತೀರ್ಪಿನಲ್ಲಿ ನೀರು ಹರಿಸಬೇಕಾದ ಸ್ಥಳವನ್ನು ಬಿಳಿಗುಂಡ್ಲು ಜಲಮಾಪನಕ್ಕೆ ಸ್ಥಳಾಂತರಿಸಿರುವುದು ಗಮನಾರ್ಹ.

ಕೇಂದ್ರ ಜಲ ಆಯೋಗದ ನಿಯಂತ್ರಣದಲ್ಲಿರುವ ಬಿಳಿಗುಂಡ್ಲು ಜಲಮಾಪನ ಕೇಂದ್ರ ಮತ್ತು ಮೆಟ್ಟೂರು ಜಲಾಶಯದ ನಡುವೆ ಸುಮಾರು 70 ಕಿ.ಮೀಗಳ ಮಾರ್ಗಮಧ್ಯ ಜಲಾನಯನ ಪ್ರದೇಶ ಇದೆ. ಅಲ್ಲಿ ಪ್ರತಿ ಜಲವರ್ಷ ಸುಮಾರು 25 ಟಿಎಂಸಿಯಷ್ಟು ನೀರು ಮಳೆಯಿಂದ ಉತ್ಪನ್ನವಾಗುತ್ತಿದೆ. ಆದ್ದರಿಂದ ಮೆಟ್ಟೂರು ಜಲಾಶಯಕ್ಕೆ 205 ಟಿಎಂಸಿ ನೀರು ಹರಿಸಲು ಬಿಳಿಗುಂಡ್ಲು ಜಲಮಾಪನದಿಂದ 180 ಟಿಎಂಸಿ ನೀರು ಬಿಡುಗಡೆ ಮಾಡಿದರೆ ಸಾಕಿತ್ತು. ಅದಕ್ಕೆ ಮಾರ್ಗಮಧ್ಯ ಜಲಾನಯನದ 25 ಟಿಎಂಸಿ ನೀರು ಸೇರಿ ಮೆಟ್ಟೂರು ಜಲಾಶಯಕ್ಕೆ ಹರಿಸಬೇಕಾದ 205 ಟಿಎಂಸಿ ನೀರಿನ ಲೆಕ್ಕ ಚುಕ್ತಾ ಆಗುತ್ತಿತ್ತು.

ಈ ಲೆಕ್ಕಕ್ಕೆ ಅಂತಿಮ ತೀರ್ಪಿನಲ್ಲಿ ಚ್ಯುತಿ ಉಂಟಾಗಿದೆ. ಇದರ ಪ್ರಕಾರ ಹಿಂದೆ 180 ಟಿಎಂಸಿ ನೀರು ಬಿಡಬೇಕಾಗಿದ್ದ ಬಿಳಿಗುಂಡ್ಲು ಜಲಮಾಪನ ಕೇಂದ್ರದಿಂದ ಈಗ 192 ಟಿಎಂಸಿ ಅಂದರೆ, 12 ಟಿಎಂಸಿ ನೀರು ಹೆಚ್ಚುವರಿಯಾಗಿ ಬಿಡುಗಡೆ ಮಾಡಬೇಕಾಗಿದೆ. ಇದು ಅಂತಿಮ ಐತೀರ್ಪು ಕರ್ನಾಟಕದ ತಲೆಮೇಲೆ ಹೊರಿಸಿದ ಹೆಚ್ಚುವರಿ ಹೊರೆ.

ರಾಜ್ಯದ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ ಎಷ್ಟೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಮಧ್ಯಂತರ ಐತೀರ್ಪಿನಲ್ಲಿ ಅಚ್ಚುಕಟ್ಟು ಪ್ರದೇಶದ ವಿಸ್ತರಣೆಗೆ ಹೇರಲಾಗಿದ್ದ 11.24 ಲಕ್ಷ ಎಕರೆಯ ನಿರ್ಬಂಧವನ್ನು ಅಂತಿಮ ಐತೀರ್ಪಿನಲ್ಲಿ ಕಿತ್ತುಹಾಕಿರುವುದು ಸಮಾಧಾನದ ಅಂಶ. ಅಚ್ಚುಕಟ್ಟು ವಿಸ್ತರಣೆಯ ಮೇಲಿನ ನಿರ್ಬಂಧ ಈಗ ಇಲ್ಲದಿರುವುದರಿಂದ ತಮಿಳುನಾಡು ಪಾಲಿನ 192 ಟಿಎಂಸಿ ನೀರನ್ನು ಬಿಟ್ಟಮೇಲೆ ಹೆಚ್ಚುವರಿಯಾಗಿ ಉಳಿದಿರುವ ನೀರನ್ನು ರಾಜ್ಯದಲ್ಲಿ ಹೊಸ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಪಡಿಸಲು ಬಳಸಿಕೊಳ್ಳುವ ಸ್ವಾತಂತ್ರ್ಯ ರಾಜ್ಯಕ್ಕೆ ಸಿಕ್ಕಿದೆ. ಆದರೆ ಈ ಹೆಚ್ಚುವರಿ ನೀರನ್ನು ಸಂಗ್ರಹಿಸಿಡುವ ಸಾಮರ್ಥ್ಯ ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕಕ್ಕೆ ಇಲ್ಲ. ಕಾವೇರಿ ಕಣಿವೆಯಲ್ಲಿನ ನಾಲ್ಕು ಜಲಾಶಯಗಳ ಒಟ್ಟು ಸಾಮರ್ಥ್ಯ ಕೇವಲ 119 ಟಿಎಂಸಿ (ಕೆಆರ್‌ಎಸ್–44, ಹೇಮಾವತಿ–37, ಕಬಿನಿ–27, ಮತ್ತು ಹಾರಂಗಿ–16.) ಮಾತ್ರ. ಅಂತಿಮ ಐತೀರ್ಪು ಕೊಟ್ಟಿರುವ ಅವಕಾಶವನ್ನು ಬಳಸಿಕೊಂಡು 45 ಟಿಎಂಸಿ ಸಾಮರ್ಥ್ಯದ ಜಲಾಶಯವೊಂದನ್ನು ನಿರ್ಮಿಸಿದರೆ, ಕನಿಷ್ಠ ಬೆಂಗಳೂರು ಮಹಾನಗರದ ಮುಂದಿನ ದಿನಗಳ ಕುಡಿಯುವ ನೀರಿನ ಬೇಡಿಕೆಯನ್ನಾದರೂ ಪೂರೈಸಬಹುದು: ಎನ್ನುತ್ತಾರೆ ನೀರಾವರಿ ತಜ್ಞರು.

ರಾಜ್ಯದೊಳಗಿನ ನೀರಾವರಿ ಮೂಲಗಳನ್ನು ಬಳಸಿಕೊಳ್ಳುವ ಹಕ್ಕನ್ನು ಅಂತಿಮ ಐತೀರ್ಪು ನೀಡಿರುವುದರಿಂದ ನದಿ ಜೋಡಣೆಯ ಹೊಸ ಅವಕಾಶವೊಂದು ತೆರೆದುಕೊಂಡಿದೆ. ನೇತ್ರಾವತಿಯನ್ನು ಹೇಮಾವತಿಗೆ ಜೋಡಿಸಬೇಕೆಂಬ ಕರ್ನಾಟಕದ ಪ್ರಸ್ತಾವವನ್ನು ನ್ಯಾಯ ಮಂಡಳಿಯಲ್ಲಿ ಉಲ್ಲೇಖಿಸಿದ್ದ ತಮಿಳುನಾಡು ನೇತ್ರಾವತಿ ನೀರನ್ನು ಕಾವೇರಿ ನೀರು ಎಂದು ಪರಿಗಣಿಸಬೇಕೆಂಬ ಬೇಡಿಕೆ ಮಂಡಿಸಿತ್ತು. ಆದರೆ ನ್ಯಾಯ

ಮಂಡಳಿ ಅದನ್ನು ತಿರಸ್ಕರಿಸಿ ನೇತ್ರಾವತಿ ಜೋಡಣೆಯ ಬಗ್ಗೆ ಮರುಚಿಂತನೆ ಮಾಡುವಂತೆ ಮಾಡಿದೆ.

1991–92ರಿಂದ 2001–02ರವರೆಗೆ ಬಿಳಿಗುಂಡ್ಲು ನಿಂದ ಹರಿಬಿಟ್ಟ ಪ್ರಮಾಣ

ವರ್ಷ	ಟಿಎಂಸಿ ಅಡಿ ನೀರು
1991–1992	340.58
1992–93	358.61
1993–94	230.28
1994–95	393.90
1995–96	195.50
1996–97	245.40
1997–98	282.90
1998–99	257.70
1999–2000	273.10
2000–2001	316.80
2001–2002	189.90

ಕಾವೇರಿ ಜಲಾನಯನ ಅಂಕಿ–ಸಂಖ್ಯೆಗಳ ನೋಟ

ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ 270 ಟಿಎಂಸಿ ನೀರಿನ ಪಾಲನ್ನಷ್ಟೆ ನೀಡಿರುವ ಕಾವೇರಿ ನ್ಯಾಯಮಂಡಳಿ ಅಚ್ಚುಕಟ್ಟು ವ್ಯಾಪ್ತಿಯನ್ನು ಮಾತ್ರ ಉದಾರವಾಗಿ ಹಿಗ್ಗಿಸಿ 18.85 ಲಕ್ಷ ಎಕರೆ ಎಂದು ಒಪ್ಪಿಕೊಂಡಿದೆ.

ರಾಜ್ಯದಲ್ಲಿ ಅಚ್ಚುಕಟ್ಟು ಪ್ರದೇಶ 18.85 ಲಕ್ಷ ಎಕರೆ ಎಂದು ನ್ಯಾಯದರ್ಶಿಗಳು (ಅಸಸರ್ಸ್) ನೀಡಿರುವ ವರದಿಯಲ್ಲೇ ಹೇಳಿದ್ದು ಅದಕ್ಕೆ ನ್ಯಾಯಮಂಡಳಿ ಒಪ್ಪಿಗೆಯ ಮೊಹರು ಒತ್ತಿದೆ. ಇದರಿಂದ ಮಧ್ಯಂತರ ತೀರ್ಪಿನಲ್ಲಿನ 11.24 ಲಕ್ಷ ಎಕರೆಗಳ ಅಚ್ಚುಕಟ್ಟು ಪ್ರದೇಶದ ನಿರ್ಬಂಧದಿಂದ ರಾಜ್ಯ ಮುಕ್ತಿ ಪಡೆದಿರುವುದು ಮಾತ್ರವಲ್ಲ, ಅಂದಾಜು ಏಳು ಲಕ್ಷ ಎಕರೆಗಳಷ್ಟು ಹೆಚ್ಚುವರಿ ಅಚ್ಚುಕಟ್ಟು ಪ್ರದೇಶಕ್ಕೆ ಅಧಿಕೃತ ಮಾನ್ಯತೆ ಪಡೆದಂತಾಗಿದೆ.

270 ಟಿಎಂಸಿ ಬಳಸಿಕೊಂಡು 18.85 ಲಕ್ಷ ಎಕರೆಯಲ್ಲಿ ನೀರಾವರಿ ಮಾಡಲು ಸಾಧ್ಯವೇ? ಇದಕ್ಕೆ ಉತ್ತರ ಕೂಡ ನ್ಯಾಯದರ್ಶಿಗಳು (ಅಸೆಸರ್)ಗಳು ನೀಡಿರುವ ವರದಿಯಲ್ಲಿದೆ. ಆ ವರದಿಯ ಪ್ರಕರ ರಾಜ್ಯದ ಕಾವೇರಿ ಕಣಿವೆಯಲ್ಲಿ ಭತ್ತ ಬೆಳೆಯುವ ಪ್ರದೇಶ 8.3 ಲಕ್ಷ ಎಕರೆ. ಒಂದು ಟಿಎಂಸಿ ನೀರಿನಲ್ಲಿ 5000 ಎಕರೆ ಪ್ರದೇಶದಲ್ಲಿ ಖುಷ್ಕಿ ಬೆಳೆಯದ ಭತ್ತ' ಮತ್ತು 1000 ಎಕರೆಯಷ್ಟು ಅರೆಖುಷ್ಕಿ ಬೆಳೆಗಳನ್ನು ಬೆಳೆಯಬಹುದು. ಇದಕ್ಕಾಗಿ ನೀರು ಪೋಲಾಗದಂತೆ ತಡೆದು ನಿರ್ವಹಣೆಯನ್ನು ವೈಜ್ಞಾನಿಕವಾಗಿ ನಡೆಸಬೇಕು ಎನ್ನುವುದು ನ್ಯಾಯದರ್ಶಿಗಳು ನೀಡಿರುವ ಅಭಿಪ್ರಾಯ.

ಆದರೆ ತಮಿಳುನಾಡಿನಲ್ಲಿ 24.71 ಲಕ್ಷ ಎಕರೆಯಷ್ಟು ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಯಾಗಿದೆ ಎಂದು ನ್ಯಾಯದರ್ಶಿಗಳು ನೀಡಿರುವ ವರದಿಯನ್ನು ಒಪ್ಪಿಕೊಂಡಿರುವ ನ್ಯಾಯಮಂಡಳಿ, ಉದಾರವಾಗಿ 419 ಟಿಎಂಸಿ ನೀರನ್ನು ನೀಡಿದೆ. ಈ ತಾರತಮ್ಯಕ್ಕೆ ಕೂಡ ನ್ಯಾಯದರ್ಶಿಗಳ ವರದಿಯಲ್ಲಿಯೇ ಸ್ಪಷ್ಟನೆ ಇದೆ. (ಬಿಳಿಗುಂಡ್ಲುವಿನಲ್ಲಿ ಇರುವ ಜಲಮಾಪನ ಕೇಂದ್ರದಿಂದಲೇ ತಮಿಳುನಾಡಿಗೆ ನೀರು ಹರಿಸಬೇಕೆಂದು ತಿಳಿಸಿರುವುದರಿಂದ ರಾಜ್ಯಕ್ಕೆ ಲಾಭ ಆಗಿದೆ, ನಷ್ಟ ಆಗಿಲ್ಲ.) ಆದರ ಪ್ರಕಾರ ತಮಿಳುನಾಡಿನ ಬಹುಪಾಲು ಪ್ರದೇಶದಲ್ಲಿ ಬೆಳೆಯುವ ಬೆಳೆ ಭತ್ತ. ಅದಕ್ಕಾಗಿ ಬೇಕಾಗಿರುವ ನೀರಿನ ಪ್ರಮಾಣ ಅಧಿಕ.

ಈ ನಡುವೆ ಅಚ್ಚುಕಟ್ಟು ಪ್ರದೇಶ ಮತ್ತು ನೀರಿನ ಪಾಲಿನಲ್ಲಿ ರೈತರು ಆತಂಕಪಡುವಷ್ಟು ರಾಜ್ಯಕ್ಕೆ ಅನ್ಯಾಯವಾಗಿಲ್ಲ ಎಂದು ರಾಜ್ಯದ ನ್ಯಾಯವಾದಿಗಳು ಹೇಳುತ್ತಿದ್ದಾರೆ. ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ 270 ಟಿಎಂಸಿ ಮಾತ್ರ ನೀಡಿದ್ದರೂ ವಾಸ್ತವದಲ್ಲಿ ಅದು 310 ಟಿಎಂಸಿ. ಇಷ್ಟು ನೀರಿನಿಂದ ಐತೀರ್ಪು ಗುರುತಿಸಿರುವ 18.85 ಲಕ್ಷ ಎಕರೆ ಮಾತ್ರವಲ್ಲ, ನ್ಯಾಯಮಂಡಳಿಯ ಮುಂದೆ ಕರ್ನಾಟಕ ಕೇಳಿರುವ 23.83 ಲಕ್ಷ ಎಕರೆಯಷ್ಟು ಅಚುಕಟ್ಟು ಪ್ರದೇಶವನ್ನು ಕೂಡ ಅಭಿವೃದ್ಧಿ ಪಡಿಸಲು ಸಾಧ್ಯ ಎನ್ನುತ್ತಿದ್ದಾರೆ ನ್ಯಾಯವಾದಿ ಮೋಹನ್ ಕಾತರಕಿ.

ಕಾವೇರಿ ಕಣಿವೆಯಲ್ಲಿನ ಒಟ್ಟು ನೀರಿನ ಉತ್ಪನ್ನ 740 ಟಿಎಂಸಿಯಲ್ಲಿ ರಾಜ್ಯಕ್ಕೆ 270 ಟಿಎಂಸಿ ನೀಡಿರುವುದು ಮಳೆ ನೀರಿನ ಶೇಕಡ 50ರ ಅವಲಂಬನೆ ಆಧಾರದಲ್ಲಿ. ಆದರೆ ಶೇಕಡ 75ರ ಅವಲಂಬನೆ ಆಧಾರದಲ್ಲಿ ರಾಜ್ಯಕ್ಕೆ ಹೆಚ್ಚುವರಿ 40 ಟಿಎಂಸಿ ನೀರು ಸಿಗಲಿದೆ. ಇದರಿಂದ ರಾಜ್ಯದ ನೀರಿನ ಪಾಲು 310 ಟಿಎಂಸಿಯಷ್ಟಾಗುತ್ತದೆ. ಎನ್ನುವುದು ಅವರ ವಾದ.

ರಾಜ್ಯದ 8.3 ಲಕ್ಷ ಎಕರೆಯಲ್ಲಿ ಬೆಳೆಯಲಾಗುತ್ತಿರುವ ಭತ್ತದ ಬೆಳೆಗೆ ಬೇಕಾಗುವ ನೀರಿನ ಪ್ರಮಾಣ 186 ಟಿಎಂಸಿ. ನೀರಿನ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಮಾಡಿದರೆ ಒಂದು ಟಿಎಂಸಿ ನೀರಿನಲ್ಲಿ 5000 ಎಕರೆಯಷ್ಟು ಭತ್ತ ಬೆಳೆಯಬವುದು. ಆಗ ಬೇಕಾಗುವ ನೀರು ಕೇವಲ 160 ಟಿಎಂಸಿ ಮಾತ್ರ. ಅದರ ಜತೆಗೆ ಒಂದು ಲಕ್ಷ ಎಕರೆ ವ್ಯಾಪ್ತಿಯ ತೋಟದ ಬೆಳೆಗಳಿಗೆ ಬೇಕಾಗುವ ನೀರು 34 ಟಿಎಂಸಿ. ಮುಂಗಾರು ಅವಧಿಯ 8.71 ಲಕ್ಷ ಎಕರೆಯಷ್ಟು ಅರೆಖುಷ್ಕಿ ಬೆಳೆಗೆ 52 ಟಿಎಂಸಿ ಮತ್ತು ಹಿಂಗಾರು ಅವಧಿಯ 5.82 ಲಕ್ಷ ಎಕರೆಯ ಅರೆಖುಷ್ಕಿ ಬೆಳೆಗೆ41.5 ಟಿಎಂಸಿ ಸಾಕು ಉಳಿದಂತೆ ಕುಡಿಯುವ ನೀರಿಗಾಗಿ 28 ಟಿಎಂಸಿ ಇದು ನ್ಯಾಯವಾದಿಗಳು ಹೇಳುತ್ತಿರುವ 310 ಟಿಎಂಸಿ ನೀರು ಮತ್ತು ಅದರ ಬಳಕೆಯ ಲೆಕ್ಕ.

ಅಂತಿಮ ತೀರ್ಪಿನಲ್ಲಿ ರಾಜ್ಯದ ಪರವಾಗಿ ಇದೆಯೆನ್ನಲಾದ ಇನ್ನೂ ಒಂದು ಅಂಶವನ್ನು ನ್ಯಾಯವಾದಿಗಳು ಕಂಡುಹಿಡಿದಿದ್ದಾರೆ. ಬಿಳಿಗುಂಡ್ಲು ಜಲಮಾಪನ

ಕೇಂದ್ರದಿಂದಲೇ ತಮಿಳುನಾಡಿಗೆ ನೀರು ಹರಿಸಬೇಕೆಂದು ತಿಳಿಸಿರುವುದರಿಂದ ರಾಜ್ಯಕ್ಕೆ ಲಾಭ ಆಗಿದೆ. ನಷ್ಟ ಅಗಿಲ್ಲ ಎನ್ನುವುದು ನ್ಯಾಯವಾದಿಗಳ ಇನ್ನೊಂದು ವಾದ.

1982–83ರಿಂದ 1989–90ರ ವರೆಗಿನ ಆರು ವರ್ಷಗಳ ಅವಧಿಯಲ್ಲಿ ಮೆಟ್ಟೂರು ಜಲಾಶಯಕ್ಕೆ ಹರಿದುಬಂದ ಸರಾಸರಿ ನೀರಿನ ಪ್ರಮಾಣದ ಆಧಾರದಲ್ಲಿ ತಮಿಳುನಾಡಿಗೆ 205 ಟಿಎಂಸಿ ನೀರು ಹರಿಸಬೇಕೆಂದು ಮಧ್ಯಂತರ ತೀರ್ಪು ಹೇಳಿತ್ತು. ಆದರೆ ಅದೇ ಅವಧಿಯಲ್ಲಿ ಬಿಳಿಗುಂಡ್ಲು ಜಲಮಾಪನ ಕೇಂದ್ರದಲ್ಲಿ ಹರಿದುಹೋದ ಸರಾಸರಿ ನೀರಿನ ಪ್ರಮಾಣ 227 ಟಿಎಂಸಿ.

ಮಾರ್ಗಮಧ್ಯ ಜಲಾನಯನ ಪ್ರದೇಶದಲ್ಲಿ 25 ಟಿಎಂಸಿ ನೀರು ಕೂಡಿದ ಮೇಲೂ ಬಿಳಿಗುಂಡ್ಲುವಿನಿಂದ ಬಿಟ್ಟ ನೀರಿಗಿಂತ ಸುಮಾರು 22 ಟಿಎಂಸಿ ನೀರು ಮೆಟ್ಟೂರು ಜಲಾಶಯದಲ್ಲಿ ಕಡಿಮೆ ದಾಖಲಾಗಿದೆ. ಆದ್ದರಿಂದ ಬಿಳಿಗುಂಡ್ಲು ಜಲಮಾಪನ ಕೇಂದ್ರದಿಂದಲೆ ನೀರು ಬಿಡಲು ಹೇಳಿರುವುದು ರಾಜ್ಯಕ್ಕೆ ಸಿಕ್ಕಿರುವ ನ್ಯಾಯ ಎನ್ನುತ್ತಾರೆ ಮೋಹನ ಕಾತರಕಿ.

(06-02-2007)

ಸಂಕಷ್ಟ ಹಂಚಿಕೆ ಸೂತ್ರ

ಮಳೆಗಾಲಕ್ಕೆ ನೂರಾರು ವಾರಸುದಾರರು, ಬರಗಾಲ ಅನಾಥ– ಇದು ಕಾವೇರಿ ಕಣಿವೆಂಯಲ್ಲಿ ಕರ್ನಾಟಕದ ಕತೆ. ಮಳೆ ನೀರನ್ನು ಹೇಗೆ ಹಂಚಿಕೊಳ್ಳಬೇಕೆಂದು ಅಂತಿಮ ಐತೀರ್ಪಿನಲ್ಲಿ ಸುದೀರ್ಘವಾಗಿ ವಿವರಿಸಿರುವ ಕಾವೇರಿ ನ್ಯಾಯಮಂಡಳಿ, ಮಳೆ ಇಲ್ಲದ ದಿನಗಳ ಸಂಕಷ್ಟ ಹಂಚಿಕೊಳ್ಳುವುದು ಹೇಗೆಂಬುದನ್ನು ಕೆಲವೇ ವಾಕ್ಯಗಳಲ್ಲಿ ಹೇಳಿ ಕೈತೊಳೆದುಕೊಂಡಿದೆ.

ಮಳೆ ಕೊರತೆಯ ವರ್ಷದಲ್ಲಿ ಕಡಿಮೆಯಾಗುವ ನೀರಿನ ಉತ್ಪನ್ನದ ಅನುಪಾತಕ್ಕೆ ಅನುಗುಣವಾಗಿ ಬಿಡಬೇಕಾದ ನೀರಿನ ಪಾಲು ಕಡಿಮೆಯಾಗಲಿದೆ. ಎಂದಷ್ಟೇ ಹೇಳಿರುವ ನ್ಯಾಯಮಂಡಳಿ ಇದಕ್ಕೊಂದು ಸ್ಪಷ್ಟವಾದ ಸೂತ್ರ ಇಲ್ಲವೇ ಮಾರ್ಗಸೂಚಿಯನ್ನು ನೀಡಿಲ್ಲ. 1991ರ ಮಧ್ಯಂತರ ಐತೀರ್ಪಿನಲ್ಲಿಯೂ ಸಂಕಷ್ಟ ಹಂಚಿಕೆ ಗೊಂದಲಮಯ.

ಸಮೃದ್ಧಿಯ ದಿನಗಳಲ್ಲಿ ಹಿಂದಿನ 205 ಟಿಎಂಸಿ ಇಲ್ಲವೇ ಮುಂದಿನ 192 ಟಿಎಂಸಿ ನೀರು ಹರಿಸುವುದು ರಾಜ್ಯಕ್ಕೆ ಸಮಸ್ಯೆಯೇ ಅಲ್ಲ. 1991–92ರಿಂದ 2006–2007ರವರೆಗಿನ ಹದಿನಾರು ವರ್ಷಗಳಲ್ಲಿ ಐದು ಜಲವರ್ಷಗಳನ್ನು (1995–96: 195 ಟಿಎಂಸಿ, 2001–2002: 189.90 ಟಿಎಂಸಿ, 2002–2003: 109.45 ಟಿಎಂಸಿ, 2003–2004: 75.87 ಟಿಎಂಸಿ, ಮತ್ತು 2004–05: 185.55 ಟಿಎಂಸಿ) ಹೊರತುಪಡಿಸಿ ವರ್ಷಗಳಲ್ಲಿ 205 ಟಿಎಂಸಿಗಿಂತ ಹೆಚ್ಚು ನೀರು

ಮೆಟ್ಟೂರು ಜಲಾಶಯಕ್ಕೆ ಹರಿದಿದೆ. ಸಂಘರ್ಷದ ಕಿಡಿ ಹಾರುವುದು ಮಳೆ ಇಲ್ಲದ ಸಂಕಷ್ಟದ ಕಾಲದಲ್ಲಿ.

ಮಳೆ ಕೊರತೆಯ ದಿನಗಳಲ್ಲಿ ಬಳಸಲು ಸಾಧ್ಯವಾಗುವಂತೆ ಉತ್ತಮ ಮಳೆಯ ಸಾಮಾನ್ಯ ಜಲವರ್ಷದ ಕೊನೆಯಲ್ಲಿ ಜಲಾಶಯಗಳಲ್ಲಿ ಸಾಧ್ಯ ಇದ್ದಷ್ಟು ನೀರಿನ ಸಂಗ್ರಹ ಇಟ್ಟುಕೊಳ್ಳಬೇಕು. ಸತತ ಎರಡು ವರ್ಷ ಸಂಕಷ್ಟ ಕಾಣಿಸಿಕೊಂಡಲ್ಲಿ ಕಾವೇರಿ ನಿರ್ವಹಣಾ ಮಂಡಳಿ ಇಲ್ಲವೇ ಕಾವೇರಿ ನಿಯಂತ್ರಣ ಪ್ರಾಧಿಕಾರ ನೀರು ಬಿಡುಗಡೆಯ ಮಾಸಿಕ ಕಂತುಗಳ ಪ್ರಮಾಣವನ್ನು ಕಡಿಮೆಗೊಳಿಸಬಹುದು' ಎಂದು ಅಂತಿಮ ತೀರ್ಪು ಹೇಳಿದೆ. (ಐದನೇ ಸಂಪುಟ ಪುಟ-213)

ಮಧ್ಯಂತರ ಐತೀರ್ಪಿನಲ್ಲಿ ತಿಳಿಸಿದಂತೆ ಸಂಕಷ್ಟ ಹಂಚಿಕೆಯ ಸೂತ್ರ ರಚನೆಯ ಹೊಣೆಯನ್ನು ಪ್ರಧಾನಮಂತ್ರಿ ಅಧ್ಯಕ್ಷತೆಯ ಕಾವೇರಿ ನದಿ ಪ್ರಾಧಿಕಾರ ತನಗೆ ಉಸ್ತುವಾರಿ ಸಮಿತಿ ಸೂತ್ರ ರಚನೆಗಾಗಿ 2003ರ ಜೂನ್ 3ರಂದು ತಾಂತ್ರಿಕ ಸಮಿತಿಯನ್ನು ರಚಿಸಿತ್ತು. ಈ ನಡುವೆ ಕೇಂದ್ರ ಜಲ ಆಯೋಗ ಸಂಕಷ್ಟ ಸೂತ್ರವೊಂದನ್ನು ಹೊರ ತಂದೇ ಬಿಟ್ಟಿತ್ತು. ಅದನ್ನು ತಿರಸ್ಕರಿಸಿದ್ದ ಕರ್ನಾಟಕ ಅದಕ್ಕಾಗಿ ನೀಡಿದ್ದ ಕಾರಣಗಳು ಹೀಗಿವೆ.

ನೈರುತ್ಯ ಮಾರುತದ ಮಳೆಯನ್ನಷ್ಟೇ ಸಂಕಷ್ಟ ಸೂತ್ರ ರಚನೆಯಲ್ಲಿ ಪರಿಗಣಿಸಲಾಗಿದೆ. ತಮಿಳುನಾಡಿನಲ್ಲಿ ಅಕ್ಟೋಬರ್ ಮಧ್ಯಭಾಗದಿಂದ ಜನವರಿವರೆಗೆ ಸುರಿಯುವ ನೈರುತ್ಯ ಮಾರುತದ ಮಳೆ ಸಾಂಬಾ ಬೆಳೆಯ ಮೂರನೆಯ ಎರಡರಷ್ಟು ಅವಶ್ಯಕತೆಯನ್ನು ಪೂರೈಸುತ್ತದೆ. ಆದರೂ ಈಶಾನ್ಯ ಮಾರುತವನ್ನು ಸಂಕಷ್ಟ ಸೂತ್ರ ರಚನೆಗೆ ಪರಿಗಣಿಸಿಲ್ಲ.

ಜಲ ಆಯೋಗ ಸಂಕಷ್ಟ ಸೂತ್ರ ರಚಿಸುವಾಗ ರಾಜ್ಯದ ನಾಲ್ಕು ಜಲಾಶಯಗಳ ಜಲಾನಯನ ಪ್ರದೇಶವನ್ನಷ್ಟೇ ಗಣನೆಗೆ ತೆಗೆದುಕೊಳ್ಳಲಾಗಿದ್ದು, ತಮಿಳುನಾಡು ಜಲಾಶಯಗಳ ನೀರು ಸಂಗ್ರಹ ಲೆಕ್ಕವನ್ನು ಕೈಬಿಡಲಾಗಿದೆ. ರಾಜ್ಯದ ಜಲಾಶಯಗಳು ಮತ್ತು ಬಿಳಿಗುಂಡ್ಲು ಜಲಮಾಪನದ ನಡುವಿನ 8000 ಚ.ಕಿ.ಮೀ. ವಿಸ್ತೀರ್ಣದ ಮಧ್ಯಂತರ ಜಲಾನಯನ ಪ್ರದೇಶ ಮತ್ತು ಬಿಳಿಗುಂಡ್ಲು ಮತ್ತು ಮೆಟ್ಟೂರು ಜಲಾಶಯದ ನಡುವಿನ 5535 ಚ.ಕಿ.ಮೀ. ವಿಸ್ತೀರ್ಣದ ಕೆಳ ಜಲಾನಯನ ಪ್ರದೇಶದಲ್ಲಿನ ನೀರಿನ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಳ್ಳಬೇಕು.

ತಮಿಳುನಾಡಿಗೆ ಬಿಟ್ಟ ನೀರಿನ ಲೆಕ್ಕವನ್ನು ಬಿಳಿಗುಂಡ್ಲುವಿನಲ್ಲಿರುವ ಕೇಂದ್ರ ಜಲ ಆಯೋಗದ ಜಲಮಾಪನ ಕೇಂದ್ರದ ದಾಖಲೆ ಆಧಾರದಲ್ಲಿ ನಡೆಸಬೇಕು. ಮೆಟ್ಟೂರು ಜಲಾಶಯದ ನೀರಿನ ದಾಖಲೆಯನ್ನು ಪರಿಗಣಿಸಿ ಕರಡು ಸೂತ್ರವನ್ನು ರಚಿಸಲಾಗಿದೆ. ಮೆಟ್ಟೂರಿನಲ್ಲಿ ಅಧಿಕೃತ ಜಲಮಾಪನ ವ್ಯವಸ್ಥೆಯೇ ಇಲ್ಲದಿರುವಾಗ ಅಲ್ಲಿನ ದಾಖಲೆ ಅಧಿಕೃತ ಅಲ್ಲ.

ಸಂಕಷ್ಟ ಸೂತ್ರದ ರಚನೆಗಾಗಿ 1991ರಿಂದ 2001ರ ವರೆಗಿನ ಹತ್ತು ವರ್ಷಗಳ ಅವಧಿಯ ಉತ್ತಮ ಮಳೆಯ ವರ್ಷಗಳು ಎರಡು ಕನಿಷ್ಠ ಮಳೆಯ ವರ್ಷ ಸರಾಸರಿಯನ್ನು ಪರಿಗಣಿಸಿರುವುದು ಸರಿಯಲ್ಲ. ದೀರ್ಘಾವಧಿಯ 1974ರಿಂದ ಈ ವರೆಗಿನ ಮಳೆಯನ್ನು ಗಣನೆಗೆ ತೆಗೆದುಕೊಳ್ಳಬೇಕು.

ಕರ್ನಾಟಕ ಕೆಲವು ಆಕ್ಷೇಪಗಳಿಗೆ ಅಂತಿಮ ಪರೋಕ್ಷ ಪರಿಹಾರಗಳು. ಅದು ನಾಲ್ಕು ರಾಜ್ಯಗಳು ಮಾಡುವ ವ್ಯಾಖ್ಯಾನವನ್ನು ಅವಲಂಬಿಸಿರುವುದು. ವರ್ಷ ಕಾವೇರಿ ಕಣಿವೆಯ ಜಲಾಶಯಗಳ ನೀರು ಸಂಗ್ರಹ ಜೂನ್ 1 ರಿಂದ ಅಕ್ಟೋಬರ್ ವರೆಗಿನ ನೈರುತ್ಯ ಮಾರುತ ಮಳೆ 16ರಿಂದ ಜ.31 ರವರೆಗಿನ ಈ ಮಾರುತದ ಮಳೆಯ ಬಗ್ಗೆ ತಯಾರಿಸುವ ಹೋಣೆಯನ್ನು ನಿಯಂತ್ರಣಾ ಪ್ರಾಧಿಕಾರ ನಿರ್ವಹಣಾ ಸಮಿತಿಗೆ ನ್ಯಾಯವಾದ ಅಂತಿಮ ಐತೀರ್ಪಿನಲ್ಲಿ ನೀರಿನದೊಂದೇ ಆತಾದಾಯಕ ಬೆಳವಣಿಗೆ. ಇದರ ಜತೆ ಬಿಳಿಗುಂಡ್ಲು ಜಲಮಾಪನ ನೀರಿನ ಲೆಕ್ಕವೇ ಅಧಿಕೃತ ಅಂತಿಮ ಐತೀರ್ಪು ಹೇಳಿದೆ.

ಈ ಮೂರು ಅಂಶಗಳನ್ನು ಜಲಾಶಯಗಳ ನೀರು ಸಂಗ್ರಹ ಮಾರುತದ ಪರಿಗಣನೆ ಬಿಳಿಗುಂಡ್ಲು ಜಲಮಾಪನದ ಲೆಕ್ಕ ಸಂಕಷ್ಟ ಹಂಚಿಕೆ ಆಧಾರವಾಗಿ ಪರಿಗಣಿಸಿದ್ದಲ್ಲಿ ಕರ್ನಾಟಕ ಒಪ್ಪಿಕೊಳ್ಳಲು ಕಷ್ಟವಾಗಲಾರದು.

ಬೆಂಗಳೂರು ಮಹಾನಗರವೂ ಸೇರಿದಂತೆ ಕಾವೇರಿ ಕಣಿವೆ ಪ್ರದೇಶದ ಜನತೆಯ ಗೃಹಬಳಕೆಗೆ ಕೇವಲ 1.75 ಟಿಎಂಸಿ ನೀರನ್ನು ನಿಗದಿ ಪಡಿಸಿರುವ ಆಘಾತಕಾರಿ ಅಂಶ ಕಾವೇರಿ ನ್ಯಾಯ ಮಂಡಳಿಯ ಐತೀರ್ಪಿನಲ್ಲಿರುವುದು ಬೆಳಕಿಗೆ ಬಂದಿದೆ

ಕುಡಿಯುವ ನೀರಿನ ಪಾಲನ್ನು ನಿಗದಿಪಡಿಸುವಾಗ 'ಕಾವೇರಿ ಕಣಿವೆಯ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಮಹನಗರದ ಮೂರನೆ ಒಂದರಷ್ಟು ಭಾಗವನ್ನು ಮಾತ್ರ ನ್ಯಾಯ ಮಂಡಳಿ ಪರಿಗಣಿಸಿದೆ. 2025ರ ವರೆಗಿನ ಜನಸಂಖ್ಯೆಯನ್ನು ಗಮನದಲ್ಲಿಟ್ಟು ಕೊಂಡು ಕುಡಿಯುವ ನೀರಿನ ಪಾಲು ನಿಗದಿ ಪಡಿಸಿ ಎಂದು ಕರ್ನಾಟಕ ಮೊರೆ ಇಟ್ಟಿದರೂ ನ್ಯಾಯಮಂಡಳಿ 2011ರವರೆಗಿನ ಜನಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಕಾವೇರಿ ಕಣಿವೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ನಗರಪಟ್ಟಣಗಳು ಸೇರಿದಂತೆ ಗೃಹ ಬಳಕೆಗೆ ನೀಡಿರುವುದು 1.75ಟಿಎಂಸಿ ಮತ್ತು ಕೈಗಾರಿಕಾ ಬಳಕೆಗಾಗಿ 0.10 ಟಿಎಂಸಿ

ಬೆಂಗಳೂರು ನಗರದಲ್ಲಿ ಅನುಷ್ಠಾನಗೊಳ್ಳಲಿರುವ ಎಲ್ಲಾ ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ಬೇಕಾಗಿರುವ ಒಟ್ಟು ನೀರಿನ ಪ್ರಮಾಣ 14.52 ಟಿಎಂಸಿ ಎಂದು 1990ರ ಜೂನ್ ನಲ್ಲಿ ಕರ್ನಾಟಕ ನ್ಯಾಯಮಂಡಳಿಗೆ ತಿಳಿಸಿತ್ತು. ಅದರ ನಂತರದ ದಿನಗಳಲ್ಲಿ ನಗರದ ಬೆಳವಣಿಗೆಗೆ ಅನುಗುಣವಾಗಿ 2025ರ

ಜನಸಂಖ್ಯೆಯನ್ನು ಉದ್ದೇಶವಾಗಿಟ್ಟುಕೊಂಡು ಬೆಂಗಳೂರು ನಗರಕ್ಕೆ ಬೇಕಾಗಿರುವ ನೀರು 30 ಟಿಎಂಸಿ ಎಂದು ಮೊದಲ ಬೇಡಿಕೆಯನ್ನು ಪರಿಷ್ಕರಿಸಿತು. ಆದರೆ ನ್ಯಾಯಮಂಡಳಿ 1990 ರಲ್ಲಿ ಕರ್ನಾಟಕ ಮಂಡಿಸಿದ 14.52 ಟಿಎಂಸಿಯನ್ನಷ್ಟೇ ಗಣನೆಗೆ ತೆಗೆದುಕೊಂಡಿದೆ.

ಕುಡಿಯುವ ನೀರಿನ ಬೇಡಿಕೆಯನ್ನು ನಿರ್ಧರಿಸಲು ಕಾವೇರಿ ಕಣಿವೆಯನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳೆಂದು ವಿಂಗಡಿಸಲಾಗಿದೆ. ನಗರ ಪ್ರದೇಶದ ಶೇಕಡಾ 25ರಷ್ಟು ಜನಸಂಖ್ಯೆಯ ಪ್ರತಿದಿನದ ತಲಾವಾರು ಬೇಡಿಕೆ 135ಲೀಟರ್, ನಗರ ಪ್ರದೇಶದ ಶೇಕಡಾ 75ರಷ್ಟು ಜನಸಂಖ್ಯೆಯ ಪ್ರತಿದಿನ ತಲಾವಾರ ಬೇಡಿಕೆ 100 ಲೀಟರ್ ಎನ್ನುವ ವಿಶಾಲ ಮಾನದಂಡವನ್ನು ನ್ಯಾಯಮಂಡಳಿ ಅನುಸರಿಸಿದೆ. ಕರ್ನಾಟಕದಲ್ಲಿ ನಗರ ಜನಸಂಖ್ಯೆಯ ಪ್ರತಿದಿನದ ತಲಾವಾರು ಬೇಡಿಕೆ 150 ಲೀಟರ್. ಇದರ ಪ್ರಕಾರ ಬೇಕಾಗಿರುವ ನೀರು 8.70 ಟಿಎಂಸಿ . ಗ್ರಾಮೀಣ ಜನಸಂಖ್ಯೆಯ ಪ್ರತಿದಿನದ ತಲಾವಾರು ಬೇಡಿಕೆ 70 ಲೀಟರ್. ಇದರಂತೆ ಬೇಕಾಗಿರುವ ನೀರು 8.52 ಟಿಎಂಸಿ. ನಗರ- ಗ್ರಾಮಗಳು ಸೇರಿ ಕಾವೇರಿ ಕಣಿವೆಯ ಜನತೆಯ ಗೃಹ ಬಳಕೆಗೆ ಬೇಕಾಗಿರುವ ಒಟ್ಟು ನೀರಿನ ಪ್ರಮಾಣ 17.22 ಟಿಎ0ಸಿ (8.70+8.52).

ಈ 17.22 ಟಿಎಂಸಿಯ ಅರ್ಧಭಾಗ ಅಂತರ್ಜಲದ ಮೂಲದಿಂದ ಲಭ್ಯವಿರುವುದರಿಂದ ಕಾವೇರಿ ನದಿಯ ನೀರಿನ ಪಾಲು ಕೇವಲ 8.75 ಟಿಎಂಸಿ ಎಂದು ನ್ಯಾಯಮಂಡಳಿ ಅಂದಾಜು ಮಾಡಿದೆ. ಅದರಲ್ಲಿ ಪಕ್ಷಿ –ಪ್ರಾಣಿ ಸಂಕುಲವು ಸೇರಿದಂತೆ ಜನತೆಯ ನಿತ್ಯ ಗೃಹಕೃತ್ಯಗಳ ಅವಶ್ಯಕತೆಗೆ (ಕುಡಿಯುವ, ಸ್ನಾನ, ಶೌಚ ಇತ್ಯಾದಿ) ಪ್ರತ್ಯಕ್ಷವಾಗಿ ಶೇಕಡ 20 ರಷ್ಟು ಭಾಗ ಮಾತ್ರ ಬಳಕೆಯಾಗುವುದರಿಂದ ಬೇಕಾಗಿರುವ ಒಟ್ಟು ನೀರಿನ ಪ್ರಮಾಣ 1.75 ಟಿಎಂಸಿ ಮಾತ್ರ ಎಂಬ ತೀರ್ಮಾನಕ್ಕೆ ನ್ಯಾಯ ಮಂಡಳಿ ಬಂದಿದೆ.

ನ್ಯಾಯ ಮಂಡಳಿಯ ಪ್ರಕಾರ. ಕಾವೇರಿ ಕಣಿವೆಯ ನಗರಪ್ರದೇಶದ ಒಟ್ಟು ನೀರಿನ ಅವಶ್ಯಕತೆ 8.0 ಟಿಎಂಸಿ ಅದರಲ್ಲಿ ಶೇಕಡ 50ರಷ್ಟು ಭಾಗ ಅಂತರ್ಜಲ ಮೂಲದಿಂದ ಲಭ್ಯವದರೆ ಉಳಿಯುವ ಪ್ರಮಾಣ 4.35 ಟಿಎಂಸಿ. ಈ ನೀರಿನ ಶೇಕಡಾ 20ರಷ್ಟನ್ನು ಮಾತ್ರ ನ್ಯಾಯ ಮಂಡಳಿ ಪರಿಗಣಿಸಿರುವುದರಿಂದ ಕಣಿವೆಯ ಎಲ್ಲ ನಗರಪ್ರದೇಶದ ಜನಸಂಖ್ಯೆಯ ಗೃಹ ಬಳಕೆಗೆ ನೀಡಲಾಗಿರುವ ನೀರು 0.85 ಟಿಎಂಸಿ.

O

(08-02-2007)

ಕಾವೇರಿ : ಲಾಭ-ನಷ್ಟ

ನೆಲ-ಜಲದ ವಿಷಯದಲ್ಲಿ ಮನುಷ್ಯ ಮೊದಲು ಕಿವಿಗೊಡುವುದು ಹೃದಯಕ್ಕೆ. ಭಾವನೆಗಳು ಭೋರ್ಗರೆದು ಹರಿಯುವಾಗ ಬುದ್ಧಿಯ ಕಿವಿಮಾತು ಕೇಳುವುದಿಲ್ಲ. ಭಾವೋನ್ಮಾದದ ಬೆಂಕಿಯ ಉರಿ ಕಡಿಮೆಯಾಗುತ್ತಾ ಹೋಗಿ ಅರಿವಿನ ಬೆಳಕು ಮೂಡುತ್ತಿದ್ದಂತೆಯೇ ಮಸುಕು ಮಸುಕಾಗಿದ್ದ ವಾಸ್ತವದ ಚಿತ್ರ ಸ್ಪಷ್ಟವಾಗುತ್ತಾ ಹೋಗುತ್ತದೆ. ಈ ಬೆಳಕಿನಲ್ಲಿ ಕಾವೇರಿ ನ್ಯಾಯಮಂಡಳಿಯ ಅಂತಿಮ ಐತೀರ್ಪು ಪರಿಶೀಲಿಸಲು ಈಗ ಸರಿಯಾದ ಕಾಲ. ಕರ್ನಾಟಕಕ್ಕೆ ಅನ್ಯಾಯ ಆಗಿದೆಯೇ? ಖಂಡಿತ ಆಗಿದೆ. ನ್ಯಾಯ ಸಿಕ್ಕಿಯೇ ಇಲ್ಲವೇ? ಇಲ್ಲವೇ ಇಲ್ಲ ಎಂದು ಕೂಡಾ ಹೇಳಲಾಗದು. ನ್ಯಾಯ ಮತ್ತು ಅನ್ಯಾಯದ ಲೆಕ್ಕ ಹೀಗಿದೆ.

ಅನ್ಯಾಯ 1 : ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ತಮಿಳುನಾಡಿಗೆ ಹರಿಸಬೇಕಾಗಿರುವ ನೀರಿನ ಪ್ರಮಾಣ ತಗ್ಗಿಲ್ಲ. ಮಧ್ಯಂತರ ಐತೀರ್ಪಿನ ಪ್ರಕಾರ 137 ಟಿಎಂಸಿ ಹರಿಸಬೇಕಾಗಿತ್ತು. ಈಗ 134 ಟಿಎಂಸಿ ಈ ನೀರಿನ ಪಾಲಿನ ಭಾರದಿಂದಾಗಿ ಅಂತಿಮ ಐತೀರ್ಪಿನ ಅನುಷ್ಠಾನ ಅಸಾಧ್ಯವೆನಿಸಿ ವಿವಾದ ಜೀವಂತವಾಗಿಯೇ ಉಳಿದಿದೆ. ಹರಿಸಬೇಕಾದ ನೀರಿನ ಪಾಲನ್ನು 205 ಟಿಎಂಸಿಗಷ್ಟೇ ಉಳಿಸಿಕೊಂಡು ಸೆಪ್ಟೆಂಬರ್ ತಿಂಗಳವರೆಗೆ 100, ಅದರ ನಂತರ 105 ಟಿಎಂಸಿ ಬಿಡುಗಡೆಗೊಳಿಸಿ ಎಂದು ಹೇಳಿದ್ದರೂ ಈ ವಿವಾದ ಇತ್ಯರ್ಥಪಡಿಸಲು

ನೆರವಾದಂತಾಗುತ್ತಿತ್ತೇನೋ? ತಮಿಳುನಾಡು ಖುದ್ದಾಗಿ ಒಪ್ಪಿಕೊಂಡ 20 ಟಿಎಂಸಿ ಅಂತರ್ಜಲದ ಬಳಕೆಯನ್ನು ಪರಿಗಣಿಸಿದ್ದರೂ ರಾಜ್ಯದ ಮೇಲಿನ ಭಾರ ಕಡಿಮೆಯಾಗಲು ಸಾಧ್ಯ ಇತ್ತು.

ಅನ್ಯಾಯ 2 : ಕಾವೇರಿ ಕಣಿವೆ ಪ್ರದೇಶದ ಜನತೆಗೆ ಕುಡಿಯುವ ನೀರಿನ ಅವಶ್ಯಕತೆಗೆ ಪಾಲು ನಿಗದಿಪಡಿಸದೆ ಇರುವುದು ಐತೀರ್ಪಿನಲ್ಲಿನ ಇನ್ನೊಂದು ಲೋಪ. ರಾಜ್ಯದ ನೀರಾವರಿ ಯೋಜನೆಗಳಿಗೆ 250 ಟಿಎಂಸಿ ಮತ್ತು ಕುಡಿಯುವ ಮತ್ತು ಕೈಗಾರಿಕಾ ಬಳಕೆಗೆ 1.85 ಟಿಎಂಸಿ ನೀರನ್ನು ನಿಗದಿಪಡಿಸಿರುವ ನ್ಯಾಯಮಂಡಳಿ ಹೆಚ್ಚುವರಿಯಾಗಿ 17 ಟಿಎಂಸಿ ನೀರು ಬಳಸುವ ಅಧಿಕಾರವನ್ನು ರಾಜ್ಯಕ್ಕೆ ನೀಡಿದೆ. ಅದನ್ನು ಕುಡಿಯುವ ನೀರಿಗಾಗಿ ನಿಗದಿಪಡಿಸಿದ್ದರೆ ಈ ಲೋಪಕ್ಕೆ ಅವಕಾಶ ಇರುತ್ತಿರಲಿಲ್ಲ. ಇದನ್ನು ಯಾವ ರಾಜ್ಯ ಕೂಡಾ ಆಕ್ಷೇಪಿಸುತ್ತಿರಲಿಲ್ಲ. ತನ್ನ ಪಾಲಿನ ನೀರನ್ನು ಕಾವೇರಿಯೇತರ ಕಣಿವೆಗೆ ಹರಿಸಲು ಕೇರಳ ಕೇಳಿದ್ದ ಅನುಮತಿಯನ್ನು ನಿರಾಕರಿಸಿದ ಹಿನ್ನೆಲೆಯಲ್ಲಿಯೇ ಕಾವೇರಿ ಕಣಿವೆಯಲ್ಲಿ ಇಲ್ಲದ ಪೆನ್ನಾರ್ ನದಿ ಕಣಿವೆಗೆ ಸೇರಿದ ಬೆಂಗಳೂರು ನಗರದ ಮೂರನೇ ಎರಡರಷ್ಟು ಪ್ರದೇಶಕ್ಕೆ ನ್ಯಾಯಮಂಡಳಿ ನೀರು ನಿರಾಕರಿಸಿದೆಯೆಂದು ಹೇಳಲಾಗಿದೆ.

ಆದರೆ ಕುಡಿಯುವ ನೀರಿಗಾಗಿ ಒಂದು ನದಿ ಕಣಿವೆಯಿಂದ ಇನ್ನೊಂದು ನದಿ ಕಣಿವೆಗೆ ನೀರು ಹರಿಸಿದ ಹಲವು ಉದಾಹರಣೆಗಳಿವೆ. ತಮಿಳುನಾಡು ರಾಜಧಾನಿ ಚೆನ್ನೈಗೆ ಕೃಷ್ಣಾ ನದಿಯಿಂದ ನೀರು ಹರಿಸಲು 15 ಟಿಎಂಸಿ ಸಾಮರ್ಥ್ಯದ ತೆಲುಗುಗಂಗಾ ಯೋಜನೆ ಇದೆ. ಅದಕ್ಕೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ತಮ್ಮ ಪಾಲಿನ ತಲಾ 5 ಟಿಎಂಸಿ ನೀರು ನೀಡುತ್ತಿದೆ. ಇದೇ ರೀತಿ ಯಮುನಾ ನದಿ ಕಣಿವೆಗೆ ಸೇರಿದ ದೆಹಲಿಯ ಕುಡಿಯುವ ನೀರಿನ ಯೋಜನೆಗೆ ಭಾಕ್ರಾ ಕಾಲುವೆಯಿಂದ ಪಂಜಾಬ್ ನೀರು ಹರಿದುಬರುತ್ತಿದೆ.

ಅನ್ಯಾಯ 3 : ಕೇರಳಕ್ಕೆ 30 ಟಿಎಂಸಿ ನೀರು ನಿಗದಿಪಡಿಸಿದ್ದರೂ ಸದ್ಯಕ್ಕೆ ಅದು ಬಳಸುತ್ತಿರುವುದು ಒಂಭತ್ತು ಟಿಎಂಸಿ. ಉಳಿದ ನೀರನ್ನು ಸಂಪೂರ್ಣವಾಗಿ ತಮಿಳುನಾಡಿಗೆ ನೀಡಬೇಕೆಂದು ನ್ಯಾಯಮಂಡಳಿ ಹೇಳಿದೆ. ರಕ್ಷಿತ ಅರಣ್ಯ ಪ್ರದೇಶದಲ್ಲಿ ಆ ರಾಜ್ಯದ ನದಿ ಕಣಿವೆ ಇರುವುದರಿಂದ ನೀರಾವರಿ-ವಿದ್ಯುತ್‌ನ ಐದು ಯೋಜನೆಗಳಿಗೆ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ಕೊಕ್ಕೆ ಹಾಕಿ ಕೂತಿದೆ. ಅದಕ್ಕೆ ಮುಕ್ತಿ ಯಾವಾಗಲೋ ಗೊತ್ತಿಲ್ಲ. ಅಲ್ಲಿಯವರೆಗೆ ನೀರು ತಮಿಳುನಾಡು ಪಾಲು. ಇದರಲ್ಲಿ ಕನಿಷ್ಠ ಅರ್ಧದಷ್ಟು ನೀರನ್ನು ಕರ್ನಾಟಕಕ್ಕೆ ನೀಡಬಹುದಿತ್ತು.

ನ್ಯಾಯ 1 : ತಲೆಮೇಲಿದ್ದ 1924ರ ಒಪ್ಪಂದದ ತೂಗುಕತ್ತಿಯಿಂದ ಶಾಶ್ವತ ಮುಕ್ತಿ. ಈ ಒಪ್ಪಂದದ ಪ್ರಕಾರ ಕರ್ನಾಟಕದ ಅಚ್ಚುಕಟ್ಟು ಪ್ರದೇಶ 2,35,000 ಎಕರೆ,

ಬಳಸಬಹುದಾದ ನೀರಿನ ಪಾಲು 89.82 ಟಿಎಂಸಿ. ಅದಕ್ಕಿಂತ ಹೆಚ್ಚಿನ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಿನ ಬಳಕೆಗಾಗಿ ಮದ್ರಾಸ್ ಪ್ರಾಂತ್ಯದ ಅನುಮತಿ ಅಗತ್ಯವಾಗಿತ್ತು.

ನ್ಯಾಯ 2 : ಮಧ್ಯಂತರ ವರದಿಯಲ್ಲಿದ್ದ 11.24 ಲಕ್ಷ ಎಕರೆ ಮೇಲಿನ ನಿರ್ಬಂಧ ರದ್ದಾಗಿರುವುದು ಕರ್ನಾಟಕಕ್ಕೆ ಸಿಕ್ಕಿರುವ ಮೊದಲ ಜಯ. 27 ಲಕ್ಷ ಎಕರೆ ಅಚ್ಚುಕಟ್ಟು ಅಭಿವೃದ್ಧಿಯ ಗುರಿ ಇದೆ. 24 ಲಕ್ಷ ಎಕರೆ ಅಚ್ಚುಕಟ್ಟು ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಲಾಗಿದೆ ಎಂದು ಕರ್ನಾಟಕ ನ್ಯಾಯಮಂಡಳಿಯ ಮುಂದೆ ತಿಳಿಸಿದೆ. ಆದರೆ ರಾಜ್ಯದ 18.85 ಲಕ್ಷ ಅಚ್ಚುಕಟ್ಟು ಪ್ರದೇಶವನ್ನಷ್ಟೇ ಗುರುತಿಸಿ ಅದಕ್ಕೆ 250 ಟಿಎಂಸಿ ನೀರನ್ನು ನೀಡಲಾಗಿದೆ. ಹೀಗಿದ್ದಾಗ ಹೆಚ್ಚುವರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗೆ ಹೆಚ್ಚುವರಿ ನೀರೆಲ್ಲಿದೆ? ಈ ಪ್ರಶ್ನೆಗೂ ನ್ಯಾಯಮಂಡಳಿ ಪರೋಕ್ಷವಾಗಿ ಉತ್ತರ ನೀಡಿದೆ. ರಾಜ್ಯದ ಕಾವೇರಿ ಕಣಿವೆ ಪ್ರದೇಶದಲ್ಲಿ ಲಭ್ಯ ಇರುವ ಹೆಚ್ಚುವರಿ ನೀರಿನ ಮೇಲಿನ ಹಕ್ಕನ್ನು ರಾಜ್ಯಕ್ಕೆ ನೀಡಿದೆ.

ನ್ಯಾಯ 3 : ನ್ಯಾಯಮಂಡಳಿ ರಾಜ್ಯಕ್ಕೆ ಅಧಿಕೃತವಾಗಿ ನೀಡಿರುವ ಪಾಲು 270 ಟಿಎಂಸಿಯಾದರೂ ರಾಜ್ಯ ಬಳಸಲು ಅವಕಾಶ ನೀಡಿರುವ ಹೆಚ್ಚುವರಿ ನೀರಿನ ಪಾಲನ್ನು ಸೇರಿಸಿದರೆ ಇದು 310 ಟಿಎಂಸಿಗಿಂತಲೂ ಹೆಚ್ಚಾಗುತ್ತದೆ ಎನ್ನುತ್ತಿದೆ ಒಳ ಲೆಕ್ಕ. 1972–73ರಿಂದ 2004–05ರ ವರೆಗಿನ 32 ವರ್ಷಗಳ ಅವಧಿಯಲ್ಲಿ ಬಿಳಿಗುಂಡ್ಲು ಜಲಮಾಪನದವರೆಗಿನ ಸರಾಸರಿ ಅವಧಿಯಲ್ಲಿ ಬಿಳಿಗುಂಡ್ಲು ಜಲಮಾಪನದ ವರೆಗಿನ ಸರಾಸರಿ ನೀರಿನ ಉತ್ಪನ್ನ 538 ಟಿಎಂಸಿ. ಇದರಲ್ಲಿ ತಮಿಳುನಾಡಿಗೆ ನಿಗದಿತ 192 ಟಿಎಂಸಿ ಮತ್ತು ಕೇರಳ ಬಳಸದೆ ಉಳಿದ 21 ಟಿಎಂಸಿ ಹರಿಸಿದರೆ ಉಳಿಯುವ ನೀರು 325 ಟಿಎಂಸಿ ಇದು ರಾಜ್ಯದ ಪಾಲು. ಈ ಹೆಚ್ಚುವರಿ ನೀರು ಬಳಕೆಯ ಹಕ್ಕು ರಾಜ್ಯದ ಪ್ರಮುಖ ಗೆಲುವು.

ನ್ಯಾಯ 4 : ಬಿಳಿಗುಂಡ್ಲು ಜಲಮಾಪನದ ಲೆಕ್ಕವೇ ಅಧಿಕೃತ ಎಂದು ನ್ಯಾಯಮಂಡಳಿ ಘೋಷಿಸಿ ಕರ್ನಾಟಕದ ತಲೆ ಮೇಲಿನ ದೊಡ್ಡ ಭಾರವನ್ನು ಇಳಿಸಿದೆ. ಬಿಳಿಗುಂಡ್ಲು ಮತ್ತು ಮೆಟ್ಟೂರು ಜಲಮಾಪನದ ಲೆಕ್ಕದಲ್ಲಿ ಸುಮಾರು 40–50 ಟಿಎಂಸಿಗಳ ಅಂತರ ಇದೆ. 1982–83ರಿಂದ 1989–90ರ ವರೆಗಿನ ಏಳು ವರ್ಷಗಳ ಅವಧಿಯಲ್ಲಿ ಮೆಟ್ಟೂರು ಜಲಾಶಯಕ್ಕೆ ಸರಾಸರಿ 205 ಟಿಎಂಸಿ ನೀರು ಹರಿದುಹೋಗಿದೆ ಎನ್ನುವುದನ್ನು ಒಪ್ಪಿಕೊಂಡು ಅಷ್ಟು ನೀರು ಹರಿಸಲು ಮಧ್ಯಂತರ ಐತೀರ್ಪಿನಲ್ಲಿ ತಿಳಿಸಲಾಗಿತ್ತು. ಆದರೆ ಆ ಅವಧಿಯಲ್ಲಿ ಬಿಳಿಗುಂಡ್ಲುವಿನಿಂದ ಬಿಡುಗಡೆಯಾದ ನೀರಿನ ಸರಾಸರಿ ಪ್ರಮಾಣ 227 ಟಿಎಂಸಿ ಅದಕ್ಕೆ ಮಧ್ಯಂತರ ಜಲಾನಯನ ಪ್ರದೇಶದ ನೀರಿನ ಉತ್ಪನ್ನವಾದ 25 ಟಿಎಂಸಿ ಸೇರಿಸಿದರೆ ಮೆಟ್ಟೂರಿಗೆ

ಹರಿದ ನೀರಿನ ಒಟ್ಟು ಪ್ರಮಾಣ 47 ಟಿಎಂಸಿಯಷ್ಟು ನೀರು ಕರ್ನಾಟಕಕ್ಕೆ ನಷ್ಟವಾಗಿದೆ. ಮೆಟ್ಟೂರಿನ ಈ ಮೋಸದ ಲೆಕ್ಕಕ್ಕೆ ಇನ್ನು ಅವಕಾಶ ಇಲ್ಲ.

ನ್ಯಾಯ 5 : ತಮಿಳುನಾಡಿನ ಈಶಾನ್ಯ ಮಾರುತ ಮತ್ತು ಕಾವೇರಿ ಕಣಿವೆಯ ಎಲ್ಲ ಜಲಾಶಯಗಳ ಸಂಗ್ರಹದ ಲೆಕ್ಕವನ್ನು ಕಾವೇರಿ ನಿಯಂತ್ರಣಾ ಪ್ರಾಧಿಕಾರ ಇಟ್ಟುಕೊಳ್ಳಬೇಕೆಂದು ನ್ಯಾಯಮಂಡಳಿ ಹೇಳಿದೆ. ಸಂಕಷ್ಟ ಹಂಚಿಕೆ ಸೂತ್ರಕ್ಕೆ ಈ ಎರಡು ಅಂಶಗಳನ್ನು ಪರಿಗಣಿಸಬೇಕೆಂಬ ಕರ್ನಾಟಕದ ವಾದಕ್ಕೆ ಇದು ನೆರವಾಗಲಿದೆ.

O

(12-02-2007)

ಕಾವೇರಿ ನೀರಿನ ನ್ಯಾಯ

ಕಾವೇರಿ ನ್ಯಾಯ ಮಂಡಳಿಯನ್ನು ಎಂದೂ ಬಯಸದ ಕರ್ನಾಟಕ ಅದರ ವಿರುದ್ಧ ದನಿ ಎತ್ತುವ ಒಂದು ಅವಕಾಶವನ್ನೂ ಬಿಟ್ಟಿಲ್ಲ. ಈಗ ಒಂದೆಡೆ ನ್ಯಾಯ ಮಂಡಳಿ ಮತ್ತು ನ್ಯಾಯಮೂರ್ತಿಗಳಿಗೆ ಅಗೌರವ ಸೂಚಿಸುವ ರೀತಿಯಲ್ಲಿ ರೊಚ್ಚಿಗೆದ್ದಿರುವ ಜನರ ಪ್ರತಿಭಟನೆ; ಇನ್ನೊಂದೆಡೆ ಅದೇ ಮಂಡಳಿ ಮುಂದೆ ಮರು ಪರಿಶೀಲನಾ ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರ ತಯಾರಿ ನಡೆಸುತ್ತಿದೆ. ಇದು ನಿಜಕ್ಕು ಧರ್ಮ ಸಂಕಟ. ಅಂದಹಾಗೆ ರಾಜ್ಯಕ್ಕೆ ಸದ್ಯದ ತೀರ್ಪು ತುಂಬಾ ಅನಿರೀಕ್ಷಿತವೇ?

'ಅರ್ಧ ಸತ್ತ ಹಾವು ಮತ್ತು ಅರ್ಧ ಸತ್ತ ರಾಜನನ್ನು ಬಿಟ್ಟುಬಿಡುವುದು ಬಹಳ ಅಪಾಯಕಾರಿ' ಎಂದು ಕೆಣಕುವ ದನಿಯಲ್ಲಿಯೇ ಸಂಸದ ಆರ್.ಎಲ್ ಜಾಲಪ್ಪ ಹೇಳುತ್ತಿದ್ದರೆ ಸ್ವಲ್ಪ ದೂರದಲ್ಲಿ ಕುಳಿತಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮುಖ ಇನ್ನಷ್ಟು ಗಂಟಾಗಿತ್ತು. ಅನಿರೀಕ್ಷಿತವಾಗಿ ಹರಿದು ಬಂದ 'ಹಾವು' ಕಂಡು ಪಕ್ಕದಲ್ಲೇ ಇದ್ದ ಇನ್ನೊಬ್ಬ ಸಂಸದ ಅನಂತಕುಮಾರ್ ಕಕ್ಕಾಬಿಕ್ಕಿಯಾಗಿದ್ದನ್ನು ಕಂಡ ಜಾಲಪ್ಪ ಹಾವಿನ ಕತೆಯ ಒಗಟು ಬಿಡಿಸತೊಡಗಿದರು. ಅವರ ಕಣ್ಣು ಅನಂತಕುಮಾರ್ ಕಡೆ ಮಾತಿನ ಬಾಣದ ಗುರಿ ಗೌಡರತ್ತ.

'......ಕಾವೇರಿ ನ್ಯಾಯಮಂಡಳಿ ನದಿ ಕಣಿವೆ ರಾಜ್ಯಗಳಿಗೆ ಭೇಟಿ ನೀಡಿದಾಗ ತಮಿಳುನಾಡಿನವರು ನ್ಯಾಯಮೂರ್ತಿಗಳಿಗೆ ಸೀರೆ ಕೊಟ್ಟರು, ಬಳೆ ಕೊಟ್ಟರು ಎಂದು

ಯಾರೋ ಸುಪ್ರೀಂ ಕೋರ್ಟ್‌ವರೆಗೆ ದೂರು ಕೊಂಡೊಯ್ದರು. ಅದು ನ್ಯಾಯಮಂಡಳಿಗೆ ರಾಜ್ಯದ ಮೊದಲ ಏಟು. ನ್ಯಾಯಮೂರ್ತಿಗಳು ಜಗಳ ಆಡುತ್ತಿದ್ದಾರೆ. ಈ ನ್ಯಾಯಮಂಡಳಿಯನ್ನು ಪುನರ್‌ರಚಿಸಿ ಎಂದು ಇನ್ನೊಬ್ಬರು ಯಾರೋ ಸುಪ್ರೀಂ ಕೋರ್ಟಿಗೆ ಹೋದರು. ಅದು ರಾಜ್ಯ ನೀಡಿದ ಎರಡನೇ ಏಟು. ಕಾವೇರಿ ನ್ಯಾಯಮಂಡಳಿ ಈಗ ಗಾಯಗೊಂಡ ಹಾವು. ಅದು ಕಚ್ಚದೆ ಬಿಡುತ್ತಾ.....? ಎಂದು ಹೇಳಿ ಜಾಲಪ್ಪ ಮೆಲ್ಲನೆ ಉಸಿರೆಳೆದುಕೊಂಡರು.

ಅಲ್ಲಿಯವರೆಗೆ ಸುಮ್ಮನಿದ್ದ ಗೌಡರು ಈಗ ಅನಂತಕುಮಾರ್ ಕಡೆ ತಿರುಗಿದರು. 'ಯಾರೋ ಎಂದು ಯಾಕೆ ಹೇಳುತ್ತೀರಿ ಗುರುಗಳೇ, ಕೋರ್ಟಿಗೆ ಹೋಗಿದ್ದು ನಾನೇ......' ಎಂದು ವಾದಕ್ಕಿಳಿದೇಬಿಟ್ಟರು. ಬದ್ಧ ರಾಜಕೀಯ ದ್ವೇಷಿಗಳಿಬ್ಬರೂ ಪರಸ್ಪರರ ಮುಖ ನೋಡದೆ ಅನಂತಕುಮಾರ್ ಮೂಲಕವೇ ಸ್ವಲ್ಪ ಹೊತ್ತು ಮಾತಿನ ಬಾಣಗಳ 'ಶಬ್ದವೇಧಿ' ಪ್ರಯೋಗ ನಡೆಸಿದರು. ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಸೇರಿದಂತೆ ಅಲ್ಲಿದ್ದ ಸಂಸದರೆಲ್ಲರೂ ಮುಸಿ ಮುಸಿ ನಗುತ್ತಿದ್ದರು.

ಸಂಸತ್ ಭವನದ ಲೋಕ ಸಭಾಧ್ಯಕ್ಷರ ಕಚೇರಿಯಲ್ಲಿ ಚರ್ಚೆಗೆ ಅವಕಾಶ ಕೋರಿ ನೋಟೀಸ್ ನೀಡಲು ರಾಜ್ಯದ ಸಂಸದರು ಅಲ್ಲಿ ಸೇರಿದ್ದರು. ಸೋಮನಾಥ ಚಟರ್ಜಿ ಪ್ರವೇಶ ವಿಳಂಬವಾದ ಕಾರಣ ಹೊತ್ತು ಕಳೆಯಲೆಂದು ಪ್ರಾರಂಭವಾದ ಕುಶಲೋಪರಿ ಹಾವಿನ ಕತೆಯಲ್ಲಿ ಕೊನೆಗೊಂಡಿತ್ತು.

ರಂಜನೀಯವಾಗಿ ನಡೆದ ಸಂಭಾಷಣೆಯನ್ನು ಸಂಸತ್ ಭವನದ ಕ್ಯಾಂಟೀನಿನ ಬಿಸಿ ಸೂಪ್ ಜತೆ ಹೀರುತ್ತಾ ಸವಿದ ಸಂಸದರು ಅಲ್ಲಿಂದ ಎದ್ದು ಹೋದರು. ಈ 'ಅರ್ಧ ಸತ್ತ ಹಾವಿನ ಕತೆ'ಯಲ್ಲಿನ ನೀತಿಪಾಠ ಅವರಲ್ಲಿ ಎಷ್ಟು ಮಂದಿಗೆ ಅರ್ಥವಾಗಿತ್ತೋ ಗೊತ್ತಿಲ್ಲ. ಜನ ತಮ್ಮ ಪ್ರತಿಕೃತಿ ಸುಡದಂತೆ, ತಮ್ಮ ತಿಥಿ ಊಟ ಮಾಡದಂತೆ ಏನು ಮಾಡಬೇಕೆಂಬ ಚಿಂತೆಯಲ್ಲೇ ಎಲ್ಲರೂ ಮುಳುಗಿದ್ದಾರೆಯೇ ಹೊರತು, ಕೋಪದ ಕೈಗೆ ಬುದ್ಧಿಕೊಟ್ಟಿರುವ ಭಾವುಕ ಜನ ನ್ಯಾಯ ಮಂಡಳಿ ಮೇಲೆ ನಡೆಸುತ್ತಿರುವ ದಾಳಿಯಿಂದ ರಾಜ್ಯದ ಹಿತಕ್ಕೆ ಮಾಡುತ್ತಿರುವ ಹಾನಿ ಬಗ್ಗೆ ಯೋಚನೆ ಮಾಡಿದಂತಿಲ್ಲ. ಹಾವಿಗೆ ಮೂರನೆ ಬಾರಿ ಏಟು ಬೀಳುತ್ತಿದೆ....

ಕಾವೇರಿ ನ್ಯಾಯಮಂಡಳಿಯ ಸ್ಥಾಪನೆಯನ್ನೇ ವಿರೋಧಿಸಿದ್ದ ಕರ್ನಾಟಕದ ಜನತೆಯಲ್ಲಿ ಅದರ ಬಗೆಗಿನ ಅಸಹನೆ ಹೊಸದೇನಲ್ಲ. ಕರ್ನಾಟಕದ ಪಾಲಿಗೆ ಅದು ಎಂದೆಂದೂ ಬೇಡದ ಕೂಸು. 1924ರ ಒಪ್ಪಂದ 1974ಕ್ಕೆ ಕೊನೆಗೊಂಡ ನಂತರ ತಮಿಳುನಾಡಿನ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ, ಕರ್ನಾಟಕಕ್ಕೆ 240 ಟಿಎಂಸಿ ನೀರಿನ ಪಾಲು ನಿಗದಿಪಡಿಸಿದ್ದ ಹೊಸ ಒಪ್ಪಂದವನ್ನು 1976ರಲ್ಲಿ ಸಿದ್ಧಪಡಿಸಿತ್ತು. ಅದಕ್ಕೆ ಆಗಿನ ಕರ್ನಾಟಕ ಸರ್ಕಾರ ಅನೌಪಚಾರಿಕ ಒಪ್ಪಿಗೆಯನ್ನೂ ಕೊಟ್ಟಿತ್ತು. ಆಗ ಆಡಳಿತ ಮತ್ತು

ವಿರೋಧ ಪಕ್ಷದಲ್ಲಿದ್ದವರು ಈಗಲೂ ರಾಜ್ಯದಲ್ಲಿ ಸಕ್ರಿಯ ರಾಜಕಾರಣದಲ್ಲಿದ್ದಾರೆ. ತಮಿಳುನಾಡಿನಲ್ಲಿ ಆಗ ರಾಷ್ಟ್ರಪತಿ ಆಳ್ವಿಕೆ ಇಲ್ಲದೆ ಹೋಗಿದ್ದರೆ, ಆ ಒಪ್ಪಂದ ಜಾರಿಗೆ ಬಂದೇ ಬಿಡುತ್ತಿತ್ತೋ ಏನೋ? ಚುನಾಯಿತ ಸರ್ಕಾರವೇ ಸಹಿ ಹಾಕಲಿ ಎಂದು ತಮಿಳುನಾಡು ರಾಜ್ಯಪಾಲ ಕೆ.ಕೆ. ಶಹಾ ಬಯಸಿದ ಕಾರಣ ಒಪ್ಪಂದ ಜಾರಿಗೆ ಬರಲಿಲ್ಲ. ಕೊನೆಗೂ ತಮಿಳುನಾಡಿನ ಒತ್ತಡ ಫಲ ಕೊಟ್ಟಿದ್ದು ವಿ.ಪಿ. ಸಿಂಗ್ ಪ್ರಧಾನಿಯಾಗಿದ್ದಾಗ.

ಸರ್ಕಾರ ಬದಲಾಗಿರಬಹುದು, ಆಳುವ ಪಕ್ಷ ಬದಲಾಗಿರಬಹುದು. ಆದರೆ ನ್ಯಾಯಮಂಡಳಿಯ ಬಗೆಗಿನ ಅಸಹನೆ ಮಾತ್ರ ಕರ್ನಾಟಕದಲ್ಲಿ ಬದಲಾಗಿಯೇ ಇಲ್ಲ. ಕಾವೇರಿ ಕಣಿವೆಗೆ 1991ರಲ್ಲಿ ಭೇಟಿ ನೀಡಿದ. ನ್ಯಾಯ ಮಂಡಳಿಯನ್ನು ಕರ್ನಾಟಕದ ಜನತೆ ಎದುರುಗೊಂಡದ್ದು ಕಪ್ಪುಬಾವುಟ. 'ಗೋ ಬ್ಯಾಕ್' ಘೋಷಣೆಗಳ ಮೂಲಕ. ಸಾರ್ವಜನಿಕ ಅಹವಾಲು ಸ್ವೀಕರಿಸಲು ನಡೆದ ಸಭೆಗಳಲ್ಲಿ ಸ್ಥಳೀಯ ರಾಜಕಾರಣಿಗಳೇ ಮೆರೆಯಲು ಹೋಗಿ ಅವೆಲ್ಲ ರಾಜಕೀಯ ಸಭೆಗಳಾಗಿದ್ದವು. ವಿಧಾನ ಸಭೆಯ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಔತಣಕೂಟಕ್ಕೆ ನ್ಯಾಯಮೂರ್ತಿಗಳೊಬ್ಬರು ಬೆಂಗಳೂರಿನಲ್ಲಿಯೇ ಇರುವ ಸಂಬಂಧಿಕರನ್ನು ಆಹ್ವಾನಿಸಲು ಬಯಸಿದಾಗ ಕೆಲವು ಅಧಿಕಾರಿಗಳು ನಿರಾಕರಿಸಿ ಮುಜುಗರಕ್ಕೆ ಈಡು ಮಾಡಿದ್ದೂ ಉಂಟು. ಆಗ ಇದ್ದ ಮೂವರು ನ್ಯಾಯಮೂರ್ತಿಗಳಲ್ಲಿ ಒಬ್ಬರು ಅಂತಿಮ ಐತೀರ್ಪು ನೀಡಿದ ನ್ಯಾಯ ಮಂಡಳಿಯಲ್ಲಿಯೂ ಇದ್ದರು. ಹೆಚ್ಚೇಕೆ ನ್ಯಾಯ ಮಂಡಳಿಯ ಈಗಿನ ಸದಸ್ಯ ನ್ಯಾಯಮೂರ್ತಿಗಳೊಬ್ಬರು ಇತ್ತೀಚೆಗೆ ಕರ್ನಾಟಕ ಭವನದಲ್ಲಿ ತಂಗಿದ್ದಾಗ ಅವರ ಸಹಾಯಕರ ಜತೆ ಊಟ-ವಸತಿಯ ಬಿಲ್ ಪಾವತಿ ಬಗ್ಗೆ ಭವನದ ಅಧಿಕಾರಿಗಳು ಜಗಳಕ್ಕೆ ಇಳಿದಿದ್ದರು.

ತಮಿಳುನಾಡಿನ ನಡವಳಿಕೆ ಮೊದಲಿನಿಂದಲು ಭಿನ್ನವಾಗಿತ್ತು. ನ್ಯಾಯಮಂಡಳಿ ಆ ರಾಜ್ಯಕ್ಕೆ ಭೇಟಿ ನೀಡಿದ್ದಾಗ ನ್ಯಾಯಮೂರ್ತಿಗಳು ಸಾಗುವ ಹಾದಿಯಲ್ಲೆಲ್ಲಾ ಅವರನ್ನು ಸ್ವಾಗತಿಸುವ ಭಿತ್ತಿಪತ್ರಗಳು, ಕಮಾನುಗಳು ರಾರಾಜಿಸುತ್ತಿದ್ದವು.

ಸಾರ್ವಜನಿಕ ಸಭೆ ನಡೆದಾಗ ವೇದಿಕೆಯಲ್ಲಿ ನ್ಯಾಯಮೂರ್ತಿಗಳನ್ನು ಹೊರತುಪಡಿಸಿ ಬೇರೆ ಯಾರೂ ಕೂರುತ್ತಿರಲಿಲ್ಲ. ತಂಜಾವೂರಿನ ಜಿಲ್ಲಾಧಿಕಾರಿಯೊಬ್ಬರು ನ್ಯಾಯಮೂರ್ತಿಗಳ ಕಾಲಿಗೆ ಬಿದ್ದುಬಿಟ್ಟಿದ್ದರು! ಅಧಿಕಾರದಲ್ಲಿ ಇಲ್ಲದಿದ್ದರೂ ಸಭೆಗೆ ಬಂದಿದ್ದ ಜಯಲಲಿತಾ ನ್ಯಾಯಮೂರ್ತಿಗಳನ್ನು ಖುದ್ದಾಗಿ ಎದಿರುಗೊಂಡಿದ್ದರು. ಕೆಲವು ವರ್ಷಗಳ ಹಿಂದೆ ನ್ಯಾಯಮೂರ್ತಿಗಳು ಖಾಸಗಿಯಾಗಿ ಕಾವೇರಿ ಕಣಿವೆಯಲ್ಲಿ ಪ್ರವಾಸ ಮಾಡಲು ಬಯಸಿದಾಗ, ತಮಿಳುನಾಡು ಸರ್ಕಾರ ಅನಧಿಕೃತವಾಗಿ ಸಕಲ ವ್ಯವಸ್ಥೆ ಮಾಡಿಕೊಟ್ಟಿತ್ತು. ಇದು ತಮಿಳುನಾಡು ಶೈಲಿ. ಅದೆಂದೂ ನ್ಯಾಯ ಮಂಡಳಿಯನ್ನು ಕೆಣಕಲು ಹೋಗಿಲ್ಲ.

ಆದರೆ ಕರ್ನಾಟಕದಲ್ಲಿ ಪೈಪೋಟಿ ಮೇಲೆ ನಿರಂತರವಾಗಿ ನ್ಯಾಯಮಂಡಳಿ ವಿರುದ್ಧ ದಾಳಿ ನಡೆಯುತ್ತಿದೆ. ಅದರ ಜತೆಯಲ್ಲಿ ಅದೇ ನ್ಯಾಯಮಂಡಳಿ ಮುಂದೆ ಐತೀರ್ಪು ಮರುಪರಿಶೀಲನೆ ಕೋರಿ ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರ ತಯಾರಿ ನಡೆಸಿದೆ.

ಕಾವೇರಿ ನ್ಯಾಯಮಂಡಳಿಯ ಐತೀರ್ಪು ನಿಜಕ್ಕೂ ಅನಿರೀಕ್ಷಿತವಾಗಿತ್ತೇ? ಸರಿಯಾಗಿ ಒಂಬತ್ತು ತಿಂಗಳುಗಳ ಹಿಂದೆ ಕಳೆದ ವರ್ಷದ ಮೇ 10 ರಂದು ನ್ಯಾಯದರ್ಶಿಗಳು ವರದಿ ಕೊಟ್ಟಿದ್ದರು.

ಅದರಲ್ಲಿ ಕರ್ನಾಟಕದ ಅಚ್ಚುಕಟ್ಟು ಪ್ರದೇಶ 18.85 ಲಕ್ಷ ಎಕರೆಗಳೆಂದು ಗುರುತಿಸಿ ಅದಕ್ಕೆ 250 ಟಿಎಂಸಿ ನೀರು ಬೇಕಾಗಬಹುದು ಎಂದು ಹೇಳಿದ್ದರು. ಅಚ್ಚುಕಟ್ಟು ಮತ್ತು ನೀರಿನ ವಿಷಯದಲ್ಲಿ ಅಂತಿಮ ಐತೀರ್ಪು ಆ ವರದಿಯ ಯಥಾವತ್ ನಕಲು. ರಾಜ್ಯಗಳ ಪ್ರತಿಕ್ರಿಯೆ ಅರಿತುಕೊಳ್ಳುವ ಸಣ್ಣ ಉದ್ದೇಶ ನ್ಯಾಯ ಮಂಡಳಿಗಿತ್ತೋ ಏನೋ? ವರದಿ ವಿರೋಧಿಸಿ ಅಲ್ಲಲ್ಲಿ ಸಾಂಕೇತಿಕ ಪ್ರತಿಭಟನೆ ನಡೆದರೂ ನ್ಯಾಯಮಂಡಳಿ ಗಂಭೀರವಾಗಿ ಸ್ವೀಕರಿಸುವಂತಹ ರೀತಿಯಲ್ಲಿ ಅದು ನಡೆದಿರಲಿಲ್ಲ.

ನ್ಯಾಯದರ್ಶಿ ವರದಿ ಬಗ್ಗೆ ತೃಪ್ತಿ ವ್ಯಕ್ತಪಡಿಸಿ ತಮಗೆ ಕೆಲವರು ಪತ್ರ ಬರೆದಿದ್ದಾರೆಂದು ನ್ಯಾಮಂಡಳಿ ಅಧ್ಯಕ್ಷ ನ್ಯಾಯಮೂರ್ತಿ ಎನ್.ಪಿ. ಸಿಂಗ್ ಖುದ್ದಾಗಿ ಕಲಾಪದ ಸಮಯದಲ್ಲಿ ಹೇಳಿದ್ದರು. ಸರ್ವಪಕ್ಷ ಸಭೆ ಕೂಡ ಬಹಳ ತಣ್ಣಗಿನ ಪ್ರತಿಕ್ರಿಯೆ ನೀಡಿತ್ತು. ನ್ಯಾಯಮಂಡಳಿ ಮುಂದೆ ಸಲ್ಲಿಸಿದ ಮೊದಲ ಪ್ರತಿಕ್ರಿಯೆಯಲ್ಲಿ ರಾಜ್ಯ ಹೆಚ್ಚು ಕಡಿಮೆ ವರದಿಯನ್ನು ಒಪ್ಪಿಕೊಂಡಿತ್ತು. ತಮಿಳುನಾಡು ಪ್ರತಿಕ್ರಿಯೆ ಸಲ್ಲಿಸಿದ ನಂತರ ವರದಿ ವಿರೋಧಿಸಿ ರಾಜ್ಯ ಇನ್ನೊಂದು ಪ್ರತಿಕ್ರಿಯೆ ಸಲ್ಲಿಸಿತ್ತು. ಇವೆಲ್ಲವೂ ರಾಜ್ಯ ಸರ್ಕಾರದ ಆದೇಶ ನಿರ್ದೇಶನದಂತೆಯೇ ನಡೆದಿದೆ. ವೈಫಲ್ಯದ ಹೊಣೆ ಹೊರಬೇಕಾದವರು ಯಾರು?

O

ಪೂರ್ಣ ನ್ಯಾಯ

ಪೂರ್ಣ ನ್ಯಾಯಕ್ಕಾಗಿ ನಡೆಸುವ ಹೋರಾಟದಿಂದ ಕೈಯಲ್ಲಿರುವ ಅರ್ಧ ನ್ಯಾಯ ಕೂಡಾ ತಪ್ಪಿಹೋಗುವ ಅಪಾಯದ ಎದುರು ಕರ್ನಾಟಕ ನಿಂತಿದೆ. ಮೂರು ತಿಂಗಳ ನಂತರ ಐತೀರ್ಪು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾಗದಿದ್ದರೆ, ಇಲ್ಲವೇ ಪುನರ್ ಪರಿಶೀಲನಾ ಅರ್ಜಿ ಸ್ವೀಕರಿಸಿ ಸುಪ್ರೀಂಕೋರ್ಟ್ ಅಂತಿಮ ತೀರ್ಪಿಗೆ ತಡೆಯಾಜ್ಞೆ ನೀಡಿದರೆ, ವಿವಾದ ಇತ್ಯರ್ಥವಾಗುವವರೆಗೆ ಮಧ್ಯಂತರ ತೀರ್ಪು ಜಾರಿಯಲ್ಲಿರುತ್ತದೆ.

ಮುಂದೇನು? ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪಿನ ವಿರುದ್ಧದ ಪ್ರತಿಭಟನೆಕಾರರು ಆಗಾಗ ಸುಧಾರಿಸಿಕೊಂಡು ಕೇಳುತ್ತಿರುವ ಪ್ರಶ್ನೆ ಇದು. ಮುಂದಿನ ದಾರಿ ಒಂದಲ್ಲ ಎರಡಿವೆ. ಮೊದಲನೆಯದ್ದು ಕಾವೇರಿ ನ್ಯಾಯಮಂಡಳಿ ಇರುವ ಕನ್ನಾಟ್‌ಪ್ಲೇಸ್‌ನ ಜನಪಥ ಭವನದ ನಾಲ್ಕನೇ ಮಹಡಿ ಹತ್ತುವ ಹಳೆಯ ಹಾದಿ. ಎರಡನೆಯದು: ಅಲ್ಲಿಂದ ಸ್ವಲ್ಪ ದೂರದಲ್ಲಿರುವ ಸುಪ್ರೀಂ ಕೋರ್ಟ್ ಕಡೆ ಹೋಗುವ ಹೊಸ ಹಾದಿ. ಬಹುತೇಕ ಕಾನೂನು ತಜ್ಞರು ಎರಡನೇ ಹಾದಿ ಕಡೆ ಕೈತೋರಿಸುತ್ತಿದ್ದಾರೆ. ರಾಜ್ಯಸರ್ಕಾರ ಎಂದಿನಂತೆ ಗೊಂದಲದಲ್ಲಿ ಮುಳುಗಿ ಎರಡು ಹಾದಿಗಳ ಮಧ್ಯೆ ದಿಕ್ಕೆಟ್ಟು ನಿಂತಿದೆ.

ನ್ಯಾಯಮಂಡಳಿ ಐತೀರ್ಪು ನೀಡಿದ ಮೂರು ತಿಂಗಳೊಳಗೆ ರಾಜ್ಯ ಸರ್ಕಾರಗಳು ಇಲ್ಲವೆ ಕೇಂದ್ರ ಸರ್ಕಾರಗಳು 'ಪರಿಶೀಲನಾ ಅರ್ಜಿ' ಸಲ್ಲಿಸಬಹುದು. ಅದರಲ್ಲಿ 'ನ್ಯಾಯಮಂಡಳಿಯ ಗಮನಕ್ಕೆ ಇಲ್ಲಿಯವರೆಗೆ ತಾರದ ಯಾವುದಾದರೂ ಅಂಶದ ಬಗ್ಗೆ ಸ್ಪಷ್ಟೀಕರಣ ಇಲ್ಲವೆ ಮಾರ್ಗದರ್ಶನ' ಕೋರಬಹುದು. ನ್ಯಾಯ ಮಂಡಳಿ ಒಂದು ವರ್ಷದ ಅವಧಿಯೊಳಗೆ ಪರಿಶೀಲನಾ ಅರ್ಜಿ ಬಗ್ಗೆ ವಿಚಾರಣೆ ನಡೆಸಿ ಸ್ಪಷ್ಟೀಕರಣ ಇಲ್ಲವೇ ಮಾರ್ಗದರ್ಶನ ನೀಡಬೇಕು ಮತ್ತು ಅದರಂತೆ ಐತೀರ್ಪನ್ನು ಬದಲಾಯಿಸಬೇಕು. ಕೇಂದ್ರ ಸರ್ಕಾರ ಬಯಸಿದರೆ ನ್ಯಾಯ ಮಂಡಳಿಯ ಒಂದು ವರ್ಷದ ಅವಧಿಯನ್ನು ಇನ್ನೂ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು. ಇದು ಅಂತರರಾಜ್ಯ ನದಿ ವಿವಾದ ಕಾಯಿದೆಯ ಸೆಕ್ಷನ್ 5.3ರಲ್ಲಿ ಐತೀರ್ಪು ಪುನರ್‌ಪರಿಶೀಲನೆಗೆ ನೀಡಿರುವ ಅವಕಾಶ.

'ಇಲ್ಲಿಯವರೆಗೆ ನ್ಯಾಯಮಂಡಳಿಯ ಗಮನಕ್ಕೆ ತಾರದ ಅಂಶದ ಬಗ್ಗೆ (ಮಾತ್ರ) ಸ್ಪಷ್ಟೀಕರಣ, ಮಾರ್ಗದರ್ಶನ ಕೋರಬಹುದು' ಎನ್ನುವುದನ್ನು ಕಾನೂನು ಸ್ಪಷ್ಟವಾಗಿ ಹೇಳಿದೆ. ಕರ್ನಾಟಕದ ನ್ಯಾಯವಾದಿಗಳು ಕಳೆದ ಹದಿನಾರು ವರ್ಷಗಳಲ್ಲಿ ಕಾವೇರಿ ವಿವಾದಕ್ಕೆ ನೇರವಾಗಿ ಸಂಬಂಧಿಸಿದ ಮತ್ತು ಒಟ್ಟು ನದಿ ನೀರುಹಂಚಿಕೆ ವಿವಾದದ ದಾಖಲೆ ಪತ್ರ, ವರದಿ, ಸಾಕ್ಷ್ಯಗಳನ್ನು ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಿದ್ದಾರೆ. ನ್ಯಾಯಮಂಡಳಿಯ ಗಮನ ಸೆಳೆಯಲೇ ಬೇಕಾದ ಮಹತ್ವದ ಅಂಶಗಳು ಇನ್ನೂ ಬಾಕಿ ಉಳಿದಿವೆ ಎನ್ನುವುದು ಅನುಮಾನ.

ತಾವು ಮಂಡಿಸಿದ ವಿಷಯವನ್ನು ನ್ಯಾಯ ಮಂಡಳಿ ತಪ್ಪಾಗಿ ವ್ಯಾಖ್ಯಾನ ಮಾಡಿದೆ ಎಂದು ಅರಿಕೆ ಮಾಡಿಕೊಳ್ಳಲು 'ಪರಿಶೀಲನಾ ಅರ್ಜಿ'ಯಲ್ಲಿ ಅವಕಾಶ ಇಲ್ಲ. 'ನ್ಯಾಯಮಂಡಳಿ ತನಗೆ ಒಪ್ಪಿಸಿದ ವಿಷಯದ ಬಗ್ಗೆ ತನಿಖೆ ನಡೆಸಿ ತಾನು ಕಂಡು ಹಿಡಿದ ನೈಜಾಂಶಗಳನ್ನು ಒಳಗೊಂಡ ಐತೀರ್ಪನ್ನು ಮೂರು ವರ್ಷಗಳೊಳಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು' ಎಂದು ಕಾಯಿದೆಯ ಸೆಕ್ಷನ್ 5.2 ಹೇಳುತ್ತದೆ. ಇದರ ಪ್ರಕಾರ ಐತೀರ್ಪು ಎನ್ನುವುದು ನ್ಯಾಯಮಂಡಳಿ 'ತನಿಖೆ ನಡೆಸಿ ಕಂಡುಹಿಡಿದ ನೈಜ ಅಂಶ'. ಹೀಗಿದ್ದಾಗ ಅದೇ ನ್ಯಾಯಮಂಡಳಿ ವಿಷಯದ ತನಿಖೆಯಲ್ಲಿ ತಮ್ಮಿಂದ ಲೋಪವಾಗಿದೆ, ವಿಷಯದ ವ್ಯಾಖ್ಯಾನ ಸರಿಯಾಗಿ ಮಾಡಿಲ್ಲ ಎಂದು ಒಪ್ಪಿಕೊಳ್ಳುವುದು ಸಾಧ್ಯವೇ?

ಪರಿಶೀಲನಾ ಅರ್ಜಿ ಸಲ್ಲಿಸುವ ಮೂಲಕ ಹೆಚ್ಚೆಂದರೆ ಐತೀರ್ಪಿನ ಅನುಷ್ಠಾನವನ್ನು ಇನ್ನಷ್ಟು ವಿಳಂಬಗೊಳಿಸಲು ಸಾಧ್ಯ. ರಾವಿ–ಬಿಯಾಸ್ ನದಿ ನೀರು ಹಂಚಿಕೆಗಾಗಿ ನೇಮಕಗೊಂಡ ಎರಾಡಿ ನ್ಯಾಯಮಂಡಲಿ ಕಳೆದ 20 ವರ್ಷಗಳಿಂದ ಅಸ್ತಿತ್ವದಲ್ಲಿದೆ. 1986ರಲ್ಲಿ ರಚನೆಗೊಂಡ ನ್ಯಾಯ ಮಂಡಳಿ ಕೇವಲ ಒಂಬತ್ತು ತಿಂಗಳಲ್ಲಿ

ಐತೀರ್ಪು ನೀಡಿತ್ತು. ಅದರ ನಂತರ ಸಲ್ಲಿಸಲಾದ ಪರಿಶೀಲನಾ ಅರ್ಜಿ ಕಳೆದ 19 ವರ್ಷಗಳಿಂದ ವಿಚಾರಣೆಯಲ್ಲಿದೆ. ಕರ್ನಾಟಕ ಕೂಡಾ ಇಚ್ಛೆಪಟ್ಟರೆ ಐತೀರ್ಪು ಅನುಷ್ಠಾನವನ್ನು ಮುಂದೂಡುತ್ತಾ ಹೋಗಬಹುದು. ಆದರೆ ಐತೀರ್ಪು ಗೆಜೆಟ್‌ನಲ್ಲಿ ಪ್ರಕಟಣೆ ಆಗುವವರೆಗೆ ಮಧ್ಯಂತರ ತೀರ್ಪು ಜಾರಿಯಲ್ಲಿರುತ್ತದೆ. ಅಂದರೆ 11.24 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದ ನಿರ್ಬಂಧ.

ಎರಡನೆ ದಾರಿ ಸುಪ್ರೀಂಕೋರ್ಟ್‌ಗೆ ಮೊರೆ. ಇಲ್ಲಿ ಐತೀರ್ಪಿನಲ್ಲಿರುವ ಲೋಪವನ್ನು ಎತ್ತಿ ತೋರಿಸುವುದಕ್ಕಿಂತಲೂ ಹೆಚ್ಚಾಗಿ ನ್ಯಾಯಮಂಡಳಿಯೊಳಗಿನ ಹುಳುಕುಗಳನ್ನು ಬಯಲು ಮಾಡಲು ಅವಕಾಶ ಇದೆ ಎನ್ನುತ್ತಾರೆ ಕಾನೂನು ತಜ್ಞರು. ಕಾವೇರಿ ನ್ಯಾಯಮಂಡಳಿ ಸ್ಥಾಪನೆಗೊಂಡ ಪ್ರಾರಂಭದ ದಿನಗಳಲ್ಲಿಯೇ ವಿವಾದಕ್ಕೆ ಸಿಕ್ಕಿತ್ತು. ನದಿ ಕಣಿವೆ ರಾಜ್ಯಗಳಿಗೆ ನ್ಯಾಯಮಂಡಳಿ ಭೇಟಿ ನೀಡಿದ್ದ ಸಂದರ್ಭದಲ್ಲಿ ತಮಿಳುನಾಡು ಸರ್ಕಾರ ನ್ಯಾಯಮೂರ್ತಿಗಳಿಗೆ 'ಬೆಲೆಬಾಳುವ ಉಡುಗೊರೆ'ಗಳ ಆಮಿಷ ಒಡ್ಡಿತ್ತು ಎಂದು ಆಗ ವಿರೋಧ ಪಕ್ಷದಲ್ಲಿದ್ದ ಎಚ್.ಡಿ. ದೇವೇಗೌಡರೇ ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. 1996ರಲ್ಲಿ ನ್ಯಾಯಮಂಡಳಿಯ ಅಧ್ಯಕ್ಷ ನ್ಯಾಯಮೂರ್ತಿ ಚಿತ್ತಘೋಷ್ ಮುಖರ್ಜಿ ರಾಜಿನಾಮೆ ನೀಡಿದ್ದರು. ಅವರು ರಾಜಿನಾಮೆಗೆ ಸ್ಪಷ್ಟವಾದ ಕಾರಣ ನೀಡಿರದಿದ್ದರೂ ನ್ಯಾಯಮಂಡಳಿ ವಿರುದ್ಧದ ಆರೋಪ ಕೂಡಾ ಒಂದು ಕಾರಣ ಎಂದು ಹೇಳಲಾಗಿತ್ತು.

ಕಳೆದೆರಡು ವರ್ಷಗಳಲ್ಲಿ ನ್ಯಾಯಮಂಡಳಿ ಆಂತರಿಕವಾಗಿ ಇಬ್ಭಾಗವಾಗಿ ಹೋಗಿದೆ. ಸದಸ್ಯ ನ್ಯಾಯಮೂರ್ತಿಗಳಾದ ಎನ್.ಎಸ್.ರಾವ್ ಮತ್ತು ಸುಧೀರ್ ನಾರಾಯಣ್ ಒಂದು ಕಡೆಯಾದರೆ, ಅಧ್ಯಕ್ಷ ನ್ಯಾಯಮೂರ್ತಿ ಎನ್.ಪಿ. ಸಿಂಗ್ ಇನ್ನೊಂದು ಕಡೆ ಎಂದಾಗಿತ್ತು. ಆಗಾಗ ಭಿನ್ನಾಭಿಪ್ರಾಯ, ಮಾತಿನ ಚಕಮಕಿ ಕಲಾಪದಲ್ಲಿ ಸಾಮಾನ್ಯವಾಗಿ ಹೋಗಿತ್ತು. ಒಮ್ಮೆ 'ತೂ-ತೂ ಮೈ-ಮೈ' ಅತಿರೇಕಕ್ಕೆ ತಲುಪಿದಾಗ ತಾಳ್ಮೆ ಕಳೆದುಕೊಂಡ ತಮಿಳುನಾಡು ಹಿರಿಯ ವಕೀಲ ಕೆ. ಪರಾಶರನ್ ಮಧ್ಯೆ ಪ್ರವೇಶಿಸಿ 'ನ್ಯಾಯಮೂರ್ತಿಗಳ ಈ ರೀತಿಯ ವರ್ತನೆ ನಮ್ಮನ್ನು ಮುಜುಗರಕ್ಕೀಡುಮಾಡುತ್ತಿದೆ. ನನ್ನ 57 ವರ್ಷಗಳ ವಕೀಲಿ ವೃತ್ತಿಯಲ್ಲಿ ಇಂತಹದನ್ನು ಎಂದೂ ಕಂಡಿಲ್ಲ. ನಿಮ್ಮ ನಡುವೆ ಭಿನ್ನಾಬಿಪ್ರಯಗಳಿದ್ದರೆ ಚೇಂಬರ್ ಒಳಗೆ ಕೂತು ಬಗೆಹರಿಸಿಕೊಳ್ಳಿ, ಬಹಿರಂಗವಾಗಿ ಅದನ್ನು ಪ್ರದರ್ಶಿಸಿ ನ್ಯಾಯಮಂಡಳಿಯ ಘನತೆಗೆ ಕುಂದು ತರಬೇಡಿ' ಎಂದು ಕಟು ಮಾತುಗಳಿಂದ ತರಾಟೆಗೆ ತೆಗೆದುಕೊಂಡಿದ್ದರು. ಕರ್ನಾಟಕ ಮತ್ತು ಕೇರಳ ರಾಜ್ಯಗಳ ವಕೀಲರೂ ಕೂಡಾ ಅವರನ್ನು ಬೆಂಬಲಿಸಿದರು.

2004ರ ಆಗಸ್ಟ್‌ನಲ್ಲಿ ಇಬ್ಬರು ಸದಸ್ಯರು ಕಾವೇರಿ ಕಣಿವೆಯಲ್ಲಿ ಪ್ರವಾಸ ಹೋಗಲು ಇಚ್ಛಿಸಿದಾಗಲೂ ಅಧ್ಯಕ್ಷರು ವಿರೋಧಿಸಿದ್ದರು. ಆ ಒಳಜಗಳವನ್ನು

ಬಳಸಿಕೊಂಡ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಎರಡನೇ ಬಾರಿ ನ್ಯಾಯ ಮಂಡಳಿ ವಿರುದ್ಧ ಸಮರಕ್ಕಿಳಿದಿದ್ದರು. ಬೆಂಗಳೂರಿನ ಗಾಂಧಿ ಸಾಹಿತ್ಯ ಸಂಘದ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿ, ನ್ಯಾಯ ಮಂಡಳಿಯನ್ನು ಪುನರ್ರಚಿಸಬೇಕೆಂದು ಕೋರಿದ್ದರು. ಗೌಡರ ಪಕ್ಷದ ಬೆಂಬಲ ನಂಬಿಕೊಂಡಿದ್ದ ಎನ್. ಧರ್ಮಸಿಂಗ್ ಸರ್ಕಾರ ಕೂಡಾ ಗಾಂಧಿ ಸಾಹಿತ್ಯ ಸಂಘದ ಅರ್ಜಿಯನ್ನು ಬೆಂಬಲಿಸಿತ್ತು. ಅಂತಿಮವಾಗಿ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿತು. ನ್ಯಾಯಮೂರ್ತಿಗಳ ಪ್ರವಾಸ ಕೂಡಾ ರದ್ದಾಯಿತು.

'ನ್ಯಾಯಮೂರ್ತಿಗಳ ವಿರುದ್ಧದ ಆರೋಪವನ್ನು ಅತಿರೇಕಕ್ಕೆ ಕೊಂಡೊಯ್ಯದೆ ಮುರಿದುಬಿದ್ದ ನ್ಯಾಯಮಂಡಳಿಯಿಂದಾಗಿಯೇ ನಮಗೆ ನ್ಯಾಯ ಸಿಕ್ಕಿಲ್ಲ' ಎನ್ನುವ ವಾದವನ್ನಷ್ಟೇ ಸುಪ್ರೀಂ ಕೋರ್ಟ್ ಮುಂದಿಟ್ಟರೆ ನ್ಯಾಯ ಸಿಗುವ ಒಂದು ಸಣ್ಣ ಅವಕಾಶ ಇದೆ ಎನ್ನುವ ಅಭಿಪ್ರಯ ಕಾನೂನು ತಜ್ಞರದ್ದು. ಸುಪ್ರೀಂ ಕೋರ್ಟ್ ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸಿ ಐತೀರ್ಪಿಗೆ ತಡೆಯಾಜ್ಞೆ ನೀಡಿದರೆ, ಮಧ್ಯಂತರ ತೀರ್ಪು ಮುಂದುವರಿಯುವ ಅಪಾಯ ಇಲ್ಲಿಯೂ ಇದೆ.

ಈ ಅಪಾಯ ಕರ್ನಾಟಕ, ನ್ಯಾಯಮಂಡಳಿ ಇಲ್ಲವೇ ಸುಪ್ರೀಂ ಕೋರ್ಟ್ ಮುಂದೆ ಪುನರ್‌ಪರಿಶೀಲನಾ ಅರ್ಜಿ ಸಲ್ಲಿಸದಿದ್ದರೂ ಇದೆ. ಯಾಕೆಂದರೆ ಪ್ರಾರಂಭದಲ್ಲಿ ಐತೀರ್ಪನ್ನು ಸ್ವಾಗತಿಸಿದ್ದ ತಮಿಳುನಾಡು ಈಗ ರಾಗ ಬದಲಿಸತೊಡಗಿದೆ. ಮಧ್ಯಂತರ ತೀರ್ಪಿಗಿಂತ, ಐತೀರ್ಪಿನಲ್ಲಿ ನಷ್ಟ ಹೆಚ್ಚು ಎನ್ನುವ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅಭಿಪ್ರಾಯವನ್ನು ಅಲ್ಲಿನ ನೀರಾವರಿ ತಜ್ಞರು ಕೂಡಾ ಬೆಂಬಲಿಸತೊಡಗಿದ್ದಾರೆ. ಈ ಹಿನ್ನೆಲೆಯಲ್ಲಿ ನ್ಯಾಯಮಂಡಳಿ ಇಲ್ಲವೆ ಸುಪ್ರೀಂ ಕೋರ್ಟ್ ಮುಂದೆ ಹೋಗಿ ತಮಿಳುನಾಡು ಐತೀರ್ಪಿಗೆ ತಡೆಯಾಜ್ಞೆ ತಂದರೆ, ಹದಿನಾರು ವರ್ಷಗಳ ನಂತರ ಕೈಗೆ ಬಂದ ಅರ್ಧ ನ್ಯಾಯ ಕೂಡಾ ಕೈತಪ್ಪಿಹೋದರೆ ಅಚ್ಚರಿಯೇನಿಲ್ಲ. ಕರ್ನಾಟಕ ನಿಜಕ್ಕೂ ಅಡಕೊತ್ತಿನಲ್ಲಿ ಸಿಕ್ಕಿಹಾಕಿಕೊಂಡಿದೆ.

ಕಾವೇರಿ ನ್ಯಾಯಮಂಡಳಿ ಅಂತಿಮ ತೀರ್ಪಿನ ವಿರುದ್ಧದ ಪ್ರತಿಭಟನೆ ಮೈಸೂರು–ಮಂಡ್ಯ ಜಿಲ್ಲೆಗಳಲ್ಲಿ ಅಬ್ಬರದಿಂದ ನಡೆಯುತ್ತಿದ್ದರೆ, ಹಾಸನ ಜಿಲ್ಲೆಯಲ್ಲಿ ಮಾತ್ರ ಸಾಂಕೇತಿಕ ಸ್ವರೂಪದಲ್ಲಿದೆ ಯಾಕೆ? ಹೇಮಾವತಿ ಅಚ್ಚುಕಟ್ಟು ಪ್ರದೇಶದ ರೈತರಿಗೆ ನ್ಯಾಯ ಸಿಕ್ಕಿದೆ ಎನ್ನುವುದು ಐತೀರ್ಪನ್ನು ಓದಿದವರಿಗೆ ಮಾತ್ರ ಗೊತ್ತು. ಐತೀರ್ಪನ್ನು ಸಮಗ್ರವಾಗಿ ಓದಿದವರು ಯಾರೂ ದೇವೇಗೌಡರು ಯಾಕೆ ಮೌನವಾಗಿದ್ದಾರೆ ಎಂಬ ಪ್ರಶ್ನೆ ಕೇಳಲಾರರು.

○

ಭಾಗ : ಎರಡು

ದುಬಾರಿ ಪ್ರತಿನಿಧಿ?

ಸಂಸತ್ ಸದಸ್ಯರನ್ನು ಈಗ 'ಬಡ ಭಾರತೀಯನ ದುಬಾರಿ ಪ್ರತಿನಿಧಿ' ಎಂದು ಕರೆಯಬಹುದೇ?. ಲೋಕಸಭೆಯ ಮುಂಗಾರು ಅಧಿವೇಶನದಲ್ಲಿ ಸಂಸತ್ ಸದಸ್ಯರು ತಮ್ಮ ತಲೆ ಮೇಲೆ ತಾವೇ ಸುರಿಸಿಕೊಂಡ ಸಂಬಳ ಸವಲತ್ತುಗಳ ಸುರಿಮಳೆಯ ನಂತರ ಹಾಗೆಂದು ಕರೆದರೂ ತಪ್ಪಾಗಲಾರದು. ಮೂರೇ ವರ್ಷಗಳ ಅವಧಿಯಲ್ಲಿ ಮೂರು ಪಟ್ಟು ಸಂಬಳ- ಸವಲತ್ತುಗಳ ಹೆಚ್ಚಳ. ಯಾರಿಗುಂಟು ಈ ಭಾಗ್ಯ?.

ರೈತರು ಬೆವರು ಸುರಿಸಿ ಬೆಳೆದ ಬೆಳೆಗೆ ಬೆಲೆ ನಿರ್ಧರಿಸುವವರು ದೆಹಲಿಯ ಕೃಷಿ ಭವನದ ಹವಾನಿಯಂತ್ರಿತ ಕಛೇರಿಗಳಲ್ಲಿ ಕೂತ ಕೃಷಿ ತಜ್ಞರು. (ಸರ್ಕಾರವೆಂದರೆ ಅವರೇ ಅಲ್ಲವೇ?). ಆದರೆ ಸಂಸತ್ ಸದಸ್ಯರ ಸಂಬಳ-ಸವಲತ್ತುಗಳನ್ನು ನಿರ್ಧರಿಸುವವರು ಬೇರ್‍ಯಾರು ಅಲ್ಲ. ಸ್ವತಃ ತಾವೇ ತಮ್ಮ ಸಂಬಳವನ್ನು ನಿರ್ಧರಿಸುವ ಸ್ವಾತಂತ್ರ್ಯ ಈ ದೇಶದಲ್ಲಿ ಯಾರಿಗಾದರೂ ಇದ್ದರೆ ಆದು ನಮ್ಮ ಜನ ಪ್ರತಿನಿಧಿಗಳಿಗೆ ಮಾತ್ರ. ಈ ಮಸೂದೆ ಕಮ್ಯುನಿಸ್ಟರ ಅರೆ ಮನಸ್ಸಿನ ಗೊಣಗಾಟವನ್ನು ಹೊರತುಪಡಿಸಿ ಯಾವುದೇ ಗದ್ದಲ ಸಭಾತ್ಯಾಗದ ತೊಂದರೆಯಿಲ್ಲದೆ ಸುಗಮವಾಗಿ ಅಂಗೀಕೃತವಾಗಿದ್ದು ಕೂಡಾ ಸಂಸತ್ ಸದಸ್ಯರಿಗೆ ಅವರ ಹಿತದ ಬಗ್ಗೆ ಇದ್ದ ಕಾಳಜಿಗೆ ಸಾಕ್ಷಿ.

ಲಕ್ಷಾಂತರ ಜನರನ್ನು ಪ್ರತಿನಿಧಿಸುವ ಒಬ್ಬ ಸದಸ್ಯನಿಗೆ ತಿಂಗಳಿಗೆ ಹನ್ನೆರಡು ಸಾವಿರ ರೂಪಾಯಿ ಸಂಬಳ (12,000), ಹತ್ತು ಸಾವಿರ ರೂಪಾಯಿ ಕ್ಷೇತ್ರ ಭತ್ಯೆ(10,000),

ಹದಿನಾಲ್ಕು ಸಾವಿರ ಕಛೇರಿ ಭತ್ಯ (14,000), ಐದುನೂರು ದಿನ ಭತ್ಯ(500), ಕಿ.ಮೀ.ಗೆ ಆರು ರೂಪಾಯಿಯಂತೆ ಸಾರಿಗೆ ಭತ್ಯ, 50 ಸಾವಿರ ಯುನಿಟ್ ಉಚಿತ ವಿದ್ಯುತ್, ನಾಲ್ಕು ಸಾವಿರ ಲೀಟರ್ ಉಚಿತ ನೀರು, 1.20 ಲಕ್ಷ ಉಚಿತ ಫೋನ್ ಕರೆ, ಕಂಪ್ಯೂಟರ್, ಮೊಬೈಲ್ ಫೋನ್ ನೀಡಿದರೆ ತಪ್ಪೇ?.

ಜನರ ಸೇವೆಯನ್ನು ಪರಿಣಾಮಕಾರಿಯಾಗಿ ಮಾಡಲು ಈ ಸೌಲಭ್ಯಗಳನ್ನು ನೀಡಲಾಗಿದೆ. ಇದರಲ್ಲೇನು ತಪ್ಪು? ಎನ್ನುವ ಪ್ರಶ್ನೆಯೂ ಸಹಜ. ಈ ಜನ ಪ್ರತಿನಿಧಿಗಳ ಜನಸೇವೆಯ ವೈಖರಿಯೇ ಈಗ ಚರ್ಚೆಗೆ ವಸ್ತು. ಸದನದ ಕಲಾಪವನ್ನು ವೀಕ್ಷಿಸಿದವರ್ಯಾರೂ ಈ ಎಲ್ಲಾ ಸೌಲಭ್ಯಗಳಿಗೆ ಸದಸ್ಯರು ಅರ್ಹರು ಎಂಬ ಒಮ್ಮತದ ಅಭಿಪ್ರಾಯ ನೀಡಲಾರರು.

ಸಂಸತ್ತಿನಲ್ಲಿ ಸುಸಜ್ಜಿತ ಗ್ರಂಥಾಲಯವಿದೆ. ಯಾವುದೇ ವಿಷಯದ ಬಗೆಗಿನ ಮಾಹಿತಿಯನ್ನು ಕ್ಷಣಾರ್ಧದಲ್ಲಿ ಒದಗಿಸಬಲ್ಲ ವ್ಯವಸ್ಥೆಯಿದೆ. ಆಪ್ತ ಕಾರ್ಯದರ್ಶಿ, ಕಛೇರಿ, ಸಿಬ್ಬಂದಿ, ಕಂಪ್ಯೂಟರ್, ಫೋನ್ ಎಲ್ಲವನ್ನೂ ಒದಗಿಸಲಾಗಿದೆ. ಇವೆಲ್ಲವನ್ನೂ ಬಳಸಿಕೊಂಡು ವಿಷಯದ ಅಧ್ಯಯನ ನಡೆಸಿ ಸರ್ವಸನ್ನದ್ಧರಾಗಿ ಸದಸ್ಯರು ಕಲಾಪದಲ್ಲಿ ಭಾಗವಹಿಸಬೇಕು.

ಆದರೆ ಸದನದಲ್ಲಿ ನಡೆಯುತ್ತಿರುವುದೇ ಬೇರೆ. ಐದು ವರ್ಷದುದ್ದಕ್ಕೂ ಬಾಯಿ ಬಿಚ್ಚಲೇಬಾರದೆಂದು ಶಪಥ ಮಾಡಿರುವವರದ್ದು ಒಂದು ಗುಂಪಾದರೆ, ಏನಿದ್ದರೂ ಬಿಟ್ಟ ಬಾಯಿಯನ್ನು ಮುಚ್ಚಬಾರದೆಂದು ನಿರ್ಧರಿಸಿ ಬೊಬ್ಬಿಡುತ್ತಲೆ ಇರುವವರದ್ದು ಇನ್ನೊಂದು ಗುಂಪು. ಈ ನಡುವೆ ವಿಷಯ ಸಂಗ್ರಹದ ತಯಾರಿ ಮಾಡಿಕೊಂಡು ಬಂದವರು ಅವಕಾಶಕ್ಕಾಗಿ ಕಾಯುತ್ತಲೇ ಇರಬೇಕಾದ ಪರಿಸ್ಥಿತಿ. ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ದಾಳಿ ಮತ್ತು ಸಭಾತ್ಯಾಗಗಳೇ ಕಲಾಪ ಎಂದಾಗಿದೆ.

ಕಳೆದ ಚಳಿಗಾಲದ ಅಧಿವೇಶನದಲ್ಲಿ ನಡೆಯಬೇಕಾಗಿದ್ದು 25 ದಿನಗಳ ಬೈಠಕ್. ನಡೆದದ್ದು ಹದಿನಾಲ್ಕು ದಿನ ಮಾತ್ರ. ಹಾಳಾಗಿ ಹೋದ ಬಹುತೇಕ ದಿನಗಳನ್ನು ಕಬಳಿಸಿದ್ದು ಅಯೋಧ್ಯೆ ವಿವಾದ. ಮುಂಗಡಪತ್ರ ಅಧಿವೇಶನ ತೆಹಲ್ಕಾ ಹಗರಣಕ್ಕೆ ಬಲಿಯಾಯಿತು. ಮಳೆಗಾಲದ ಅಧಿವೇಶನ 27 ಗಂಟೆಗಳ ಪೂಲನ್‌ದೇವಿ ಹತ್ಯೆ, ಯುಟಿಐ ಹಗರಣ, ಮೊರದಾಬಾದ್ ಗಲಭೆ, ತೆಹಲ್ಕಾ ಹಗರಣದಲ್ಲಿ ವ್ಯರ್ಥವಾಯಿತು.

ಲೋಕಸಭಾ ಸಚಿವಾಲಯ ಇತ್ತೀಚೆಗೆ ತಯ್ಯಾರಿಸಿದ ವರದಿ ಪ್ರಕಾರ ಸಂಸತ್‌ನ ಎರಡು ಸದನಗಳ ಒಂದು ದಿನದ ಕಲಾಪ ನಡೆಸಲು ಖರ್ಚಾಗುವ ಹಣ 79.55 ಲಕ್ಷ ರೂಪಾಯಿ. ಈ ಪ್ರಕಾರ ಒಂದು ಗಂಟೆಗೆ 10.61 ಲಕ್ಷ ರೂಪಾಯಿ, ಒಂದು ನಿಮಿಷಕ್ಕೆ 17.671 ರೂಪಾಯಿ ಖರ್ಚಾಗುತ್ತದೆ. 1966ರಲ್ಲಿ ಒಂದು ನಿಮಿಷದ ಅಧಿವೇಶನಕ್ಕೆ ಖರ್ಚಾಗುತ್ತಿದ್ದ ಹಣ 300 ರೂಪಾಯಿ.

ಪ್ರಸಕ್ತ ಮುಂಗಡ ಪತ್ರದಲ್ಲಿ ಅಧಿವೇಶನ ನಿರ್ವಹಣೆಗೆ ಮೀಸಲಿಟ್ಟ ಹಣ 182.67 ಕೋಟಿ ರೂಪಾಯಿ. 1983–84ರಲ್ಲಿ ಈ ವೆಚ್ಚ ಕೇವಲ 12.49 ಕೋಟಿ ರೂಪಾಯಿಗಳಾಗಿದ್ದರೆ 1998–99ರಲ್ಲಿ 127 ಕೋಟಿ ರೂಪಾಯಿಗಳಾಗಿತ್ತು. ಮುಂದಿನ ವರ್ಷ ಇದು 200 ಕೋಟಿ ದಾಟುವ ನಿರೀಕ್ಷೆಯಿದೆ.

ಜನಸೇವೆಯ ಈ ದುಬಾರಿ ಹೊರೆಯನ್ನು ಹೊತ್ತುಕೊಂಡ ಮತದಾರ ಮರಳಿ ಪಡೆಯುತ್ತಿರುವುದೇನು? ಈ ವರ್ಷದ ರೈಲ್ವೆ ಮುಂಗಡ ಪತ್ರದಲ್ಲಿ ಕರ್ನಾಟಕ ರಾಜ್ಯಕ್ಕಾದ ಗತಿ ನೋಡಬಹುದು. 'ಕಲ್ಕತ್ತಾ ಬಜೆಟ್' ಎಂದೇ ಪರಿಗಣಿಸಲಾದ ಇದರಲ್ಲಿ ಕರ್ನಾಟಕವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಆದರೆ ಈ ನಿರ್ಲಕ್ಷವನ್ನು ಪ್ರತಿಭಟಿಸಲು ಕೂಡ ಬಜೆಟ್ ಮಂಡನೆ ಸಮಯದಲ್ಲಿ ಸದನದಲ್ಲಿ ಸದಸ್ಯರಿರಲಿಲ್ಲ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ರಾಜ್ಯದ ಹದಿನೆಂಟು ಸದಸ್ಯರಲ್ಲಿ ಅಂದು ಹಾಜರಿದ್ದವರು ಕೇವಲ ಏಳು ಮಂದಿ. ರೈಲ್ವೆ ಬಜೆಟ್‌ನ್ನು ಇತಿಹಾಸದಲ್ಲಿಯೇ ಮೊದಲ ಬಾರಿಗೆ ಚರ್ಚೆಯಿಲ್ಲದೆ ಸಂಸತ್ ಅಂಗೀಕರಿಸಿದ ಕಾರಣ ಕೊನೆಗೂ ಕರ್ನಾಟಕಕ್ಕಾದ ಅನ್ಯಾಯವನ್ನು ಸರಿಪಡಿಸಲು ಅವಕಾಶವೇ ಸಿಗಲಿಲ್ಲ.

ಕರ್ನಾಟಕದಲ್ಲಿ ಮೂರು ವರ್ಗಗಳ ಸಂಸತ್ ಸದಸ್ಯರಿದ್ದಾರೆ. ಪ್ರಶ್ನೆಗಳನ್ನು ಕೇಳುವುದು. ಚರ್ಚೆಯಲ್ಲಿ ಭಾಗವಹಿಸುವುದು ತಮ್ಮ ಸ್ಥಾನಮಾನಕ್ಕೆ ಕುಂದು ಎಂದು ತಿಳಿದುಕೊಂಡ 'ಹಿರಿಯ ನಾಯಕರ' ಒಂದು ವರ್ಗ. ಚರ್ಚೆಯಲ್ಲಿ ಭಾಗವಹಿಸುವುದು ಬೇಡ. ಲಿಖಿತ ಉತ್ತರಕ್ಕೂ ಪ್ರಶ್ನೆಗಳನ್ನು ಕಳುಹಿಸುವ ಕನಿಷ್ಠ ಜವಾಬ್ದಾರಿಯನ್ನು ನಿರ್ವಹಿಸಲಾಗದಷ್ಟು 'ಜಡಭರಿತ' ರಾಗಿರುವವರದ್ದು ಇನ್ನೊಂದು ವರ್ಗ. ಅಧ್ಯಯನ–ವಿಷಯ ಸಂಗ್ರಹದ ಗೋಜಿಗೆ ಹೋಗದೆ ಉತ್ಸಾಹವನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಮಾತನಾಡಲು ಹೋಗಿ ಮುಗ್ಗರಿಸುವವರದ್ದು ಮೂರನೇ ವರ್ಗ.

ರಾಜ್ಯದ ಸಂಸದರ ಕಾರ್ಯ ನಿರ್ವಹಣೆಗೆ ನೆರವಾಗಲು ಇಲ್ಲಿನ ಕರ್ನಾಟಕದ ಭವನದಲ್ಲಿ ಪ್ರತ್ಯೇಕ ಘಟಕವಿದೆ. ನಿಷ್ಕ್ರಿಯವಾಗಿದ್ದ ಈ ಘಟಕ ಕಳೆದ ಒಂದು ವರ್ಷದಿಂದ ಸಕ್ರಿಯವಾಗಿದೆ. ಚಳಿಗಾಲದ ಅಧಿವೇಶನಕ್ಕಾಗಿ ಈ ಘಟಕ ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ 145 ಮಾದರಿ ಪ್ರಶ್ನೆಗಳ ಪಟ್ಟಿಯನ್ನು ಪ್ರತಿಯೊಬ್ಬ ಸದಸ್ಯರಿಗೂ ಕಳುಹಿಸಿಕೊಟ್ಟಿದೆ. ಕೆಲವು ಸದಸ್ಯರ ಮನೆಯಲ್ಲಿ ಈ ಮಾಹಿತಿಯನ್ನೊಳಗೊಂಡ ಲಕೋಟೆಯನ್ನು ಬಿಚ್ಚಿ ನೋಡುವವರಿಲ್ಲದೆ ಅನಾಥವಾಗಿ ಬಿದ್ದಿದೆ. ಇದರ ಜತೆಗೆ ಕೇಂದ್ರದಲ್ಲಿ ಮಂಜೂರಾತಿಗಾಗಿ ಕಾಯುತ್ತಿರುವ ಸುಮಾರು 130 ಯೋಜನಾ ಪ್ರಸ್ತಾವಗಳ ಪುಸ್ತಿಕೆಯನ್ನು ರಾಜ್ಯ ಸರ್ಕಾರ ಕೊಟ್ಟಿದೆ.

ಕುಣಿಯಲು ಮನಸ್ಸಿಲ್ಲದವರ ಕಾಲಿಗೆ ಗೆಜ್ಜೆ ಕಟ್ಟಿ ಏನು ಪ್ರಯೋಜನ? ಕೊನೆಗೂ ಅಂತಹವರು ದೂರುವುದು ಡೊಂಕು ನೆಲವನ್ನಲ್ಲವೇ? ಎಂದು ಕೇಳುತ್ತಾರೆ. ಮಾಜಿ ರಾಜ್ಯ ಸದಸ್ಯರೊಬ್ಬರು. ಅದೂ ನಿಜ. ಯಾಕೆ ಹೀಗೆ ಎಂದು ನಮ್ಮ ಸಂಸದರನ್ನು ಕೇಳಿ.

'ಆ ಯುಪಿ, ಬಿಹಾರದವರ ಜತೆ ನಾವು ಕೂಗಾಡಿ ಏಗಲಿಕ್ಕಾಗುತ್ತಾ?' ಎಂದು ಅವರು ಮರುಪ್ರಶ್ನಿಸುತ್ತಾರೆ.

ಪ್ರಸಕ್ತ ವರ್ಷದ ಚಳಿಗಾಲದ ಅಧಿವೇಶನದಿಂದ ಈ ಸಬೂಬು ಹೇಳುವ ಅವಕಾಶವನ್ನೂ ಸದಸ್ಯರು ಕಳೆದುಕೊಳ್ಳಲಿದ್ದಾರೆ. ಇನ್ನು ಮುಂದೆ ಲೋಕಸಭೆಯಲ್ಲಿ ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ಧಾವಿಸುವ ಸದಸ್ಯರು ಐದು ದಿನಗಳ ಅವಧಿಯ ಅಮಾನತ್‌ನ ಶಿಕ್ಷೆಗೆ ಗುರಿಯಾಗಲಿದ್ದಾರೆ. ಜತೆಗೆ ಆ ಅವಧಿಯ 2.500 ರೂಪಾಯಿಯ ಭತ್ಯೆಯನ್ನೂ ಅವರು ಕಳೆಮಕೊಳ್ಳಲಿದ್ದಾರೆ. ನೋಡಬೇಕು. ಮುಂದಿನ ದಿನಗಳಲ್ಲಿ ಗಂಭೀರವಾಗಿ ನಡೆಯಲಿರುವ ಕಲಾಪದಲ್ಲಿ ಸಕ್ರಿಯವಾಗಿ ಭಾಗವಹಿಸಲಿರುವ ನಮ್ಮ ಸಂಸತ್‌ಸದಸ್ಯರ ಕಾರ್ಯ ವೈಖರಿ.

O

(18-11-2001)

ಬೆಕ್ಕಿನ ಕತ್ತಿಗೆ ಗಂಟೆ

ಸಮಾಜವಾದಿ ಪಕ್ಷದ ದೇವೇಂದ್ರ ಪ್ರಸಾದ್ ಯಾದವ್ ದೇಶಕ್ಕೆ ಚಿರಪರಿಚಿತ ರಾಜಕಾರಣಿಯೇನಲ್ಲ. ಸಂಸದೀಯ ಸಾಧನೆಗಾಗಿ ಪತ್ರಿಕೆಗಳ ಮುಖಪುಟಗಳಲ್ಲಿ ಇವರ ಹೆಸರು ಕಾಣಿಸಿಕೊಂಡದ್ದು ಇಲ್ಲವೇ ಇಲ್ಲ. ಎಂದು ಹೇಳಬಹುದು. ಬಹುಜನ ಸಮಾಜ ಪಕ್ಷದ ರಶೀದ್ ಅಲ್ವಿ ಒಬ್ಬ ಉತ್ತಮ ಸಂಸದೀಯ ಪಟು. ಹಲವಾರು ಮಹತ್ವದ ವಿಷಯಗಳ ಬಗ್ಗೆ ಅಲ್ವಿ ಅರ್ಥಪೂರ್ಣ ರೀತಿಯಲ್ಲಿ ಚರ್ಚೆಯಲ್ಲಿ ಭಾಗವಹಿಸಿದ್ದು ಉಂಟು. ಆದರೆ ಅದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಕಡಿಮೆ. ಗುರುವಾರ ಪತ್ರಿಕೆಗಳು ಇವರಿಬ್ಬರ ಹೆಸರು ಮತ್ತು 'ಸಾಧನೆ'ಗಳನ್ನು ಪ್ರಾಮುಖ್ಯ ಕೊಟ್ಟು ಪ್ರಕಟಿಸಿದವು. ಆದರೆ ಅವರ ಈ ಸಾಧನೆಗೆ ಅವರಾಗಲಿ, ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ಎಂದು ಕರೆದುಕೊಳ್ಳುವ ಭಾರತವಾಗಲಿ ಹೆಮ್ಮೆ ಪಡುವಂತಹದ್ದಲ್ಲ.

ಈ ಇಬ್ಬರು ಸಂಸದರು ಉತ್ತರ ಪ್ರದೇಶ ರಾಜಕಾರಣವನ್ನು ದೆಹಲಿಗೆ ಒಯ್ದು ತರಲು ಪ್ರಯತ್ನ ನಡೆಸಿದರು. ಸಮಾಜವಾದಿ ಪಕ್ಷ 'ಕ್ರಿಮಿನಲ್'ಗಳಿಂದ ತುಂಬಿದೆ ಎಂದ ರಶೀದ್ ಅಲ್ವಿ ಅವರ ಮೇಲೇರಿ ಹೋದರು ಯಾದವ್. ಇಷ್ಟೊಂದು ಸಣ್ಣ ವಿಷಯಕ್ಕೆ ಯಾಕೆ ಎಲ್ಲರೂ ತಲೆಕೆಡಿಸಿ ಕೊಳ್ಳುತ್ತಿದ್ದಾರೆ ಎಂದು ಅವರಿಬ್ಬರೂ ಆಶ್ಚರ್ಯಪಡಲೂಬಹುದು. 1997 ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶ ವಿಧಾನಸಭೆಯಲ್ಲಿ ನಡೆದದ್ದಕ್ಕೆ ಹೋಲಿಸಿದರೆ ಇದು ಸಣ್ಣದೇ.

ಲೋಕಸಭೆಯಲ್ಲಿ ಈ ರೀತಿ ಸದಸ್ಯರು ನಡೆದುಕೊಳ್ಳುವುದು ಇದೇ ಮೊದಲ ಸಲವೇನಲ್ಲ. ಮುಷ್ಟಿಕಾಳಗ, ನೂಕಾಟ, ತಳ್ಳಾಟ, ಅವಾಚ್ಯ ಶಬ್ದಗಳ ಬಳಕೆ, ಎಲ್ಲವೂ ನಡೆದಿದೆ. ಇವೆಲ್ಲವನ್ನೂ ಮೀರಿ ಅಂಗಾಂಗಗಳ ಮೂಲಕ ಸನ್ನೆ ಮಾಡಿ ಸದಸ್ಯರು ಪರಸ್ಪರ ಛೇಡಿಸಿದ್ದೂ ಉಂಟು. ಕಾಂಗ್ರೆಸ್ ಪಕ್ಷದಲ್ಲಿ ಈ ರೀತಿಯ 'ಸಾಧನೆ'ಗೆ ಹೆಸರಾದವರು ಸದಸ್ಯ ಮಣಿಶಂಕರ್ ಅಯ್ಯರ್. ಅಯ್ಯರ್ ತಮ್ಮನ್ನು ಉದ್ದೇಶಿಸಿ ಅಸಂಸದೀಯ ರೀತಿಯಲ್ಲಿ ಸನ್ನೆ ಮಾಡಿದ್ದಾರೆ ಎಂದು ಸದಸ್ಯೆ ಉಮಾಭಾರತಿ ಒಮ್ಮೆ ಸಭಾಧ್ಯಕ್ಷರಿಗೆ ದೂರು ನೀಡಿದ್ದರು. ಸಂಸದೀಯ ಸನ್ನೆಗಳನ್ನು ಕಡತದಿಂದ ಕಿತ್ತು ಹಾಕುವುದು ಹೇಗೆಂದು ಸಭಾಧ್ಯಕ್ಷರು ಗೊಂದಲಕ್ಕೀಡಾಗಿದ್ದರು.

ಇತ್ತೀಚಿನ ದಿನಗಳಲ್ಲಿ ಸಂಸತ್‌ನ ಉಭಯ ಸದನಗಳಲ್ಲಿ ಸಭಾತ್ಯಾಗ, ಸಭಾಧ್ಯಕ್ಷರ ಮುಂದಿನ ಬಾವಿಗೆ 'ಧುಮುಕುವುದು', ಕಲಾಪ ಮುಂದೂಡಿಕೆ--ಎಲ್ಲವೂ ಸಾಮಾನ್ಯವೆನಿಸಿಬಿಟ್ಟಿದೆ. ಸಮ್ಮಿಶ್ರ ಸರ್ಕಾರದ ಅಸಹಾಯಕತೆ, ವಿರೋಧ ಪಕ್ಷಗಳಲ್ಲಿನ ಬಿಕ್ಕಟ್ಟು, ಪ್ರಾದೇಶಿಕ ಪಕ್ಷಗಳ ಉದಯ, ಯಾವ ಶಿಸ್ತಿನ ದಂಡದ ಭಯ ಇಲ್ಲದ ತಮ್ಮ ಮರ್ಜಿಗೆ ತಾವೇ ಮಾಲೀಕರಾಗಿರುವ ಸಣ್ಣ ಪಕ್ಷಗಳ ಸಂಖ್ಯೆಯಲ್ಲಿ ದಿಢೀರ್ ಹೆಚ್ಚಳ– ಇವೆಲ್ಲವೂ ಪ್ರಜಾಪ್ರಭುತ್ವದ ಗುಡಿ 'ಕುಸ್ತಿ ಅಖಾಡ'ವಾಗಿ ಪರಿವರ್ತನೆಗೊಳ್ಳಲು ತಮ್ಮದೇ ಕೊಡುಗೆ ನೀಡಿವೆ.

ಪುಣೆ ಮೂಲದ ಸೆಂಟರ್ ಆಫ್ ಅಡ್ವೊಕೆಸಿ ಸ್ಟಡೀಸ್ ಲೋಕಸಭೆಯ ಪ್ರಶ್ನೋತ್ತರ ಅವಧಿಯ ಬಗ್ಗೆ ನಡೆಸಿದ ಸಮೀಕ್ಷೆ ಸಂಸದರ ಕಾರ್ಯವೈಖರಿಯ ಇನ್ನೊಂದು ಮುಖವನ್ನು ಪರಿಚಯಿಸುತ್ತದೆ. ಸಾಮಾಜಿಕ ನ್ಯಾಯ, ಸಾಮಾಜಿಕ ಬದ್ಧತೆ, ಗ್ರಾಮೀಣ ಅಭಿವೃದ್ಧಿ, ಮಹಿಳೆ, ದಲಿತರು, ಹಿಂದುಳಿದ ವರ್ಗ, ಇತ್ಯಾದಿ ವಿಷಯಗಳ ಬಗ್ಗೆ ಸಾರ್ವಜನಿಕ ವೇದಿಕೆಗಳಲ್ಲಿ ಕಂಠಶೋಷಣೆ ಮಾಡುವ ಜನಪ್ರತಿನಿಧಿಗಳ ಕಳಕಳಿ ಅವರ ಸಂಸದೀಯ ಕಾರ್ಯನಿರ್ವಹಣೆಯಲ್ಲಿ ಪ್ರತಿಬಿಂಬಿತವಾಗಿಲ್ಲ.

ಸಂಸತ್ ಕಲಾಪದ ಮೊದಲ ಒಂದು ಗಂಟೆ ಪ್ರಶ್ನೋತ್ತರಕ್ಕೆ ಮೀಸಲು. ಆದರೆ ಈ ಅವಧಿ ಆ ಉದ್ದೇಶಕ್ಕಾಗಿಯೇ ಇತ್ತೀಚೆಗೆ ಪೂರ್ಣವಾಗಿ ಬಳಕೆಯಾಗಿದ್ದು ಅಪರೂಪ. ಸಮೀಕ್ಷೆಯ ಪ್ರಕಾರ ಈಗ ಅಸ್ತಿತ್ವದಲ್ಲಿರುವ ಹದಿಮೂರನೇ ಲೋಕ ಸಭೆಯ ಎರಡನೇ ಅಧಿವೇಶನದಲ್ಲಿ ಕೇಳಲಾದ ಪ್ರಶ್ನೆಗಳು 4461.

ಅವುಗಳಲ್ಲಿ ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿದ 425. ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ 267, ಮಹಿಳೆಯರಿಗೆ ಸಂಬಂಧಿಸಿದ 223, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ 267 ಪ್ರಶ್ನೆಗಳು ಸೇರಿವೆ. ಶೇಕಡ 40ರಷ್ಟು ಅಶಿಕ್ಷಿತರಿದ್ದರೂ ಶಿಕ್ಷಣದ ಬಗ್ಗೆ ಕೇಳಲಾದ ಪ್ರಶ್ನೆಗಳ ಸಂಖ್ಯೆ 113 ಮಾತ್ರ. ಆ ಅಧಿವೇಶನದಲ್ಲಿ ಯಾರೂ

ಕೂಡಾ ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿರಲಿಲ್ಲ. ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಎಂಟು ಪ್ರಶ್ನೆಗಳನ್ನು ಮಾತ್ರ ಸದಸ್ಯರು ಕೇಳಿದ್ದರು. ಸದನದ ಪ್ರಮುಖ ಮಹಿಳಾ ನಾಯಕಿಯಾದ ಸೋನಿಯಾ ಗಾಂಧಿ, ಮಾಯಾವತಿ ಮತ್ತು ಮಮತಾ ಬ್ಯಾನರ್ಜಿ ಪ್ರಶ್ನೆಗಳನ್ನೇ ಕೇಳಿರಲಿಲ್ಲ.

ಕನಿಷ್ಠ ಪ್ರಶ್ನೋತ್ತರದ ಅವಧಿಯನ್ನಾದರೂ ಅಡ್ಡಿ-ಆತಂಕ ಇಲ್ಲದೆ ಪೂರ್ಣಾವಧಿ ನಡೆಸಬೇಕೆಂಬ ಪ್ರಯತ್ನ ನಿರಂತರವಾಗಿ ನಡೆದಿದೆ. ಇದಕ್ಕೆ ಪ್ರಮುಖವಾಗಿ ಅಡ್ಡಿಯಾಗಿರುವುದು, ಅದರ ಬೆನ್ನಲ್ಲೇ ಬರುವ ಶೂನ್ಯವೇಳೆ. ಮಹತ್ವದ ವಿಷಯಗಳ ಬಗ್ಗೆ ತುರ್ತಾಗಿ ಸರ್ಕಾರದ ಗಮನ ಸೆಳೆಯಲು ಇರುವ ಈ ಅವಕಾಶ ಉಪಯೋಗಕ್ಕಿಂತ ದುರುಪಯೋಗವಾಗಿದ್ದೇ ಹೆಚ್ಚು. ಮರುದಿನದ ಪತ್ರಿಕೆಗಳಲ್ಲಿ ಮಿಂಚಬಯಸುವ ಸದಸ್ಯರೆಲ್ಲರೂ ಈ ಅವಧಿಗಾಗಿ ಕಾಯುತ್ತಿರುತ್ತಾರೆ. 'ಬಾವಿಗೆ ಹಾರುವ', ತೋಳೇರಿಸಿ ಕುಸ್ತಿಗೆ ತೊಡತಟ್ಟುವ, 'ಸಂಸ್ಕೃತ' ಶಬ್ದಪಠನ ಮಾಡುವ ಉತ್ಸಾಹಿಗಳ ನಡುವೆ ಪೈಪೋಟಿ ಕಂಡುಬರುವುದು ಆಗಲೇ. ಸದನದಗೌರವ, ವೈಯಕ್ತಿಕ ಗೌರವ, ಸಹನೆ, ಸಂಯಮ ಎಲ್ಲವೂ ಗಾಳಿಯಲ್ಲಿ ತೂರಿಹೋಗುತ್ತವೆ.

ಕಳೆದ ಮುಂಗಾರು ಅಧಿವೇಶನದ ಅವಧಿಯಲ್ಲಿ ಸ್ಫೋಟಗೊಂಡ ಪೆಟ್ರೋಲ್ ಪಂಪ್ ಹಗರಣದಿಂದಾಗಿ ಎರಡೂ ಸದನಗಳ ತಲಾ ಆರು ಗಂಟೆ ಗದ್ದಲದಿಂದ ವ್ಯರ್ಥವಾಯಿತು. ಒಂದು ದಿನದ ಕಲಾಪ ನಿರ್ವಹಣೆಗೆ ಖರ್ಚಾಗುವ ಹಣ 79.55 ಲಕ್ಷ ರೂಪಾಯಿ. ಒಂದು ಗಂಟೆಗೆ 10.61 ಲಕ್ಷ ರೂಪಾಯಿ ಮತ್ತು ಒಂದು ನಿಮಿಷಕ್ಕೆ 17,671 ರೂಪಾಯಿ. ಬೋಫೋರ್ಸ್, ಟೆಲಿಕಾಮ್, ಅಯೋಧ್ಯೆ, ತೆಹೆಲ್ಕಾ.....ಕಲಾಪ ನಷ್ಟದ ಲೆಕ್ಕ ಎಲ್ಲಿ?

ಇದನ್ನು ತಪ್ಪಿಸಿ ಜನಪ್ರತಿನಿಧಿಗಳ ನಡವಳಿಕೆಗೆ ಕಡಿವಾಣ ಹಾಕಲು ಆಚಾರ ಸಂಹಿತೆಯೊಂದನ್ನು ರೂಪಿಸಬೇಕೆಂಬ ಪ್ರಯತ್ನ 50 ವರ್ಷಗಳ ಹಿಂದೆಯೇ ನಡೆದಿತ್ತು. ಬಾಂಬೆ ಬುಲಿಯನ್ ಅಸೋಸಿಯೇಷನ್ ಪರವಾಗಿ ಸಂಸತ್‌ನಲ್ಲಿ ಪ್ರಚಾರ ನಡೆಸಲು ಸದಸ್ಯ ಎಚ್.ಜಿ. ಮುದಗಲ್ ಅವರು ಆ ಸಂಸ್ಥೆಯಿಂದ ಆರ್ಥಿಕ ಮತ್ತು ವ್ಯವಹಾರಿಕ ಲಾಭ ಪಡೆದಿದ್ದರು ಎಂಬುದು ಆಗ ಕೇಳಿಬಂದ ಆರೋಪ. ಅದರ ತನಿಖೆಗಾಗಿ ಪ್ರಧಾನಿ ನೆಹರೂ ಟಿ.ಟಿ. ಕೃಷ್ಣಮಾಚಾರಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದ್ದರು. ಸಮಿತಿ ಮುದಗಲ್ ಅವರನ್ನು ದೋಷಿ ಎಂದು ತೀರ್ಮಾನಿಸಿತು. ನೆಹರೂ ಮುದಗಲ್ ಅವರನ್ನು ಸದನದಿಂದ ದೂರಹಾಕಿದ್ದರು.

ಆ ಸಮಿತಿಯಲ್ಲಿದ್ದ ಸದಸ್ಯೆ ದುರ್ಗಾಬಾಯಿ ಅವರು ಸಂಸತ್‌ಸದಸ್ಯರಿಗಾಗಿ ಆಚಾರಸಂಹಿತೆಯ ಹನ್ನೆರಡು ಸೂತ್ರಗಳನ್ನು ರೂಪಿಸಿದ್ದರು.

1. ಸ್ವಂತ ಹಿತಾಸಕ್ತಿ ಇರುವ ಸಂಸ್ಥೆಗಳೊಂದಿಗೆ ಸರ್ಕಾರ ವ್ಯವಹಾರ ನಡೆಸುವಂತೆ ಮಾಡಲು ಪ್ರಯತ್ನಿಸಬಾರದು.
2. ಸ್ವಂತ ಆಸಕ್ತಿ ಇರುವ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಪ್ರಭಾವ ಬೀರಬಾರದು.
3. ತಮ್ಮ ಕುಟುಂಬದ ಸದಸ್ಯರು ಇಲ್ಲವೇ ಸ್ನೇಹಿತರ ಪರವಾಗಿ ಶಿಫಾರಸು ಪತ್ರ ನೀಡಬಾರದು.
4. ತಮ್ಮ ಅಧಿಕೃತ ವಸತಿಯನ್ನು ಬೇರೆಯವರಿಗೆ ಬಾಡಿಗೆಗೆ ನೀಡಬಾರದು....ಇತ್ಯಾದಿ.

ಆಚಾರಸಂಹಿತೆಯ ಈ ಕರಡು ಈಗಲೂ ಶೈತ್ಯಾಗಾರದಲ್ಲಿ ಮಂಜುಗಡ್ಡೆಯಾಗಿ ಬಿದ್ದಿದೆ. ಆ ನಂತರ ಕನಿಷ್ಠ ಐದಾರು ಲೋಕಸಭಾಧ್ಯಕ್ಷರು ಆಚಾರ ಸಂಹಿತೆ ರೂಪಿಸುವ ಪ್ರಯತ್ನ ಮಾಡಿದ್ದರು. 1992ರಲ್ಲಿ ಶಿವರಾಜ್ ಪಾಟೀಲ್ ಸಭಾಧ್ಯಕ್ಷರಾಗಿದ್ದಾಗ ದೇಶದ ಸಭಾಧ್ಯಕ್ಷರ ಸಮ್ಮೇಳನದಲ್ಲಿ ಸಂಸದರ ಆಚಾರ ಸಂಹಿತೆಯ ಕರಡೊಂದನ್ನು ಮಂಡಿಸಲಾಗಿತ್ತು. ಸದಸ್ಯರ ಹಕ್ಕು ಸಮಿತಿಯ ಹೆಸರನ್ನು 'ಹಕ್ಕು ಮತ್ತು ನೀತಿ ಸಮಿತಿ' ಎಂದು ಬದಲಾಯಿಸಿ ಅದಕ್ಕೆ ಜನಪ್ರತಿನಿಧಿಗಳ ದುರ್ವರ್ತನೆ ಬಗ್ಗೆ ಜನರು ನೀಡುವ ದೂರಿನ ಬಗ್ಗೆ ತನಿಖೆ ನಡೆಸುವ ಅಧಿಕಾರ ನೀಡಬೇಕೆಂಬುದು ಆ ಸಮ್ಮೇಳನದ ಪ್ರಮುಖ ಶಿಫಾರಸ್ಸಾಗಿತ್ತು.

ಸ್ವಾತಂತ್ರ್ಯದ ಸ್ವರ್ಣಮಹೋತ್ಸವದ ಸಂದರ್ಭದಲ್ಲಿ ಕರೆಯಲಾದ ವಿಶೇಷ ಅಧಿವೇಶನದಲ್ಲಿ ಕೂಡಾ ಸದಸ್ಯರು ಇದರ ಬಗ್ಗೆ ಆಸಕ್ತಿಯಿಂದ ಚರ್ಚೆ ನಡೆಸಿದ್ದರು. ಆದರೆ ಅದರ ನಿರ್ಣಯಗಳ್ಯಾವುದೂ ಅನುಷ್ಠಾನಕ್ಕೆ ಬರಲಿಲ್ಲ.

ಸರಿಯಾಗಿ ಒಂದು ವರ್ಷದ ಹಿಂದೆ (ನವಂಬರ್ 25,2001) ಆಗಿನ ಲೋಕಸಭಾ ಅಧ್ಯಕ್ಷರಾದ ಜಿ.ಎಂ.ಸಿ. ಬಾಲಯೋಗಿಯವರು ಸಭಾಧ್ಯಕ್ಷರ (ವಿಧಾನಸಭಾ ಅಧ್ಯಕ್ಷರು ಮತ್ತು ವಿಧಾನ ಪರಿಷತ್ ಸಭಾಪತಿಗಳು) ಸಮ್ಮೇಳನದಲ್ಲಿ ಕೆಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದರು. ಇದಕ್ಕಿಂತ ಮೊದಲು ಆಗಸ್ಟ್ ತಿಂಗಳ ಮುಂಗಾರು ಅಧಿವೇಶನದ ಸಮಯದಲ್ಲಿ ಅವರು ಸರ್ವಪಕ್ಷಗಳ ಸಭೆ ಕರೆದು ಸದನದಲ್ಲಿ "ಬಾವಿಗೆ ಹಾರುವ" ಸದಸ್ಯರನ್ನು ಐದು ದಿನಗಳ ಕಾಲ ಸದನದಿಂದ ಬಹಿಷ್ಕರಿಸುವ ನಿರ್ಧಾರ ಕೈಗೊಂಡಿದ್ದರು.

ಕಳೆದ ನವೆಂಬರ್‌ನಲ್ಲಿ ನಡೆದ 55 ಸಭಾಧ್ಯಕ್ಷರು ಮತ್ತು ಹತ್ತು ಮುಖ್ಯ ಮಂತ್ರಿಗಳು ಭಾಗವಹಿಸಿದ್ದ ಸಮ್ಮೇಳನ ಹಲವಾರು ಕಾರಣಗಳಿಗಾಗಿ ನಿರೀಕ್ಷೆ ಹುಟ್ಟಿಸಿತ್ತು. ಹಿಂದಿನ ಸಭಾಧ್ಯಕ್ಷರೆಲ್ಲಾ 'ಹಾದಿ ತಪ್ಪಿದ' ಜನಪ್ರತಿನಿಧಿಗಳನ್ನು 'ಶಿಕ್ಷಿಸುವ' ಹೊಣೆಯಿಂದ ಜಾರಿಕೊಳ್ಳಲು ಪ್ರಯತ್ನಿಸಿದ್ದರೆ, ಬಾಲಯೋಗಿ ಅವರು 'ತುಂಟ

ಬೆಕ್ಕುಗಳ ಕುತ್ತಿಗೆಗೆ ಗಂಟೆ ಕಟ್ಟುವ' ಜವಾಬ್ದಾರಿ ಹೊರಲು ಸಿದ್ಧ ಎಂಬ ಸಂದೇಶ ನೀಡಿದರು.

ಆಚಾರ ಸಂಹಿತೆ ರಚನೆಯ ಜತೆ ಅದರ ಅನುಷ್ಠಾನಕ್ಕೆ ನಿಯಮಾವಳಿಗಳಲ್ಲಿ ತಿದ್ದುಪಡಿ, ಸದಸ್ಯರ ಹಕ್ಕು ಸಮಿತಿಯನ್ನು ಹಕ್ಕು ಮತ್ತು ನೀತಿ ಸಮಿತಿಯಾಗಿ ಪುನರ್ರಚನೆ, ಸಂಸದರ ವರ್ತನೆ ಬಗ್ಗೆ ಮತದಾರರು ನೀಡುವ ದೂರು ಪರಿಶೀಲಿಸಲು ಆ ಸಮಿತಿಗೆ ಅಧಿಕಾರ, ಸಂಸತ್ ಮತ್ತು ವಿಧಾನಮಂಡಲದ ಅಧಿವೇಶನಗಳ ಅವಧಿಯ ಹೆಚ್ಚಳ–ಇವೇ ಮೊದಲಾದ ಗೊತ್ತುವಳಿಗಳನ್ನು ಆ ಸಮ್ಮೇಳನದಲ್ಲಿ ಅಂಗೀಕರಿಸಲಾಗಿತ್ತು. ಆ ಆಚಾರ ಸಂಹಿತೆಯ ಜಾರಿಗಾಗಿ ಲೋಕಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಬೇಕಾಗಿತ್ತು. ಅಷ್ಟರಲ್ಲಿ ಬಾಲಯೋಗಿ ಅವರು ಹೆಲಿಕಾಪ್ಟರ್ ಅಪಘಾತದಲ್ಲಿ ಸಾವಿಗೀಡಾದರು. ಆಚಾರ ಮರೆತ ಸಂಸದರಿಗೆ 'ಮೂಗುದಾರ' ಹಾಕುವ ಮತ್ತೊಂದು ಪ್ರಯತ್ನ ಈ ರೀತಿ ವಿಫಲಗೊಂಡಿತು.

ಆಚಾರ–ವಿಚಾರಗಳನ್ನೆಲ್ಲಾ ಮರೆತಿರುವ ಬಾಳಸಾಹೇಬ ಠಾಕ್ರೆ ಎಂಬ ನಾಯಕರ 'ರಿಮೋಟ್ ಕಂಟ್ರೋಲ್' ನಲ್ಲಿ ಚಲಿಸುತ್ತಿರುವ ಈಗಿನ ಲೋಕಸಭಾಧ್ಯಕ್ಷ ಮನೋಹರ್ ಜೋಷಿ ಅವರಿಂದ ಹೊಸ ಆಚಾರ ಸಂಹಿತೆ ನಿರೀಕ್ಷಿಸಲು ಸಾಧ್ಯವೇ?

ಸಂಸತ್ ಸದಸ್ಯರು ಪತ್ರಿಕೆಗಳಲ್ಲಿ ಪ್ರಚಾರ ಪಡೆಯಲು ಏನು ಮಾಡಬೇಕು? ಅದಕ್ಕಾಗಿ ಸಂಸದ ಮಣಿಶಂಕರ್ ಅಯ್ಯರ್ ನೀಡಿರುವ ಮೂರು ಸುಲಭ ಸೂತ್ರಗಳು ಹೀಗಿವೆ.

1. ಸಾರ್ವಜನಿಕ ಮಹತ್ವದ ಗಂಭೀರ ವಿಷಯ ಮರೆತುಬಿಡಿ 2. ಕ್ಷುಲ್ಲಕ ವಿಷಯಗಳನ್ನು ಎತ್ತಿಕೊಳ್ಳಿ 3. ಪತ್ರಿಕೆಗಳಲ್ಲಿ ಎಷ್ಟು ದೊಡ್ಡದಾದ ತಲೆಬರಹ ಬೇಕೊ ಅಷ್ಟೇ ದೊಡ್ಡ ದನಿಯಲ್ಲಿ ಕಿರುಚಾಡಿ.

O

(24-11-2002)

ಹಳಿ ತಪ್ಪುತ್ತಿರುವ ಸಂಸತ್

ಕರ್ನಾಟಕದ ಬಿಜೆಪಿ ಲೋಕಸಭಾ ಸದಸ್ಯರೊಬ್ಬರು ಟಿಪ್ಪಣಿ ಮಾಡಿದ ಕಾಗದಗಳ ಕಂತೆ ಹಿಡಿದುಕೊಂಡು ಸಂಸತ್ ಭವನದ ಮೊಗಸಾಲೆಯಲ್ಲಿ ಖಿನ್ನರಾಗಿ ನಿಂತಿದ್ದರು. ನೂತನವಾಗಿ ಆರಿಸಿಬಂದ ಈ ಸದಸ್ಯರಿಗೆ ರೈಲ್ವೆ-ಕ್ಷೇತ್ರದಲ್ಲಿ ರಾಜ್ಯಕ್ಕೆ ಆಗುತ್ತಲೇ ಬಂದ ಅನ್ಯಾಯದ ಬಗ್ಗೆ ಸದನದಲ್ಲಿ ಸರ್ಕಾರದ ಗಮನ ಸೆಳೆಯುವ ಆಸೆ. ಅದಕ್ಕೆ ಅವರು 'ಮನೆಕೆಲಸ' ಕೂಡ ಮಾಡಿಕೊಂಡು ಬಂದಿದ್ದರು. ಆದರೆ 'ಕಳಂಕಿತ' ಸಚಿವ ಲಾಲುಪ್ರಸಾದ್ ಯಾದವ್ ಅವರನ್ನು ಬಹಿಷ್ಕರಿಸಬೇಕೆಂಬ ಪಕ್ಷದ ಫರ್ಮಾನು ಅವರ ಆಸೆಗೆ ಅಡ್ಡ ಬಂದಿತ್ತು.

ಲೋಕಸಭೆಯಲ್ಲಿ ರಾಜ್ಯದ 18 ಮಂದಿ ಬಿಜೆಪಿ ಸದಸ್ಯರಿದ್ದಾರೆ. ಲಾಲೂಪ್ರಸಾದ್ ಸಹಿತ ಇತರ ಕಳಂಕಿತ ಸಚಿವರನ್ನು ಬಹಿಷ್ಕರಿಸುವ ನಿರ್ಧಾರಕ್ಕೆ ಬಿಜೆಪಿ ಅಂಟಿಕೊಂಡರೆ, ಸದನದಲ್ಲಿ ರೈಲ್ವೆ ಸೇರಿದಂತೆ ನಾಲ್ಕೈದು ಸಚಿವ ಖಾತೆಗೆ ಸೇರಿದ ರಾಜ್ಯದ ವಿಷಯಗಳ ಬಗ್ಗೆ ಅವರು ಸದನದಲ್ಲಿ ಚರ್ಚೆ ನಡೆಸುವಂತಿಲ್ಲ. ಇದರಿಂದ ನಷ್ಟ ಯಾರಿಗೆ? ಉತ್ತರಿಸುವ ಸ್ಥಿತಿಯಲ್ಲಿ ಆ ಅಸಹಾಯಕ ಸದಸ್ಯರು ಇರಲಿಲ್ಲ. ಕಲಾಪ ಬಹಿಷ್ಕರಿಸಿದರೂ ದಿನದ ಭತ್ಯೆ ಸದಸ್ಯರಿಗೆ ಸಂದಾಯವಾಗುವುದರಿಂದ ವೈಯಕ್ತಿಕವಾಗಿ ಅವರಿಗೆ ನಷ್ಟ

ಗದ್ದಲ, ಧರಣಿ, ಸಭಾತ್ಯಾಗ ಇವೆಲ್ಲದರ ಜತೆ 'ಸಚಿವರ ಬಹಿಷ್ಕಾರ' ಎಂಬ ಪ್ರತಿಭಟನೆಯ ಹೊಸ ಅಸ್ತ್ರ ಈಗ ಸಂಸತ್ ಸದಸ್ಯರ ಬತ್ತಳಿಕೆಯಲ್ಲಿ ಸೇರಿಕೊಂಡಿದೆ. ಈ 'ಅಸ್ತ್ರ'ದ ಸಂಶೋದಕರು ಕಾಂಗ್ರೆಸಿಗರು. ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರನ್ನು ಸತತ ಎರಡು ವರ್ಷ ಬಹಿಷ್ಕರಿಸಿ ಅವರು ದಾಖಲೆ ಸ್ಥಾಪಿಸಿದ್ದಾರೆ. ಈಗ ಅದೇ 'ಅಸ್ತ್ರ' ವನ್ನು ಎನ್‌ಡಿಎ ಮರು ಪ್ರಯೋಗಿಸುತ್ತಿದೆ. ಇದರ ಜತೆಗೆ ಇದೇ ಮೊದಲ ಬಾರಿಗೆ ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸಲು ವಿರೋಧಪಕ್ಷಗಳು ಅವಕಾಶ ನೀಡಲಿಲ್ಲ. ನೂತನವಾಗಿ ಆಯ್ಕೆಯಾದ ಪ್ರಧಾನಿಗೆ ಚೊಚ್ಚಲ ಭಾಷಣ ನೀಡಲು ತಮ್ಮ ಸಹದ್ಯೋಗಿಗಳನ್ನು ಸದನದಲ್ಲಿ ಪರಿಚಯಿಸಲು ಕೂಡ ಸಾಧ್ಯವಾಗಲಿಲ್ಲ. ಖೇದದ ಸಂಗತಿ ಎಂದರೆ ವಿರೋಧ ಪಕ್ಷಗಳ ಈ ನಡವಳಿಕೆಯನ್ನು ನೈತಿಕವಾಗಿ ಖಂಡಿಸುವ ಸ್ಥಿತಿಯಲ್ಲಿ ಆಡಳಿತಾರೂಢ ಪಕ್ಷಗಳು ಇಲ್ಲ. ಕಳೆದ ಐದು ವರ್ಷಗಳ ಖರ್ಚಿನ ಲೆಕ್ಕಾಚಾರ ಹಾಕಲಾಗುತ್ತದೆ.

ಇದರಂತೆ 1992–93 ರ ಅವಧಿಯಲ್ಲಿ ಒಂದು ನಿಮಿಷದ ಲೋಕಸಭಾ ಕಲಾಪಕ್ಕೆ 1500 ರೂಪಾಯಿ ಮತ್ತು ರಾಜ್ಯಸಭಾ ಕಲಾಪಕ್ಕೆ 1000 ರೂಪಾಯಿ ಖರ್ಚಾಗಿತ್ತು. ಇತ್ತೀಚೆಗೆ ಲೋಕಸಭಾ ಸಚಿವಾಲಯ ಹಾಕಿದ ಲೆಕ್ಕದ ಪ್ರಕಾರ ಪ್ರತಿ ನಿಮಿಷದ ಲೋಕಸಭಾ ಕಲಾಪಕ್ಕೆ 15700 ರೂಪಾಯಿ ಮತ್ತು ರಾಜ್ಯ ಸಭಾ ಕಲಾಪಕ್ಕೆ 10070 ರೂಪಾಯಿ ಖರ್ಚಾಗುತ್ತಿದೆ. ಹತ್ತು ವರ್ಷಗಳಲ್ಲಿ ಹತ್ತು ಪಟ್ಟು ಹೆಚ್ಚಳ.

1990–91ರಲ್ಲಿ ಸಂಸತ್‌ನ ಉಭಯ ಸದನಗಳ ನಿರ್ವಹಣೆಗೆ (ಸಭಾಧ್ಯಕ್ಷರು ಮತ್ತು ಸಭಾಪತಿಗಳ ವೆಚ್ಚ, ಸಚಿವಾಲಯ ಸಿಬ್ಬಂದಿ ಮತ್ತು ಸದಸ್ಯರ ಸಂಬಳ–ಭತ್ಯೆ ಸೇರಿ) ಬಜೆಟ್‌ನಲ್ಲಿ ಒದಗಿಸಲಾಗಿದ್ದ ಹಣ 27.70 ಕೋಟಿ ರೂಪಾಯಿ. ಕಳೆದ ವಾರ ಮಂಡಿಸಲಾದ ಬಜೆಟ್‌ನಲ್ಲಿ ಈ ಉದ್ದೇಶಕ್ಕೆ ನೀಡಲಾದ ಒಟ್ಟು ಹಣ 293.31 ಕೋಟಿ ರೂಪಾಯಿ. ಇದರಲ್ಲಿ ಲೋಕಸಭೆಗೆ 203.30 ಕೋಟಿ ರೂಪಾಯಿ, ರಾಜ್ಯಸಭೆಗೆ 90.11 ಕೋಟಿ ರೂಪಾಯಿ. ಅಂದರೆ ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ಸಂಸತ್ ಅನುದಾನದ ಪ್ರಮಾಣ ಹತ್ತು ಪಟ್ಟು ಹೆಚ್ಚಾಗಿದೆ. ಗುಣಮಟ್ಟ?

ಸಂಸತ್ ಕಲಾಪದ ಗುಣಮಟ್ಟ ಸುಧಾರಣೆಗಾಗಿ ಸಂಸತ್ ಸದಸ್ಯರಿಗೆ ಆಚಾರ ಸಂಹಿತೆಯನ್ನು ರೂಪಿಸಬೇಕೆಂಬ ಪ್ರಯತ್ನಗಳು ಕಳೆದ 50 ವರ್ಷಗಳಿಂದ ನಡೆದುಕೊಂಡು ಬಂದಿವೆ. ಐವತ್ತರ ದಶಕದಲ್ಲಿ ಅಧಿವೇಶನದಲ್ಲಿಯೂ ಇಂತಹದೇ ಪ್ರಯತ್ನ ನಡೆಯಿತು. ಸಭಾಧ್ಯಕ್ಷರ ಮುಂದಿನ ಅಂಗಳದಲ್ಲಿ ಬಂದು ಮಾತನಾಡಬಾರದು ಮತ್ತು ಪ್ರತಿಭಟನೆ ಮಾಡಬಾರದು, ಸದನದಲ್ಲಿ ಧರಣಿ ನಡೆಸಬಾರದು. ರಾಷ್ಟ್ರಪತಿಗಳು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವಾಗ ಗದ್ದಲ ಮಾಡಬಾರದು ಎಂಬುದು ಆ ಸಮ್ಮೇಳನದ ಪ್ರಮುಖ ನಿರ್ಣಯಗಳು.

ಗಂಟಿ ಮೋಹನಚಂದ್ರ ಬಾಲಯೋಗಿ ಅವರು ದಕ್ಷ ಲೋಕಸಭಾ ಅಧ್ಯಕ್ಷರೆಂದು ಹೆಸರು ಪಡೆದಿರಲಿಲ್ಲ. ಸಂಸತ್ ಸದಸ್ಯರಾಗಿ ಅವರ ಅನುಭವ ಕೂಡ ಕಡಿಮೆ ಅವಧಿಯದ್ದು. ಆದರೆ ನಿಯಂತ್ರಣಕ್ಕೆ ಜಗ್ಗದೆ ಅಡ್ಡಾದಿಡ್ಡಿ ಹೋಗುತ್ತಿದ್ದ ಸಂಸತ್ ಕಲಾಪವನ್ನು ಸರಿದಾರಿಯಲ್ಲಿ ತರಲು ಅವರು ಪ್ರಾರಂಭಿಸಿದ ಪ್ರಯತ್ನ ನೆನಪಿಡುವಂತಹದ್ದು. ಹಿಂದಿನ ಲೋಕಸಭಾ ಅಧ್ಯಕ್ಷರೆಲ್ಲಾ 'ಹಾದಿ ತಪ್ಪುವ' ಸದಸ್ಯರನ್ನು 'ಶಿಕ್ಷಿಸುವ' ಹೊಣೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರೆ, ಬಾಲಯೋಗಿ ಅವರು ಖುದ್ದಾಗಿ 'ತಂಟೆಕೋರ' ಸದಸ್ಯರನ್ನು ಶಿಕ್ಷಿಸಲು ಮುಂದಾಗಿದ್ದರು.

2002ರ ಮುಂಗಾರು ಅಧಿವೇಶನಕ್ಕೆ ಮುನ್ನ ಅವರು ಸರ್ವಪಕ್ಷಗಳ ಸಭೆ ಕರೆದು ಕಲಾಪಕ್ಕೆ ಅಡ್ಡಿ ಉಂಟು ಮಾಡುವ ಸಭಾಧ್ಯಕ್ಷರ ಮುಂದಿನ 'ಬಾವಿಗೆ ಹಾರುವ' ಸದಸ್ಯರನ್ನು ಐದು ದಿನಗಳ ಕಾಲ ಬಹಿಷ್ಕರಿಸುವ ನಿರ್ಧಾರ ಕೈಗೊಂಡಿದ್ದರು. ಇಂತಹ ಬಹಿಷ್ಕಾರದಿಂದ ನಿತ್ಯದ ಭತ್ಯೆ 2500 ರೂಪಾಯಿಗಳನ್ನು ಕಳೆದುಕೊಳ್ಳಬೇಕಾಗಿರುವುದರಿಂದ ಈ ನಿರ್ಧಾರ ಸದಸ್ಯರ ವರ್ತನೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇತ್ತು.

ಅದಾದ ಮೂರು ತಿಂಗಳ ನಂತರ ಬಾಲಯೋಗಿ ಅವರು ಎಲ್ಲಾ ರಾಜ್ಯಗಳ ಸಭಾಧ್ಯಕ್ಷರ ಸಭೆ ಕರೆದು ಸಂಸತ್ ಅಧಿವೇಶನವನ್ನು ಶಿಸ್ತಿನ ಚೌಕಟ್ಟಿಗೆ ಒಳಪಡಿಸುವ ಇನ್ನೊಂದು ಪ್ರಯತ್ನ ನಡೆಸಿದರು. ಆ ಸಮ್ಮೇಳನ ಕೈಗೊಂಡ ಕೆಲವು ಪ್ರಮುಖ ನಿರ್ಣಯಗಳು ಹೀಗಿವೆ. 1. ಆಚಾರ ಸಂಹಿತೆ ರಚನೆಯ ಜತೆ ಅದರ ಅನುಷ್ಠಾನಕ್ಕೆ ನಿಯಮಾವಳಿಗಳಲ್ಲಿ ತಿದ್ದುಪಡಿ. 2. ಸದಸ್ಯರ ಹಕ್ಕು ಸಮಿತಿಯನ್ನು ಹಕ್ಕು ಮತ್ತು ನೀತಿ ಸಮಿತಿಯಾಗಿ ಪುನರ್ರಚನೆ. 3. ಸಂಸದರ ನಡವಳಿಕೆ ಬಗ್ಗೆ ಮತದಾರರು ನೀಡುವ ದೂರು ಪರಿಶೀಲಿಸಲು.

○

(12-08-2004)

ಸಂಸತ್ತಿನ ಭದ್ರ ಬುನಾದಿ

ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ ಸಂಸತ್ ಸ್ವರ್ಣಸಂಭ್ರಮದಲ್ಲಿದೆ. 1952ರ ಮೇ 13ರಂದು ಮೊದಲ ಬಾರಿಗೆ ಲೋಕಸಭೆ (ಆಗಿನ ಹೆಸರು ಹೌಸ್ ಆಫ್ ಪೀಪಲ್) ಮತ್ತು ರಾಜ್ಯಸಭೆ (ಆಗಿನ ಹೆಸರು ಕೌನ್ಸಿಲ್ ಆಫ್ ಸ್ಟೇಟ್) ಸಮಾವೇಶಗೊಂಡಿತ್ತು. ಸ್ವತಂತ್ರ ಭಾರತದ ಮೊದಲ ಮಹಾಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರು ಅಂದು ಪ್ರಮಾಣವಚನ ಸ್ವೀಕರಿಸಿದ್ದರು. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಕಾಸದ ಹಾದಿಯಲ್ಲಿ ಅದೊಂದು ಹೊಸ ಮೈಲಿಗಲ್ಲು.

ಸಂಸತ್ ಎಂದರೆ ಅದು ಕೇವಲ ಕಲ್ಲು–ಇಟ್ಟಿಗೆಗಳ ಜಡ ಕಟ್ಟಡವಲ್ಲ. ಅದು ದೇಶದ ಸಾರ್ವಭೌಮತೆಯ ಸಂಕಲ್ಪದ ಪ್ರಾತಿನಿಧಿಕ ಸ್ವರೂಪ. ಜನತೆ ಚುನಾಯಿತ ಪ್ರತಿನಿಧಿಗಳ ಮೂಲಕ ಸಂಸದೀಯ ವ್ಯವಸ್ಥೆಯಲ್ಲಿ ಭಾಗವಹಿಸುತ್ತಾರೆ. ಆದರೆ ಈ ಜನಪ್ರತಿನಿಧಿಗಳು ಜನರ ಆಶೋತ್ತರಗಳನ್ನು ಸಮರ್ಥವಾಗಿ ಸಂಸತ್‌ನಲ್ಲಿ ಪ್ರತಿನಿಧಿಸುತ್ತಾ ಬಂದಿದ್ದಾರೆಯೇ? ಕಳೆದ 13 ಮಹಾಚುನಾವಣೆಗಳಲ್ಲಿ ಆರಿಸಿ ಬಂದ ಸಂಸತ್ ಸದಸ್ಯರ ವಯಸ್ಸು, ಶಿಕ್ಷಣ, ಉದ್ಯೋಗಗಳ ಹಿನ್ನೆಲೆಯ ಅವಲೋಕನ ಹಲವಾರು ಕುತೂಹಲಕಾರಿ ಸಂಗತಿಗಳನ್ನು ಪರಿಚಯಿಸುತ್ತದೆ. ಹಿಂದಿನ ಹನ್ನೆರಡು ಲೋಕಸಭೆಗಳಿಗೆ ಹೋಲಿಸಿದರೆ ಈಗ ಕಾರ್ಯ ನಿರ್ವಹಿಸುತ್ತಿರುವ ಹದಿಮೂರನೇ ಲೋಕಸಭೆ ಅತ್ಯಂತ ಹೆಚ್ಚು 'ಶಿಕ್ಷಿತ', 'ಹಿರಿಯ' ಮತ್ತು 'ಮಣ್ಣಿನ ಮಕ್ಕಳ' ಸದಸ್ಯರನ್ನು

ಹೊಂದಿರುವ ಗರಿಮೆಗೆ ಪಾತ್ರವಾಗಿದೆ. ಇದು ನಮ್ಮ ಪ್ರಜಾಪ್ರಭುತ್ವ ಪಕ್ವಗೊಂಡಿರುವುದನ್ನು ಬಿಂಬಿಸುತ್ತದೆಯೇ? ಆದರೆ ವಾಸ್ತವ ಸ್ಥಿತಿ ಬೇರೆಯೇ ಅಭಿಪ್ರಾಯ ನೀಡುತ್ತದೆ.

ಪ್ರಥಮ ಲೋಕಸಭೆಯ ಸದಸ್ಯರ ಸರಾಸರಿ ವಯೋಮಾನ 46.5 ವರ್ಷಗಳಾದರೆ ಈಗಿನ ಲೋಕಸಭೆಯ ಸದಸ್ಯರ ಸರಾಸರಿ ವಯ್ಯಸ್ಸು 55.5 ವರ್ಷ ಮೂರನೇ ಲೋಕಸಭೆಯವರೆಗೆ ಹೆಚ್ಚುತ್ತಾ ಹೋದ ಸದಸ್ಯರ ವಯ್ಯಸ್ಸು (ಸರಾಸರಿ 49.5) ನಾಲ್ಕನೇ ಲೋಕಸಭೆಯಲ್ಲಿ ಇದ್ದಕ್ಕಿದ್ದಂತೆ 48.7ಕ್ಕೆ ಇಳಿದಿತ್ತು. ಆನಂತರ ಆರರಿಂದ ಹನ್ನೊಂದನೇ ಲೋಕಸಭೆಯವರೆಗೆ ಸದಸ್ಯರ ಸರಾಸರಿ ವಯಸ್ಸು 50 ವರ್ಷಗಳಾಗಿತ್ತು. ಹನ್ನೆರಡನೇ ಲೋಕಸಭೆಯಲ್ಲಿ ಒಮ್ಮಿಂದೊಮ್ಮೆಲೆ ಸದಸ್ಯರ ಸರಸರಿ ವಯಸ್ಸು 46.4 ವರ್ಷಗಳಿಗೇರಿತು.

ಲೋಕಸಭೆಗೆ ಆರಿಸಿ ಬರುವ ಯುವಜನರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದನ್ನು ಗಮನಿಸಿದರೆ ಅವರು ರಾಜಕೀಯದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿರುವಂತೆ ಕಾಣಿಸುತ್ತಿದೆ. ಪ್ರಥಮ ಲೋಕಸಭೆಯಲ್ಲಿ 25 ರಿಂದ 35 ವರ್ಷದೊಳಗಿನ ಸದಸ್ಯರು ಶೇಕಡ 17 ರಷ್ಟಿದ್ದರೆ ಹಾಲಿ ಲೋಕಸಭೆಯ ಸದಸ್ಯರಲ್ಲಿ ಈ ವಯೋಮಾನದವರ ಪ್ರಮಾಣ ಕೇವಲ ಶೇಕಡ 5.36 ಮಾತ್ರ.

ಲೋಕಸಭೆಗೆ ಆಯ್ಕೆಯಾದ ಅತ್ಯಂತ ಹೆಚ್ಚು ವಯಸ್ಸಿನ ಸದಸ್ಯರ ದಾಖಲೆ ಪ್ರೊ. ಎನ್.ಜಿ. ರಂಗಾ (89 ವರ್ಷ ಒಂದು ತಿಂಗಳು) ಹೆಸರಲ್ಲಿದೆ. ಅತ್ಯಂತ ಕಿರಿಯ ಪುರುಷ ಸದಸ್ಯನ ದಾಖಲೆ ಪ್ರಥಮ ಲೋಕಸಭೆಗೆ ಆರಿಸಿ ಬಂದ ಸುಬೋಧ ಹಾಸ್ಡ (25 ವರ್ಷ ಒಂದು ತಿಂಗಳು) ಅವರದ್ದು. ಅತ್ಯಂತ ಕಿರಿಯ ಮಹಿಳಾ ಸದಸ್ಯೆ ಎರಡನೇ ಲೋಕಸಭೆಯ ಸದಸ್ಯರಾಗಿದ್ದ ವೇದಕುಮಾರಿ ಮೋತೆ (25 ವರ್ಷ ಆರು ತಿಂಗಳು). ರಾಜಕಾರಣಿಗಳಲ್ಲಿ ಬಹುಪಾಲು ಮಂದಿ ಹೆಚ್ಚು ವಿದ್ಯಾವಂತರಲ್ಲ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಸದಸ್ಯರು ಪಡೆದ ಶಿಕ್ಷಣ ಅವರ ಕಾರ್ಯನಿರ್ವಹಣೆಯಲ್ಲಿ ಪ್ರತಿಫಲಿಸದೆ ಹೋಗಿರಬಹುದು. ಆದರೆ ದಾಖಲೆಗಳ ಪ್ರಕಾರ ಬಹುಸಂಖ್ಯಾತ ಸದಸ್ಯರು ಉನ್ನತ ಶಿಕ್ಷಣ ಪಡೆದವರು. ಈಗಿನ ಲೋಕಸಭೆಯಲ್ಲಿ 458 ಸದಸ್ಯರು (ಶೇಕಡ 80.29 ಪದವಿ). ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರು. ಇವರಲ್ಲಿ 256 ಸದಸ್ಯರು (ಶೇಕಡ 48.03) ಪದವೀಧರರು, 145 ಸದಸ್ಯರು ಸ್ನಾತಕೋತ್ತರ ಇಲ್ಲವೇ ತಾಂತ್ರಿಕ ಶಿಕ್ಷಣ ಪಡೆದವರು ಮತ್ತು 27 ಸದಸ್ಯರು ವೈದ್ಯಕೀಯ ಇಲ್ಲವೇ ಇತರ ಉನ್ನತ ಅಕಾಡೆಮಿಕ್ ಶಿಕ್ಷಣ ಹೊಂದಿದವರು.

ಸಂಸತ್ ಭಾರತವನ್ನು ಸಮರ್ಥವಾಗಿ ಪ್ರತಿನಿಧಿಸುತ್ತಿಲ್ಲ ಎಂಬ ಆರೋಪ 50 ವರ್ಷಗಳಷ್ಟು ಹಳೆಯದು. ಆದರೆ ಲೋಕಸಭೆಗೆ ಆರಿಸಿ ಬರುತ್ತಿರುವ ರೈತರ ಸಂಖ್ಯೆ ಚುನಾವಣೆಯಿಂದ ಚುನಾವಣೆಗೆ ಹೆಚ್ಚುತ್ತಲೇ ಇದೆ. ಪ್ರಸಕ್ತ ಲೋಕಸಭೆಯಲ್ಲಿ 'ಮಣ್ಣಿನ

ಮಕ್ಕಳ'ದ್ದೆ ಗರಿಷ್ಠ ಪ್ರಮಾಣದ ಪ್ರಾತಿನಿಧ್ಯ. ಪ್ರಥಮ ಲೋಕಸಭೆಗೆ 97 ರೈತರು (ಶೇಕಡ 22.45) ಆರಿಸಿ ಬಂದಿದ್ದರೆ ಈಗಿನ ಲೋಕಸಭೆಯಲ್ಲಿ ತಮ್ಮ ಉದ್ಯೋಗ ಕೃಷಿ ಎಂದು ಘೋಷಿಸಿಕೊಂಡ ಸದಸ್ಯರ ಸಂಖ್ಯೆ 230 (ಶೇಕಡ 42.67) ಹನ್ನೆರಡನೇ ಲೋಕಸಭೆಯಲ್ಲಿ 261 (ಶೇಕಡ 49.06) ರೈತ ಸದಸ್ಯರಿದ್ದರು.

ಲೋಕಸಭಾ ಸದಸ್ಯರಲ್ಲಿ ವಕೀಲರ ಸಂಖ್ಯೆ ಕಡಿಮೆಯಾಗುತ್ತಿರುವುದು ಇತೀಚಿನ ಬೆಳವಣಿಗೆ. ಪ್ರಥಮ ಲೋಕಸಭೆಯಲ್ಲಿ 153 ವಕೀಲರಿದ್ದರು (ಶೇಕಡ 35.42). ಉದ್ಯೋಗವಾರು ಅವರದ್ದೇ ಹೆಚ್ಚಿನ ಸಂಖ್ಯೆ. ಪ್ರಸಕ್ತ ಲೋಕಸಭೆಯಲ್ಲಿ ವಕೀಲರ ಸಂಖ್ಯೆ 66 (ಶೇಕಡ 12.34) ಮಾತ್ರ. ರಾಜಕೀಯ ಮತ್ತು ಸಾಮಾಜಿಕ ಸೇವಾ ಕ್ಷೇತ್ರಗಳಿಗೆ ಸೇರಿದವರು ಲೋಕಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದ್ದಾರೆ. ಮೂರನೇ ಲೋಕಸಭೆಯಲ್ಲಿ ಈ ಕ್ಷೇತ್ರಗಳಿಗೆ ಸೇರಿದ 88 ಸದಸ್ಯರಿದ್ದರೆ, ಹದಿಮೂರನೇ ಲೋಕಸಭೆಯಲ್ಲಿ ಇವರ ಸಂಖ್ಯೆ 108. ಪ್ರಥಮ ಲೋಕಸಭೆಯಲ್ಲ 45 ಪತ್ರಕರ್ತರು ಮತ್ತು ಲೇಖಕರಿದ್ದರೆ, ಈಗಿನ ಲೋಕಸಭೆಯಲ್ಲಿ ಇವರ ಸಂಖ್ಯೆ ಹನ್ನೊಂದು.

50 ವರ್ಷಗಳ ನಂತರವೂ ಮಹಿಳೆಯರಿಗೆ ಅರ್ಹ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲವೆಂಬುದನ್ನು ಹದಿಮೂರು ಲೋಕಸಭೆಗಳ ಮಹಿಳಾ ಸದಸ್ಯರ ಸಂಖ್ಯೆಯೇ ಹೇಳುತ್ತದೆ. ಮಹಿಳೆಯರಿಗೆ ಮೂರನೇ ಒಂದರಷ್ಟು ಪ್ರಾತಿನಿಧ್ಯ ನೀಡಬೇಕೆಂಬ ಮೀಸಲಾತಿ ಮಸೂದೆ (ಸಂವಿಧಾನದ 85ನೇ ತಿದ್ದುಪಡಿ) 1999ರಿಂದ ಸಂಸತ್‌ನ ಅಂಗೀಕಾರ ಪಡೆಯಲಿಕ್ಕಾಗದೆ ನೆನೆಗುದಿಗೆ ಬಿದ್ದಿದೆ. ಪ್ರಥಮ ಲೋಕಸಭೆಗೆ ಹೋಲಿಸಿದರೆ ಈಗಿನ ಲೋಕಸಭೆಯಲ್ಲಿ ಮಹಿಳಾ ಸದಸ್ಯರ ಪ್ರಮಾಣ ದುಪ್ಪಟ್ಟಾಗಿದೆ. ಪ್ರಥಮ ಲೋಕಸಭೆಯಲ್ಲಿ 22 ಮಹಿಳಾ ಸದಸ್ಯರಿದ್ದರು. (ಶೇಕಡ 4.4) ಈಗಿನ ಲೋಕಸಭೆಯಲ್ಲಿ 49 ಮಹಿಳಾಸದಸ್ಯರಿದ್ದಾರೆ (ಶೇ.9.02). ಇಲ್ಲಿಯವರೆಗಿನ ಲೋಕಸಭೆಗಳಿಗೆ ಹೋಲಿಸಿದರೆ ಈಗಿನದ್ದೇ ಗರಿಷ್ಠ ಪ್ರಾತಿನಿಧ್ಯ. ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯದ ಜಾಗತಿಕ ಸರಾಸರಿ ಶೇಕಡಾ 14.5.

ಅನುಭವದ ವಿಷಯದಲ್ಲಿಯು 13ನೇ ಲೋಕಸಭೆಯದ್ದು ದಾಖಲೆ. ಈಗಿರುವ ಒಟ್ಟು 543 ಸದಸ್ಯರಲ್ಲಿ 362 ಮಂದಿಗೆ (ಶೇಕಡ 66.67) ಹಿಂದಿನ ಲೋಕಸಭೆಗಳ ಅನುಭವವಿದೆ. ಅವರಲ್ಲಿ 270 ಮಂದಿ (ಶೇಕಡ 49.72) ಮರು ಆಯ್ಕೆಯಾದವರು. 110 ಸದಸ್ಯರಿಗೆ ಎರಡು, 44 ಸದಸ್ಯರಿಗೆ ಮೂರು, 25 ಸದಸ್ಯರಿಗೆ ನಾಲ್ಕು, 16 ಸದಸ್ಯರಿಗೆ ಐದು, 13 ಸದಸ್ಯರಿಗೆ ಆರು, ನಾಲ್ವರು ಸದಸ್ಯರಿಗೆ ಏಳು, ಮೂವರು ಸದಸ್ಯರಿಗೆ ಎಂಟ್ಟು ಮತ್ತು ಒಬ್ಬ ಸದಸ್ಯರಿಗೆ ಒಂಭತ್ತು ಲೋಕಸಭೆಗಳ ಅನುಭವವಿದೆ. 181 ಸದಸ್ಯರು ಮಾತ್ರ ಇದೇ ಮೊದಲ ಬಾರಿಗೆ ಆಯ್ಕೆಯಾಗಿ ಬಂದವರು. ಈಗಿನ ಲೋಕಸಭೆಯಲ್ಲಿರುವ 87 ಸದಸ್ಯರು ಕೇಂದ್ರದಲ್ಲಿ ಸಚಿವರಾಗಿ ಮತ್ತು 84 ಸದಸ್ಯರು ರಾಜ್ಯಗಳಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ ಅನುಭವ ಉಳ್ಳವರು. ಇವರ ಜತೆ ಇಬ್ಬರು

ಮಾಜಿ ಪ್ರಧಾನಿಗಳು, 17 ಮಾಜಿ ಮುಖ್ಯಮಂತ್ರಿಗಳು, ಮೂವರು ಮಾಜಿ ಲೋಕಸಭಾ ಅಧ್ಯಕ್ಷರು, ಇಬ್ಬರು ಮಾಜಿ ಉಪಲೋಕಸಭಾ ಅಧ್ಯಕ್ಷರು, ಹದಿಮೂರನೇ ಲೋಕಸಭೆಯ ಸದಸ್ಯರಾಗಿದ್ದಾರೆ.

ಒಂದು ಭದ್ರ ಬುನಾದಿಯ ಮೇಲೆ ನಿಂತಿರುವ ನಮ್ಮ ಸಂಸತ್ ವ್ಯವಸ್ಥೆಯಲ್ಲಿ ಸದಸ್ಯರು ಹೊಂದಿರುವ ಈ ಅನುಭವ, ಶಿಕ್ಷಣ, ಹಿರಿತನದ 'ಪ್ರಭಾವಳಿ'ಗಳು ಸಂಸತ್‌ನಲ್ಲಿ ನಡೆಯುವ ಚರ್ಚೆ-ಪ್ರಶ್ನೋತ್ತರಗಳ ಕಲಾಪದಲ್ಲಿ ಪ್ರತಿಬಿಂಬಿತ ವಾಗುತ್ತಿರುವಂತೆ ಕಾಣುತ್ತಿಲ್ಲ. ಯಾಕೆ? ಜನಪ್ರತಿನಿಧಿಗಳ ಆತ್ಮಾವಲೋಕನಕ್ಕೆ ಸಂಸತ್‌ನ ಸ್ವರ್ಣಜಯಂತಿ ಅವಕಾಶ ಕಲ್ಪಿಸಿದೆ.

ಹದಿಮೂರನೇ ಲೋಕಸಭೆಯ ಅತ್ಯಂತ ಹೆಚ್ಚು ಅನುಭವದ ಸದಸ್ಯ ಲಕ್ಷದ್ವೀಪ್ ಕ್ಷೇತ್ರದಿಂದ ಹತ್ತನೇ ಬಾರಿ ಆಯ್ಕೆಯಾಗಿ ಬಂದಿರುವ ಪಿ.ಎಂ. ಸಯೀದ್. (ಒಂದು ರೀತಿಯಲ್ಲಿ ಇವರು ಕನ್ನಡಿಗರೂ ಹೌದು. ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿರುವ ಸಯೀದ್ ತುಳು ಮತ್ತು ಕನ್ನಡವನ್ನು ನಿರರ್ಗಳವಾಗಿ ಮಾತನಾಡಬಲ್ಲರು.) ಇವರಿಗಿಂತಲೂ ಹೆಚ್ಚು ಲೋಕಸಭೆಗಳ ಅನುಭವ ಹೊಂದಿದ್ದವರು ಹದಿಮೂರನೇ ಲೋಕಸಭೆಗೂ ಆಯ್ಕೆಯಾಗಿ ಬಂದಿದ್ದ ಇಂದ್ರಜಿತ್ ಗುಪ್ತಾ. ಅವರ ನಿಧನದಿಂದಾಗಿ ಸಂಸತ್ ಅತ್ಯಂತ ಅನುಭವಿ ಸದಸ್ಯನೊಬ್ಬನನ್ನು ಕಳೆದುಕೊಂಡಿತು. ಎಂಟು ಲೋಕಸಭೆಗಳ ಅನುಭವ ಹೊಂದಿರುವವರು ಹದಿಮೂರನೇ ಲೋಕಸಭೆಯಲ್ಲಿ ಇಬ್ಬರಿದ್ದಾರೆ. ಅವರಲ್ಲೊಬ್ಬರು ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿ, ಇನ್ನೊಬ್ಬರು ಸೋಮನಾಥ ಚಟರ್ಜಿ. ಇದೇ ಲೋಕಸಭೆಯ ಸದಸ್ಯರಾಗಿದ್ದ ಮತ್ತು ಕಳೆದ ವರ್ಷ ವಿಮಾನ ಅಪಘಾತದಲ್ಲಿ ಮೃತಪಟ್ಟ ಮಾಧವರಾವ್ ಸಿಂಧಿಯಾ ಕೂಡಾ ಈ ಇಬ್ಬರ ಸಾಲಿಗೆ ಸೇರಿದವರಾಗಿದ್ದರು.

(26-05-2002)

ಮತದಾರರಿಂದ ಬಚ್ಚಿಡುವುದು ಏನಿದೆ?

1997ರ ಅವಧಿಯಲ್ಲಿ ದೇಶದ 25 ರಾಜ್ಯಗಳಲ್ಲಿನ 4.120 ಶಾಸಕರ ಪೈಕಿ 1555 ಶಾಸಕರು ಕೊಲೆ, ಡಕಾಯಿತಿ, ಅತ್ಯಾಚಾರ ಮುಂತಾದ ಅಪರಾಧಗಳ ಆರೋಪ ಹೊತ್ತಿದ್ದರು. ಒಂಬತ್ತು ರಾಜ್ಯಗಳಲ್ಲಿ ನಡೆಸಲಾದ ಇನ್ನೊಂದು ಸಮೀಕ್ಷೆಯ ಪ್ರಕಾರ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳಲ್ಲಿ ಬಿಹಾರದಲ್ಲಿ 1.448, ಉತ್ತರಪ್ರದೇಶದಲ್ಲಿ 3297, ಪಂಜಾಬ್‌ನಲ್ಲಿ259, ಜಮ್ಮು ಮತ್ತು ಕಾಶ್ಮೀರದಲ್ಲಿ 110, ಆಂಧ್ರಪ್ರದೇಶದಲ್ಲಿ 1.462, ಅಸ್ಸಾಂನಲ್ಲಿ 137, ರಾಜಾಸ್ತಾನದಲ್ಲಿ 677, ಮಹಾರಾಷ್ಟ್ರದಲ್ಲಿ 1.068 ಮತ್ತು ಮಧ್ಯಪ್ರದೇಶದಲ್ಲಿ 1.046, ಅಭ್ಯರ್ಥಿಗಳು ಅಪರಾಧದ ಹಿನ್ನೆಲೆ ಹೊಂದಿದ್ದರು. ಇವರಲ್ಲಿ ಬಹಳಷ್ಟು ಮಂದಿ ಈಗ ಜನಪ್ರತಿನಿಧಿಗಳಾಗಿ ವಿಧಾನಸಭೆಯಲ್ಲಿ ವಿರಾಜಮಾನರಾಗಿದ್ದಾರೆ. ಇತ್ತೀಚಿನ ಲೆಕ್ಕದ ಪ್ರಕಾರ 700 ಹಾಲಿ ಶಾಸಕರು ಮತ್ತು 40 ಸಂಸತ್ ಸದಸ್ಯರಿಗೆ ವಿವಿಧ ಆರೋಪಗಳ ಹಿನ್ನೆಲೆ ಇದೆ. ರಾಜಕೀಯ ಪಕ್ಷಗಳಲ್ಲಿ ಕೋಲಾಹಲವನ್ನು ಉಂಟು ಮಾಡಿರುವ ಸುಪ್ರೀಂ ಕೋರ್ಟ್‌ನ ಇತ್ತೀಚಿನ ಆದೇಶ ಈ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರೆಂದು ಹೇಳಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವ ಅರ್ಹತೆಯನ್ನು ಸೂಚಿಸುವ ಪ್ರಜಾಪ್ರತಿನಿಧಿ ಕಾಯಿದೆಯ ಸೆಕ್ಷನ್ 8 ಈಗಲೂ ಸುರಕ್ಷಿತವಾಗಿದೆ. ಅದರ ಪ್ರಕಾರ ಎರಡು ವರ್ಷಗಳಗಿಂತಲೂ ಹೆಚ್ಚಿನ ಅವಧಿಯ ಜೈಲು ಶಿಕ್ಷೆಗೆ ಒಳಗಾದವರು ಮಾತ್ರ

ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗುತ್ತಾರೆ. ಕೆಳ ನ್ಯಾಯಾಲಯಗಳು ಶಿಕ್ಷೆ ವಿಧಿಸಿದರೂ ಅದರ ವಿರುದ್ಧದ ಮೇಲ್ಮನವಿ ಇತ್ಯರ್ಥವಾಗುವವರೆಗೆ ಆರೋಪಿಗಳು ಸ್ಪರ್ಧಿಸಲು ಅನರ್ಹರೆನಿಸಿಕೊಳ್ಳುವುದಿಲ್ಲ. ಕಳೆದ ವರ್ಷ ಮೇ ಎರಡರ ಸುಪ್ರೀಂ ಕೋರ್ಟ್ ಆದೇಶ ಹೇಳಿದ್ದು ಇಷ್ಟೇ "ನಿಮ್ಮ ಹಿನ್ನೆಲೆಯನ್ನು ಮತದಾರರ ಮುಂದಿಡಿ. ಅದನ್ನು ತಿಳಿದುಕೊಳ್ಳುವ ಸಂವಿಧಾನಬದ್ಧ ಹಕ್ಕು ಅವರಿಗೆ ಇದೆ. ಅದಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಸಲ್ಲಿಸುವ ನಾಮಪತ್ರದ ಜತೆ ಐದು ವಿಷಯಗಳ ಬಗ್ಗೆ ಮಾಹಿತಿ ಹೊಂದಿರುವ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ".

1. ಶಿಕ್ಷೆ ಅನುಭವಿಸಿರುವ ಕ್ರಿಮಿನಲ್ ಅಪರಾಧಗಳ ವಿವರ.
2. ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವ, ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಜೈಲು ಶಿಕ್ಷೆಗೆ ಅವಕಾಶ ಇರುವ ಮೊಕದ್ದಮೆಗಳ ವಿವರ.
3. ಆಸ್ತಿ-ಪಾಸ್ತಿ ವಿವರ.
4. ಜವಾಬ್ದಾರಿ (ಸಾಲ, ತೆರಿಗೆ, ಕಂದಾಯ ಇತ್ಯಾದಿ ಬಾಕಿ).
5. ಶೈಕ್ಷಣಿಕ ಅರ್ಹತೆ.

ಈ ಆದೇಶವನ್ನು ಎರಡು ತಿಂಗಳೊಳಗೆ ಜಾರಿಗೊಳಿಸಬೇಕೆಂದು ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ತಿಳಿಸಿತ್ತು. ಆದರೆ ಸರ್ಕಾರ ಮೀನಮೇಷ ನಡೆಸಿದಾಗ ಮೇ 28 ರಂದು ಚುನಾವಣಾ ಆಯೋಗ ಸುಪ್ರೀಂಕೋರ್ಟ್ ಆದೇಶಕ್ಕನುಗುಣವಾಗಿ ಚುನಾವಣಾ ನಿರ್ವಹಣಾ ನಿಯಮಾವಳಿ 2ಎ ಸೆಕ್ಷನ್ ಬದಲಿಗೆ 2ಇ ಸೇರಿಸಿ ಹೊಸ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿತು. ತಕ್ಷಣ ಎಲ್ಲಾ ರಾಜಕೀಯ ಪಕ್ಷಗಳು ಪಕ್ಷಭೇದ ಮರೆತು ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಆಯೋಗದ ವಿರುದ್ಧ ಕತ್ತಿ ಹಿಡಿದು ನಿಂತವು. (ಇತ್ತೀಚೆಗೆ ಇಂತಹ ಅಪರೂಪದ ಒಮ್ಮತ ವ್ಯಕ್ತವಾದ ಇನ್ನೊಂದು ಸಂದರ್ಭ-2001ರ ಆಗಸ್ಟ್‌ನಲ್ಲಿ ಸಂಸದರ ಸಂಬಳ-ಸವಲತ್ತು ಹೆಚ್ಚಳದ ಮಸೂದೆಗೆ ಅಂಗೀಕಾರ ನೀಡುವಾಗ) ಸಂಸದರ ಒಕ್ಕೊರಲ ವಿರೋಧಕ್ಕೆ ಮೂರ್ತರೂಪ ನೀಡಿದ ಸರ್ಕಾರ ಹೊಸ ಮಾರ್ಗದರ್ಶಿ ಸೂತ್ರ ಸೇರಿಸಿ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ಮಾಡಿ ಸುಗ್ರೀವಾಜ್ಞೆ ಹೊರಡಿಸಿತು.

ಮತದಾರರಿಗೆ ಅಭ್ಯರ್ಥಿಗಳ ಹಿನ್ನೆಲೆ ತಿಳಿದಿರಬೇಕೆಂಬ ಸುಪ್ರೀಂ ಕೋರ್ಟ್ ಆದೇಶದ ಹಿಂದಿನ ಆಶಯ ಈ ಮಾರ್ಗದರ್ಶಿ ಸೂತ್ರದಲ್ಲಿ ಇರಲಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಆಸ್ತಿ ವಿವರವನ್ನು ಪ್ರಮಾಣಪತ್ರದಲ್ಲಿ ತಿಳಿಸಬೇಕಾಗಿಲ್ಲ. ಆಯ್ಕೆಯಾದ ಶಾಸಕರು ಮತ್ತು ಸಂಸದರು ಮಾತ್ರ ವಿಧಾನಸಭೆ ಮತ್ತು ಲೋಕಸಭಾ ಅಧ್ಯಕ್ಷರಿಗೆ ಅದನ್ನು ತಿಳಿಸಿದರೆ ಸಾಕು ಎಂದು ಹೇಳುತ್ತದೆ ಸರ್ಕಾರದ ಮಾರ್ಗದರ್ಶಿ ಸೂತ್ರ.

ನಾಮಪತ್ರಗಳನ್ನು ಸಲ್ಲಿಸುವಾಗ ಆರೋಪ ಎದುರಿಸುತ್ತಿರುವ ಕ್ರಿಮಿನಲ್ ಮೊಕದ್ದಮೆಗಳ ವಿವರ ನೀಡಬೇಕೆಂದು ಮಾರ್ಗದರ್ಶಿ ಸೂತ್ರದಲ್ಲಿ ಹೇಳಲಾಗಿದ್ದರೂ, ಅಪರಾಧಗಳನ್ನು "ಕೊಲೆ, ಅಪಹರಣ, ದೇಶದ ವಿರುದ್ಧ ಯುದ್ಧ, ಮಾದಕದ್ರವ್ಯ ಸಾಗಾಣಿಕೆ ಮತ್ತು ಭಯೋತ್ಪಾದನೆ"ಗೆ ಸೀಮಿತಗೊಳಿಸಲಾಗಿದೆ. ಅಭ್ಯರ್ಥಿಯ ಅನರ್ಹತೆಯನ್ನು ಸೂಚಿಸುವ ಪ್ರಜಾಪ್ರತಿನಿಧಿ ಕಾಯಿದೆಯ ಸೆಕ್ಷನ್ 8ರಲ್ಲಿ ಹೇಳಲಾದ ಅಪರಾಧಗಳನ್ನೆಲ್ಲ ಸೇರಿಸಲಾಗಿಲ್ಲ. ಕೊನೆಯದಾಗಿ ಆಭ್ಯರ್ಥಿಗಳು ತಮ್ಮ ಶೈಕ್ಷಣಿಕ ಅರ್ಹತೆಯ ಬಗ್ಗೆಯೂ ಪ್ರಮಾಣ ಪತ್ರ ಸಲ್ಲಿಸಬೇಕಾಗಿಲ್ಲ. ಎಂದು ಸರ್ಕಾರದ ಮಾರ್ಗದರ್ಶಿ ಸೂತ್ರ ಹೇಳುತ್ತದೆ. ಈ ಮಾರ್ಗದರ್ಶಿ ಸೂತ್ರಗಳನ್ನು ಸೇರಿಸಿಕೊಂಡು ಕೇಂದ್ರ ಸರ್ಕಾರ ಪ್ರಜಾಪ್ರತಿನಿಧಿ ಕಾಯ್ದೆಗೆ ಮಾಡಿದ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದು ಮಾಡಿತು. ಅನಂತರ ರಾಜಕೀಯ ಪಕ್ಷಗಳು ನ್ಯಾಯಾಲಯ ಮತ್ತು ಚುನಾವಣಾ ಆಯೋಗದ ವಿರುದ್ಧ ಮತ್ತೊಂದು ಸುತ್ತಿನ ಸಮರಕ್ಕೆ ಅಣಿಯಾಗಿವೆ.

ಆದರೆ ರಾಜಕೀಯ ಪಕ್ಷಗಳಲ್ಲಿ ಮೊದಲಿನ ಒಮ್ಮತ ಈಗ ಕಾಣಿಸುತ್ತಿಲ್ಲ. ಕಳೆದ ಬಾರಿ ಸರ್ಕಾರದ ಸುಗ್ರೀವಾಜ್ಞೆಯನ್ನು ಮೊದಲು ಬೆಂಬಲಿಸಿದ್ದ ಕಾಂಗ್ರೆಸ್ ಪಕ್ಷ, ರಾಷ್ಟ್ರಪತಿ ಅಬ್ದುಲ್‌ಕಲಾಮ್ ಸುಗ್ರೀವಾಜ್ಞೆಯನ್ನು ವಾಪಾಸು ಕಳುಹಿಸಿದ ನಂತರ ತನ್ನ ನಿಲುವು ಬದಲಾಯಿಸಿತು. ಪಕ್ಷದ ಅಧ್ಯಕ್ಷೆ ಸೋನಿಯ ಗಾಂಧಿ ಹೇಳಿಕೆ ನೀಡಿ, ತಮ್ಮ ಪಕ್ಷ ಚುನಾವಣಾ ಆಯೋಗದ ಮಾರ್ಗದರ್ಶಿ ಸೂತ್ರವನ್ನು ಬೆಂಬಲಿಸುವುದಾಗಿ ತಿಳಿಸಿರು. ಬಿಜೆಪಿ, ಸಮಾಜವಾದಿ ಪಕ್ಷ ಮತ್ತು ಎಡಪಕ್ಷಗಳು ಸುಪ್ರೀಂ ಕೋರ್ಟ್ ಆದೇಶವನ್ನು ವಿರೋಧಿಸಿದರೆ, ಆರ್‌ಜೆಡಿ ಮತ್ತು ಸಮತಾಪಕ್ಷ ಅಡ್ಡಗೋಡೆಯ ಮೇಲೆ ಕೂತಿವೆ. ರಾಜಕೀಯ ಪಕ್ಷಗಳ ಮೊದಲ ವಿರೋಧ ಚುನಾವಣಾ ಅಧಿಕಾರಿಗಳ ಪಾತ್ರದ ಬಗ್ಗೆ, ನಾಮಪತ್ರಗಳನ್ನು ಸ್ವೀಕರಿಸುವ ಚುನಾವಣಾ ಅಧಿಕಾರಿಗೆ ಪ್ರಮಾಣ ಪತ್ರದಲ್ಲಿ ನೀಡಲಾದ ವಿವರವನ್ನು ದೃಢೀಕರಿಸುವ ಸಾಮರ್ಥ್ಯ, ಕಾಲಾವಕಾಶ ಮತ್ತು ಸೌಲಭ್ಯ ಇಲ್ಲ ಎನ್ನುವುದು ಮೊದಲ ಆಕ್ಷೇಪ.

ಚುನಾವಣಾ ಪ್ರಕ್ರಿಯೆಯ ಪ್ರಕಾರ ನಾಮಪತ್ರ ಪರಿಶೀಲನೆಗೆ ನಿಗದಿಪಡಿಸಿದ ಅವಧಿ ಒಂದು ದಿನ ಮಾತ್ರ. ಈ ಕಾರ್ಯಕ್ಕಾಗಿ ತಾಲೋಕುಮಟ್ಟದ ಅಧಿಕಾರಿಗಳನ್ನು ನೇಮಿಸಲಾಗುತ್ತದೆ ಮತ್ತು ಅವರಿಗೆ ಇರುವ ಸಿಬ್ಬಂದಿ ಸಂಖ್ಯೆ ಕೂಡ ಸೀಮಿತವಾಗಿರುತ್ತದೆ. ಈ ಕೊರತೆಗಳ ನಡುವೆ ಕಾರ್ಯ ನಿರ್ವಹಿಸಬೇಕಾದ ಚುನಾವಣಾ ಅಧಿಕಾರಿ ನಿರ್ಲಕ್ಷ್ಯದಿಂದ ನಾಮಪತ್ರ ತಿರಸ್ಕರಿಸಿದರೆ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಲ್ಲವೇ, ಎಂದು ಕೇಳುತ್ತಿದ್ದಾರೆ ರಾಜಕೀಯ ನಾಯಕರು. ನಾಮಪತ್ರ ಒಮ್ಮೆ ತಿರಸ್ಕರಿಸಿದರೆ ಅಭ್ಯರ್ಥಿ ಚುನಾವಣೆ ಪೂರ್ಣಗೊಂಡ ನಂತರವಷ್ಟೇ ತಕರಾರು ಅರ್ಜಿ ಸಲ್ಲಿಸಬಹುದು.

ಇಂತಹ ಭಯಕ್ಕೆ ಕಾರಣ ಇಲ್ಲ ಎನ್ನುತ್ತಾರೆ ಚುನಾವಣಾ ಆಯುಕ್ತ ಜೆ.ಎಂ ಲಿಂಗ್ಡೊ. "ಸಾಮಾನ್ಯವಾಗಿ ಅಭ್ಯರ್ಥಿಗಳು ನೀಡುವ ಪ್ರಮಾಣಪತ್ರವನ್ನು ಚುನಾವಣಾ ಅಧಿಕಾರಿಗಳು ಒಪ್ಪಿಕೊಳ್ಳುತ್ತಾರೆ. ಸಮಸ್ಯೆ ಎದುರಾಗುವುದು ಅಭ್ಯರ್ಥಿಗಳ ವಿರೋಧಿಗಳು ಪ್ರಮಾಣಪತ್ರದಲ್ಲಿನ ತಪ್ಪುಮಾಹಿತಿ ಬಯಲು ಮಾಡಲು ದಾಖಲೆ ಸಲ್ಲಿಸಿದಾಗ, ಆಗ ಚುನಾವಣಾ ಅಧಿಕಾರಿಗಳು ಎಚ್ಚರದಿಂದ ಇರಬೇಕಾಗುತ್ತದೆ. ಅಂಥ ಸಮಯದಲ್ಲಿ ಗಮನಿಸಬೇಕಾದ ಅಂಶಗಳೇನು ಎಂಬುದನ್ನು ಮಾರ್ಗದರ್ಶಿ ಸೂತ್ರದಲ್ಲಿಯೇ ಹೇಳಲಾಗಿದೆ" ಎನ್ನುತ್ತಾರೆ ಲಿಂಗ್ಡೋ.

ರಾಜಕೀಯ ಪಕ್ಷಗಳು ಈ ಸಮಜಾಯಿಷಿಗೆ ಕಿವಿಗೊಡಲು ಸಿದ್ಧವಿಲ್ಲ. ಈ ವಿವಾದಕ್ಕೆ ಶಾಸಕಾಂಗದ ಮೇಲೆ ನ್ಯಾಯಾಂಗದ ಪ್ರಹಾರ ಎಂಬ ಬಣ್ಣ ಬಳಿಯಲಾಗುತ್ತಿದೆ. ಆದರೆ ಮತದಾರರಿಗೆ ರಾಜಕಾರಣಿಗಳ ನಿಜಬಣ್ಣ ಕಾಣತೊಡಗಿದೆ.

ಸುಪ್ರೀಂಕೋರ್ಟ್ ಆದೇಶದಂತೆ ಚುನಾವಣಾ ಆಯೋಗ ರೂಪಿಸಿದ ಮಾರ್ಗದರ್ಶಿ ಸೂತ್ರ ನಾಲ್ಕು ವರ್ಷಗಳ ಹಿಂದೆಯೇ ಜಾರಿಗೆ ಬಂದಿದ್ದರೆ ಏನಾಗುತ್ತಿತ್ತು? ಬೇರೆಲ್ಲಾ ಕಡೆಗಳಲ್ಲಿ ಏನಾಗುತ್ತಿತ್ತೊ ಗೊತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಹುಮ್ನಾಬಾದ್ ಉಪಚುನಾವಣೆ ನಡೆಯುತ್ತಿರಲಿಲ್ಲವೇನೊ?

ಆ ಕ್ಷೇತ್ರದಿಂದ ಆಯ್ಕೆಯಾಗಿದ್ದ ಸುಭಾಷ್ ಕಲ್ಲೂರು ಅವರು ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಸರ್ಕಾರಿ ಗುತ್ತಿಗೆದಾರರಾಗಿದ್ದರು ಎನ್ನುವ ಕಾರಣಕ್ಕಲ್ಲವೇ ಅವರು ಶಾಸಕ ಸ್ಥಾನ ಕಳೆದುಕೊಂಡಿದ್ದು.

O

(16-03-2003)

ಹೊಸ ಬಾಟಲಲ್ಲಿ ಹಳೆ 'ಮದ್ದು'

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರೋಗ ಗ್ರಸ್ತಗೊಳಿಸಿರುವ ಪಕ್ಷಾಂತರ ಪಿಡುಗು ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಮತ್ತೊಂದು 'ಔಷಧಿ' ಕಂಡುಹಿಡಿದಿದೆ. ಹಳೆಯ ಔಷಧಿ ನಾಟದಂತೆ ಹೊಸಹೊಸ ರಕ್ಷಣಾ ಕವಚಗಳನ್ನು ಬೆಳೆಸಿಕೊಳ್ಳುತ್ತಾ ಬಂದಿರುವ ಈ ರೋಗ ನಾಶಕ್ಕೆ ಹೊಸ ಔಷಧಿ ರಾಮಬಾಣವಾಗಲಿದೆ ಎಂಬುದು ಆಡಳಿತಾರೂಢರ ಅಂಬೋಣ.

ಮೊನ್ನೆಯಷ್ಟೇ ಕೊನೆಗೊಂಡ ಚಳಿಗಾಲದ ಅಧಿವೇಶನದಲ್ಲಿ ಸಂಸತ್ತು ಅಂಗೀಕರಿಸಿದ ಪಕ್ಷಾಂತರ ನಿಷೇಧ ಕಾಯಿದೆಯ ಹೊಸ ತಿದ್ದುಪಡಿ ಮೇಲ್ನೋಟದಲ್ಲಿ ಅಂತಹ ನಿರೀಕ್ಷೆಯನ್ನು ಹುಟ್ಟುಹಾಕುವುದು ನಿಜ. ಆದರೆ ಅಷ್ಟೊಂದು ಆಶಾವಾದಿಯಾಗುವ ಅಗತ್ಯ ಇಲ್ಲ ಎನ್ನುತ್ತದೆ ಮಸೂದೆಯ ಒಳನೋಟ. ಪಕ್ಷಾಂತರ ಮುಂದೆಯೂ ನಡೆಯಲಿದೆ. ಮುಲಾಯಂಸಿಂಗ್ ಪಕ್ಷಾಂತರದ ನೆರವಿನಿಂದ ಮುಖ್ಯಮಂತ್ರಿಯಾದ ಕೊನೆಯ ಮುಖ್ಯಮಂತ್ರಿಯೇನಲ್ಲ.

ಪಕ್ಷಾಂತರ ನಿಷೇಧಕ್ಕೆ ಕಡಿವಾಣ ಹಾಕುವ ಮೊದಲ ಪ್ರಯತ್ನ ನಡೆದದ್ದು 1968ರಲ್ಲಿ. ಕಾಂಗ್ರೆಸ್ ಸದಸ್ಯ ಪಿ.ಎ. ವೆಂಕಟಸುಬ್ಬಯ್ಯ ಈ ಉದ್ದೇಶದ ಖಾಸಗಿ ಸದಸ್ಯರ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದ್ದರು. ಅದರ ಪರಿಣಾಮವಾಗಿ ನೇಮಕಗೊಂಡದ್ದು ವೈ.ಬಿ. ಚವ್ಹಾಣ್ ನೇತೃತ್ವದ ಸಮಿತಿ. ಅದರ ವರದಿ ಈಗಲೂ

ಶೈತ್ಯಾಗಾರದಲ್ಲಿದೆ. 1978ರಲ್ಲಿ ಮೊರಾರ್ಜಿ ದೇಸಾಯಿ ಅವರು ಪಕ್ಷಾಂತರ ನಿಷೇಧ ಮಸೂದೆಯನ್ನು ಮಂಡಿಸಬಯಸಿದಾಗ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರೆಲ್ಲರೂ ವಿರೋಧಿಸಿದ್ದರು. ಕೊನೆಗೂ ಮೊರಾರ್ಜಿ ಸರ್ಕಾರ ಪಕ್ಷಾಂತರದ ಪಿಡುಗಿಗೆ ಬಲಿಯಾಗಿದ್ದು ಈಗ ಇತಿಹಾಸ.

ಈ ಪ್ರಯತ್ನದಲ್ಲಿ ಕೊನೆಗೂ ಯಶಸ್ಸು ಸಿಕ್ಕಿದ್ದು ಪ್ರಧಾನಿ ರಾಜೀವ್ ಗಾಂಧಿಯವರಿಗೆ. ಸಂವಿಧಾನದ 52ನೇ ತಿದ್ದುಪಡಿ ಮೂಲಕ ಹತ್ತನೇ ಶೆಡ್ಯೂಲ್ ಸೇರಿಸಿ ರೂಪುಗೊಂಡದ್ದು ಈಗಿನ ಪಕ್ಷಾಂತರ ನಿಷೇಧ ಕಾಯಿದೆ. ಈ ಕಾಯಿದೆಯನ್ನು ಓರಿಯ ಸಮಾಜವಾದಿ ಮಧು ಲಿಮಯೆ ಮತ್ತು ಸಂವಿಧಾನ ತಜ್ಞ ನಾನಿ ಪಾಲ್ಕಿವಾಲ ಬಲವಾಗಿ ವಿರೋಧಿಸಿದ್ದರು. "ತನ್ನ ನಂಬಿಕೆಗೆ ಅನುಗುಣವಾಗಿ ಮತ ಚಲಾಯಿಸಲು ಸದಸ್ಯರಿಗೆ ಅವಕಾಶ ನಿರಾಕರಿಸಿದರೆ ಅವರನ್ನು ಸದಸ್ಯರನ್ನಾಗಿ ಆಯ್ಕೆಮಾಡಿದ ಮತದಾರರ ತೀರ್ಪನ್ನು ಕಡೆಗಣಿಸಿದಂತಾಗುತ್ತದೆ" ಎಂಬುದು ಅವರ ಅಭಿಪ್ರಾಯವಾಗಿತ್ತು.

"ಸೈದ್ಧಾಂತಿಕ ನೆಲೆಯ ಪಕ್ಷ ವಿಭಜನೆಗೆ ಅವಕಾಶ ನೀಡಬೇಕು. ಇಲ್ಲವೆಂದರೆ ಪಕ್ಷದಲ್ಲಿ ಕೆಲವು ನಾಯಕರ ಒಡೆತನಕ್ಕೆ ಉಳಿದವರು ಬಲಿಯಾಗಬೇಕಾಗುತ್ತದೆ." ಎಂದು ಅವರು ವಾದಿಸಿದ್ದರು. ರಾಜೀವ್ ಗಾಂಧಿ ಮೂಲ ಮಸೂದೆಯಲ್ಲಿ ಬದಲಾವಣೆಗೊಳಿಸಿ ಮೂರನೇ ಒಂದರಷ್ಟು ಸದಸ್ಯರ ಪಕ್ಷಾಂತರಕ್ಕೆ ಅನುಕೂಲ ಮಾಡಿಕೊಟ್ಟದ್ದು ಈ ಹಿನ್ನೆಲೆಯಲ್ಲಿ. ಆದರೆ ಕಳೆದ 18 ವರ್ಷಗಳಲ್ಲಿ ನಡೆದದ್ದು ಈ ಅವಕಾಶದ ನಗ್ನ ದುರುಪಯೋಗ ಮಾತ್ರ.

"ವೈಯಕ್ತಿಕ ಪಕ್ಷಾಂತರಕ್ಕೆ ಕಡಿವಾಣ ಹಾಕಿ, ಸಾಮೂಹಿಕ ಪಕ್ಷಾಂತರಕ್ಕೆ ದಿಡ್ಡಿ ಬಾಗಿಲು ತೆರೆಯಿತು" ಎನ್ನುವುದು ಈಗಿನ ಪಕ್ಷಾಂತರ ನಿಷೇಧ ಕಾಯಿದೆ ವಿರುದ್ಧ ಇರುವ ಮುಖ್ಯ ಆರೋಪ. ಈ ಕಾಯಿದೆಯ ಪ್ರಕಾರ ಒಟ್ಟು ಸದಸ್ಯಬಲದ ಮೂರನೇ ಎರಡಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಪಕ್ಷ ತ್ಯಜಿಸಿದರೆ ಅವರು ಸದಸ್ಯತ್ವ ಕಳೆದುಕೊಳ್ಳುವುದಿಲ್ಲ. 1985ರಲ್ಲಿ ಜಾರಿಗೆ ಬಂದ ಈ ಕಾಯಿದೆಯ ನಂತರದ ಸುಮಾರು ಹದಿನೆಂಟು ವರ್ಷಗಳಲ್ಲಿ ನೂರಾರು ಪಕ್ಷಾಂತರಗಳಾಗಿವೆ, ಹತ್ತಾರು ಸರ್ಕಾರಗಳು ಉರುಳಿವೆ.

ಇದಕ್ಕೆ ಕಾರಣವಾದ ಒಂದು ಅಡ್ಡದಾರಿಯನ್ನು ಮುಚ್ಚಲಾಗಿದೆ ಎನ್ನುವುದು ಈಗಿನ ಹೊಸ ತಿದ್ದುಪಡಿಯ ಹೆಗ್ಗಳಿಕೆ. ಮೂರನೇ ಎರಡರಷ್ಟು ಸದಸ್ಯ ಬಲದೊಂದಿಗೆ ನಡೆಯುವ ಪಕ್ಷಾಂತರ ಕೂಡಾ ಈಗ ನಿಷಿದ್ಧ. ಆದರೆ ಕಾಯಿದೆಯಿಂದ ತಪ್ಪಿಸಿಕೊಳ್ಳಲು ರಾಜಕಾರಣಿಗಳು ಶೋಧಿಸಿರುವ ಉಳಿದ ಅಡ್ಡದಾರಿಗಳು ಇನ್ನೂ ತೆರೆದುಕೊಂಡೇ ಇವೆ.

ಅವುಗಳಲ್ಲಿ ಮುಖ್ಯವಾದದ್ದು ಸಭಾಧ್ಯಕ್ಷರ ಪಾತ್ರ. ಪಕ್ಷಾಂತರ ಪಿಡುಗು ನಿಯಂತ್ರಣಕ್ಕೆ ಹೊಸ ಮದ್ದು ಕಂಡುಹಿಡಿದರೂ ಅದರ ಪ್ರಯೋಗವನ್ನು ಹಳೆಯ 'ವೈದ್ಯ'ರ ಕೈಯಲ್ಲಿಯೇ ಇರಿಸಿರುವುದು ಹೊಸ ತಿದ್ದುಪಡಿಯ ದೊಡ್ಡ ಲೋಪ.

ಪಕ್ಷಾಂತರ ನಿಷೇಧ ಕಾಯಿದೆಯ ಜಾರಿಯಲ್ಲಿ ಸಭಾಧ್ಯಕ್ಷರು ಹಲವಾರು ಬಾರಿ ರಾಜಕೀಯ ಒತ್ತಡಗಳಿಗೆ ಮಣಿದು ಎಡವಿರುವ ಪ್ರಸಂಗಗಳು ಕಣ್ಣಮುಂದೆ ಇವೆ. ಅವರು ಮೂಲತಃ ರಾಜಕಾರಣಿಗಳೇ ಆಗಿರುವುದರಿಂದ ಅವರ ನಿರ್ಧಾರಗಳಲ್ಲಿ ರಾಜಕೀಯ ಒಲವು – ನಿಲುವುಗಳ ನೆರಳು ಸಹಜ. ಇದಲ್ಲದೆ ಪಕ್ಷಾಂತರ ನಿಷೇಧದಂತಹ ಕಾನೂನಿಗೆ ಸಂಬಂಧಿಸಿದ ಸಂಕೀರ್ಣ ವಿಷಯದ ಬಗ್ಗೆ ನಿರ್ಧಾರ ಕೈಗೊಳ್ಳುವ ಅರ್ಹತೆ ಮತ್ತು ತರಬೇತಿ ಅವರಿಗೆ ಇರುವುದಿಲ್ಲ ಎನ್ನುವುದು ಸಭಾಧ್ಯಕ್ಷರ ನಿರ್ಣಾಯಕ ಪಾತ್ರದ ವಿರುದ್ಧ ಇರುವ ಅಂಶಗಳು.

ಪಕ್ಷಾಂತರ ಮಾಡಿದ ಜನಪ್ರತಿನಿಧಿಯನ್ನು ಸದಸ್ಯತ್ವದಿಂದ ಅನರ್ಹಗೊಳಿಸುವ ಅಧಿಕಾರವನ್ನು ಸಭಾಧ್ಯಕ್ಷರಿಗೆ ನೀಡದೆ, ಅದನ್ನು ಚುನಾವಣಾ ಆಯೋಗಕ್ಕೆ ಬಿಟ್ಟು ಬಿಡಬೇಕೆಂದು ಸಂವಿಧಾನ ಪುನರ್‌ಪರಿಶೀಲನಾ ಸಮಿತಿ ಶಿಫಾರಸ್ಸು ಮಾಡಿತ್ತು. ಪಕ್ಷಾಂತರ ವಿವಾದವನ್ನು ಕೇಂದ್ರಮಟ್ಟದಲ್ಲಿ ರಾಷ್ಟ್ರಪತಿಗಳಿಗೆ, ರಾಜ್ಯಮಟ್ಟದಲ್ಲಿ ರಾಜ್ಯಪಾಲರ ವಿವೇಚನೆಗೆ ಬಿಟ್ಟುಬಿಡಬೇಕೆಂಬ ಅಭಿಪ್ರಾಯ ಕೂಡಾ ಇದೆ.

ಇದ್ಯಾವುದೂ ಬೇಡ ಎಂದಾದರೆ, ಪಕ್ಷಾಂತರ ವಿವಾದದ ಇತ್ಯರ್ಥಕ್ಕೆ ಸುಪ್ರೀಂ ಕೋರ್ಟ್ ಇಲ್ಲವೇ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನೊಳಗೊಂಡ ಪ್ರತ್ಯೇಕ ಸಮಿತಿಯನ್ನು ರಚಿಸುವುದು ಒಳಿತು ಎನ್ನುವ ಮತ್ತೊಂದು ಅಭಿಪ್ರಾಯ ಕೂಡಾ ಇದೆ. ಆದರೆ ಈ ಅಭಿಪ್ರಾಯಗಳನ್ನು ಹೊಸ ತಿದ್ದುಪಡಿ ಗಣನೆಗೆ ತೆಗೆದುಕೊಂಡಿಲ್ಲ.

ಈಗಿನ ಕಾನೂನಿನ ಪ್ರಕಾರ ವಿಪ್‌ಗೆ ವಿರುದ್ಧವಾಗಿ ಮತ ಚಲಾಯಿಸುವ ಇಲ್ಲವೇ ಮತದಾನಕ್ಕೆ ಗೈರುಹಾಜರಾಗುವ ಸದಸ್ಯರು ಸದಸ್ಯತ್ವ ಕಳೆದುಕೊಳ್ಳುತ್ತಾರೆ. ಆದರೆ ಅವರು ಸದಸ್ಯತ್ವ ಕಳೆದುಕೊಳ್ಳುವುದು ಮತದಾನದ ನಂತರ. ಅವರು ಸದಸ್ಯತ್ವ ಕಳೆದುಕೊಂಡರೂ ಅವರು ಚಲಾಯಿಸಿದ ಮತದಿಂದ ಒಂದು ಸರ್ಕಾರ ಉರುಳಿ ಬಿಡಬಹುದು. ಅಂತಹ ಸದಸ್ಯರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ಕಾನೂನು ನಿಷೇಧಿಸದಿರುವ ಕಾರಣ ಮಾಡಿದ ಕೆಲಸಕ್ಕೆ ಕೂಲಿ ಪಡೆದು ಅವರು ನಿಶ್ಚಿಂತೆಯಿಂದ ಇನ್ನೊಂದು ಚುನಾವಣೆಗೆ ಸಿದ್ಧವಾಗಬಹುದು. ಕಳೆದುಕೊಳ್ಳುವುದು ಏನಿದೆ? ಹೊಸ ತಿದ್ದುಪಡಿಯಲ್ಲಿಯೂ ಈ ಲೋಪ ಉಳಿದುಕೊಂಡಿದೆ.

ಬದಲಾವಣೆಗೊಳಗಾಗಿರುವ ರಾಜಕೀಯ ರೂಪಗಳ ಬಗ್ಗೆ ಹೊಸ ತಿದ್ದುಪಡಿ ಗಮನ ಹರಿಸಿಲ್ಲ ಎಂಬುದು ಮತ್ತೊಂದು ದೂರು. ಈಗಿನದ್ದು ಮೈತ್ರಿಕೂಟದ ಕಾಲ. ಏಕಪಕ್ಷಗಳ ಸರ್ಕಾರಗಳ ಕಾಲ ಕಳೆದುಹೋಗಿದೆ. ಆಡಳಿತಾರೂಢ ಮೈತ್ರಿಕೂಟದ

ಅಂಗಪಕ್ಷಗಳಲ್ಲಿ ನಿರ್ಣಾಯಕವಾದ ಒಂದೆರಡು ಪಕ್ಷಗಳು ಬೆಂಬಲವನ್ನು ವಾಪಸು ಪಡೆದರೆ ಸರ್ಕಾರ ಪತನಗೊಳ್ಳಬಹುದು. ಆ ರೀತಿ ಬೆಂಬಲ ಹಿಂತೆಗೆದುಕೊಂಡ ಪಕ್ಷ ಇಲ್ಲವೇ ಪಕ್ಷಗಳ ಬೆಂಬಲ ಪಡೆದು ಮತ್ತೊಂದು ಪಕ್ಷ ಇಲ್ಲವೇ ಮೈತ್ರಿಕೂಟ ಅಧಿಕಾರಕ್ಕೆ ಬರಬಹುದು. ಇದು ಪಕ್ಷಾಂತರ ಅಲ್ಲವೇ? ಆದರೆ ಈಗಿನ ಪಕ್ಷಾಂತರ ಕಾಯಿದೆಗೆ ಇದನ್ನು ತಡೆಯುವ ಶಕ್ತಿ ಇಲ್ಲ.

ಸದಸ್ಯತ್ವ ಉಳಿಸಿಕೊಳ್ಳಲು ಈಗಿನ ಕಾನೂನಿನಲ್ಲಿ ಇನ್ನೂ ಒಂದು ಉಪಾಯ ಇದೆ. ವಿಪ್ ಉಲ್ಲಂಘನೆ ಮತ್ತು ಮತದಾನಕ್ಕೆ ಗೈರುಹಾಜರಿಯಾದರೆ ಮಾತ್ರ ಪಕ್ಷಾಂತರ ನಿಷೇಧ ಕಾಯಿದೆ ಅನ್ವಯವಾಗುತ್ತದೆ. ಪಕ್ಷದಿಂದ ಉಚ್ಚಾಟನೆಗೊಂಡರೆ ಸದಸ್ಯತ್ವ ಭದ್ರವಾಗಿರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಪಕ್ಷ ತೊರೆದ ನಂತರವೂ ಸದಸ್ಯತ್ವ ಉಳಿಸಿಕೊಳ್ಳಬಯಸುವವರು ಪಕ್ಷವೇ ತಮ್ಮನ್ನು ಉಚ್ಚಾಟಿಸುವಂತೆ ಒತ್ತಡ ಹೇರುವ ಚಟುವಟಿಕೆಗಳಲ್ಲಿ ನಿರತರಾಗಬಹುದು.

ಪಕ್ಷದ ನೀತಿಯನ್ನು ವಿರೋಧಿಸುವುದು, ನಾಯಕರನ್ನು ಟೀಕಿಸುವುದು, ವಿರೋಧ ಪಕ್ಷಗಳ ನಾಯಕರ ಜತೆ ಸಭೆಗಳಲ್ಲಿ ಭಾಗವಹಿಸುವುದು ಇವೆಲವೂ ಪಕ್ಷ ವಿರೋಧಿ ಚಟುವಟಿಕೆ ನಿಜ. ಆದರೆ ಪಕ್ಷಾಂತರ ಅಲ್ಲ. ಈ ಕಾರಣಗಳಿಂದಾಗಿಯೇ ಪಕ್ಷಾಂತರ ನಿಷೇಧ ಕಾನೂನಿಗೆ ಮಾಡಲಾದ ಹೊಸ ತಿದ್ದುಪಡಿ ಹೊಸ 'ಬಾಟಲಲ್ಲಿ' ತುಂಬಿಸಿದ ಹಳೆಯ ಔಷಧಿಯಂತೆ ಕಾಣುತ್ತಿದೆ.

ಮೊರಾರ್ಜಿ ದೇಸಾಯಿ ಮತ್ತು ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಕಾಲದಲ್ಲಿ ಪಕ್ಷಾಂತರ ನಿಷೇಧ ಮಸೂದೆಯನ್ನು ಸಂಸತ್ತಿನಲ್ಲಿ ವಿರೋಧಿಸಿದ್ದು ಬಿಜೆಪಿ (ಮೊದಲಿನ ಹೆಸರು ಜನಸಂಘ). ಈಗ ಅದೇ ಪಕ್ಷ ಪಕ್ಷಾಂತರ ನಿಷೇಧ ಕಾನೂನನ್ನು ಇನ್ನಷ್ಟು ಬಿಗಿಗೊಳಿಸಲು ಹೊರಟಿದೆ. ಶಿಸ್ತು ಮತ್ತು ಪಕ್ಷನಿಷ್ಠೆಯ ಡಂಗುರ ಹೊಡೆಯುತ್ತಿದ್ದ ಪಕ್ಷಕ್ಕೆ ಕೋಟೆಬಾಗಿಲು ಭದ್ರಗೊಳಿಸುವ ಸ್ಥಿತಿ ಯಾಕೆ ಬಂತು ಎಂದು ಕೇಳುತ್ತಿವೆ ಈಗಿನ ವಿರೋಧ ಪಕ್ಷಗಳು.

O

(28-12-2003)

ಅಪರಾಧಿಗಳಿಗೆ 'ಅನ್ಯಾಯ'

ಬಿಜೆಪಿ ತನಗೆ ಅನ್ಯಾಯ ಮಾಡಿದೆ ಎಂದು ಡಿ.ಪಿ. ಯಾದವ್ ಎಂಬ ಉತ್ತರ ಭಾರತದ 'ಬಾಹುಬಲಿ' (ಈ ಭಾಗದಲ್ಲಿ ಬಾಹುಬಲದ ರಾಜಕಾರಣಿಗಳನ್ನು ಬಾಹುಬಲಿಗಳೆನ್ನುತ್ತಾರೆ) ಕಂಡಕಂಡವರೆದುರು ಕಣ್ಣೀರು ಸುರಿಸುತ್ತಿದ್ದಾರೆ. ನಿಜಕ್ಕೂ ಅವರಿಗೆ ಅನ್ಯಯಾವಾಗಿದೆಯೆ!

ಅಧಿಕೃತ ಮಾಹಿತಿ ಪ್ರಕಾರ ವಿಸರ್ಜಿತ ಲೋಕಸಭೆಯಲ್ಲಿ ಯಾದವ್ 'ಬಳಗದ' 40 ಸದಸ್ಯರಿದ್ದರು. ದೇಶದ ವಿವಿಧ ರಾಜ್ಯಗಳಲ್ಲಿ ಈ ಬಳಗಕ್ಕೆ ಸೇರಿದ 700 ಶಾಸಕರಿದ್ದಾರೆ. ಇವರೆಲ್ಲರ ವಿರುದ್ಧ ಕೊಲೆ, ಅತ್ಯಾಚಾರ, ಅಪಹರಣ, ಹಲ್ಲೆ ಮೊದಲಾದ ಆರೋಪಗಳ ವಿಚಾರಣೆ ನಡೆಯುತ್ತಿದೆ. ಇವರಲ್ಲಿ ಬಿಜೆಪಿಗೆ ಸೇರಿದವರೂ ಇದ್ದಾರೆ. ತನ್ನ 'ಬಳಗದ' ಉಳಿದವರನ್ನು ಬಿಜೆಪಿ ಒಪ್ಪಿಕೊಂಡು ಅಪ್ಪಿಕೊಂಡಿರುವಾಗ ತನ್ನನ್ನು ಯಾಕೆ ಕರೆಸಿಕೊಂಡು ಹೊರಗೆ ತಳ್ಳಬೇಕು? ಯಾದವ್ ಅವರ ಪ್ರಶ್ನೆಯಲ್ಲಿ ತಪ್ಪು ಹುಡುಕಲಾದೀತೆ?

ರಾಜಕೀಯದಲ್ಲಿ ಅಪರಾಧೀಕರಣವನ್ನು ಸಹಿಸುವುದಿಲ್ಲ ಎಂದು ಪ್ರಧಾನಿ ವಾಜಪೇಯಿ ಲಖನೌನದಲ್ಲಿ ಗುಡುಗಿದಾಗ, ಅಪರಾಧಗಳ ಆರೋಪ ಹೊತ್ತಿರುವವರು ತಮ್ಮ ಪಕ್ಷದಲ್ಲಿಯೇ ಇದ್ದಾರೆ ಎನ್ನುವುದು ಅವರಿಗೆ

ತಿಳಿದಿರಲಿಲ್ಲವೇ? ಇದಾದವ್ ಸೇರ್ಪಡೆ ವಾಜಪೇಯಿ ಅರಿವಿಗೆ ಬಾರದೆ ನಡೆದುಹೋಯಿತೇ?

ಆತ್ಮವಂಚನೆಗೆ ಖ್ಯಾತಿ ಪಡೆದವರು ಭಾರತೀಯರು. ಇವರಲ್ಲಿ ಕುಖ್ಯಾತರು ರಾಜಕಾರಣಿಗಳು. 1997ರ ಆಗಸ್ಟ್‌ನಲ್ಲಿ ನಡೆದ ಸ್ವಾತಂತ್ರ್ಯದ ಸ್ವರ್ಣಮಹೋತ್ಸವದ ಸಂದರ್ಭದಲ್ಲಿ, ರಾಜಕೀಯದಲ್ಲಿ ಹೆಚ್ಚುತ್ತಿರುವ ಅಪರಾಧೀಕರಣದ ಬಗ್ಗೆ ಕಳವಳ ವ್ಯಕ್ತಪಡಿಸಿ ಸಂಸತ್ ಗೊತ್ತುವಳಿಯೊಂದನ್ನು ಅಂಗೀಕರಿಸಿತ್ತು. ಆದರೆ ಈ ಪಿಡುಗನ್ನು ನಿಯಂತ್ರಿಸುವ ಆಶಯವನ್ನೊಳಗೊಂಡ ಸುಪ್ರೀಮ್ ಕೋರ್ಟ್ ಆದೇಶವನ್ನು ಚುನಾವಣಾ ಆಯೋಗ ಅನುಷ್ಠಾನಗೊಳಿಸಿದಾಗ, ಅದೇ ಸಂಸತ್‌ನ ಸದಸ್ಯರು ಒಕ್ಕೊರಲಿನಿಂದ ವಿರೋಧಿಸಿದರು. ಆ ನಂತರ ನ್ಯಾಯಾಲಯದ ಆದೇಶದ ಆಶಯಕ್ಕೆ ವಿರುದ್ಧವಾದ ಮಾರ್ಗದರ್ಶಿ ಸೂತ್ರವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ಹೊರಟರು. ಇದು ನಮ್ಮ ಜನಪ್ರತಿನಿಧಿಗಳ ದ್ವಿಮುಖ ನೀತಿ.

2002ರ ಮೇ ಎರಡರ ತೀರ್ಪಿನಲ್ಲಿ ಸುಪ್ರೀಮ್‌ಕೋರ್ಟ್ ಹೇಳಿದ್ದೇನು? ಅಪರಾಧದ ಆರೋಪ ಹೊತ್ತಿರುವ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರೆಂದು ಅದು ಹೇಳಿಲ್ಲ. ಅಭ್ಯರ್ಥಿಗಳ ಅರ್ಹತೆಯನ್ನು ಸೂಚಿಸುವ ಪ್ರಜಾಪ್ರತಿನಿಧಿ ಕಾಯಿದೆಯ ಎಂಟನೇ ಸೆಕ್ಷನ್ ಅನ್ನು ಅದು ಮುಟ್ಟಿರಲಿಲ್ಲ. ಮೇಲ್ಮನವಿ ಸುಪ್ರೀಮ್‌ಕೋರ್ಟ್‌ನಲ್ಲಿ ಇತ್ಯರ್ಥಗೊಳ್ಳುವವರೆಗೆ ಆರೋಪಿಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಇದ್ದ ಅವಕಾಶವನ್ನು ಅದು ಕಿತ್ತುಕೊಳ್ಳಲಿಲ್ಲ.

"ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಹಿನ್ನೆಲೆಯನ್ನು ತಿಳಿದು ಕೊಳ್ಳುವ ಸಂವಿಧಾನಬದ್ಧ ಹಕ್ಕು ಮತದಾರರಿಗೆ ಇದೆ. ಅದನ್ನು ಅವರಿಗೆ ತಿಳಿಸುವುದು ಪ್ರತಿಯೊಬ್ಬ ಅಭ್ಯರ್ಥಿಯ ಕರ್ತವ್ಯ" ಎಂದಷ್ಟೇ ನ್ಯಾಯಾಲಯ ಹೇಳಿತ್ತು. ಈ ಆದೇಶವನ್ನು ಎರಡು ತಿಂಗಳೊಳಗೆ ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ತಿಳಿಸಿತ್ತು.

ರಾಜಕೀಯ ಅಪರಾಧೀಕರಣದ ಬಗ್ಗೆ ಹಿಂದೆ ಕಳವಳ ವ್ಯಕ್ತಪಡಿಸಿ ಭೇಷ್ ಅನ್ನಿಸಿಕೊಂಡ ಸಂಸತ್‌ಸದಸ್ಯರು ಸುಪ್ರೀಮ್‌ಕೋರ್ಟ್, ಆದೇಶವನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಆದರೆ ಚುನಾವಣಾ ಆಯೋಗ ಮಾತ್ರ ಅದನ್ನು ಮರೆತಿರಲಿಲ್ಲ. ತಮ್ಮ ನೆನಪಿನೋಲೆಗಳ ನಂತರವೂ ಕೇಂದ್ರ ಸರ್ಕಾರ ಸುಮ್ಮನಿರುವುದು ಕಂಡ ಆಯೋಗ ಚುನಾವಣಾ ನಿರ್ವಹಣಾ ನಿಯಾಮವಳಿಯ 2ಎ ಸೆಕ್ಷನ್ ಬದಲಿಗೆ 2ಇ ಸೇರಿಸಿ ಹೊಸಮಾರ್ಗದರ್ಶಿ ಸೂತ್ರವನ್ನು ತಾನೇ ಪ್ರಕಟಿಸಿತು.

ಇದರ ಪ್ರಕಾರ ಅಭ್ಯರ್ಥಿಗಳು ತಮ್ಮ ನಾಮಪತ್ರದ ಜತೆಯಲ್ಲಿ (1) ಶಿಕ್ಷೆ ಅನುಭವಿಸಿರುವ ಅಪರಾಧಗಳ ವಿವರ (2) ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವ

ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಜೈಲು ಶಿಕ್ಷೆಗೆ ಅವಕಾಶ ಇರುವ ಅಪರಾಧಗಳ ವಿವರ (3) ಆಸ್ತಿ ಮತ್ತು ಜವಾಬ್ದಾರಿ (ಸಾಲ, ತೆರಿಗೆ–ಕಂದಾಯ ಬಾಕಿ)ಯ ವಿವರ ಮತ್ತು ಶೈಕ್ಷಣಿಕ ಅರ್ಹತೆಯನ್ನೊಳಗೊಂಡ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ.

ಈ ಮಾರ್ಗದರ್ಶಿ ಸೂತ್ರ ಕಂಡು ಸಂಸದರು ಕಿಡಿಕಿಡಿಯಾದರು. ಇದು ಕಾನೂನು ರೂಪಿಸುವ ಶಾಸಕಾಂಗದ ಹಕ್ಕಿನ ಮೇಲೆ ನ್ಯಾಯಾಂಗದ ಪ್ರಹಾರ ಎಂದು ಆರೋಪಿಸಿದರು. ಸಂಸದರ ಒಕ್ಕೊರಲ ವಿರೋಧಕ್ಕೆ ಮೂರ್ತರೂಪ ನೀಡಿದ ಸರ್ಕಾರ, ಪ್ರಜಾಪ್ರತಿನಿಧಿ ಕಾಯಿದೆಗೆ ತಿದ್ದುಪಡಿ ಮಾಡುವ ಮೂಲಕ ಆಯೋಗದ ಮಾರ್ಗದರ್ಶಿ ಸೂತ್ರವನ್ನು ತೆಳುಗೊಳಿಸಿ ಸುಗ್ರಿವಾಜ್ಞೆ ಹೊರಡಿಸಿತು.

ಈ ಹೊಸ ಮಾರ್ಗದರ್ಶಿ ಸೂತ್ರದ ಪ್ರಕಾರ ಅಭ್ಯರ್ಥಿಗಳು ನಾಮಪತ್ರಗಳ ಜತೆ ಆಸ್ತಿ ವಿವರ ಮತ್ತು ಶೈಕ್ಷಣಿಕ ಅರ್ಹತೆಯ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗಿರಲಿಲ್ಲ. ಅವರು ಆರಿಸಿ ಬಂದರೆ ಆಸ್ತಿ ವಿವರಗಳನ್ನು ವಿಧಾನಸಭೆ ಇಲ್ಲವೇ ಲೋಕಸಭಾ ಅಧ್ಯಕ್ಷರಿಗೆ ಸಲ್ಲಿಸಿದರಷ್ಟೇ ಸಾಕು. ಅಭ್ಯರ್ಥಿಗಳು ತಿಳಿಸಬೇಕಾದ ಅಪರಾಧಗಳ ಹಿನ್ನೆಲೆಯನ್ನು ಕೂಡಾ 'ಕೊಲೆ, ಅಪಹರಣ, ದೇಶದ್ರೋಹ, ಭಯೋತ್ಪಾದನೆ ಮತ್ತು ಮಾದಕದ್ರವ್ಯ ಸಾಗಾಣಿಕೆ'ಗಷ್ಟೇ ಸೀಮಿತ ಗೊಳಿಸಲಾಗಿತ್ತು.

ಸರ್ಕಾರದ ಈ ಪರಿಷ್ಕೃತ ಮಾರ್ಗದರ್ಶಿ ಸೂತ್ರವನ್ನು ಮೊದಲು ವಿರೋಧಿಸಿವರು ರಾಷ್ಟ್ರಪತಿಗಳು, ಆದರೆ ಅವರು ಅಸಹಾಯಕರು. ಎರಡನೇ ಬಾರಿ ಸುಗ್ರೀವಾಜ್ಞೆ ತನ್ನ ಅಂಕಿತಕ್ಕಾಗಿ ಬಂದಾಗ ಅವರು ಒಪ್ಪಿಕೊಳ್ಳಲೇಬೇಕಾಯಿತು; ಅವರಿಗೆ ಬೇರೆ ಆಯ್ಕೆ ಇರಲಿಲ್ಲ. ಆದರೆ ಅಂತಹ ಆಯ್ಕೆಯ ಸ್ವಾತಂತ್ರ್ಯ ಇದ್ದ ವಿರೋಧ ಪಕ್ಷಗಳು ವಿಭಿನ್ನ ನಿಲುವುಗಳನ್ನು ತಳೆದವು.

ಸರ್ಕಾರದ ಸುಗ್ರೀವಾಜ್ಞೆಯನ್ನು ಮೊದಲು ಬೆಂಬಲಿಸಿದ್ದ ಕಾಂಗ್ರೆಸ್ ರಾಷ್ಟ್ರಪತಿಗಳ ಅಸಮಾಧಾನದ ಸೂಚನೆ ಸಿಕ್ಕಿದ ನಂತರ ತನ್ನ ನಿಲುವು ಬದಲಾಯಿಸಿ ಸುಪ್ರೀಮ್‌ಕೋರ್ಟ್ ಆದೇಶವನ್ನು ಬೆಂಬಲಿಸಿತು. ಬಿಜೆಪಿ, ಸಮಾಜವಾದಿ ಪಕ್ಷ ಮತ್ತು ಎಡಪಕ್ಷಗಳು ಸುಪ್ರೀಮ್‌ಕೋರ್ಟ್ ಆದೇಶವನ್ನು ವಿರೋಧಿಸಿದಂತೆ, ಆರ್‌ಜೆಡಿ ಮತ್ತು ಸಮತಾ ಪಕ್ಷಗಳು ಅಡ್ಡಗೋಡೆಯ ಮೇಲೆ ದೀಪ ಹಿಡಿದು ನಿಂತವು. ಅಂತಿಮವಾಗಿ ಸುಪ್ರೀಮ್‌ಕೋರ್ಟ್ ಖುದ್ದಾಗಿ ಈ ಹೊಸಮಾರ್ಗದರ್ಶಿ ಸೂತ್ರವನ್ನು ತಳ್ಳಿಹಾಕಿ, ಆಯೋಗದ ಮಾರ್ಗದರ್ಶಿ ಸೂತ್ರವನ್ನೇ ಜಾರಿಗೆ ತರಲು ಕಟ್ಟುನಿಟ್ಟಿನ ಆದೇಶ ನೀಡಿತು.

ಮುಂದಿನ ತಿಂಗಳು ನಡೆಯುವ ಚುನಾವಣೆಗಳು ಇದೇ ಮೊದಲಬಾರಿಗೆ ಚುನಾವಣಾ ಆಯೋಗದ ಹೊಸ ಮಾರ್ಗದರ್ಶಿ ಸೂತ್ರಕ್ಕೆ ಅನುಗುಣವಾಗಿ

ನಡೆಯಲಿವೆ. ಈ ಬಾರಿ ಪ್ರತಿಯೊಬ್ಬ ಅಭ್ಯರ್ಥಿಯೂ ನಾಮಪತ್ರದ ಜತೆಯಲ್ಲಿ ಅಪರಾಧಗಳ ಹಿನ್ನೆಲೆ. ಆಸ್ತಿ ಮತ್ತು ಜವಾಬ್ದಾರಿ ಹಾಗೂ ಶೈಕ್ಷಣಿಕ ಅರ್ಹತೆಯ ಪ್ರಮಾಣಪತ್ರ ಸಲ್ಲಿಸಬೇಕಾಗುತ್ತದೆ. ಇದಕ್ಕೆ ತಪ್ಪಿದರೆ ಅಂತಹ ನಾಮಪತ್ರಗಳನ್ನು ತಿರಸ್ಕರಿಸುವ ಅಧಿಕಾರ ಚುನಾವಣಾ ಅಧಿಕಾರಿಗಳಿಗೆ ಇದೆ.

ಆಯೋಗದ ಮಾರ್ಗದರ್ಶಿ ಸೂತ್ರವನ್ನು ವಿರೋಧಿಸುತ್ತಿರುವ ರಾಜಕೀಯ ನಾಯಕರ ಮೊದಲ ವಿರೋಧ ಚುನಾವಣಾ ಅಧಿಕಾರಿಗಳ ಪಾತ್ರದ ಬಗ್ಗೆ. ನಾಮಪತ್ರಗಳನ್ನು ಸ್ವೀಕರಿಸುವ ಚುನಾವಣಾ ಅಧಿಕಾರಿಗೆ ಪ್ರಮಾಣಪತ್ರದಲ್ಲಿ ನೀಡಲಾದ ವಿವರಗಳನ್ನು ದೃಢೀಕರಿಸುವ ಅರ್ಹತೆ, ಸಮಯ ಮತ್ತು ಸೌಲಭ್ಯ ಇಲ್ಲ ಎನ್ನುವುದು ಅವರ ಆಕ್ಷೇಪ.

ಚುನಾವಣಾ ಪ್ರಕ್ರಿಯೆಯ ಪ್ರಕಾರ ನಾಮಪತ್ರ ಪರಿಶೀಲನೆಗೆ ನಿಗದಿಪಡಿಸಿರುವ ಅವಧಿ ಒಂದು ದಿನ ಮಾತ್ರ. ಈ ಕಾರ್ಯ ನಡೆಸುವವರು ತಾಲ್ಲೂಕು ಮಟ್ಟದ ಅಧಿಕಾರಿ. ಅವರ ಕಾರ್ಯಸಾಮರ್ಥ್ಯದ ಕೊರತೆಯಿಂದ ಇಲ್ಲವೇ ಅವಸರದ ತೀರ್ಮಾನದಿಂದ ನಾಮಪತ್ರ ತಿರಸ್ಕೃತಗೊಂಡರೆ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೇ ಎನ್ನುವುದು ಅವರ ಆತಂಕ.

ಮಾರ್ಗದರ್ಶಿ ಸೂತ್ರದಲ್ಲಿ ಇದಕ್ಕೆ ಸಂಬಂಧಿಸಿದ ಕೆಲವು ವಿವರಣೆಗಳಿವೆ. ಅದರ ಪ್ರಕಾರ ಸಾಮಾನ್ಯವಾಗಿ ಅಭ್ಯರ್ಥಿಗಳು ನೀಡುವ ಪ್ರಮಾಣಪತ್ರವನ್ನು ಚುನಾವಣಾ ಅಧಿಕಾರಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಪ್ರಮಾಣಪತ್ರದ ಸತ್ಯಾಸತ್ಯೆಯ ಬಗ್ಗೆ ಅವರು ತನಿಖೆ ನಡೆಸಬೇಕಾಗಿಲ್ಲ. ಪ್ರಮಾಣಪತ್ರದಲ್ಲಿನ ಮಾಹಿತಿ ತಪ್ಪೆಂದು ಸಾಬೀತುಪಡಿಸುವ ದಾಖಲೆಗಳನ್ನು ಯಾರಾದರೂ ಹಾಜರುಪಡಿಸಿದರೆ ಮಾತ್ರ ಪರಿಶೀಲನೆಯ ಪ್ರಶ್ನೆ ಬರುತ್ತದೆ.

"ಅಪರಾಧದ ಹಿನ್ನೆಲೆಯ ವ್ಯಕ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನೋಡಿಕೊಳ್ಳುವುದಕ್ಕಿಂತಲೂ ಅಭ್ಯರ್ಥಿಗಳ ಹಿನ್ನೆಲೆಯನ್ನು ತಿಳಿದುಕೊಳ್ಳಲು ಮತದಾರರಿಗೆ ಅವಕಾಶ ಕಲ್ಪಿಸಿಕೊಡುವುದು ಈ ಮಾರ್ಗದರ್ಶಿ ಸೂತ್ರದ ಮೂಲ ಉದ್ದೇಶ. ಚುನಾವಣೆ ಮುಗಿದ ನಂತರವೂ ವಿಸ್ತೃತ ಪರಿಶೀಲನೆಯ ಮೂಲಕ ಸಂಶಯವನ್ನು ನಿವಾರಿಸಿಕೊಳ್ಳಲು ಅವಕಾಶ ಇರುವುದರಿಂದ ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ಪ್ರಮಾಣ ಪತ್ರದ ಬಗ್ಗೆ ಸಂಶಯ ಮೂಡಿದರೆ ಅದರ ಲಾಭವನ್ನು ಅಭ್ಯರ್ಥಿಗಳಿಗೆ ನೀಡಲಾಗುವುದು" ಎನ್ನುತ್ತಿದೆ ಚುನಾವಣಾ ಆಯೋಗ.

ಇದು ರಾಜಕೀಯ ಕ್ಷೇತ್ರದ ಅಪರಾಧೀಕರಣವನ್ನು ತಡೆಯುವ ಚುನಾವಣಾ ಆಯೋಗದ ಸಣ್ಣ ಪ್ರಯತ್ನ. ಆದರೆ ಇದಕ್ಕೆ ವ್ಯಕ್ತವಾದ ವಿರೋಧವನ್ನು ನೋಡಿದವರಿಗೆ ರಾಜಕೀಯ ಪಕ್ಷಗಳ ಮೇಲೆ ಬಾಹುಬಲಿಗಳ ಪ್ರಭಾವದ ಅರಿವಾಗದೆ ಇರದು.

ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಅರ್ಹತೆಯ ಆಧಾರದಲ್ಲಿ ಟಿಕೆಟ್ ನೀಡಿದರೆ ಈ ಮಾರ್ಗದರ್ಶಿ ಸೂತ್ರದ ಜಂಜಾಟವೇ ಇಲ್ಲ ಎನ್ನುತ್ತಿದೆ ಚುನಾವಣಾ ಆಯೋಗ. ಆದರೆ ರಾಜಕೀಯ ಪಕ್ಷಗಳ ಪದಕೋಶದಲ್ಲಿ ಅರ್ಹತೆಗೆ ಬೇರೆ ಬೇರೆ ಅರ್ಥಗಳಿವೆ. ಅದರ ಒಂದು ಅರ್ಥ-ಅಪರಾಧಗಳ ಹಿನ್ನೆಲೆ. ಈ ಅರ್ಹತೆಯ ಆಧಾರದಲ್ಲಿ ನಡೆದ ಪರೀಕ್ಷೆಯಲ್ಲಿ ಡಿ.ಪಿ. ಯಾದವ್, ರಾಜು ಭಯ್ಯಾನಂತಹವರಲ್ಲದೆ ಬೇರೆ ಯಾರು ಪಾಸಾಗಲು ಸಾಧ್ಯ?

(30-02-2004)

ಉರುಳಲಿರುವ ಸಚಿವರ ತಲೆಗಳು

ಉತ್ತರ ಪ್ರದೇಶದ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್ ಅವರ ಹೆಸರಲ್ಲಿ ಒಂದು ದಾಖಲೆ ಚಿರಕಾಲ ಉಳಿಯಲಿದೆ. ಅವರು ಪಕ್ಷಾಂತರ ರಾಜಕೀಯದ ಕೊನೆಯ ಫಲಾನುಭವಿ ಮುಖ್ಯಮಂತ್ರಿ. ಮುಂಗಾರು ಅಧಿವೇಶನದಲ್ಲಿಯೇ ಸಂವಿಧಾನ (97ನೇ ತಿದ್ದುಪಡಿ) ಮಸೂದೆಗೆ ಸಂಸತ್ ಅಂಗೀಕಾರ ನೀಡಿದ್ದರೆ ಮತ್ತೆ ಮುಖ್ಯಮಂತ್ರಿ ಆಗುವ ಅವರ ವರ್ಷಗಳ ಕನಸು ನನಸಾಗುತ್ತಿರಲಿಲ್ಲ.

ಈಗ ಅವರ ಮುಂದಿನ ಸವಾಲು ಗಳಿಸಿ ಕೊಂಡ ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿ ಕೊಳ್ಳುವುದು. ಈ ಸವಾಲನ್ನು ಮುಂದಿನ ಆರು ತಿಂಗಳಲ್ಲಿ ದೇಶದ ಬಹಳಷ್ಟು ಮುಖ್ಯ ಮಂತ್ರಿಗಳು ಎದುರಿಸಬೇಕಾಗಬಹುದು. ಬಹುಜನ ಸಮಾಜ ಪಕ್ಷವನ್ನು ತೊರೆದ 23 ಸದಸ್ಯರು ಸಮಾಜವಾದಿ ಪಕ್ಷ ಸೇರಿದ್ದು ಸಚಿವ ಖಾತೆಯ ಆಮಿಷಕ್ಕೆ ಬಲಿಯಾಗಿ ಅವರಿಗೆ ಮುಲಾಯಂಸಿಂಗ್ ಮೋಸ ಮಾಡಲಿಲ್ಲ. ಅದರಿಂದಾಗಿ ಸಂಪುಟದ ಗಾತ್ರವನ್ನು ಅವರು 98ಕ್ಕೆ ಹೆಚ್ಚಿಸಬೇಕಾಯಿತು. ಕಾಂಗ್ರೆಸ್ ಪಕ್ಷ ಸಂಪುಟ ಸೇರಬಯಸಿದರೆ ಸಚಿವರ ಸಂಖ್ಯೆಯನ್ನು ನೂರರ ಗಡಿ ದಾಟಿ ಮುಂದಕ್ಕೊಯ್ಯಲು ಸಿದ್ಧ ಎಂದರು ಅವರು ಇತ್ತೀಚೆಗೆ ಹೇಳಿದ್ದರು.

ಸಂಪುಟ ವಿಸ್ತರಣೆ ದೂರವೇ ಉಳಿಯಿತು. ಮುಂದಿನ ಆರು ತಿಂಗಳೊಳಗೆ ಅವರು ಸಂಪುಟಕ್ಕೆ ಕತ್ತರಿ ಹಾಕಲು ಸಿದ್ಧವಾಗಬೇಕು. ಸಂಸತ್ ಅಂಗೀಕರಿಸಿದ ಸಂವಿಧಾನ (97ನೇ ತಿದ್ದುಪಡಿ) ಮಸೂದೆಯ ಪ್ರಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಸಂಪುಟದ ಗಾತ್ರವನ್ನು ಕ್ರಮವಾಗಿ ಲೋಕಸಭೆ ಮತ್ತು ವಿಧಾನ ಸಭಾ ಸದಸ್ಯರ ಶೇಕಡಾ 15ಕ್ಕೆ ಮಿತಿಗೊಳಿಸುವುದು ಕಡ್ಡಾಯವಾಗಿದೆ. ಸಣ್ಣ ರಾಜ್ಯಗಳಲ್ಲಿ ಸಚಿವರ ಸಂಖ್ಯೆಗೆ ಗರಿಷ್ಠ 12ರ ಮಿತಿ ಹೇರಲಾಗಿದೆ.

ಪ್ರಣಬ್ ಮುಖರ್ಜಿ ಅಧ್ಯಕ್ಷತೆಯ 44 ಸದಸ್ಯರ ಸಂಸತ್ ಸ್ಥಾಯಿ ಸಮಿತಿಯ ವರದಿಯ ಆಧಾರದಲ್ಲಿ ಪಕ್ಷಾಂತರ ನಿಷೇಧ ಮತ್ತು ಸಂಪುಟ ಗಾತ್ರದ ನಿಯಂತ್ರಣಕ್ಕಾಗಿ ರೂಪಿಸಿದ ಸಂವಿಧಾನ (57ನೇ ತಿದ್ದುಪಡಿ) ಮಸೂದೆಗೆ ಸಂಸತ್ ಅಂಗಿಕಾರ ನೀಡಿದೆ. ಲೋಕಸಭೆಯಲ್ಲಿ ಪಕ್ಷಭೇದ ಮರೆತು 402 ಸದಸ್ಯರು ಮಸೂದೆಯನ್ನು ಬೆಂಬಲಿಸಿದ್ದು ಒಂದು ವಿಶೇಷ.

ರಾಷ್ಟ್ರಪತಿಯವರ ಅಂಕಿತ ಬಿದ್ದು ಮಸೂದೆ ಕಾನೂನಿನ ರೂಪ ಪಡೆದ ನಂತರ ಅದರ ಪಾಲನೆಗೆ ಆರು ತಿಂಗಳ ಕಾಲಾವಕಾಶ ಇದೆ. ಅದರ ನಂತರ ನೋಡಬೇಕಾಗಿರುವುದು: ಸಚಿವರ ತಲೆ ಉರುಳಲಿದೆಯೇ ಇಲ್ಲವೇ ಸರ್ಕಾರವೇ ಉರುಳುವುದೇ ಎಂಬುದನ್ನು.

403 ಸದಸ್ಯ ಬಲದ ಉತ್ತರಪ್ರದೇಶದಲ್ಲಿ ಈಗಿನ ಸಚಿವರ ಸಂಖ್ಯೆ 98. ಹೊಸ ಕಾನೂನಿನ ಪ್ರಕಾರ ಮುಲಾಯಂಸಿಂಗ್ 38 ಸದಸ್ಯರನ್ನು ಮನೆಗೆ ಕಳುಹಿಸಿ ಸಂಪುಟದ ಗಾತ್ರವನ್ನು 60ಕ್ಕೆ ಇಳಿಸಬೇಕು. ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳ ಬೆಂಬಲ ಬಿಹಾರದ ರಾಬ್ರಿದೇವಿ 37 ಸಚಿವರನ್ನು ಮಾತ್ರ ಉಳಿಸಿಕೊಳ್ಳಲು ಸಾಧ. 242 ಸದಸ್ಯ ಬಲದ ಬಿಹಾರದಲ್ಲಿ ಈಗಿನ ಸಚಿವರ ಸಂಖ್ಯೆ 63.

ಸೋನಿಯಾ ವಿದೇಶಿ ಮೂಲ ಮತ್ತು ನಕಲಿ ಛಾಪಾ ಕಾಗದ ಹಗರಣಗಳಿಂದಾಗಿ ಪಾರಾಗಬೇಕಾಗಿದೆ. ಅಲ್ಲಿನ ಸರ್ಕಾರದಲ್ಲಿ ಕಾಂಗ್ರೆಸ್ ಮತ್ತು ನ್ಯಾಷನಲ್ ಕಾಂಗ್ರೆಸ್ ಪಕ್ಷದ ತಲಾ 14 ಸಂಪುಟ ಮತ್ತು 15 ರಾಜ್ಯ ಸಚಿವರಿದ್ದಾರೆ. ಜತೆಗೆ ಪೆಸೆಂಟ್ ಆ್ಯಂಡ್ ವರ್ಕರ್ಸ್ ಪಕ್ಷ, ಆರ್‌ಪಿಐ ಮೊದಲಾದ ಪ್ರಾದೇಶಿಕ ಪಕ್ಷಗಳಿಗೆ ಸೇರಿದ ಸಚಿವರಿದ್ದಾರೆ.

ಎರಡು ವರ್ಷಗಳ ಹಿಂದೆ ಶಿವಸೇನೆ– ಬಿಜೆಪಿ ಕೂಟ ವಿಲಾಸರಾವ್ ದೇಶ್ ಮುಖ್ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸಿದಾಗ ಕಾಂಗ್ರೆಸ್ ಮತ್ತು ಎನ್‌ಸಿಪಿ ತಮ್ಮ ಶಾಸಕರನ್ನು ಬೆಂಗಳೂರಿನಲ್ಲಿ ತಂದು ಬಚ್ಚಿಟ್ಟಿದ್ದವು. ಆ ನಂತರ ಸರ್ಕಾರವನ್ನು ದೇಶ್‌ಮುಖ್ 69ಕ್ಕೆ ಏರಿಸಿದ್ದರು. ಹೊಸ ಸಚಿವರ ಕಚೇರಿಗಾಗಿ ಅಲ್ಲಿ ಇತ್ತೀಚೆಗೆ 1.74 ಕೋಟಿ ರೂಪಾಯಿ ವೆಚ್ಚದಲ್ಲಿ ಆರು ಮಹಡಿಯ ಹೊಸ ಕಟ್ಟಡವನ್ನು ನಿರ್ಮಿಸಲಾಗಿತ್ತು. ಸುಮಾರು 90 ಲಕ್ಷ ರೂಪಾಯಿ ವೆಚ್ಚದಲ್ಲಿ 20 ಹೊಸ ಕಾರು

[illegible]ಡಿಸಲಾಗಿತ್ತು. ಆದರೆ ಈಗಿನ ಸ್ಥಿತಿಯಲ್ಲಿ ಮಹಾರಾಷ್ಟ್ರದಲ್ಲಿ ಅವಧಿಗೆ ಮುನ್ನವೇ ಚುನಾವಣೆ ನಡೆದರೆ ಆಶ್ಚರ್ಯ ಏನಿಲ್ಲ.

ಸಚಿವರ ಸಂಖ್ಯೆ ವಿಧಾನಸಭಾ ಸದಸ್ಯರ ಒಟ್ಟು ಸಂಖ್ಯೆಯ ಗರಿಷ್ಠ ಶೇಕಡಾ ಹತ್ತರಷ್ಟು ಇರಬೇಕೆಂದು ಹೇಳುತ್ತಾ ಬಂದಿರುವ ಸಿಪಿಐ (ಎಂ) ಪಕ್ಷ ಪಶ್ಚಿಮ ಬಂಗಾಳದಲ್ಲಿರುವ ತನ್ನ ಸರ್ಕಾರದಲ್ಲಿ ಮಾತ್ರ ಅದನ್ನು ಪಾಲಿಸಿಲ್ಲ. 288 ಸದಸ್ಯ ಬಲದ ಪಶ್ಚಿಮ ಬಂಗಾಳದಲ್ಲಿ 46 ಸಚಿವರಿದ್ದಾರೆ. ಹೊಸ ಕಾನೂನು ಜಾರಿಗೆ ಬಂದರೆ ಅಲ್ಲಿ ಇಬ್ಬರು ಸಚಿವರ ತಲೆ ಉರುಳಲಿದೆ. 147 ಸದಸ್ಯ ಬಲದ ಒರಿಸ್ಸಾ ಮೂವರು ಸಚಿವರನ್ನು ಕೈ ಬಿಡಬೇಕಾಗಿದೆ.

ಇತ್ತೀಚೆಗೆ ನೂತನವಾಗಿ ಅಸ್ತಿತ್ವಕ್ಕೆ ಬಂದ ರಾಜಸ್ತಾನ, ಮಧ್ಯಪ್ರದೇಶ ಮತ್ತು ದೆಹಲಿ ಸರ್ಕಾರಗಳು ಸದ್ಯ ಹೊಸತಲೆ ನೋವಿನಿಂದ ಮುಕ್ತವಾಗಿದೆ. 200 ಸದಸ್ಯ ಬಲದ ರಾಜಸ್ತಾನದಲ್ಲಿ 30 ಸಚಿವರಿಗೆ ಅವಕಾಶ ಇದೆ. ಅಲ್ಲಿ ಈಗಿರುವ ಸಚಿವರ ಸಂಖ್ಯೆ ಒಂಬತ್ತು. 230 ಸದಸ್ಯ ಬಲದ ಮಧ್ಯಪ್ರದೇಶದ ಸಚಿವರ ಸಂಖ್ಯೆಯ ಗರಿಷ್ಠ ಮಿತಿ 35. ಅಲ್ಲಿನ ಹೊಸ ಸರ್ಕಾರದ ಸಚಿವರ ಸಂಖ್ಯೆ ಹದಿನೇಳು. 60 ಸದಸ್ಯ ಬಲದ ದೆಹಲಿ ಸಣ್ಣ ರಾಜ್ಯದ ವರ್ಗದಲ್ಲಿರುವುದರಿಂದ 12 ಸಚಿವರ ನೇಮಕಕ್ಕೆ ಅವಕಾಶ ಇದೆ. ಶೀಲಾ ದೀಕ್ಷಿತ್ ಮೊದಲ ಸುತ್ತಿನಲ್ಲಿ ಏಳು ಸಚಿವರನ್ನಷ್ಟೇ ನೇಮಿಸಿ ಕೊಂಡಿದ್ದಾರೆ.

ಹೊಸ ಕಾನೂನಿನಿಂದಾಗಿ ದೊಡ್ಡ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿರುವುದು ಸಣ್ಣ ರಾಜ್ಯಗಳು. ಇವುಗಳು ಇನ್ನು ಮುಂದೆ ಗರಿಷ್ಠ 12 ಸಚಿವರನ್ನು ಮಾತ್ರ ಹೊಂದಲು ಸಾಧ್ಯ. 40 ಸದಸ್ಯ ಬಲ ಮಿಜೋರಾಂನಲ್ಲಿ 14 ಸಚಿವರಿದ್ದರೆ, ಮಣಿಪುರದಲ್ಲಿನ ಸಚಿವರ ಸಂಖ್ಯೆ 32, 40 ಸದಸ್ಯ ಬಲದ ಗೋವಾದ ಸಚಿವರ ಸಂಖ್ಯೆ 14.

ಕೇರಳದ ಎ.ಕೆ. ಅಂಟನಿ ಸರ್ಕಾರದಲ್ಲಿ 20 ಸಚಿವರಿದ್ದರೆ. ಇದು ಅಲ್ಲಿನ 140 ಸದಸ್ಯ ಬಲದ ಶೇಕಡಾ 14.28ರಷ್ಟಾಗುತ್ತದೆ. ಹಿಂದಿನ ನಯನಾರ್ ಸರ್ಕಾರದಲ್ಲಿ 14 ಸಚಿವರಿದ್ದರೆ, ನಂಬೂದಿರಿಪಾಡ್ ಸರ್ಕಾರದಲ್ಲಿ 11 ಸಚಿವರು ಮಾತ್ರ ಇದ್ದರು.

ತಮಿಳುನಾಡಿನಲ್ಲಿ ರಾಜಾಜಿ ಅವರಿಂದ ಹಿಡಿದು ಜೆ. ಜಯಲಲಿತಾವರೆಗೆ ಎಲ್ಲ ಮುಖ್ಯಮಂತ್ರಿಗಳು ಸಚಿವ ಸಂಪುಟದ ಗಾತ್ರವನ್ನು ನಿಯಂತ್ರಣದಲ್ಲಿಟ್ಟುಕೊಂಡೇ ಬಂದಿದ್ದಾರೆ. ಕಾಮರಾಜ್ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಕೇವಲ ಹತ್ತು ಸಚಿವರಿದ್ದರೆ, ದ್ರಾವಿಡ ಆಡಳಿತಕ್ಕೆ ನಾಂದಿ ಹಾಡಿದ ಸಿ.ಎನ್. ಅಣ್ಣಾದೊರೈ ಸಂಪುಟದ ಗಾತ್ರವನ್ನು 15ರ ಮಿತಿಯಲ್ಲಿಟ್ಟಿದ್ದರು. ಕರುಣಾನಿಧಿ, ಎಂಜಿಆರ್, ಜಯಲಲಿತಾ ಯಾರೂ ಸಚಿವರ ಸಂಖ್ಯೆಯನ್ನು 25ರ

ಗಡಿ ದಾಟಲು ಬಿಟ್ಟಿಲ್ಲ. 234 ಸದಸ್ಯ ಬಲದ ತಮಿಳುನಾಡು ಸರ್ಕಾರದಲ್ಲಿ ಈಗ 20 ಸಚಿವರಿದ್ದಾರೆ. ಹೊಸ ಮಸೂದೆಯ ಪ್ರಕಾರ ಅಲ್ಲಿ ಸಚಿವರ ಗರಿಷ್ಠ ಮಿತಿ 35.

234 ಸದಸ್ಯ ಬಲದ ಆಂಧ್ರಪ್ರದೇಶದ ಉಸ್ತುವಾರಿ ಸರ್ಕಾರದಲ್ಲಿ 39 ಸಚಿವರಿದ್ದಾರೆ. ಹೊಸ ಮಸೂದೆಯ ಪ್ರಕಾರ ಅಲ್ಲಿ 44 ಸಚಿವರಿಗೆ ಅವಕಾಶ ಇದೆ. ಮುಂದಿನ ಚುನಾವಣೆಯಲ್ಲಿ ಗೆದ್ದು ಬಂದರೆ ಚಂದ್ರಬಾಬು ನಾಯ್ಡು ಯೋಚಿಸಬಹುದು.

ದಕ್ಷಿಣದ ರಾಜ್ಯಗಳಲ್ಲಿ ಮಿತಿಮೀರಿದ ಸಂಪುಟ ಗಾತ್ರವನ್ನು ಹೊಂದಿರುವ ಏಕೈಕ ರಾಜ್ಯ ಕರ್ನಾಟಕ. 224 ಸದಸ್ಯ ಬಲದ ರಾಜ್ಯದಲ್ಲಿ ಈಗ 49 ಸಚಿವರಿದ್ದಾರೆ. ಅತ್ಯಂತ ಹೆಚ್ಚು ಸಚಿವರನ್ನು ಹೊಂದಿರುವ ದಾಖಲೆ ದಿವಂಗತ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹೆಸರಲ್ಲಿದೆ. ಅವರ ಸಂಪುಟದಲ್ಲಿ 51 ಸಚಿವರಿದ್ದರೆ. ಎಸ್. ಬಂಗಾರಪ್ಪ ಸಂಪುಟದಲ್ಲಿ 48 ಸಚಿವರಿದ್ದರೆ. ವೀರಪ್ಪ ಮೊಯಿಲಿ 46 ಸಚಿವರನ್ನು ಹೊಂದಿದ್ದರು.

ಹೊಸ ಮಸೂದೆಯ ಪ್ರಕಾರ ರಾಜ್ಯದ ಸಂಪುಟದಲ್ಲಿ 33 ಸಚಿವರು ಮಾತ್ರ ಇರಲು ಸಾಧ್ಯ. ಮಸೂದೆಯನ್ನು ಮುಕ್ತಕಂಠದಿಂದ ಸ್ವಾಗತಿಸಿರುವ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ 15 ಸಚಿವರನ್ನು ಕೈಬಿಡಲು ಸಿದ್ಧರಾಗಬೇಕು.

ಸಂಪುಟದ ಗಾತ್ರಕ್ಕೆ ಕಡಿವಾಣ ಹಾಕುವ ಹೊಸ ಮಸೂದೆ ಉದ್ದೇಶ ಸಾಧನೆಯಲ್ಲಿ ಸಫಲವಾಗಬಹುದೇ? ರಂಗೋಲಿ ಕೆಳಗೆ ನುಸುಳುವ ಜಾಣ್ಮೆಯ ರಾಜಕಾರಣಿಗಳು ಇರುವವರೆಗೆ ಇಂತಹ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗದು.

ಮುಂದಿನ ದಿನಗಳಲ್ಲಿ ಸಚಿವರ ಸಂಖ್ಯೆ ಕಡಿಮೆಯಾಗಬಹುದು. ಆದರೆ ಸಚಿವರ ಸ್ಥಾನಮಾನ ಹೊಂದಿರುವ ಹುದ್ದೆಗಳ ಸಂಖ್ಯೆ ಹೆಚ್ಚಬಹುದು. ಸಚಿವ ಪದವಿ ಆಕಾಂಕ್ಷಿಗಳೆಲ್ಲಾ ನಿಗಮ-ಮಂಡಳಿಗಳ ಅಧ್ಯಕ್ಷ ಸ್ಥಾನಗಳಲ್ಲಿ ವಿರಾಜಮಾನರಾಗಬಹುದು. ಸಚಿವರ ಸ್ಥಾನಮಾನದ ವಿಶೇಷ ಸಲಹೆಗಾರರ ಹೊಸ ಅಲಂಕಾರಿಕ ಹುದ್ದೆಗಳು ಸೃಷ್ಟಿಯಾಗಬಹುದು. ಸಚಿವ ಪದವಿ ಕಳೆದುಕೊಂಡ ರಾಜುಗೌಡ ಮರುಕ್ಷಣದಲ್ಲಿಯೇ ಸಚಿವ ಸ್ಥಾನಮಾನ ಹೊಂದಿರುವ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ಸಂಸ್ಥೆಯ ಅಧ್ಯಕ್ಷರಾಗಿ ನೇಮಕವಾದಂತೆ.

O

(21-12-2006)

ತಾನೇ ನೇಯ್ದ ಬಲೆಯಲ್ಲಿ

ನಿಯಮ 184ರ ಅಡಿಯಲ್ಲಿ ಚರ್ಚೆಗೆ ವಿರೋಧಪಕ್ಷಗಳು ಲೋಕಸಭೆಯಲ್ಲಿ ಮಂಡಿಸಿದ್ದ ಗೊತ್ತುವಳಿ ರಾಜ್ಯ ಸರ್ಕಾರದ ಅಂತರಿಕ ವಿಚಾರದಲ್ಲಿ ಮಧ್ಯಪ್ರವೇಶಿಸುವ ಪ್ರಯತ್ನವಾಗಿತ್ತೇ? ಹಾಗಿದ್ದರೆ ನಿಯಮ 170ರ ಅಡಿಯಲ್ಲಿ ಚರ್ಚೆಗೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು ಮಂಡಿಸಿದ ಇನ್ನಷ್ಟು ಕಟುವಾದ ಗೊತ್ತುವಳಿಯೂ ಅದೇ ಉದ್ದೇಶ ಹೊಂದಿರಬೇಕಲ್ಲವೇ? "ಹಾಗೇನಿಲ್ಲ. ಅಲ್ಲಿ ಅದೇ ಸರಿ. ಇಲ್ಲಿ ಇದೇ ಸರಿ" ಎನ್ನುತ್ತಿದೆ ಸರ್ಕಾರ.

"ದೇಶದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ಗುಜರಾತ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ರಕ್ಷಣೆ ನೀಡುವಲ್ಲಿ ಆಡಳಿತ ವಿಫಲವಾಗಿರುವ ಬಗ್ಗೆ ಸದನ ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ" ಎನ್ನುವ ಸಾಮಾನ್ಯರೂಪದ ಸರಳ ಗೊತ್ತುವಳಿಯನ್ನು ಸರ್ಕಾರ ಲೋಕಸಭೆಯಲ್ಲಿ ವಿರೋಧಿಸಿದೆ.

ಅದೇ ಸರ್ಕಾರ "ಕೇಂದ್ರ ಸರ್ಕಾರ ಸಂವಿಧಾನದ 355 ಅಧಿನಿಯಮದಡಿ ಗುಜರಾತ್‌ನಲ್ಲಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಬೇಕು.." ಎಂದು ವಿರೋಧ ಪಕ್ಷಗಳು ಮಂಡಿಸಿದ ಇನ್ನಷ್ಟು ಕಟುವಾದ ಗೊತ್ತುವಳಿಯನ್ನು ರಾಜ್ಯಸಭೆಯಲ್ಲಿ ಅಕ್ಷರಶಃ ಒಪ್ಪಿಕೊಂಡಿದೆ.

ಕೇವಲ ಗೊತ್ತುವಳಿಗಳ ಶಬ್ದಾರ್ಥದ ಮೇಲೆಯೇ ತೀರ್ಮಾನ ಕೈಗೊಳ್ಳುವುದಿದ್ದರೆ ಕೇಂದ್ರ ಸರ್ಕಾರ ಲೋಕಸಭೆಯ ಗೊತ್ತುವಳಿಯನ್ನು ಒಪ್ಪಿಕೊಳ್ಳಬೇಕಿತ್ತು ಮತ್ತು ರಾಜ್ಯಸಭೆಯ ಗೊತ್ತುವಳಿಯನ್ನು ತಿರಸ್ಕರಿಸಬೇಕಾಗಿತ್ತು. ಲೋಕಸಭೆಯ ಗೊತ್ತುವಳಿ ನಿಜವಾದ ಅರ್ಥದಲ್ಲಿ ಸರ್ಕಾರದ ಪರವಾಗಿ ಇತ್ತು. ವಿರೋಧಪಕ್ಷಗಳ ವಿರುದ್ಧವಾಗಿತ್ತು. ಕೇವಲ ಮೂರು ರಾಜ್ಯಗಳಲ್ಲಿ ಮಾತ್ರ ಬಿಜೆಪಿ ಸರ್ಕಾರವಿರುವಾಗ "ದೇಶದ ವಿವಿಧ ಭಾಗಗಳ ಪರಿಸ್ಥಿತಿಯನ್ನು ಚರ್ಚೆಗೆ ಸಿಕ್ಕ ಅವಕಾಶವನ್ನು ಅದು ಯಾಕೆ ಕಳೆದುಕೊಳ್ಳಬೇಕಾಗಿತ್ತು?

ಈ ಗೊತ್ತುವಳಿ ಒಂದು ರೀತಿಯಲ್ಲಿ ವಿರೋಧ ಪಕ್ಷಗಳು ತಮ್ಮ ಕಾಲಮೇಲೆ ತಾವೇ ಹಾಕಿಕೊಂಡ ಕಲ್ಲುಚಪ್ಪಡಿಯಾಗಿತ್ತು. ಲೋಕಸಭಾ ಉಪಾಧ್ಯಕ್ಷರು ನಿಯಮ 184ರಡಿ ಚರ್ಚೆಗೆ ಅವಕಾಶ ನೀಡಿದಾಗ ಕುಣಿದಾಡಿದ್ದ ವಿರೋಧ ಪಕ್ಷಗಳಿಗೆ, ನಂತರ ಗೊತ್ತುವಳಿಯ ಶಬ್ದರೂಪದ ವಿಶ್ಲೇಷಣೆ ಕಂಡು ನಿರಾಶೆಯಾಗಿತ್ತು. ಆದರೆ ಸೋಲು-ಗೆಲುವುಗಳ ಲೆಕ್ಕಾಚಾರಕ್ಕಷ್ಟೇ ತನ್ನ ಚಿಂತನೆಯನ್ನು ಸೀಮಿತಗೊಳಿಸಿದ ಕೇಂದ್ರ ಸರ್ಕಾರ, ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಲಿಲ್ಲ. 1984ರ ಸಿಕ್ಖರ ಗಲಭೆ, 54 ವರ್ಷಗಳಲ್ಲಿ ಕಾಂಗ್ರೆಸ್ ನಡೆಸಿದ ಹಿಂಸಾಚಾರ-ಅತ್ಯಾಚಾರಗಳಿಗೆ ಮಾತ್ರ ತನ್ನ ವಾಗ್ದಾಳಿಯನ್ನು ಸೀಮಿತಗೊಳಿಸಿತು.

ಹದಿನಾರು ಗಂಟೆ ಕಾಲ ನಡೆದ ಚರ್ಚೆಯಲ್ಲಿ ಜನಮುಟ್ಟುವ ರೀತಿಯಲ್ಲಿ ಅರ್ಥಪೂರ್ಣವಾಗಿ ಮಾತನಾಡಿದ್ದು ಲೋಕಜನಶಕ್ತಿ ನಾಯಕ ರಾಮ್ ವಿಲಾಸ್ ಪಾಸ್ವಾನ್. ಈ ಗೊತ್ತುವಳಿಯನ್ನು ವಿರೋಧಿಸಲು ಏನು ಕಾರಣವಿದೆ ಎಂದು ಕೇಳಿದ ಅವರು, ಬೆಚ್ಚಿಯಲ್ಲಿ ದಲಿತರ ಹತ್ಯೆ ನಡೆದಾಗ ತಾನು ನಿಯಮ 184ರಡಿ ಮಂಡಿಸಿದ ವಾಗ್ದಂಡನಾ ಗೊತ್ತುವಳಿಯನ್ನು ಮೊರಾರ್ಜಿದೇಸಾಯಿ ಸರ್ಕಾರವೇ ಒಪ್ಪಿಕೊಂಡ ಘಟನೆಯನ್ನು ಉಲ್ಲೇಖಿಸಿದರು. ಆಗ ಸದನದಲ್ಲಿ ಸಾಸಿವೆ ಬಿದ್ದರೂ ಕೇಳುವಷ್ಟು ನಿಶ್ಶಬ್ಧ ನೆಲೆಸಿತ್ತು.

ಪಾಸ್ವಾನ್ ಮಾತಿನಿಂದಲೇ ಪ್ರೇರಣೆ ಪಡೆದಂತೆ ವಾಜಪೇಯಿ ಅವರು ಕೊನೆಹಂತದಲ್ಲಿ ಸಹಮತದ ಗೊತ್ತುವಳಿ ಮಂಡನೆಯ ಪ್ರಸ್ತಾಪ ಮುಂದಿಟ್ಟರು. ಆಗ ಪರಿಸ್ಥಿತಿ ಕೈಮೀರಿ ಹೋಗಿತ್ತು. ವಿರೋಧ ಪಕ್ಷಗಳು ಎನ್‌ಡಿಎಯೊಳಗಿನ ಬಿಕ್ಕಟ್ಟನ್ನು ಜಗಜ್ಜಾಹೀರುಗೊಳಿಸುವ ಉತ್ಸಾಹದಲ್ಲಿದ್ದರೆ, ಹೇಗಿದ್ದರೂ ಗೆಲುವು ನಮ್ಮದೇ ಎನ್ನುವ ವಿಶ್ವಾಸದಲ್ಲಿ ಸರ್ಕಾರ ತೇಲುತ್ತಿತ್ತು. ಈ ಜಗ್ಗಾಟದಲ್ಲಿ ದೇಶದ ಪಾಲಿಗೆ ಕಳಂಕ ಪ್ರಾಯವಾದ ಕೋಮು ಗಲಭೆಯ ನಿಯಂತ್ರಣದಂತಹ ವಿಷಯದಲ್ಲಿ ನಾವೆಲ್ಲಾ ಒಂದಾಗಿದ್ದೇವೆ ಎಂದು ಜಗತ್ತಿಗೆ ಸಾರಿ ಹೇಳುವ ಅಪೂರ್ವ ಅವಕಾಶವೊಂದನ್ನು ಭಾರತ ಕಳೆದುಕೊಂಡಿತು.

ರಾಜ್ಯ ಸರ್ಕಾರಗಳು ಸಂವಿಧಾನ ನಿರ್ದೇಶಿತ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾದಾಗ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರದ ಬಳಿ ಸಂವಿಧಾನದತ್ತ ಅಸ್ತ್ರಗಳಿವೆ. ವಿರೋಧ ಪಕ್ಷಗಳು ಕೇಳಿರುವುದು 355ನೇ ವಿಧಿಯನ್ವಯ ಕ್ರಮ.

ಇದರ ಪ್ರಕಾರ "ಆಂತರಿಕ ಗಲಭೆ"ಯಿಂದ ಕೂಡಿದ ಇಲ್ಲವೇ "ಸಂವಿಧಾನಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಬಹುದಾಗಿದೆ.

ಈ ಎಚ್ಚರಿಕೆಯ ಹೊರತಾಗಿಯೂ ರಾಜ್ಯ ಸರ್ಕಾರ ತಪ್ಪನ್ನು ತಿದ್ದಿಕೊಳ್ಳದಿದ್ದಲ್ಲಿ ಆಗ ಕೇಂದ್ರ ಸರ್ಕಾರ 356ನೇ ವಿಧಿಯನ್ವಯ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬಹುದು. ಕೇಂದ್ರ ಸರ್ಕಾರ ಈಗಾಗಲೇ 355 ನೇ ವಿಧಿಯನ್ವಯ ಗುಜರಾತ್ ಸರ್ಕಾರದ ವಿರುದ್ಧ ಕ್ರಮಕೈಗೊಂಡಿದೆ ಎಂದು ವಿದೇಶಾಂಗ ವ್ಯವಹಾರ ಖಾತೆ ಸಚಿವ ಜಸ್ವಂತ್ ಸಿಂಗ್ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ. ಅವರ ಪ್ರಕಾರ "ಎಫ್‌ಐಆರ್ ದಾಖಲಿಸಿಕೊಳ್ಳಲು ಸೂಚನೆ ನೀಡಿರುವುದು. ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ನೊಂದವರಿಗೆ ರಕ್ಷಣೆ ನೀಡಲು ತಿಳಿಸಿರುವುದು ಹಾಗೂ ಆರ್ಥಿಕ ನೆರವು ಒದಗಿಸಿರುವುದು" 355ನೇ ವಿಧಿಯನ್ವಯ ಕೈಗೊಂಡಿರುವ ಕ್ರಮ. ಇದನ್ನು ಒಪ್ಪದ ವಿರೋಧ ಪಕ್ಷಗಳು "ಸರ್ಕಾರ 355ನೇ ವಿಧಿಯನ್ವಯ ಗುಜರಾತ್ ಸರ್ಕಾರಕ್ಕೆ ನೋಟೀಸ್ ನೀಡದಿದ್ದರೆ ಅದು ಸದನದ ಹಕ್ಕುಚ್ಯುತಿ ಎಂದು ಪರಿಗಣಿಸಿ ದೂರು ನೀಡಲಾಗುವುದು ಎಂದು ಹೇಳುತ್ತಿವೆ." 355ನೇ ವಿಧಿಯನ್ವಯ ಕ್ರಮ ಎಂದರೆ ಕೇವಲ ಬಾಯಿಮಾತಿನ ಎಚ್ಚರಿಕೆ ಅಲ್ಲ, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಯಾಕೆ ಹೇರಬಾರದು ಎಂದು ವಿವರಣೆ ಕೇಳಿ ಕೇಂದ್ರ ಸರ್ಕಾರ ರಾಜ್ಯಕ್ಕೆ ನೋಟೀಸ್ ನೀಡಬೇಕಾಗುತ್ತದೆ ಎಂದು ಕಾಂಗ್ರೆಸ್ ಸದಸ್ಯ ಕಪಿಲ್ ಸಿಬಲ್ ರಾಜ್ಯಸಭೆಯಲ್ಲಿ ಹೇಳಿದ್ದರು. ಇದು ವಿರೋಧ ಪಕ್ಷಗಳ ಈಗಿನ ಸ್ಪಷ್ಟ ನಿಲುವು.

ಕೇಂದ್ರ ಸರ್ಕಾರ ಈಗ ಇಕ್ಕಟ್ಟಿನಲ್ಲಿ ಸಿಲುಕಿದೆ. ಗೊತ್ತುವಳಿಯನ್ನು ವಿರೋಧಿಸಿ ಸೋಲುಂಟಾಗಿದ್ದರೂ ವಿವಾದ ಅಲ್ಲಿಗೆ ಕೊನೆಗೊಳ್ಳುತ್ತಿತ್ತು. ಆದರೆ ಗೊತ್ತುವಳಿಯನ್ನು ಬೆಂಬಲಿಸುವುದಾಗಿ ಘೋಷಿಸಿ ಆಗಿದೆ. ಈಗ ಒಪ್ಪಿಕೊಂಡ ಗೊತ್ತುವಳಿಯನ್ನು ಅನುಷ್ಠಾನಕ್ಕೆ ತರಲೇಬೇಕಾಗಿದೆ. ಸರ್ಕಾರ ತಾನೇ ನೇಯ್ದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ಬಿಜೆಪಿಗೆ ಮಿತ್ರಪಕ್ಷಗಳು ಮಾತ್ರವಲ್ಲ ಬುದ್ಧಿಯೂ ಕೈಕೊಡುತ್ತಿರುವ ಹಾಗೆ ಕಾಣುತ್ತಿದೆ.

ಸೋನಿಯಾಗಾಂಧಿಗೆ "ಅಂಟಿದ ಚೂಯಿಂಗ್‌ಗಮ್ ವಿವಾದ ಈಗ ಲೋಕಪ್ರಸಿದ್ಧ. ಆದರೆ ಸೋನಿಯಾಗಾಂಧಿ ನಿಜವಾಗಿ ಜಗಿಯುತ್ತಿದ್ದದ್ದು

ಚೂಯಿಂಗ್‌ಗಮ್ ಅಲ್ಲ ಲವಂಗ ಎನ್ನುತ್ತಿದೆ ಜನಪಥ ರಸ್ತೆಯ ಹತ್ತನೇ ನಂಬರಿನ ಮನೆಯ ಮೂಲಗಳು.

ಸೋನಿಯಾ ಹೊರಗೆ ಹೊರಟಾಗೆಲ್ಲಾ ಅವರ ಕೈಯಲ್ಲಿ ಲವಂಗ ಮತ್ತು ಏಲಕ್ಕಿ ತುಂಬಿದ ಪುಟ್ಟ ಬೆಳ್ಳಿ ಕರಡಿಗೆ ಇರುತ್ತದೆ. ಅಸ್ತಮಾದಿಂದ ಬಳಲುತ್ತಿರುವ ಸೋನಿಯಾ ಗಂಟಲು ಕಟ್ಟುವ ಕಫದಿಂದ ತಪ್ಪಿಸಲು ಆಗಾಗ ಲವಂಗ ಜಗಿಯುತ್ತಿರುತ್ತಾರಂತೆ.

ನಿಯುವಮಾವಳಿಗಳ ಪ್ರಕಾರ ಸದಸ್ಯರ್‍ಯಾರೂ ಸದನದಲ್ಲಿ ನೀರನ್ನೂ ಕುಡಿಯಬಾರದು. ಮುಂಗಡಪತ್ರದ ಸಮಯದಲ್ಲಿ ಮಾತ್ರ ಈ ನಿಯಮಾವಳಿಗೆ ವಿನಾಯಿತಿ ನೀಡಿ ಹಣಕಾಸು ಸಚಿವರಿಗೆ ನೀರು ಕುಡಿಯಲು ಅವಕಾಶ ಕಲ್ಪಿಸಲಾಗುತ್ತದೆ.

ಆದರೆ ಸೋನಿಯಾ ಗಾಂಧಿ ವಿರುದ್ಧ ಚೂಯಿಂಗ್‌ಗಮ್ ತಿಂದ ಆರೋಪ ಮಾಡಿ ಕೂತ ಫರ್ನಾಂಡಿಸ್ ಸಾಹೇಬರು ಗ್ಲಾಸಲ್ಲಿ ನೀರು ತರಿಸಿ ಕುಡಿದಿದ್ದರು. ಜವಾನನೊಬ್ಬ ತೆವಳಿಕೊಂಡು ಬಂದು ಕಾಗದ ಮುಚ್ಚಿದ ನೀರಿನ ಲೋಟವನ್ನು ನೀಡಿದ್ದನ್ನು ಬಹಳಮಂದಿ ಗಮನಿಸಿರಲಿಲ್ಲ.

ಈ ನೀರು ತಂದುಕೊಡಲು ಹೇಳಿದ್ದು ಜಾರ್ಜ್‌ಗೆ ನೀರು ಕುಡಿಸಿದ ಮಣಿಶಂಕರ್ ಅಯ್ಯರ್ ಎನ್ನುತ್ತಿದ್ದಾರೆ ಕುಹಕಿಗಳು.

O

(05-05-2002

ನ್ಯಾಯಾಂಗದ ಮುಂದೆ ಮಂಡಿಯೂರಿದ ಶಾಸಕಾಂಗ?

ವಿಶೇಷ ರಕ್ಷಣೆ ಕೋಟೆಯನ್ನು ಒಡೆದು ನ್ಯಾಯಾಂಗವನ್ನು ಉತ್ತರದಾಯಿತ್ವ ಮತ್ತು ಪಾರದರ್ಶಕತೆಗೆ ತೆರೆಯಬೇಕೆಂಬ ಉದ್ದೇಶದ ಕೇಂದ್ರ ಸರ್ಕಾರದ ನ್ಯಾಯಮೂರ್ತಿ (ತನಿಖೆ) ಮಸೂದೆ ಎನ್‌ಡಿಎ ಕಾಲದ ಮಸೂದೆಗೆ ಹೋಲಿಸಿದರೆ ಹಾವಿನ ರೂಪದ ಹಗ್ಗದಂತಿದೆ. ಯುಪಿಎ ಸರ್ಕಾರ ನ್ಯಾಯಾಂಗದ ಒತ್ತಡಕ್ಕೆ ಮಣಿಯಿತೇ?

ನ್ಯಾಯಾಂಗವನ್ನು ಸುತ್ತುವರಿದಿರುವ ವಿಶೇಷರಕ್ಷಣೆಯ ಕೋಟೆಯನ್ನು ಒಡೆದು ಹಾಕಲು ರಾಜಕಾರಣಿಗಳು ಹಾರೆ-ಗುದ್ದಲಿ ಎತ್ತಿಕೊಂಡು ಬಹಳ ದಿನಗಳಾಗಿವೆ. ಸಂವಿಧಾನದ ಮೂರು ಅಂಗಗಳಾದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಸಮಾನ ಎಂದಾದರೆ ನ್ಯಾಯಾಂಗಕ್ಕೆ ಯಾಕೆ ವಿಶೇಷ ರಕ್ಷಣೆ? ತಪ್ಪು ಮಾನವಸಹಜ ಎನ್ನುವುದಾದರೆ ನ್ಯಾಯಮೂರ್ತಿಗಳು ಅದರಿಂದ ಅತೀತರಾಗಿ ಉಳಿಯಲು ಸಾಧ್ಯವೇ? - ನ್ಯಾಯಾಂಗ ಮತ್ತು ಶಾಸಕಾಂಗದ ನಡುವಿನ ಸಂಬಂಧದಲ್ಲಿ ಬಿಗುವು ಕಾಣಿಸಿಕೊಂಡಾಗೆಲ್ಲ ಈ ಪ್ರಶ್ನೆಗಳು ಚರ್ಚೆಯ ಅಂಗಳದ ತಾಪಮಾನ ಹೆಚ್ಚಿಸುವುದುಂಟು.

ಈ ಪ್ರಶ್ನೆಗಳಲ್ಲಿ ಇರುವ ತರ್ಕವನ್ನು ತಳ್ಳಿಹಾಕಲಾಗದು. ಆದರೆ ಒಮ್ಮೊಮ್ಮೆ ಪ್ರಶ್ನೆಗಳ ಮಹತ್ವವನ್ನು ಪ್ರಶ್ನಿಸುವವರ ವಿಶ್ವಾಸಾರ್ಹತೆ ನಿರ್ಧರಿಸುತ್ತದೆ. ಜನತಾ

ನ್ಯಾಯಾಲಯದಲ್ಲಿ ಆರೋಪಿ ಸ್ಥಾನದಲ್ಲಿರುವ ರಾಜಕಾರಣಿಗಳು ನ್ಯಾಯಾಂಗದತ್ತ ಬೆಟ್ಟು ಮಾಡಿದಾಗೆಲ್ಲ ಜನಾಭಿಪ್ರಾಯದ ತಕ್ಕಡಿ ಅವರ ವಿರುದ್ಧ ದಿಕ್ಕಿನೆಡೆ ವಾಲುತ್ತದೆ. ನ್ಯಾಯಂಗದಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯ ಉದ್ದೇಶದ ರಾಷ್ಟ್ರೀಯ ನ್ಯಾಯಾಂಗ ಮಂಡಳಿಯನ್ನು ರಚಿಸುವ ನಿರ್ಧಾರವನ್ನು ಕಳೆದ ವಾರ ಕೈಗೊಂಡಾಗ ಕೇಂದ್ರ ಯುಪಿಎ ಸರ್ಕಾರಕ್ಕೂ ಈ ಅಳುಕು ಕಾಡಿರಬೇಕು. ಇದರಿಂದಾಗಿಯೇ ಎನ್‌ಡಿಎ ಸರ್ಕಾರ ರೂಪಿಸಿದ್ದ ಮಸೂದೆಯನ್ನು ಅದು ಇನ್ನಷ್ಟು ತೆಳ್ಳಗೆ ಮಾಡಿದೆ.

ಸುಪ್ರೀಮ್‌ಕೋರ್ಟ್ ಇಲ್ಲವೆ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧದ ದೂರಿನ ಬಗ್ಗೆ ವಿಚಾರಣೆ ನಡೆಸುವ ಕಾನೂನುಬದ್ಧ ಕ್ರಮ ಈಗ ಇಲ್ಲ. ಈಗಿನ ವ್ಯವಸ್ಥೆಯಲ್ಲಿ ನ್ಯಾಯಮೂರ್ತಿಗಳ ವಿರುದ್ಧ ದೂರುಗಳು ಬಂದರೆ ಅವುಗಳ ಬಗ್ಗೆ ತನಿಖೆಗಾಗಿ ಸುಪ್ರೀಮ್‌ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು, ನ್ಯಾಯಮೂರ್ತಿಗಳನ್ನೊಳಗೊಂಡ ಸಮಿತಿಯನ್ನು ರಚಿಸಬಹುದು ಆದರೆ ಈ ಸಮಿತಿಗೆ ಕಾನೂನುಬದ್ಧ ಅಧಿಕಾರ ಇಲ್ಲ. ಆರೋಪ ಸ್ಥಾನದಲ್ಲಿರುವ ನ್ಯಾಯಮೂರ್ತಿಗಳು ನಿರ್ಧಾರವನ್ನು ಪ್ರಶ್ನಿಸಬಹುದು. ತನಿಖೆಯ ಸಂದರ್ಭದಲ್ಲಿ ನ್ಯಾಯಾಮೂರ್ತಿಗಳನ್ನು ಅಮಾನತ್‌ನಲ್ಲಿಡುವ ಹಾಗೂ ಇಲ್ಲ ಬೇರೆಡೆಗೆ ವರ್ಗಾವಣೆ ಮಾಡುವುದೊಂದೇ ಸುಪ್ರೀಮ್‌ಕೋರ್ಟ್ ನ್ಯಾಯಾಮೂರ್ತಿಗಳಿಗೆ ನೀಡುವ ಕಠಿಣ ಶಿಕ್ಷೆ.

ಇದನ್ನು ಮೀರಿ 'ಶಿಕ್ಷೆ' ನೀಡಲೇಬೇಕೆಂದು ಬಯಸಿದರೆ, ಸಂವಿಧಾನದತ್ತ ಅಧಿಕಾರದ ಮೂಲಕ ಸಂಸತ್‌ನ ಮೂರನೆ ಎರಡರಷ್ಟು ಬಹುಮತದ ಮೂಲಕ ನ್ಯಾಯಮೂರ್ತಿಗಳನ್ನು ಕಿತ್ತುಹಾಕಲು ಸಾಧ್ಯ. ಈ ವ್ಯವಸ್ಥೆಯು ಹುಳುಕುಗಳೇನೆಂಬುದು ಸುಪ್ರೀಮ್‌ಕೋರ್ಟ್ ನ್ಯಾಯಮೂರ್ತಿ ವಿ. ರಾಮಸ್ವಾಮಿ ಪ್ರಕರಣದಲ್ಲಿಯೇ ಸಾಬೀತಾಗಿದೆ. ನ್ಯಾಯಂಗವನ್ನು ನೀತಿ ಬದ್ಧವನ್ನಾಗಿ ಮಾಡುವ ಈ ವ್ಯವಸ್ಥೆಯನ್ನು ಸಂವಿಧಾನ ರೂಪಿಸಿ 56 ವರ್ಷಗಳಾಗಿವೆ. ಆಗ ಸುಪ್ರೀಮ್‌ಕೋರ್ಟ್‌ನಲ್ಲಿದ್ದದ್ದು ಎಂಟು ಮಂದಿ ನ್ಯಾಯಮೂರ್ತಿಗಳು, ದೇಶದಲ್ಲಿದ್ದ ಒಂಬತ್ತು ಹೈಕೋರ್ಟ್‌ಗಳಲ್ಲಿದ್ದ ನ್ಯಾಯಾಮೂರ್ತಿಗಳ ಸಂಖ್ಯೆ ಐವತ್ತನ್ನು ದಾಟಿರಲಿಲ್ಲ. ಈಗ ಹೈಕೋರ್ಟ್‌ಗಳಲ್ಲಿಯ ನ್ಯಾಯಮೂರ್ತಿಗಳ ಸಂಖ್ಯೆಯೇ 743. ಈ ಅವಧಿಯಲ್ಲಿ ಸಾರ್ವಜನಿಕ ಜೀವನದ ಗುಣಮಟ್ಟ ಕುಸಿದಿದೆ, ಸಾಮಾಜಿಕ ಮೌಲ್ಯಗಳು ಬದಲಾಗಿವೆ.

ಸುಪ್ರೀಮ್‌ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಪಿ. ಭರೂಚಾ ಅವರೇ ನ್ಯಾಯಂಗದಲ್ಲಿನ ಶೇಕಡಾ 20ರಷ್ಟು ನ್ಯಾಯಪಾಲಕರು ಭ್ರಷ್ಟರಾಗಿರುವ ಸಾಧ್ಯತೆ ಇದೆ ಎಂದು ಹೇಳಿ ಅಚ್ಚರಿ ಉಂಟುಮಾಡಿದ್ದರು. ನಿವೃತ್ತರಾದ ನಂತರ ಇನ್ನೊಬ್ಬ ಮುಖ್ಯ

ನ್ಯಾಯಮೂರ್ತಿಗಳು ಇದೇ ರೀತಿ ನ್ಯಾಯಾಂಗ ವ್ಯವಸ್ಥೆಯಲ್ಲಿನ ದೋಷದ ಬಗ್ಗೆ ವಿಷಾದದ ಮಾತುಗಳನ್ನಾಡಿದ್ದರು.

ಈ ಹಿನ್ನೆಲೆಯಲ್ಲಿಯೆ ನ್ಯಾಯಮೂರ್ತಿಗಳನ್ನೂ ಕೂಡಾ ಸಮಾಜಕ್ಕೆ ಉತ್ತರದಾಯಿತ್ವರನ್ನಾಗಿ ಮಾಡಬೇಕೆಂಬ ಕೂಗು ಎದ್ದದ್ದು. ರಾಷ್ಟ್ರೀಯ ಸಂವಿಧಾನ ಪುನರ್‌ಪರಿಶೀಲನಾ ಆಯೋಗ ಕೂಡಾ ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚನೆಗೆ ಶಿಫಾರಸು ಮಾಡಿತ್ತು.

ಈ ಹಿನ್ನೆಲೆಯಲ್ಲಿಯೇ ಮೂರು ವರ್ಷಗಳ ಹಿಂದೆ ಎನ್‌ಡಿಎ ಸ್ಥಾಪನೆಗೆ ಸಂವಿಧಾನ (98ನೇ ತಿದ್ದುಪಡಿ) ಮಸೂದೆಯನ್ನು ಮಂಡಿಸಿತ್ತು. ಅದರ ಪ್ರಕಾರ ಸುಪ್ರೀಮ್ ಕೋರ್ಟ್ ನ್ಯಾಯಮೂರ್ತಿಗಳ ಅಧ್ಯಕ್ಷತೆಯ ರಾಷ್ಟ್ರೀಯ ನ್ಯಾಯಾಂಗ ಆಯೋಗದಲ್ಲಿ ಇಬ್ಬರು ಸುಪ್ರೀಮ್‌ಕೋರ್ಟ್ ನ್ಯಾಯಮೂರ್ತಿಗಳ ಜತೆ ಕೇಂದ್ರ ಕಾನೂನು ಸಚಿವರು ಮತ್ತು ಕೇಂದ್ರ ಸರ್ಕಾರದ ಜತೆ ಸಮಾಲೋಚನೆ ನಡೆಸಿ ನಾಮ ನಿರ್ದೇಶಿತ ಗಣ್ಯರೊಬ್ಬರು ಸದಸ್ಯರಾಗಬೇಕಿತ್ತು. ಇಂತಹ ವ್ಯವಸ್ಥೆ ನ್ಯಾಯಾಂಗದೊಳಗೆ ಶಾಸಕಾಂಗದ ಹಸ್ತಕ್ಷೇಪಕ್ಕೆ ದಾರಿಮಾಡಿಕೊಡಬಹುದು. ಆಯೋಗದಲ್ಲಿರುವ ಸಚಿವರು ರಾಜಕೀಯ ಅಧಿಕಾರಬಲದಿಂದ ಇತರ ಸದಸ್ಯರ ಮೇಲೆ ತನ್ನ ಅಭಿಪ್ರಾಯ ಒಪ್ಪಿಕೊಳ್ಳುವಂತಹ ವಾತಾವರಣವನ್ನು ಸೃಷ್ಟಿಸಬಹುದು ಎಂಬ ಆತಂಕದ ಮಾತುಗಳು ಆ ದಿನಗಳಲ್ಲಿ ಕೇಳಿಬಂದಿದ್ದವು. ನ್ಯಾಯಾಂಗದ ಉತ್ತರದಾಯಿತ್ವವನ್ನು ನಿರ್ಧರಿಸುವ ವ್ಯವಸ್ಥೆಯಲ್ಲಿ ಹೊರಗಿನವರ ಹಸ್ತಕ್ಷೇಪ ಸರಿಯಲ್ಲ. ಅದು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಅಡ್ಡಿ ಉಂಟುಮಾಡಬಹುದು ಎಂದು ಹಿರಿಯ ನ್ಯಾಮೂರ್ತಿಗಳು ಕೂಡಾ ಕಳವಳ ವ್ಯಕ್ತಪಡಿಸಿದ್ದರು.

ಕೇಂದ್ರ ಕಾನೂನು ಸಚಿವ ಎಚ್.ಆರ್. ಭಾರದ್ವಾಜ್ ಈ ಆತಂಕ–ಕಳವಳಗಳಿಗೆ ಕಿವಿಗೊಟ್ಟಂತಿದೆ. ಹೊಸ ಮಸೂದೆ ಕೇವಲ ನ್ಯಾಯಮೂರ್ತಿಗಳನ್ನೊಳಗೊಂಡಿರುವ 'ಮಂಡಳಿ'ಯಷ್ಟೇ ಹೊರತು 'ಆಯೋಗ' ಅಲ್ಲ. ಪ್ರಸ್ತಾಪಿತ ರಾಷ್ಟ್ರೀಯ ನ್ಯಾಯಾಂಗ ಮಂಡಳಿಗೆ ಸುಪ್ರೀಮ್‌ಕೋರ್ಟ್ ನ್ಯಾಯಮೂರ್ತಿಗಳು ಅಧ್ಯಕ್ಷರು. ಸುಪ್ರೀಮ್‌ಕೋರ್ಟ್ ಮತ್ತು ಹೈಕೋರ್ಟ್‌ನ ತಲಾ ಇಬ್ಬರು ನ್ಯಾಯಮೂರ್ತಿಗಳ ಸದಸ್ಯರು. ಹಿಂದಿನ ಮಸೂದೆಯಲ್ಲಿ ಹೊರಗಿನವರಿಗೆ ನೀಡಲಾಗಿರುವ ಅಲ್ಪ ಪ್ರಾತಿನಿಧ್ಯದ ಬಗ್ಗೆಯೇ ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಅವರಂತಹ ಹಿರಿಯ ಕಾನೂನು ವಿದ್ವಾಂಸರು, ಆಯೋಗದಲ್ಲಿ ಕಾನೂನು ಸಚಿವರು ಮಾತ್ರವಲ್ಲ, ವಿರೋಧ ಪಕ್ಷದ ನಾಯಕ, ಓರ್ವ ಮಹಿಳೆ, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪಸಂಖ್ಯಾತ ಕೋಮಿಗೆ ಸೇರಿದ ತಜ್ಞರಿಗೂ ಪ್ರಾತಿನಿಧ್ಯ ಇರಬೇಕೆಂದು ವಾದಿಸಿದ್ದರು.

ನ್ಯಾಯಾಂಗದ ಉತ್ತರದಾಯಿತ್ವದ ಬಗೆಗಿನ ಸಂಕೀರ್ಣ ಪ್ರಶ್ನೆಗೆ ಸರಳ ಉತ್ತರ ರೂಪದಂತಿರುವ ಹೊಸ ಮಸೂದೆ ನ್ಯಾಯಮೂರ್ತಿಗಳ ನೇಮಕಾತಿಯ ಇನ್ನೊಂದು ಪ್ರಶ್ನೆಯ ಬಗ್ಗೆಯೂ ಮೌನವಾಗಿದೆ. ಸುಪ್ರೀಮ್‌ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆಯ ಕಾರ್ಯಾಂಗದ ಅಧಿಕಾರವನ್ನು ನ್ಯಾಯಾಂಗ ಕಿತ್ತುಕೊಂಡಾಗಲೇ ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚನೆಯ ಕೂಗು ಜೋರಾಗಿ ಕೇಳಿಬಂದದ್ದು.

ಎನ್‌ಡಿಎ ಕಾಲದ ಸಮಗ್ರರೂಪದ ಮಸೂದೆ ಪ್ರಸ್ತಾಪಿಸಿದ್ದ 'ರಾಷ್ಟ್ರೀಯ ನ್ಯಾಯಾಂಗ ಆಯೋಗ' ನ್ಯಾಯಮೂರ್ತಿಗಳ ನೇಮಕ ಮತ್ತು ವರ್ಗಾವಣೆಯ ಅಧಿಕಾರವನ್ನು ಕೂಡಾ ಒಳಗೊಂಡಿತ್ತು. ನ್ಯಾಯಮೂರ್ತಿಗಳು ನೇಮಕದ ಸಮಯದಲ್ಲಿ ತಮ್ಮ ಅಸ್ತಿಘೋಷಣೆ ಮಾಡಬೇಕೆಂದು ಆ ಮಸೂದೆ ಹೇಳಿತ್ತು. ಆದರೆ ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಸಿದ್ಧಪಡಿಸಲಾದ ನ್ಯಾಯಮೂರ್ತಿ (ತನಿಖೆ) ಮಸೂದೆ 2006ರಲ್ಲಿ ಅದರ ಬಗ್ಗೆ ಪ್ರಸ್ತಾವ ಇಲ್ಲ.

ನ್ಯಾಯಮೂರ್ತಿಗಳ ನೇಮಕದಲ್ಲಿ ನ್ಯಾಯಾಂಗಕ್ಕೆ ಈ ಪರಮಾಧಿಕಾರವನ್ನು ನೀಡಿದ್ದು 1993ರ 'ಸೆಕೆಂಡ್ ಜಡ್ಜಸ್' ಪ್ರಕರಣ. ಇದಕ್ಕಾಗಿ ಸುಪ್ರೀಮ್‌ಕೋರ್ಟ್‌ನ ಒಂಬತ್ತು ಸದಸ್ಯರ ನ್ಯಾಯಪೀಠ ಬಹುಮತದ ತೀರ್ಪಿನಲ್ಲಿ ಸಂವಿಧಾನದ 124ನೇ ಪರಿಚ್ಛೇದವನ್ನು ಪುನರ್‌ವ್ಯಾಖ್ಯಾನಿಸಿತ್ತು. 1998ರ 'ಥರ್ಡ್ ಜಡ್ಜಸ್' ಪ್ರಕರಣದ ತೀರ್ಪು ಕೂಡಾ ಆ ವ್ಯಾಖ್ಯಾನವನ್ನು ದೃಢೀಕರಿಸಿತ್ತು. ಈಗಿನ ವ್ಯವಸ್ಥೆಯಲ್ಲಿ ನ್ಯಾಯಮೂರ್ತಿಗಳ ನೇಮಕದ ಬಗ್ಗೆ ಸುಪ್ರೀಮ್‌ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳದ್ದೇ ಅಂತಿಮ ನಿರ್ಧಾರ. ಆ ಬಗ್ಗೆ ಕೇಂದ್ರ ಸರ್ಕಾರದ 'ಸಲಹೆ' ಪಡೆದರೆ ಸಾಕು. ಅನುಮತಿ ಪಡೆಯಬೇಕಾಗಿಲ್ಲ ಎನ್ನುವುದು ತೀರ್ಪಿನ ಸಾರಾಂಶ.

ಮುಖ್ಯ ನ್ಯಾಯಮೂರ್ತಿಗಳು ಇಬ್ಬರು ಹಿರಿಯ ಸಹದ್ಯೋಗಿ ನ್ಯಾಯಮೂರ್ತಿಗಳ ಜತೆ ಸಮಾಲೋಚನೆ ನಡೆಸಿ ಕೈಗೊಳ್ಳುವ ನಿರ್ಧಾರವನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳಲೇಬೇಕು. ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಪಾರದರ್ಶಕತೆ ಇರಬೇಕೆಂದು ವಾದಿಸುತ್ತಾ ಬಂದ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳು ಕೂಡಾ ಸೇರಿತ್ತು. ಆದರೆ ಹೊಸ ಮಸೂದೆಯನ್ನು ಅವಲೋಕಿಸಿದರೆ ಯುಪಿಎ ಸರ್ಕಾರ ನ್ಯಾಯಾಂಗದ ಮುಂದೆ ಮಂಡಿಯೂರಿದಂತಿದೆ.

ದೆಹಲಿಯ ಅಕ್ರಮ ಕಟ್ಟಡಗಳನ್ನು ಮುಚ್ಚಬೇಕೆಂದು ಸುಪ್ರೀಮ್‌ಕೋರ್ಟ್ ನೀಡಿರುವ ಆದೇಶವನ್ನು ವಿರೋಧಿಸಿ ದೆಹಲಿಯಲ್ಲಿ ವರ್ತಕರು ಮೂರು ದಿನ

ಬಂದ್ ನಡೆಸಿ ಜನಜೀವನ ಸ್ಥಗಿತಗೊಳಿಸಿದರು. ಈ ಒತ್ತಡಕ್ಕೆ ಮಣಿಯದ ಸುಪ್ರೀಮ್‌ಕೋರ್ಟ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ತಪರಾಕಿ ನೀಡಿದ ಮರುದಿನ ಪ್ರತಿಭಟನೆಕಾರರು ಬೀದಿಗಳಿಂದ ಮಾಯ. ದಂತಗೋಪುರದಲ್ಲಿರುವ ನ್ಯಾಯಮೂರ್ತಿಗಳಿಗೆ ನೆಲದ ವಾಸ್ತವದಲ್ಲಿ ಅರಿವು ಇರುವುದಿಲ್ಲ ಎಂದು ಹೇಳುವವರು ಯಾರು?

O

(13-11-2006)

ಸಂವಿಧಾನದ 'ಮನೆ ಜಗಳ'

ಲೋಕಸಭಾ ಅಧ್ಯಕ್ಷ ಸೋಮನಾಥ ಚಟರ್ಜಿ ಅವರು ತಮ್ಮ ಆಯುಷ್ಯದ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಸಂಸತ್‌ನಲ್ಲಿ (1971ರಿಂದ ಹತ್ತು ಬಾರಿ ಆಯ್ಕೆ) ಕಳೆದವರು. ಪ್ರಜಾಪ್ರಭುತ್ವದ ಗುಡಿಯ ಬಗ್ಗೆ ಅವರದ್ದು ಕರುಳಬಳ್ಳಿಯ ಸಂಬಂಧ. ಶಾಸಕಾಂಗದ ಘನತೆ-ಗೌರವಕ್ಕೆ ಕುಂದು ಬಂದಾಗಲೆಲ್ಲಾ ಅವರು ಭೀಷ್ಮಾಚಾರ್ಯನ ರೀತಿ ರಕ್ಷಣೆಗೆ ಧಾವಿಸಿದವರು. ಸಭಾಧ್ಯಕ್ಷರ ಸ್ಥಾನದಲ್ಲಿ ಕೂತ ಅವರ ಈಗಿನ ಪಾತ್ರ 'ಆಟಗಾರ'ನಿಗಿಂತ ಹೆಚ್ಚಾಗಿ 'ಅಂಪೈರ್' ರೀತಿಯದ್ದು.

ಆದರೆ ಮೊನ್ನೆ ಜಾರ್ಖಂಡ್ ಸರ್ಕಾರ ರಚನೆ ವಿವಾದದ ಬಗ್ಗೆ ಸುಪ್ರೀಂಕೋರ್ಟ್ ನೀಡಿದ ಮಧ್ಯಂತರ ತೀರ್ಪನ್ನು ಕೇಳಿದಾಗ ಅವರೊಳಗಿರುವ ಸಂಸದೀಯಪಟು ಸುಮ್ಮನಿರಲಿಲ್ಲ. ಸುಪ್ರೀಂಕೋರ್ಟ್ ತೀರ್ಪನ್ನು ರಾಷ್ಟ್ರಪತಿಗಳ ಅವಗಾಹನೆಗೆ ಕಳುಹಿಸುವ ಮಾತನಾಡಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲು ಅವರು ಕಾರಣರಾದರು. ಸದ್ಯಕ್ಕೆ ಆ ವಿವಾದ ಬಗೆಹರಿದಂತಿದೆ. ಆದರೆ ಸಭಾಧ್ಯಕ್ಷರ ನಡವಳಿಕೆಯ ಸರಿ-ತಪ್ಪುಗಳ ಜತೆ ನ್ಯಾಯಾಂಗ ಮತ್ತು ಶಾಸಕಾಂಗಗಳ ನಡುವಿನ ಘರ್ಷಣೆಯ ಹಳೆಯ ಚರ್ಚೆ ಮತ್ತೆ ಪ್ರಾರಂಭವಾಗಿದೆ.

ಸಂಸತ್‌ನ ಪಾರಮ್ಯ ಮತ್ತು ನ್ಯಾಯಾಂಗದ ಸ್ವಾತಂತ್ರ್ಯದ ನಡುವಿನ ಘರ್ಷಣೆ ಇಂದು ನಿನ್ನೆಯದಲ್ಲ. ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು

ಸಂವಿಧಾನದ ಮೂರು ಮುಖ್ಯ ಅಂಗಗಳು. ಇವುಗಳು ಪರಸ್ಪರ ಸೌಹಾರ್ದಯುತವಾಗಿ ಕಾರ್ಯನಿರ್ವಹಿಸಿಕೊಂಡು ಹೋಗುವಂತಹ ಸಮತೋಲನದ ವ್ಯವಸ್ಥೆ ಸಂವಿಧಾನದ ಆಂತರಿಕ ರಚನೆಯಲ್ಲಿಯೇ ಇದೆ. ಆದರೂ ಇವುಗಳ ನಡುವೆ, ಅದರಲ್ಲೂ ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಆಗಾಗ ಘರ್ಷಣೆಯ ಕಿಡಿ ಹಾರುವುದುಂಟು.

ಇತ್ತೀಚೆಗೆ ಶಾಸಕಾಂಗ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಎಡವಿ ಬೀಳುವುದು ಪಚ್ಚಾದಂತೆಲ್ಲಾ ನ್ಯಾಯಾಂಗ ಹೆಚ್ಚುಹೆಚ್ಚು ಕ್ರಿಯಾಶೀಲವಾಗತೊಡಗಿದೆ. ಶಾಸಕಾಂಗ ಮತ್ತು ಕಾರ್ಯಾಂಗ ಕರ್ತವ್ಯ ಪಾಲನೆ ಮಾಡಿದ್ದರೆ ನ್ಯಾಯಾಂಗದ ಮಧ್ಯಪ್ರವೇಶವೇ ಆಗುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ರಸ್ತೆಗುಡಿಸಲು, ಕುಡಿಯುವ ನೀರು ಪೂರೈಸಲು ಕೂಡಾ ನ್ಯಾಯಾಲಯ ಆದೇಶ ನೀಡಬೇಕಾದ ಪರಿಸ್ಥಿತಿ ಇದೆ. ಶಾಸಕಾಂಗದ ಪಾರಮ್ಯದ ಬಗ್ಗೆ ಮಾತನಾಡುವವರು ಇದಕ್ಕೆ ಏನು ಹೇಳುತ್ತಾರೆ? ಎಂದು ಪ್ರಶ್ನಿಸುತ್ತಾರೆ ಹಿರಿಯ ನ್ಯಾಯವಾದಿಗಳೊಬ್ಬರು.

ಇಷ್ಟು ಮಾತ್ರವಲ್ಲ, ಶಾಸಕಾಂಗ ಹಲವಾರು ಬಾರಿ ತನ್ನ ಜವಾಬ್ದಾರಿಯನ್ನು ನ್ಯಾಯಾಂಗದ ಮೇಲೆ ಹೊರಿಸಿ ತಪ್ಪಿಸಿಕೊಳ್ಳುವುದುಂಟು. ಮಂಡಲ ಆಯೋಗದ ವರದಿ ವಿರುದ್ಧ ಚಳುವಳಿ ತೀವ್ರಗೊಂಡಾಗ ಸರ್ಕಾರ ಅದರ ಜಾರಿಯ ಹೊಣೆಯನ್ನು ನ್ಯಾಯಾಲಯಕ್ಕೆ ಹೊತ್ತುಹಾಕಿತು. ಬಾಬರಿ ಮಸೀದಿಯ ವಿವಾದದ ಚೆಂಡನ್ನು ಕೂಡಾ ಸರ್ಕಾರ ನ್ಯಾಯಾಲಯದ ಅಂಗಳಕ್ಕೆ ಎಸೆದಿದೆ. ಕರ್ನಾಟಕದ ಸಿಇಟಿ ವಿವಾದ ಇದಕ್ಕೆ ಇನ್ನೊಂದು ಉದಾಹರಣೆ. ಈ ವಿವಾದಗಳನ್ನು ಸೂಕ್ತ ಕಾನೂನು ರಚನೆ ಮೂಲಕ ಬಗೆಹರಿಸುವ ದಿಟ್ಟತನವನ್ನು ಸಂಸತ್ ಯಾಕೆ ತೋರಿಸುತ್ತಿಲ್ಲ ಎಂದು ಕೇಳುತ್ತಾರೆ ನ್ಯಾಯಾಂಗದ ಸಮರ್ಥಕರು.

ಶಾಸಕಾಂಗ (ಸಂಸತ್) ಕಾನೂನನ್ನು ರೂಪಿಸುತ್ತದೆ. ನ್ಯಾಯಾಂಗ ಅದನ್ನು ವ್ಯಾಖ್ಯಾನಿಸುತ್ತದೆ. ನ್ಯಾಯಾಂಗದ ಜವಾಬ್ದಾರಿ ಅಷ್ಟಕ್ಕೆ ಸೀಮಿತವಾಗಿಲ್ಲ. ಸಂಸತ್ ರೂಪಿಸಿದ ಕಾನೂನು ಸಂವಿಧಾನದ ಆಶಯವನ್ನು ಉಲ್ಲಂಘಿಸಿದೆ ಎಂಬ ಅಭಿಪ್ರಾಯಕ್ಕೆ ಬಂದರೆ ಸುಪ್ರೀಂಕೋರ್ಟ್ ಅದನ್ನು ರದ್ದುಮಾಡಬಹುದು. ಸಂವಿದಾನದ ಪರಿಚ್ಛೇದ 13ರ ಪ್ರಕಾರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿ ಕಾನೂನು ರೂಪಿಸುವ ಅಧಿಕಾರ ಸಂಸತ್‌ಗೆ ಇಲ್ಲ. ಆದ್ದರಿಂದ ಶಾಸಕಾಂಗಕ್ಕಿಂತ ನ್ಯಾಯಾಂಗವೇ ಸರ್ವೋಚ್ಛ ಎನ್ನುವುದು ಒಂದು ಅಭಿಪ್ರಾಯ.

ಆದರೆ ಇದನ್ನು ಶಾಸಕಾಂಗದ ಸಮರ್ಥಕರು ಒಪ್ಪುವುದಿಲ್ಲ. ಸಂಸತ್ ರೂಪಿಸಿದ ಕಾನೂನನ್ನು ನ್ಯಾಯಾಂಗ ರದ್ದುಪಡಿಸಿದಾಗ ಅದರಲ್ಲಿರುವ ತಪ್ಪುಗಳನ್ನು ತಿದ್ದಿ, ಕೊರತೆ ತುಂಬಿ ಸಂಸತ್ ಮತ್ತೆ ಕಾನೂನು ರೂಪಿಸಬಹುದು. ಅದನ್ನೂ

ನ್ಯಾಯಾಲಯ ತಿರಸ್ಕರಿಸಿದರೆ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಕಾನೂನಿನ ಸಿಂಧುತ್ವವನ್ನು ಉಳಿಸಿಕೊಳ್ಳಬಹುದು. ಆದ್ದರಿಂದ ಶಾಸಕಾಂಗವೇ ಸರ್ವೋಚ್ಚ ಎನ್ನುತ್ತಾರೆ ಜನಪ್ರತಿನಿಧಿಗಳು.

ಸಂವಿಧಾನದ ಈ ಎರಡು ಪ್ರಮುಖ ಅಂಗಗಳ ನಡುವಿನ ಘರ್ಷಣೆ ಇಂದು ನಿನ್ನೆಯದ್ದಲ್ಲ. ತನ್ನ ಪಾರಮ್ಯವನ್ನು ಉಳಿಸಿಕೊಳ್ಳಲು ಸಂಸತ್ ಎಷ್ಟು ನಿರ್ದಯವಾಗಿ ನ್ಯಾಯಾಂಗದ ಮೇಲೆ ದಾಳಿ ಮಾಡಿದೆ ಎನ್ನುವುದಕ್ಕೆ 'ಗೋಲಕನಾಥ್' ಮತ್ತು 'ಕೇಶವಾನಂದ ಭಾರತಿ' ಪ್ರಕರಣಗಳೇ ಸಾಕ್ಷಿ.

ಇದು ಪ್ರಾರಂಭವಾಗಿದ್ದು ಬಿಹಾರದಿಂದ. 1950ರಲ್ಲಿ ಬಿಹಾರ ಭೂ ಸುದಾರಣಾ ಕಾಯಿದೆಯನ್ನು ಪಟ್ನಾ ಹೈಕೋರ್ಟ್ ರದ್ದುಪಡಿಸಿದಾಗ ನೆಹರೂ ನೇತೃತ್ವದ ಸರ್ಕಾರ ನ್ಯಾಯಾಲಯದ ತೀರ್ಪನ್ನು ಅಸಿಂಧುಗೊಳಿಸಲು ಸಂವಿಧಾನಕ್ಕೆ ಮೊದಲ ತಿದ್ದುಪಡಿ ಮಾಡಿತು. ಅದನ್ನು ಸುಪ್ರೀಂಕೋರ್ಟ್ ಕೂಡಾ ಎತ್ತಿಹಿಡಿಯಿತು. ಆ ನಂತರದ ದಿನಗಳಲ್ಲಿ ನ್ಯಾಯಾಲಯದ ತೀರ್ಪುಗಳನ್ನು ರದ್ದುಗೊಳಿಸಲು ಮೇಲಿಂದ ಮೇಲೆ ಸಂವಿಧಾನಕ್ಕೆ ಹಲವಾರು ಬಾರಿ ತಿದ್ದುಪಡಿ ನಡೆಸಲಾಯಿತು.

ಇದನ್ನು ಗಮನಿಸಿದ ನ್ಯಾಯಮೂರ್ತಿ ಹಿದಾಯುತ್ ಉಲ್ಲಾ ಅವರು ಸುಪ್ರೀಂ ಕೋರ್ಟ್ ಆದೇಶಗಳನ್ನು ತಿರಸ್ಕರಿಸುವ ಉದ್ದೇಶದಿಂದಲೇ ಸಂವಿಧಾನಕ್ಕೆ ತಿದ್ದುಪಡಿ ನಡೆಯುತ್ತಿರುವಂತಿದೆ ಎಂದು ಕಳವಳ ವ್ಯಕ್ತಪಡಿಸಿದ್ದರು. ಆದರೆ ಗೋಲಕನಾಥ್ ಪ್ರಕರಣದಲ್ಲಿ ಹನ್ನೊಂದು ನ್ಯಾಯಮೂರ್ತಿಗಳ ಪೀಠ 368ನೇ ಪರಿಚ್ಛೇದ ಸಂವಿಧಾನದ ತಿದ್ದುಪಡಿಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹೇಳಿದ್ದನ್ನು ತಿದ್ದುಪಡಿಗೆ ನೀಡಿರುವ ಅಧಿಕಾರ ಎಂದು ಭಾವಿಸಬೇಕಾಗಿಲ್ಲ. ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ಮಾಡುವ ಅಧಿಕಾರ ಸಂಸತ್‌ಗೆ ಇಲ್ಲ ಎಂಬ ಐತಿಹಾಸಿಕ ತೀರ್ಪು ನೀಡಿತು.

ಇದರಿಂದ ಮೊದಲ ಬಾರಿಗೆ ಶಾಸಕಾಂಗ ತಳಮಳಕ್ಕೀಡಾಗಿತ್ತು. ಆ ತೀರ್ಪು ಹೆಚ್ಚು ಚರ್ಚೆಗೊಳಗಾದದ್ದು 1971ರಲ್ಲಿ. ಪ್ರಧಾನಿ ಇಂದಿರಾಗಾಂಧಿ ಬ್ಯಾಂಕ್ ರಾಷ್ಟ್ರೀಕರಣ ಮತ್ತು ರಾಜಧನ ರದ್ದತಿಯ ನಿರ್ಧಾರ ಕೈಗೊಂಡಾಗ, ಇಂದಿರಾಗಾಂಧಿ ಇದನ್ನೇ ಪ್ರಮುಖ ವಿಷಯವನ್ನಾಗಿ ಜನರ ಮುಂದಿಟ್ಟು ಚುನಾವಣೆ ಎದುರಿಸಿ ವಿಜಯಿಯಾದರು. ಚುನಾವಣೆಯಲ್ಲಿ ಗೆಲುವು ದೊರೆತ ತಕ್ಷಣ ಇಂದಿರಾಗಾಂಧಿ ಸಂವಿಧಾನಕ್ಕೆ 24 ಮತ್ತು 25ನೇ ತಿದ್ದುಪಡಿ ಮಾಡಿದರು. ಕೇಶವಾನಂದ ಭಾರತಿ ಪ್ರಕರಣದ ವಿಚಾರಣೆಯಲ್ಲಿ ಈ ತಿದ್ದುಪಡಿಯನ್ನು ಪರಿಶೀಲನೆಗೊಳಪಡಿಸಿದ ಮುಖ್ಯ ನ್ಯಾಯಮೂರ್ತಿ ಸಿಕ್ರಿ ನೇತೃತ್ವದ 13 ನ್ಯಾಯಾಮೂರ್ತಿಗಳ ಸುಪ್ರೀಂಕೋರ್ಟ್ ಪೀಠ 7:6ರ ತೆಳುವಾದ ಬಹುಮತದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಸಂಸತ್‌ನ

ಅಧಿಕಾರವನ್ನು ಮೊಟಕುಗೊಳಿಸಿ ತೀರ್ಪು ನೀಡಿತು. ಸಂವಿಧಾನದ ಮೂಲ ರಚನೆಯನ್ನು 'ಕಿತ್ತುಹಾಕುವ' ಇಲ್ಲವೇ 'ನಾಶಮಾಡುವ' ಪ್ರಯತ್ನವನ್ನು ವಿಫಲಗೊಳಿಸಲು ಈ ನಿಯಂತ್ರಣ ಅಗತ್ಯ ಎಂದು ಪೀಠ ಸಾರಿತು.

ಈ ತೀರ್ಪಿಗೆ ತಕ್ಕ 'ಪ್ರತಿಫಲ'ವನ್ನು ತೀರ್ಪಿಗೆ ಸಹಮತ ವ್ಯಕ್ತಪಡಿಸಿದ್ದ ಮೂವರು ನ್ಯಾಯಮೂರ್ತಿಗಳು ಪಡೆದರು. ತೀರ್ಪಿನ ನಂತರದ ಎರಡು ದಿನಗಳಲ್ಲಿ ಮುಖ್ಯನ್ಯಾಯಮೂರ್ತಿ ಸಿಕ್ರಿ ನಿವೃತ್ತರಾದಾಗ ಅವರ ನಂತರದ ಸ್ಥಾನದಲ್ಲಿದ್ದ ನ್ಯಾ. ಶೆಲಟ್, ನ್ಯಾ.ಕೆ.ಎಸ್. ಹೆಗ್ಡೆ ಮತ್ತು ನಾ. ಗ್ರೋವರ್ ಅವರ ಜೇಷ್ಠತೆಯನ್ನು ನಿರ್ಲಕ್ಷಿಸಿ ತೀರ್ಪಿಗೆ ವಿರೋಧ ವ್ಯಕ್ತಪಡಿಸಿದ ನ್ಯಾ.ಎ.ಎನ್.ರೇ ಅವರನ್ನು ಮುಖ್ಯ ನ್ಯಾಯಮೂರ್ತಿಯನ್ನಾಗಿ ಸರ್ಕಾರ ನೇಮಿಸಿತು. ನಿರೀಕ್ಷೆಯಂತೆ ನಿರ್ಲಕ್ಷಿತ ಮೂವರು ನ್ಯಾಯಾಮೂರ್ತಿಗಳು ರಾಜೀನಾಮೆ ನೀಡಿದರು. ಕೇಶವಾನಂದ ಭಾರತಿ ಪ್ರಕರಣದ ತೀರ್ಪನ್ನು ಅಸಿಂಧುಗೊಳಿಸಲು ಹಲವಾರು ಬಾರಿ ಸರ್ಕಾರ ಪ್ರಯತ್ನ ನಡೆಯಿತು. ಅಂತಿಮವಾಗಿ ಸಂಸತ್‌ನ ಪಾರಮ್ಯಕ್ಕೆ ಸಮರ್ಥನೆ ನೀಡುವ ರೀತಿಯಲ್ಲಿ ಮತ್ತೆ ಸಂವಿಧಾನಕ್ಕೆ 42ನೇ ತಿದ್ದುಪಡಿ ಮಾಡಲಾಯಿತು. ಇದನ್ನು ಸುಪ್ರೀಂಕೋರ್ಟ್ ಎತ್ತಿಹಿಡಿಯಿತು. ಇದರ ವಿಚಾರಣೆ ನಡೆಸಿದ ಪೀಠದ ಸದಸ್ಯರಾಗಿದ್ದ ಐವರು ನ್ಯಾಯಮೂರ್ತಿಗಳಲ್ಲಿ ನ್ಯಾ.ಎಚ್.ಆರ್. ಖನ್ನಾ ಮಾತ್ರ ತಮ್ಮ ವಿರೋಧ ಸೂಚಿಸಿದ್ದರು. ಈ ವಿರೋಧಕ್ಕೆ ಅವರೂ ಶಿಕ್ಷೆ ಅನುಭವಿಸಿದರು. ಮುಖ್ಯ ನ್ಯಾಯಮೂರ್ತಿ ಎ.ಎನ್.ರೇ ನಿವೃತ್ತರಾದಾಗ ಅವರ ನಂತರದ ಸ್ಥಾನದಲ್ಲಿದ್ದ ನ್ಯಾ.ಖನ್ನಾ ಅವರನ್ನು ಸರ್ಕಾರ ನಿರ್ಲಕ್ಷಿಸಿ ನ್ಯಾ.ಎಂ.ಎಚ್. ಬೇಗ್ ಅವರನ್ನು ಮುಖ್ಯ ನ್ಯಾಯಮೂರ್ತಿಗಳನ್ನಾಗಿ ಮಾಡಿತು. ಇಂದಿರಾಗಾಂಧಿ ಸೋಲಿನ ನಂತರ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಸಂವಿಧಾನದ 42ನೇ ತಿದ್ದುಪಡಿಯ ಹಲವಾರು ಘಾತುಕ ಅಂಶಗಳನ್ನು ಬದಲಾಯಿಸಿತು. ನ್ಯಾಯಾಂಗ ಪರಿಶೀಲನೆ ಸಂವಿಧಾನದ ಮೂಲ ಲಕ್ಷಣಗಳಲ್ಲೊಂದು. ಅದನ್ನು ತಿದ್ದುಪಡಿ ಮೂಲಕ ಕಿತ್ತುಹಾಕುವಂತಿಲ್ಲ ಎಂದು ಈಗಿನ ಕಾನೂನು ಹೇಳುತ್ತದೆ. ಆದರೆ ಸಂವಿಧಾನದ 'ಮನೆ ಜಗಳ' ಮಾತ್ರ ಆಗಾಗ ಮರುಕಳಿಸುತ್ತಲೇ ಇರುತ್ತದೆ.

ವಾಸ್ತವ ಸ್ಥಿತಿ ಏನೆಂದರೆ, ಭಾರತದ ಸಂಸತ್ತು ಬ್ರಿಟಿಷ್ ಪಾರ್ಲಿಮೆಂಟ್‌ನಷ್ಟು ಸರ್ವಶಕ್ತ ಅಲ್ಲ. ಅಲ್ಲಿ ಸಂಸತ್ ರೂಪಿಸಿದ ಕಾನೂನನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಅದೇ ರೀತಿ ಭಾರತದ ನ್ಯಾಯಾಂಗ ಅಮೆರಿಕದಷ್ಟು ಸರ್ವೋಚ್ಚ ಕೂಡಾ ಅಲ್ಲ. ಅಲ್ಲಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗದ ವಿಷಯಗಳು ಯಾವುವೂ ಇಲ್ಲ. ಈ ರೀತಿಯ ಸಮತೋಲನವನ್ನು ಕಾಯ್ದುಕೊಂಡು ಸಂವಿಧಾನವನ್ನು ರೂಪಿಸಿದ ಕಾರಣದಿಂದಾಗಿಯೇ ಅದು ಭದ್ರವಾಗಿ ಇಲ್ಲಿ ಉಳಿದಿದೆ.

ಇತಿಹಾಸ ಮರುಕಳಿಸುವುದಿಲ್ಲ ಎಂದು ಹೇಳುವವರ್‍ಯಾರು? ನ್ಯಾಯಾಂಗ ಮತ್ತು ಶಾಸಕಾಂಗದ ನಡುವಿನ ಘರ್ಷಣೆಗೆ ಚಾಲನೆ ನೀಡಿದ್ದು ಅವಿಭಜಿತ ಬಿಹಾರ. ಸಂವಿಧಾನದ ಈ ಎರಡು ಅಂಗಗಳನ್ನು ಘರ್ಷಣೆಯ ಹೊಸ್ತಿಲಲ್ಲಿ ಮೊನ್ನೆ ತಂದು ನಿಲ್ಲಿಸಿದ್ದು, ಒಂದು ಕಾಲದಲ್ಲಿ ಬಿಹಾರದ ಭಾಗವಾಗಿದ್ದ ಜಾರ್ಖಂಡ್‌ನ ವಿದ್ಯಮಾನ. ಆಗ ಸಂಸತ್‌ನ ಪಾರಮ್ಯದ ರಕ್ಷಣೆಗೆ ನಿಂತವರು ಕಾಂಗ್ರೆಸ್ ಸರ್ಕಾರ. ಈಗಲೂ ಅಧಿಕಾರದಲ್ಲಿರುವುದು ಅದೇ ಪಕ್ಷದ ನೇತೃತ್ವದ ಸರ್ಕಾರ. ನ್ಯಾಯಾಂಗವನ್ನು ದುರ್ಬಲಗೊಳಿಸುವ ಹಠಕ್ಕೆ ಬಿದ್ದವರು ಇಂದಿರಾಗಾಂಧಿ. ಈ ಹಂತದಲ್ಲಿ ಸೋನಿಯಾ ಅವರಿಗೆ ಯಾರೋ ಇತಿಹಾಸವನ್ನು ನೆನಪಿಸಿಕೊಟ್ಟಿರಬೇಕು. ಅವರು ಅತ್ತೆಯ ದಾರಿ ತುಳಿಯಲಿಲ್ಲ. ದೇಶದ ಪುಣ್ಯ.

O

(14-03-2005)

ದುರ್ಬಲಗೊಳಿಸುವ ಯತ್ನ

ಕಾರ್ಯಾಂಗವು ಶಾಸಕಾಂಗಕ್ಕೆ ಹೊಂದಿರುವ ಹೊಣೆಗಾರಿಕೆಯು ಸಂಸದೀಯ ವ್ಯವಸ್ಥೆಯ ನಿಜವಾದ ಸೊಗಸು. ಜನತೆಯ ಅಶೋತ್ತರಗಳ ಪ್ರತೀಕವಾಗಿರುವ ಸಂಸತ್ ಕಾನೂನುಗಳನ್ನು ರೂಪಿಸುವ ಜತೆಯಲ್ಲಿ ಕಾರ್ಯಾಂಗದ ಕಾರ್ಯನಿರ್ವಹಣೆಯ ಮೇಲೂ ಕಣ್ಣಿಡುತ್ತದೆ. ಈ ಹೊಣೆ ನಿರ್ವಹಣೆಯಲ್ಲಿ ಸಂಸತ್‌ಗೆ ಪ್ರಧಾನ ಪಾತ್ರ ಉಳಿದಂತೆ ಸಂಸದೀಯ ಸಮಿತಿಗಳದ್ದು ಪೋಷಕ ಪಾತ್ರ.

ಪ್ರಧಾನ ಪಾತ್ರದ ನಿರ್ವಹಣೆಯಲ್ಲಿನ ಇತ್ತೀಚಿನ ವೈಫಲ್ಯ, ಪೋಷಕ ಪಾತ್ರಗಳಿಗೆ ಹೊಣೆಗಾರಿಕೆ ತಂದುಕೊಟ್ಟಿದೆ. ಕೇಂದ್ರ ಸರ್ಕಾರದ 'ಸಂಘರ್ಷಾತ್ಮಕ' ನಿಲುವನ್ನು ಪ್ರತಿಭಟಿಸಿ ಬಿಜೆಪಿ ನೇತೃತ್ವದ ಎನ್‌ಡಿಎ ಸಂಸದೀಯ ಸಮಿತಿಗಳನ್ನು ಬಹಿಷ್ಕರಿಸುವ ಬೆದರಿಕೆ ಹಾಕಿರುವುದರಿಂದ, ಈ ಪೋಷಕ ಪಾತ್ರಗಳು ಕೂಡಾ ದುರ್ಬಲಗೊಳ್ಳುವ ಭೀತಿ ಎದುರಿಸುತ್ತಿದೆ.

ಮೂರು ಹಣಕಾಸು ಸಮಿತಿಗಳಾದ– ಸಾರ್ವಜನಿಕ ಲೆಕ್ಕಪತ್ರ ಸಮಿತಿ, ಅಂದಾಜು ಸಮಿತಿ ಮತ್ತು ಸಾರ್ವಜನಿಕ ಉದ್ಯಮಗಳ ಸಮಿತಿ, ವಿವಿಧ ವಿಷಯಗಳ ಮೇಲಿನ 15 ಸದನ ಸಮಿತಿ, 29 ಸಚಿವ ಖಾತೆಗಳ ಸಲಹಾ ಸಮಿತಿ ಮತ್ತು ಇತ್ತೀಚೆಗೆ ರಚನೆಗೊಂಡ ಹದಿನೇಳು ಇಲಾಖಾವಾರು ಸ್ಥಾಯಿ ಸಮಿತಿಗಳನ್ನು ಒಟ್ಟು ಸೇರಿಸಿದರೆ,

ಸಂಸದೀಯ ಸಮಿತಿಗಳ ಸಂಖ್ಯೆ 64 ಆಗುತ್ತದೆ. ಇದರ ಜತೆಗೆ ಆಗಾಗ ವಿವಾದಾತ್ಮಕ ವಿಷಯಗಳ ಬಗ್ಗೆ ತನಿಖೆಗೆ ಜಂಟಿ ಸದನ ಸಮಿತಿಗಳನ್ನು ರಚಿಸಲಾಗುತ್ತದೆ.

ಪ್ರಥಮ ಲೋಕಸಭೆಯ ಅವಧಿಯಿಂದಲೇ ಅಸ್ತಿತ್ವದಲ್ಲಿರುವ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ)ಗೆ ವಿರೋಧ ಪಕ್ಷದ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡುವ ಸಂಪ್ರದಾಯ ಪ್ರಾರಂಭವಾಗಿದ್ದು 1967ರಲ್ಲಿ (ಪ್ರಥಮ ಅಧ್ಯಕ್ಷರು ಎಂ.ಆರ್. ಮಸಾನಿ). ಲೋಕಸಭೆಯ 15 ಮತ್ತು ರಾಜ್ಯಸಭೆಯ 7 ಸದಸ್ಯರು ಈ ಸಮಿತಿಯ ಸದಸ್ಯರು. ವಿವಿಧ ಇಲಾಖೆಗಳು ಖರ್ಚುಮಾಡುವ ಹಣದ ಲೆಕ್ಕ ಪರಿಶೋಧನೆ ಈ ಸಮಿತಿಯ ಮುಖ್ಯ ಕೆಲಸ. ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಪಿಎಸಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಬೇಕೆಂದು ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಅಧ್ಯಕ್ಷತೆಯ ಸಂವಿಧಾನದ ಕಾರ್ಯನಿರ್ವಹಣೆಯ ಪುನರ್ ಪರಿಶೀಲನಾ ಸಮಿತಿ ಶಿಫಾರಸು ಮಾಡಿದೆ.

ಇದರ ವರದಿಗಳು ಹಲವಾರು ಬಾರಿ ರಾಜಕೀಯ ಕೋಲಾಹಲ ಸೃಷ್ಟಿಸಿದ್ದುಂಟು. ಪಿಎಸಿ ವರದಿಗೆ ಸರ್ಕಾರ ನೀಡುತ್ತಾ ಬಂದ ಪ್ರತಿಕ್ರಿಯೆಯನ್ನು ಗಮನಿಸಿದರೆ ಈ ಸಮಿತಿಯ ಮಹತ್ವ ಮನವರಿಕೆಯಾಗುತ್ತದೆ. ಏಳನೇ ಲೋಕಸಭೆಯಿಂದ ಹದಿಮೂರನೇ ಲೋಕಸಭೆಯ ವರೆಗೆ ಪಿಎಸಿ 6113 ಶಿಫಾರಸುಗಳನ್ನು ಮಾಡಿತ್ತು. ಅವುಗಳಲ್ಲಿ 3709 ವರದಿಗಳನ್ನು ಸರ್ಕಾರ ಒಪ್ಪಿಕೊಂಡಿದೆ. ಅಂದರೆ ಶೇ 61ರಷ್ಟು ಶಿಫಾರಸುಗಳನ್ನು ಸರ್ಕಾರ ಒಪ್ಪಿಕೊಂಡಂತೆ ಆಗಿದೆ. ಮುಕ್ತ ಮಾರುಕಟ್ಟೆಯಿಂದ ಪಡೆಯುವ ಸಾಲದ ಪ್ರಮಾಣವನ್ನು ಕಡಿತಮಾಡಬೇಕೆಂದು ಪಿಎಸಿ ನಿರಂತರವಾಗಿ ಶಿಫಾರಸುಮಾಡುತ್ತಾ ಬಂದ ಫಲವಾಗಿಯೇ, 2000ನೇ ಡಿಸೆಂಬರ್‌ನಲ್ಲಿ ಹಣಕಾಸು ಜವಾಬ್ದಾರಿ ಮಸೂದೆ ಮಂಡನೆಯಾಗಿದ್ದು.

ರಾಜ್ಯಸಭಾ ಚುನಾವಣೆಯಲ್ಲಿ ಹಣದ ಥೈಲಿಯ ಪಾತ್ರವನ್ನು ನಿಯಂತ್ರಿಸುವ ಉದ್ದೇಶ ಮಸೂದೆ ಮಂಡನೆಯಾಗಲು 1998ರಲ್ಲಿ ರಾಜ್ಯಸಭೆಯ ನೀತಿ ಸಮಿತಿ ನೀಡಿದ್ದ ಶಿಫಾರಸು ಕಾರಣ. ಸಂಸತ್ ಸದಸ್ಯರಿಗೆ ನೀಡುವ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ಹೆಚ್ಚಿನ ಹಣ ಪ್ರತಿವರ್ಷ ಬಳಕೆಯಾಗದೆ ಉಳಿಯುತ್ತಿತ್ತು. ಇದನ್ನು ಗಮನಿಸಿದ ಆಗಿನ ಲೋಕಸಭಾ ಅಧ್ಯಕ್ಷ ಜಿ.ಎಂ.ಸಿ. ಬಾಲಯೋಗಿ 1999ರಲ್ಲಿ ಈ ಯೋಜನೆಯ ಮೇಲ್ವಿಚಾರಣೆಗೆ ಸದನ ಸಮಿತಿ ರಚಿಸಿದರು. ಸಮಿತಿ ಅಸ್ತಿತ್ವಕ್ಕೆ ಬಂದ ಎರಡು ವರ್ಷಗಳ ಅವಧಿಯಲ್ಲಿ ಯೋಜನೆಯ 3500 ಕೋಟಿ ರೂಪಾಯಿ ಖರ್ಚಾಗಿಹೋಯಿತು.

ಸಂಸದೀಯ ಸಮಿತಿಗಳ ಗುಂಪಿಗೆ ಇತ್ತೀಚಿನ ಸೇರ್ಪಡೆಯಾದ ಸ್ಥಾಯಿ ಸಮಿತಿಗಳ ರಚನೆಗೆ ಸಂಸತ್ ತನ್ನ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿಲ್ಲ. ಕಲಾಪದ ಗುಣಮಟ್ಟ ಕುಸಿಯತೊಡಗಿದೆ ಎಂಬ ಅಸಮಾಧಾನದ ಕೂಗು ಪ್ರೇರಣೆ. ಸಾಮಾನ್ಯವಾಗಿ ಸಂಸತ್‌ನಲ್ಲಿ ಸದಸ್ಯರು ಸಮಕಾಲಿನ ವಿದ್ಯಮಾನ, ತಕ್ಷಣದ ಸಮಸ್ಯೆಗಳ ಬಗ್ಗೆ ಪ್ರತಿಸ್ಪಂದಿಸುವುದೇ ಹೆಚ್ಚು. ಅರ್ಥಪೂರ್ಣ ಚರ್ಚೆನಡೆಯಬೇಕಾದ ಅವಧಿಯನ್ನು ಗದ್ದಲ–ಕೋಲಾಹಲಗಳು ಕಬಳಿಸುತ್ತವೆ. ಇದರಿಂದಾಗಿ ಎಷ್ಟೋ ಬಾರಿ ಚರ್ಚೆ ನಡೆಯದೆ ಪ್ರಮುಖ ಮಸೂದೆಗಳು ಮಂಜೂರಾಗಿ ಹೋಗುವುದುಂಟು. ಬಜೆಟ್ ಮೇಲಿನ ಚರ್ಚೆ ಕೇವಲ ಕೆಲವೇ ಇಲಾಖೆಗಳಿಗೆ ಸೀಮಿತವಾಗಿ ನಡೆಯುತ್ತದೆ. ಅದರಲ್ಲೂ ಕೃಷಿ, ಗ್ರಾಮೀಣ ಅಭಿವೃದ್ಧಿ, ಆರೋಗ್ಯ, ಶಿಕ್ಷಣ ಮೊದಲಾದ ಸಾಮಾಜಿಕ ವಿಷಯಗಳ ಬಗ್ಗೆ ಮಾತನಾಡುವ ಸದಸ್ಯರ ಸಂಖ್ಯೆ ಕಡಿಮೆ. ಅದನ್ನು ಕೇಳಬಯಸುವ ಸದಸ್ಯರ ಸಂಖ್ಯೆ ಇನ್ನೂ ಕಡಿಮೆ.

ಈ ಕೊರತೆಯನ್ನು ತುಂಬಲು ಇಲಾಖಾವಾರು ಸ್ಥಾಯಿ ಸಮಿತಿಗಳನ್ನು ರಚಿಸುವ ಬಗ್ಗೆ ಚರ್ಚೆ ಬಹಳ ವರ್ಷಗಳಿಂದ ನಡೆಯುತ್ತಾ ಬಂದಿತ್ತು. ಕೊನೆಗೂ ಹದಿನೇಳು ಇಲಾಖಾ ಸ್ಥಾಯಿ ಸಮಿತಿಗಳು ಅಸ್ತಿತ್ವಕ್ಕೆ ಬಂದದ್ದು 1993ರ ಮಾರ್ಚ್‌ನಲ್ಲಿ. ಇವುಗಳಲ್ಲಿ ಹನ್ನೊಂದು ಸಮಿತಿಗಳಿಗೆ ಲೋಕಸಭಾ ಸದಸ್ಯರು ಮತ್ತು ಆರು ಸಮಿತಿಗೆ ರಾಜ್ಯಸಭಾ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಪ್ರತಿ ಸಮಿತಿಯಲ್ಲಿ 30 ಲೋಕಸಭಾ ಸದಸ್ಯರು ಮತ್ತು 15 ರಾಜ್ಯಸಭಾ ಸದಸ್ಯರು ಸದಸ್ಯರಾಗಿರುತ್ತಾರೆ.

ವಿರೋಧ ಪಕ್ಷಗಳ ಬಹಿಷ್ಕಾರದ ಬಿಸಿ ತಕ್ಷಣ ತಟ್ಟಿರುವುದು ಈ ಸ್ಥಾಯಿ ಸಮಿತಿಗಳ ಕಾರ್ಯದ ಮೇಲೆ. ಬಜೆಟ್ ಮಂಡನೆಯ ನಂತರ ಸಾಮಾನ್ಯವಾಗಿ ನೀಡಲಾಗುವ ಮೂರು ವಾರಗಳ ಬಿಡುವಿನ ವೇಳೆಯಲ್ಲಿ ಸ್ಥಾಯಿ ಸಮಿತಿಗಳ ಸಭೆ ನಡೆಯುತ್ತವೆ. ಸದನದಲ್ಲಿ ಬಜೆಟ್ ಮೇಲೆ ನಡೆದ ಚರ್ಚೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಡೆಯುವ ಚರ್ಚೆಯ ನಂತರ ಸಮಿತಿ ಇಲಾಖಾವಾರು ಅನುದಾನದ ಬಗ್ಗೆ ಶಿಫಾರಸು ಮಾಡುತ್ತದೆ. ಸ್ಥಾಯಿಸಮಿತಿಗಳು ನೀಡುವ 3–4 ವರದಿಗಳಲ್ಲಿ ಬಜೆಟ್ ನಂತರದ ವರದಿ ಪ್ರಮುಖವಾದುದು. ಆದರೆ ಈ ಬಾರಿ ಆಗಲೇ ಒಂದು ವಾರ ಕಳೆದುಹೋಗಿದೆ, ಇನ್ನೂ ಸ್ಥಾಯಿಸಮಿತಿಗಳ ರಚನೆಯೇ ಆಗಿಲ್ಲ.

ಸಂಸತ್ ಕಲಾಪದ ಅವಧಿ ಕಡಿಮೆಗೊಳ್ಳತೊಡಗಿದಂತೆ ಸ್ಥಾಯಿ ಸಮಿತಿಗಳಿಗೆ ಹೆಚ್ಚಿನ ಹೊಣೆಗಾರಿಕೆ ಬಂದಿತ್ತು. ಸಾಮಾನ್ಯವಾಗಿ ಈ ಸಮಿತಿಗಳಲ್ಲಿ ಸದಸ್ಯರು ಪಕ್ಷಾತೀತವಾಗಿರುತ್ತಾರೆ. ಪತ್ರಿಕೆಗಳಲ್ಲಿ ಮಿಂಚಲು ಅವಕಾಶ ಇಲ್ಲದಿರುವುದರಿಂದ ಎಲ್ಲರೂ ಗಂಭೀರವಾಗಿ ಚರ್ಚೆ ನಡೆಸುತ್ತಾರೆ, ಎನ್ನುತ್ತಾರೆ ರಾಜ್ಯದ ಹಿರಿಯ

ರಾಜ್ಯಸಭಾ ಸದಸ್ಯರು. ಈ ಸಮಿತಿಗಳ ಶಿಫಾರಸಿನ ಆಧಾರದಲ್ಲಿಯೇ ಎಷ್ಟೋ ಕಾನೂನುಗಳು ರೂಪುಗೊಂಡದ್ದುಂಟು ಉದಾ : ಮಾಹಿತಿ ಹಕ್ಕು ಮಸೂದೆ. ಸರ್ಕಾರದ ಅನೇಕ ನೀತಿಗಳು ಬದಲಾಗಿದ್ದುಂಟು ಉದಾ: ರಾಷ್ಟ್ರೀಯ ವಸತಿ ನೀತಿ.

ಸ್ಥಾಯಿ ಸಮಿತಿಗಳು ಕೇವಲ ವರದಿ ನೀಡಿ ಸುಮ್ಮನಾಗುವುದಿಲ್ಲ. ಅವುಗಳ ಆಧಾರದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸಂಬಂಧಿತ ಇಲಾಖೆಗಳು ಸಮಿತಿಗೆ ವರದಿ ನೀಡಬೇಕಾಗುತ್ತದೆ. ಆದರೆ ಶಿಫಾರಸ್ಸುಗಳಿಗೆ ಅನುಗುಣವಾಗಿ ಇಲಾಖೆಗಳು ಕ್ರಮ ಕೈಗೊಳ್ಳದಿದ್ದರೆ ಅದಕ್ಕಾಗಿ ಒತ್ತಡ ಹೇರುವ ಅಧಿಕಾರ ಮಾತ್ರ ಸಮಿತಿಗಳಿಗೆ ಇಲ್ಲ. ಈ ಹಿನ್ನೆಲೆಯಲ್ಲಿ ಸ್ಥಾಯಿ ಸಮಿತಿಗಳನ್ನು ಇನ್ನಷ್ಟು ಬಲಗೊಳಿಸಬೇಕೆಂಬ ಸಲಹೆಗಳೂ ಕೇಳಿಬರುತ್ತಿವೆ.

ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರು ಸದಸ್ಯರಾಗಿ ಇರುವ ಸಮಿತಿಯೊಂದನ್ನು ಲೋಕಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಬೇಕು. ಈ ಸಮಿತಿ ಸ್ಥಾಯಿ ಸಮಿತಿಗಳ ವರದಿಯ ಪರಿಣಾಮಗಳನ್ನು ಪರಿಶೀಲಿಸಿ ವರದಿ ನೀಡಬೇಕು. ಆ ವರದಿಯನ್ನು ಸಂಸತ್‌ನಲ್ಲಿ ಚರ್ಚಿಸಬೇಕೆನ್ನುವುದು ಒಂದು ಸಲಹೆ.

ಹಣಕಾಸು ಸಚಿವರು ಸಾಮಾನ್ಯವಾಗಿ ಬಜೆಟ್‌ಪೂರ್ವದಲ್ಲಿ ಇಲಾಖಾವಾರು ಹಣದ ಬೇಡಿಕೆಗಳ ಬಗ್ಗೆ ಸಮಾಲೋಚನೆ ನಡೆಸುತ್ತಾರೆ. ಅದರ ನಂತರ ಪ್ರತಿ ಇಲಾಖೆ ತನ್ನ ಬಜೆಟನ್ನು ಕಳುಹಿಸಿಕೊಡುತ್ತದೆ. ಈ ಇಲಾಖಾವಾರು ಬಜೆಟನ್ನು ಮೊದಲು ಸ್ಥಾಯಿ ಸಮಿತಿಗೆ ಒಪ್ಪಿಸಿದರೆ ಬಜೆಟ್ ಪೂರ್ವದಲ್ಲಿ ಅದನ್ನು ಪರಿಷ್ಕರಿಸಲು ಸಾಧ್ಯ ಎನ್ನುವ ಅಭಿಪ್ರಾಯ ಇದೆ. ಹೊಸ ತೆರಿಗೆ ಪ್ರಸ್ತಾಪಗಳನ್ನು ಹೊರತುಪಡಿಸಿ ರಹಸ್ಯ ಎನ್ನುವುದು ಬಜೆಟ್‌ನಲ್ಲಿ ಈಗ ಏನೂ ಉಳಿದಿಲ್ಲವಾದ ಕಾರಣ ಇದು ಅಸಾಧ್ಯವೇನಲ್ಲ. ಇದು ಸಾಧ್ಯವಾಗದಿದ್ದರೆ ಬಜೆಟ್ ರೂಪಿಸುವಾಗ ಹಿಂದಿನ ಸಾಲಿನ ಸ್ಥಾಯಿ ಸಮಿತಿಯ ವರದಿಯನ್ನಾದರೂ ಪರಿಗಣಿಸಬೇಕು ಎನ್ನುವುದು ಇನ್ನೊಂದು ಸಲಹೆ.

ಪ್ರತಿ ಇಲಾಖೆಯ ವಾರ್ಷಿಕ ವರದಿಗಳನ್ನು ಬಜೆಟ್ ಜತೆಯಲ್ಲಿ ಮಂಡಿಸಲಾಗುವುದು. ಇದು ಮೊದಲೇ ಮುದ್ರಣಗೊಳ್ಳುವುದರಿಂದ ಅವುಗಳನ್ನು ಮುಂಚಿತವಾಗಿಯೇ ಸ್ಥಾಯಿ ಸಮಿತಿಗೆ ನೀಡಿದರೆ ಬಜೆಟ್ ಮಂಡನೆಯ ನಂತರದ ಅನುದಾನ ಬೇಡಿಕೆಯ ಚರ್ಚೆಯಲ್ಲಿ ಅವರು ಪೂರ್ವಸಿದ್ಧತೆಯೊಡನೆ ಪಾಲ್ಗೊಳ್ಳಬಹುದು ಎನ್ನುವ ಸಲಹೆ ಸ್ಥಾಯಿಸಮಿತಿ ಸದಸ್ಯರಿಂದಲೇ ಬಂದಿದೆ.

ಈಗಿನ ವ್ಯವಸ್ಥೆಯಲ್ಲಿ ಲೋಕಸಭಾ ಅಧ್ಯಕ್ಷರು ಕಳುಹಿಸುವ ಕರಡು ಮಸೂದೆ ಮತ್ತು ನೀತಿ ನಿರೂಪಣಾ ದಾಖಲೆಗಳನ್ನು ಮಾತ್ರ ಸ್ಥಾಯಿ ಸಮಿತಿಗಳು ಪರಿಶೀಲಿಸುತ್ತವೆ. ಇದರ ಬದಲಿಗೆ ಎಲ್ಲಾ ಕರಡು ಮಸೂದೆಗಳನ್ನೂ ಸ್ಥಾಯಿಸಮಿತಿ ಪರಿಶೀಲನೆಗೆ ಒಪ್ಪಿಸಬೇಕೆಂಬ ಅಭಿಪ್ರಾಯ ಕೂಡಾ ಇದೆ. ಈ ರೀತಿ ಸ್ಥಾಯಿ ಸಮಿತಿಗಳ ಬಲವರ್ಧನೆಗೆ ಚಿಂತನೆ ಒಂದೆಡೆ ನಡೆಯುತ್ತಿದ್ದಾಗಲೇ, ಇನ್ನೊಂದೆಡೆ ಅದನ್ನು ದುರ್ಬಲಗೊಳಿಸುವ ಪ್ರಯತ್ನ ಪ್ರಾರಂಭವಾಗಿದೆ.

(02-08-2004)

ಯಾರ ಹಿತಕಾಯಲು ಚುನಾವಣೆ ?

ನಮ್ಮ ರಾಜಕೀಯ ನಾಯಕರು ಜನಹಿತವನ್ನಷ್ಟೇ ಗಮನದಲ್ಲಿಟ್ಟುಕೊಂಡಿದ್ದರೆ, ಸ್ವತಂತ್ರ ಭಾರತದಲ್ಲಿ ಈವರೆಗೆ ಹನ್ನೊಂದು ಮಹಾಚುನಾವಣೆಗಳು ಮಾತ್ರ ನಡೆಯಬೇಕಾಗಿತ್ತು. ಆದರೆ ಅವರು ಜನಹಿತಕ್ಕಿಂತ ಸ್ವಹಿತವೇ ಹೆಚ್ಚೆನದ್ದು ಎಂದು ಬಗೆದ ಕಾರಣ, ನಾವು ಹದಿಮೂರು ಮಹಾಚುನಾವಣೆಗಳನ್ನು ಮುಗಿಸಿ ಹದಿನಾಲ್ಕರ ಹೊಸ್ತಿಲಲ್ಲಿ ನಿಂತಿದ್ದೇವೆ. ಇವುಗಳಲ್ಲಿ ಕೆಲವು ಚುನಾವಣೆಗಳನ್ನು ಸರ್ಕಾರಕ್ಕೆ ಬಹುಮತ ಇದ್ದರೂ ದೇಶದ ಮೇಲೆ ಹೇರಲಾಯಿತು. ಇನ್ನು ಕೆಲವು ಚುನಾವಣೆಗಳು ಒಳಜಗಳದಿಂದಾಗಿ ಬಹುಮತ ಕಳೆದುಕೊಂಡ ಸರ್ಕಾರಗಳ ಪತನದಿಂದಾಗಿ ಅನಿವಾರ್ಯವಾಗಿ ನಡೆಯಿತು.

ಹೇರಿದ ಚುನಾವಣೆಗಳು ಎರಡು : ಮೊದಲನೆಯದ್ದು 1971ರ ಮಾರ್ಚ್‌ನಲ್ಲಿ ನಡೆದ ಚುನಾವಣೆ, ಪ್ರಧಾನಿ ಇಂದಿರಾಗಾಂಧಿಯವರು ನಾಲ್ಕನೇ ಲೋಕಸಭೆಯನ್ನು ಅವಧಿಗೆ ಮುನ್ನವೇ ವಿಸರ್ಜಿಸಿದ ಕಾರಣಕ್ಕೆ ಅದು ನಡೆಯಿತು. ಎರಡನೆಯದ್ದು ಮುಂದಿನ ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಚುನಾವಣೆ. ಈ ಎರಡೂ ಸರ್ಕಾರಗಳಿಗೆ ಅಧಿಕಾರದಲ್ಲಿ ಮುಂದುವರಿದುಕೊಂಡು ಹೋಗವ ಬಹುಮತ ಇತ್ತು.

1971ರಲ್ಲಿ ಇಂದಿರಾಗಾಂಧಿ ನಾಲ್ಕನೇ ಲೋಕಸಭೆಯನ್ನು ವಿಸರ್ಜಿಸಿದಾಗ, ಅದರ ಅವಧಿ ಮುಗಿಯಲು ಇನ್ನೂ ಒಂದು ವರ್ಷ ಇತ್ತು. ಎರಡು ತಿಂಗಳು ಆರು ದಿನಗಳಿದ್ದವು. ಚುನಾವಣೆ ನಡೆಯಬೇಕಾಗಿದ್ದದ್ದು 1972ರ ಮಾರ್ಚ್ ತಿಂಗಳಲ್ಲಿ. ಆದರೆ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿನ ವಿಜಯದ ನಂತರ ಕಾಣತೊಡಗಿದ್ದ ಉಲ್ಲಾಸಮಯ ವಾತಾವರಣ (ಫೀಲ್ ಗುಡ್ ಫ್ಯಾಕ್ಟರ್!) ಇಂದಿರಾಗಾಂಧಿಯವರನ್ನು ಚುನಾವಣಾ ಸಮರಕ್ಕೆ ಧುಮುಕುವಂತೆ ಪ್ರೇರೇಪಿಸಿತು. ಆಗಿನ ಇಂದಿರಾ ಜನಪ್ರಿಯತೆ ಎಷ್ಟಿತ್ತೆಂದರೆ, ಪಾಕಿಸ್ತಾನದ ವಿರುದ್ಧದ ವಿಜಯದ ನಂತರ ವಾಜಪೇಯಿ ಕೂಡಾ ಇಂದಿರಾಗಾಂಧಿಯವರನ್ನು ಮಾ ದುರ್ಗಿ ಎಂದು ಕರೆದು ತಮ್ಮ ಪಕ್ಷದವರಿದಂಲೇ ಆದ್ಮೀ ಕಾಂಗ್ರೆಸ್ ಎಂದು ಬೈಸಿಕೊಂಡಿದ್ದರು.

ಕಾರಣ ಅಷ್ಟೇ ಆಗಿರಲಿಲ್ಲ. 1969ರಲ್ಲಿ ಕಾಂಗ್ರೆಸ್ ಪಕ್ಷ, ಎಸ್. ನಿಜಲಿಂಗಪ್ಪ ನೇತೃತ್ವದ ಕಾಂಗ್ರೆಸ್ (ಸಂಸ್ಥಾ) ಮತ್ತು ಪ್ರಧಾನಿ ಇಂದಿರಾಗಾಂಧಿ ಬೆಂಬಲಿಗೆ ಸಿ. ಸುಬ್ರಹ್ಮಣ್ಯಂ ನೇತೃತ್ವದ ಕಾಂಗ್ರೆಸ್‌ಗಳಾಗಿ ವಿಭಜನೆಗೊಂಡಿತ್ತು. ಸರ್ಕಾರಕ್ಕೆ ಬಹುಮತವೇನೋ ಇತ್ತು. (ಸಿಪಿಐ ಬೆಂಬಲಿಸಿತ್ತು) ಆದರೆ ಇಂದಿರಾಗಾಂಧಿಗೆ ಅದು ತೃಪ್ತಿನೀಡಿರಲಿಲ್ಲ. ಆಗಲೇ ಅವರು ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಮೊದಲಾದ ಕಾರ್ಯಕ್ರಮಗಳಿಂದಾಗಿ ಜನಪ್ರಿಯರಾಗಿದ್ದರು. ಅದೇ ಬಲದಿಂದ ಚುನಾವಣೆ ಎದುರಿಸಿ ಗೆದ್ದರು ಕೂಡಾ.

ಇದೇ ರೀತಿ ಸರ್ಕಾರಕ್ಕೆ ಬಹುಮತ ಇದ್ದರೂ ಅವಧಿಗೆ ಮುನ್ನವೇ ಎರಡನೇ ಬಾರಿ ಲೋಕಸಭೆಗೆ ವಿಸರ್ಜನೆ ನಡೆದದ್ದು ಈ ತಿಂಗಳ ಆರರಂದು. ಪೂರ್ಣಾವಧಿ ಕೊನೆಗೊಳ್ಳಲು ಎಂಟು ತಿಂಗಳು ಆರು ದಿನಗಳಿರುವಾಗಲೇ ವಾಜಪೇಯಿ ಈ ನಿರ್ಧಾರ ಕೈಗೊಂಡರು. ಅಳೆದು-ತೂಗಿ ಕೊನೆಗೂ ಹದಿಮೂರನೇ ಲೋಕಸಭೆಯನ್ನು ವಿಸರ್ಜಿಸುವ ಮುನ್ನ ವಾಜಪೇಯಿ ಅವರು 1971ರ ಚುನಾವಣೆಯ ಫಲಿತಾಂಶವನ್ನು ನೆನಪಿಸಿಕೊಂಡಿರಬಹುದು. ಆದರೆ ವ್ಯತ್ಯಾಸ ಇಷ್ಟೇ: ಆಗಿನ ಚುನಾವಣೆಯಲ್ಲಿ ಇಂದಿರಾಗಾಂಧಿ ರಾಷ್ಟ್ರೀಕರಣದ ಘೋಷಣೆ ಮೊಳಗಿಸಿದ್ದರೆ, ಈಗ ಕೇಳಿಬರುತ್ತಿರುವುದು ಖಾಸಗೀಕರಣದ ಕಹಳೆ.

1984 ಮತ್ತು 1989ರಲ್ಲಿ ನಡೆದ ಲೋಕಸಭಾ ಚುನಾವಣೆಗಳನ್ನು ಕೂಡಾ ಮೇಲಿನ ಎರಡು ಚುನಾವಣೆಗಳ ಸಾಲಿಗೆ ಸೇರಿಸುವವರಿದ್ದಾರೆ. ಆದರೆ ಈ ಹೋಲಿಕೆ ಸರಿಯಲ್ಲ. ಈ ಎರಡೂ ಚುನಾವಣೆಗಳಿಗೆ ಮುನ್ನ ಏಳನೇ ಮತ್ತು ಎಂಟನೇ ಲೋಕಸಭೆಗಳು ಹೆಚ್ಚು ಕಡಿಮೆ ಪೂರ್ಣಾವಧಿಯನ್ನು ಮುಗಿಸಿಯೇ ಬಿಟ್ಟಿದ್ದವು.

1984ರಲ್ಲಿ ಏಳನೇ ಲೋಕಸಭೆ ಐದು ವರ್ಷಗಳ ಅವಧಿ ಪೂರ್ಣಗೊಳಿಸುವ ಹತ್ತು ದಿನಗಳಷ್ಟೇ ಬಾಕಿ ಉಳಿದಿತ್ತು. 1980ರ ಜನವರಿ ಹತ್ತರಂದು ರಚನೆಗೊಂಡ

ಏಳನೇ ಲೋಕಸಭೆಯ ಐದು ವರ್ಷಗಳ ಅವಧಿ 1984ರ ಜನವರಿ ಹತ್ತಕ್ಕೆ ಕೊನೆಗೊಳ್ಳಬೇಕಿತ್ತು. ಆದರೆ ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆದ ಪ್ರಧಾನಿ ಇಂದಿರಾಗಾಂಧಿ ಹತ್ಯೆಯ ನಂತರ ಪ್ರಧಾನಿಯಾದ ರಾಜೀವ್‌ಗಾಂಧಿ ಚುನಾವಣೆ ಎದುರಿಸಲು ನಿರ್ಧರಿಸಿದ್ದರು. ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ರಾಜೀವ್ ನೇತೃತ್ವದ ಕಾಂಗ್ರೆಸ್ ಅಭೂತಪೂರ್ವ ಬಹುಮತ (415 ಸ್ಥಾನ) ದೊಂದಿಗೆ ಮರಳಿ ಅಧಿಕಾರಕ್ಕೆ ಬಂದಿತ್ತು.

1989ರಲ್ಲಿಯೂ ಎಂಟನೇ ಲೋಕಸಭೆ ತನ್ನ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಲು 33 ದಿನಗಳಷ್ಟೇ ಬಾಕಿ ಉಳಿದಿತ್ತು. ಆದರೆ ಬೋಫೋರ್ಸ್ ಹಗರಣದ ಆರೋಪದಿಂದ ಪ್ರಧಾನಿ ರಾಜೀವ್‌ಗಾಂಧಿ ತನ್ನ ಮಿಸ್ಟರ್ ಕ್ಲೀನ್ ವರ್ಚಸ್ಸು ಕಳೆದುಕೊಂಡು ಮಂಕಾಗಿದ್ದರು. ವಿ.ಪಿ.ಸಿಂಗ್, ಅರುಣ್ ನೆಹರೂ, ಅರುಣ್ ಸಿಂಗ್ ಮೊದಲಾದ ಸಂಗಾತಿಗಳೆಲ್ಲಾ ಕೈಬಿಟ್ಟು ಹೋಗಿದ್ದರು. ಅದಕ್ಕೆ ಸರಿಯಾಗಿ ಸಂವಿಧಾನ ತಿದ್ದುಪಡಿ (ಪಂಚಾಯತ್ ರಾಜ್) ಮಸೂದೆ ಬಹುಮತದ ಕೊರತೆಯಿಂದಾಗಿ ಲೋಕಸಭೆಯಲ್ಲಿ ಬಿದ್ದು ಹೋಯಿತು. ಇದೇ ಸಂದರ್ಭ ಬಳಸಿಕೊಂಡು ರಾಜೀವ್‌ಗಾಂಧಿ ಮತ್ತೆ ಚುನಾವಣೆಗೆ ಇಳಿದರು. 1989ರ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 197 ಸ್ಥಾನ ಪಡೆದು ಏಕೈಕ ದೊಡ್ಡ ಪಕ್ಷವಾಗಿ ಮೂಡಿಬಂದರೂ ಸರ್ಕಾರ ರಚನೆ ಸಾಧ್ಯವಾಗಲಿಲ್ಲ.

ಆರು, ಒಂಭತ್ತು, ಹನ್ನೊಂದು ಮತ್ತು ಹನ್ನೆರಡನೇ ಲೋಕಸಭೆಗಳು ಕೂಡಾ ಅವಧಿಗೆ ಮೊದಲೇ ವಿಸರ್ಜನೆಗೊಂಡಿದ್ದವು. ಆದರೆ ಈ ನಾಲ್ಕು ಸಂದರ್ಭಗಳಲ್ಲಿ ಸರ್ಕಾರಗಳು ಬಹುಮತ ಕಳೆದುಕೊಂಡಿದ್ದವು. ಮೊದಲ ಮೂರು ಸಂದರ್ಭಗಳಲ್ಲಿ ಕೈ ಕೊಟ್ಟಿದ್ದು ಕಾಂಗ್ರೆಸ್, ಕೊನೆಯದ್ದಕ್ಕೆ ಕಾರಣ– ಅಮ್ಮ ಜಯಲಲಿತ ಆಕ್ರೋಶ.

ತುರ್ತು ಪರಿಸ್ಥಿಯ ಕರಾಳ ದಿನಗಳ ನಂತರ 1977ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರ, ಮೊದಲ ಪ್ರಧಾನಿ ಮೊರಾರ್ಜಿ ದೇಸಾಯಿ ಅಧಿಕಾರದಲ್ಲಿದ್ದದು ಎರಡು ವರ್ಷ ನಾಲ್ಕು ತಿಂಗಳು ಮಾತ್ರ. ಅವರ ರಾಜೀನಾಮೆಯ ನಂತರ ಕಾಂಗ್ರೆಸ್ ಬಾಹ್ಯ ಬೆಂಬಲದ ಭರವಸೆಯೊಂದಿಗೆ ಪ್ರಧಾನಿ ಪಟ್ಟಕ್ಕೇರಿದ ಚರಣ್‌ಸಿಂಗ್ ಅಧಿಕಾರದಲ್ಲಿದ್ದದ್ದು ಆರೇ ತಿಂಗಳು. ಇಂದಿರಾಗಾಂಧಿ ಕೈಕೊಟ್ಟ ಕಾರಣದಿಂದಾಗಿ ವಿಶ್ವಾಸಮತ ಕೇಳಲು ಸದನವನ್ನು ಪ್ರವೇಶಿಸದೆಯೇ ಚರಣ್‌ಸಿಂಗ್ ರಾಜೀನಾಮೆ ನೀಡಬೇಕಾಯಿತು. ಆದ್ದರಿಂದ ಎರಡು ವರ್ಷ ಐದು ತಿಂಗಳಷ್ಟೇ ಪೂರ್ಣಗೊಳಿಸಿದ್ದ ಆರನೇ ಲೋಕಸಭೆಯಲ್ಲಿ 1979ರಲ್ಲಿ ವಿಸರ್ಜನೆಗೊಳಿಸಬೇಕಾಯಿತು. ಇಂದಿರಾಗಾಂಧಿ ಮತ್ತೆ ಅಧಿಕಾರದ ಗದ್ದುಗೆ ಏರಿದರು.

1991ರಲ್ಲಿ ಕಾಂಗ್ರೆಸ್ ಮತ್ತೆ ಕೈಕೊಟ್ಟ ಕಾರಣದಿಂದಾಗಿ ಚಂದ್ರಶೇಖರ್ ನೇತೃತ್ವದ ಸರ್ಕಾರ ಪತನಗೊಂಡಿತು. ಹತ್ತು ವರ್ಷ ಮೊದಲು ಇಂದಿರಾಗಾಂಧಿ ಚರಣ್‌ಸಿಂಗ್‌ಗೆ ಮಾಡಿದ್ದನ್ನೇ ರಾಜೀವ್‌ಗಾಂಧಿ ಚಂದ್ರಶೇಖರ್‌ಗೆ ಮಾಡಿದರು. ಹತ್ತನೇ ಜನಪಥ ರಸ್ತೆಯ ಮನೆ ಮುಂದೆ, ಕೇಂದ್ರ ಸರ್ಕಾರ ಹರಿಯಾಣ ಪೊಲೀಸರನ್ನು ಮಫ್ತಿಯಲ್ಲಿ ನಿಲ್ಲಿಸಿ ತನ್ನ ಚಲನವಲನದ ಮೇಲೆ ಕೇಂದ್ರ ಸರ್ಕಾರ ಕಣ್ಣಿಟ್ಟಿದೆ ಎಂಬ ಕ್ಷುಲ್ಲಕ ಕಾರಣ ಮುಂದೊಡ್ಡಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ರಾಜೀವ್‌ಗಾಂಧಿ ಹಿಂತೆಗೆದು ಕೊಂಡರು. ಬಹುಮತ ಕಳೆದುಕೊಂಡ ಚಂದ್ರಶೇಖರ್ ರಾಜೀನಾಮೆ ನೀಡಿದರು. ಆದರೆ ತನ್ನ ಆಟ ಕಂಡ ಗೆಲುವನ್ನು ಅನುಭವಿಸಲು ರಾಜೀವ್‌ಗಾಂಧಿ ಇರಲಿಲ್ಲ. ಪಕ್ಷದ ಪ್ರಚಾರದ ಕಾಲದಲ್ಲಿಯೇ ಅವರು ಮಾನವಬಾಂಬ್‌ಗೆ ಬಲಿಯಾದರು. ಅದೃಷ್ಟ ಖುಲಾಯಿಸಿದ್ದು ವಾನಪ್ರಸ್ಥಾಶ್ರಮದ ದಾರಿಯಲ್ಲಿದ್ದ ಪಿ.ವಿ. ನರಸಿಂಹರಾವ್ ಅವರಿಗೆ.

1997ರಲ್ಲಿ ಕಾಂಗ್ರೆಸ್ ಹಳೆಯ ಆಟವನ್ನು ಮತ್ತೆ ಆಡಿತು. ದೇವೇಗೌಡರು ಕಾಂಗ್ರೆಸ್ ಪಕ್ಷವನ್ನೇ ಒಡೆಯಲು ಹೊರಟಿದ್ದಾರೆ ಎಂದು ಆರೋಪಿಸಿ ಪಕ್ಷದ ಅಧ್ಯಕ್ಷ ಸೀತಾರಾಮ ಕೇಸರಿ ಕಾಂಗ್ರೆಸ್ ಬೆಂಬಲ ವಾಪಸು ಪಡೆಯುವ ಬೆದರಿಕೆ ಹಾಕಿದರು. ಆಗ ನಡೆದ ರಾಜಿ ಪಂಚಾಯಿತಿಯಲ್ಲಿ ಪ್ರಧಾನಿಯಾದವರು ಐ.ಕೆ. ಗುಜ್ರಾಲ್. ಆದರೆ ರಾಜೀವ್‌ಗಾಂಧಿ ಹತ್ಯೆಯ ತನಿಖೆಗಾಗಿ ನೇಮಿಸಲಾಗಿದ್ದ ಜೈನ್ ಆಯೋಗದ ವರದಿ ಪತ್ರಿಕೆಗಳಲ್ಲಿ ಬಯಲಾದ ನಂತರ ಕಾಂಗ್ರೆಸ್ ಗುಜ್ರಾಲ್ ಸರ್ಕಾರಕ್ಕೂ ಬೆಂಬಲ ಹಿಂತೆಗೆದುಕೊಂಡಿತು. ಗುಜ್ರಾಲ್ ಸರ್ಕಾರದಲ್ಲಿದ್ದ ಡಿಎಂಕೆ ಎಲ್‌ಟಿಟಿಇಗೆ ನೆರವು ನೀಡಿತ್ತು, ಎಂದು ಆಯೋಗ ತನ್ನ ವರದಿಯಲ್ಲಿ ತಿಳಿಸಿದ್ದೇ ಕಾಂಗ್ರೆಸ್ ಪಕ್ಷದ ಆಕ್ರೋಶಕ್ಕೆ ಕಾರಣ. (ಈಗ ಅದೇ ಡಿಎಂಕೆ ಜತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ.)

1998ರಲ್ಲಿ ಹನ್ನೆರಡು ಪಕ್ಷಗಳ ಮೈತ್ರಿ ಕೂಟದ ರೂಪದಲ್ಲಿ ಅಧಿಕಾರಕ್ಕೆ ಬಂದ ವಾಜಪೇಯಿ ನೇತೃತ್ವದ ಸರ್ಕಾರವನ್ನು ಉದ್ದಕ್ಕೂ ಕಾಡಿದ್ದು ಎಐಎಡಿಎಂಕೆ ನಾಯಕಿ ಜೆ. ಜಯಲಲಿತಾ. ಕರುಣಾನಿಧಿಯವರನ್ನು ಬಂಧಿಸಬೇಕು, ಪ್ರಮೋದ್ ಮಹಾಜನ್ ಅವರನ್ನು ಸಂಪುಟದಿಂದ ಕೈಬಿಡಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಬ್ಲಾಕ್‌ಮೇಲ್ ಮಾಡಿದ ಜಯಲಲಿತಾ ಅಂತಿಮವಾಗಿ ಬೆಂಬಲ ವಾಪಸು ಪಡೆದರು. ವಾಜಪೇಯಿ ಸರ್ಕಾರ ಒಂದು ಮತದ ಅಂತರದಿಂದ ಪತನಗೊಂಡಿತು. ಈಗ ವಾಜಪೇಯಿ ಅದೇ ಜಯಲಲಿತಾ ಕೈಹಿಡಿದು ಚುನಾವಣೆ ಎದುರಿಸಲು ಹೊರಟಿದ್ದಾರೆ. ಇತಿಹಾಸದ ಚಕ್ರ ತಿರುಗುತ್ತಲೇ ಇದೆ......

ದೇಶಕ್ಕೆ ಅತಿ ಹೆಚ್ಚಿನ ಸಂಖ್ಯೆಯ ಪ್ರಧಾನಿಗಳನ್ನು ಕೊಟ್ಟದ್ದು ಯಾವ ಪಕ್ಷ? ಕಾಂಗ್ರೆಸ್. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ಪಕ್ಷಗಳ ನಾಯಕರು ಪ್ರಧಾನಿಗಳಾಗಲು ಬೆಂಬಲ ನೀಡಿದ್ದು ಕೂಡಾ ಕಾಂಗ್ರೆಸ್ (ಚರಣ್‌ಸಿಂಗ್, ಚಂದ್ರಶೇಖರ್, ದೇವೇಗೌಡ ಮತ್ತು ಐ.ಕೆ. ಗುಜ್ರಾಲ್) ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಧಾನಿಗಳು ಪದಚ್ಯುತಿಗೊಳ್ಳಲು ಕಾರಣವಾದದ್ದು ಸಹಾ ಕಾಂಗ್ರೆಸ್ (ಚರಣ್‌ಸಿಂಗ್, ಚಂದ್ರಶೇಖರ್, ದೇವೇಗೌಡ ಮತ್ತು ಗುಜ್ರಾಲ್).

(09-02-2004)

ಚುನಾವಣೆಯ ತೂಗುಕತ್ತಿ

ಸ್ವತಂತ್ರ ಭಾರತದ ಅರವತ್ತು ವರ್ಷಗಳಲ್ಲಿ ಭಾರತೀಯರ ಸರಾಸರಿ ಆಯುಷ್ಯ 31 ವರ್ಷಗಳಿಂದ 65ಕ್ಕೇರಿದೆ. ಇದು ಜನಸಮುದಾಯದ ಆರೋಗ್ಯದ ಸಂಕೇತ ಎನ್ನುವುದಾದರೆ, ಇದೇ ಅವಧಿಯಲ್ಲಿ ಲೋಕಸಭೆಗಳ ಆಯುಷ್ಯ ಕಡಿಮೆಯಾಗುತ್ತಾ ಬಂದಿರುವುದಕ್ಕೆ ಏನೆನ್ನಬೇಕು? ಪ್ರಜಾತಂತ್ರಕ್ಕೆ ತಗಲಿದ ರೋಗ ಎಂದೇ? ಹಾಗಿದ್ದರೆ ಅನುಮಾನ ಬೇಡ, ರೋಗದ ಲಕ್ಷಣಗಳು ಮತ್ತೆ ಕಾಣಿಸಿಕೊಂಡಿವೆ– ಹದಿನಾಲ್ಕನೇ ಲೋಕಸಭೆ ಮಾತ್ರವಲ್ಲ ಕರ್ನಾಟಕ ವಿಧಾನಸಭೆಯ ತಲೆ ಮೇಲೂ ಮಧ್ಯಂತರ ಚುನಾವಣೆಯ ತೂಗುಕತ್ತಿ ನೇತಾಡುತ್ತಿದೆ.

ಲೋಕಸಭೆಗಳೆಲ್ಲಾ ಪೂರ್ಣಾಯುಷ್ಯ ಹೊಂದಿದ್ದರೆ ಇಲ್ಲಿಯವರೆಗೆ ಹನ್ನೊಂದು ಚುನಾವಣೆಗಳು ಮಾತ್ರ ನಡೆಯಬೇಕಾಗಿತ್ತು. ನಡೆದಿರುವುದು ಹದಿನಾಲ್ಕು. 1991ರಿಂದ 1999ರ ಎಂಟು ವರ್ಷಗಳ ಅವಧಿಯಲ್ಲಿ ನಾಲ್ಕು ಲೋಕಸಭಾ ಚುನಾವಣೆಗಳು ನಡೆದಿವೆ. ಅರವತ್ತು ವರ್ಷಗಳ ಅವಧಿಯಲ್ಲಿ ನಡೆದ ವಿಧಾನಸಭಾ ಚುನಾವಣೆಗಲು 279. 1989ರಿಂದ 2006ರವರೆಗಿನ ಅವಧಿಯಲ್ಲಿಯೇ 109 ವಿಧಾನಸಭಾ ಚುನಾವಣೆಗಲು ಬಿಹಾರದಲ್ಲಿ ಒಂದೇ ವರ್ಷ ಎರಡು ಚುನಾವಣೆಗಳು.

ಪ್ರಜಾಪ್ರಭುತ್ವ ಇಷ್ಟೊಂದು ದುಬಾರಿಯೇ? ನಿಜವಾದ ಲೆಕ್ಕ ಇನ್ನೂ ಮುಗಿದಿಲ್ಲ, ಇಲ್ಲಿದೆ ನೋಡಿ–ಚುನಾವಣೆ ಎನ್ನುವುದು ಮತದಾರರು ಒಂದಷ್ಟು ಬಿಡುವು ಸಮಯ ಹೊಂದಿಸಿಕೊಂಡು ಮತದಾನ ಮಾಡಿಹೋಗುವುಷ್ಟು ಸರಳ ಅಲ್ಲ. ಪೋಸ್ಟರ್, ಬ್ಯಾನರ್, ಬಂಟಿಂಗ್ಸ್, ಬ್ಯಾಡ್ಜ್, ಬಾವುಟ, ಟೋಪ್ಪಿ, ಕಾರು–ಬಸ್–ಟ್ರಕ್, ಹೆಲಿಕಾಪ್ಟರ್–ವಿಮಾನ, ಆಡಿಯೋ–ವಿಡಿಯೋ, ಎಸ್‌ಎಎಸ್–ಇಮೇಲ್... ಒಂದು ಅಂದಾಜಿನ ಪ್ರಕಾರ 2004 ಲೋಕಸಭಾ ಚುನಾವಣೆಯಲ್ಲಿ ಈ ಎಲ್ಲ ಚುನಾವಣಾ ಪರಿಕರಗಳಿಗಾಗಿ ಅಭ್ಯರ್ಥಿಗಳು ಖರ್ಚು ಮಾಡಿದ ಹಣ ಹನ್ನೆರಡು ಸಾವಿರ ಕೋಟಿ ರೂಪಾಯಿ. ಇದು ಕೇಂದ್ರ ಬಜೆಟ್‌ಲ್ಲಿ ಗ್ರಾಮೀಣ ಅಭಿವೃದ್ಧಿಗೆ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿನ ಮೊತ್ತ. ಇದರಲ್ಲಿ ಅಕ್ರಮ ಎಂದು ಪರಿಗಣಿಸಲಾದ ದುಡ್ಡು, ಸೀರೆ, ಧೋತಿ, ಉಂಗುರ, ವಾಚ್, ಸಾರಾಯಿ ನೀಡಿದ ಮತ್ತು ಟಿಕೆಟ್ ಪಡೆಯಲು ಪಕ್ಷದ ನಿಧಿಗೆ ಕೊಟ್ಟ ದೇಣಿಗೆಯ ಲೆಕ್ಕ ಇಲ್ಲ. ಚುನಾವಣಾ ನೀತಿ ಸಂಹಿತೆಯ ಪ್ರಕಾರ ಲೋಕಸಭಾ ಅಭ್ಯರ್ಥಿಯ ಚುನಾವಣಾ ವೆಚ್ಚದ ಗರಿಷ್ಠ ಮಿತಿ 25 ಲಕ್ಷ ರೂಪಾಯಿ. (ಕೆಲವು ರಾಜ್ಯಗಳಲ್ಲಿ ಕಡಿಮೆ ಇದೆ). ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದರೆ ಪಕ್ಷೇತರರನ್ನು ಹೊರತುಪಡಿಸಿ ಕಳೆದ ಚುನಾವಣೆಯ ಕಣದಲ್ಲಿದ್ದ 5000 ಅಭ್ಯರ್ಥಿಗಳು ಖರ್ಚು ಮಾಡಬೇಕಾಗಿದ್ದ ಹಣ 2000 ಕೋಟಿ ರೂಪಾಯಿ. ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಕೊಟ್ಟ ಲೆಕ್ಕ ಇದನ್ನೇ ಹೇಳುತ್ತದೆ. ರಾಜಕಾರಣಿಗಳನ್ನು ನಂಬಬಹುದೇ?

ಲೋಕಸಭೆ– ವಿಧಾನಸಭೆಗಳ ಆಯುಷ್ಯ ಕ್ಷೀಣಿಸುತ್ತಾ ಹೋಗಲು ಕಾರಣ ಯಾರೆಂಬುದನ್ನು ಭಾರತದ ಚುನಾವಣಾ ಇತಿಹಾಸದ ಪುಟಗಳಲ್ಲಿ ಹುಡುಕಲು ಹೋದರೆ ಮೊದಲ ಅಪರಾಧಿ ಸ್ಥಾನದಲ್ಲಿ ಕಾಣುವುದು ಕಾಂಗ್ರೆಸ್ ಪಕ್ಷ. ಮೊದಲ ಬಾರಿ ಲೋಕಸಭಾ ಅವಧಿಯ ವೇಳಾಪಟ್ಟಿಯನ್ನು ಅಸ್ತವ್ಯಸ್ತಗೊಳಿಸಿದ್ದು ಇಂದಿರಾಗಾಂಧಿ. 1969ರಲ್ಲಿ ಕಾಂಗ್ರೆಸ್ ವಿಭಜನೆಗೆ ಕಾರಣಕರ್ತೆಯಾದ ಅವರು 1972ರಲ್ಲಿ ನಡೆಯಬೇಕಾಗಿದ್ದ ಚುನಾವಣೆಯನ್ನು ಒಂದು ವರ್ಷ ಮೊದಲೇ ಘೋಷಿಸಿ ಬಿಟ್ಟರು. 1952ರಿಂದ 1967ರ ವರೆಗಿನ ನಾಲ್ಕು ಲೋಕಸಭಾ ಚುನಾವಣೆಗಳು ನಿಗದಿತ ಅವಧಿಯಲ್ಲಿಯೇ ನಡೆದಿದ್ದವು. ತುರ್ತು ಪರಿಸ್ಥಿತಿ ಹೇರಿ 1976ರಲ್ಲಿ ನಡೆಯಬೇಕಾಗಿದ್ದ ಚುನಾವಣೆಯನ್ನು ಒಂದು ವರ್ಷ ಮುಂದೂಡಿದಾಗ ಆಗಲೇ ಅವರು ಸರ್ವಾಧಿಕಾರಿಯಾಗಿ ಪರಿವರ್ತನೆಗೊಂಡಿದ್ದರು.

ಕಾಂಗ್ರೆಸ್ ಎಂಬ ದೈತ್ಯ ಪಕ್ಷಕ್ಕೆ ಪರ್ಯಾಯವೇ ಇಲ್ಲವೆನ್ನುವ ನಿರಾಶೆಯ ಕತ್ತಲಲ್ಲಿ ಭರವಸೆಯ ಕೋಲ್ಮಿಂಚಿನಂತೆ ಕಾಣಿಸಿದ್ದು ಜನತಾ ಪ್ರಯೋಗ. ಜನತೆಯ ನಿರೀಕ್ಷೆ ಹುಸಿಯಾಗಲು ಬಹಳ ದಿನಗಳು ಬೇಕಾಗಲಿಲ್ಲ. ಇಬ್ಬರ ಪ್ರಧಾನಿಗಳನ್ನು

ದೇಶಕ್ಕೆ ನೀಡಿದ ಜನತಾ ಪಕ್ಷದ ಸರ್ಕಾರ ಮೂರು ವರ್ಷಗಳಲ್ಲಿ ಪತನಗೊಂಡಿತು. ಮತ್ತೆ 1980ರಲ್ಲಿ ಮಧ್ಯಂತರ ಚುನಾವಣೆ. ಇಂದಿರಾಗಾಂಧಿ ಮರಳಿ ಅಧಿಕಾರಕ್ಕೆ ಬಂದರೂ ಅದನ್ನು ಪೂರ್ಣಗೊಳಿಸಲು ಬದುಕುಳಿಯಲಿಲ್ಲ. ಇಂದಿರಾಗಾಂಧಿ ಹತ್ಯೆಯ ಲಾಭ ಪಡೆಯಲು ಹೊರಟ ಕಾಂಗ್ರೆಸ್ ಪೂರ್ಣಾವಧಿಗೆ ಒಂದು ವರ್ಷ ಇರುವಾಗಲೇ 1984ರಲ್ಲಿ ಲೋಕಸಭೆ ವಿಸರ್ಜಿಸಿ ಚುನಾವಣೆ ಘೋಷಿಸಿತು. ನಿರೀಕ್ಷೆಯಂತೆ ದೈತ್ಯ ಬಹುಮತ. 1971ರ ನಂತರ ಮೊದಲ ಬಾರಿ ಎಂಟನೇ ಲೋಕಸಭೆಗೆ ಪೂರ್ಣ ಆಯುಷ್ಯ.

1989ರಲ್ಲಿ ಕಾಂಗ್ರೆಸ್ ಸೋಲಿನಿಂದ ಮೈತ್ರಿಯುಗದ ಹೊಸಶಕೆ ದೇಶದಲ್ಲಿ ಪ್ರಾರಂಭ. ಪ್ರಥಮ ಚುಂಬನ ದಂತಭಗ್ನ. ಒಂದೂವರೆ ವರ್ಷಗಳಲ್ಲಿ ಇಬ್ಬರು ಪ್ರಧಾನಿಗಳು. ಕೊನೆಗೂ 1991ರಲ್ಲಿ ಮಧ್ಯಂತರ ಚುನಾವಣೆ. ರಾಜೀವ್‌ಗಾಂಧಿ ಹತ್ಯೆಯ ಅನುಕಂಪದ ಅಲೆಯೇರಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ. ಸರ್ಕಾರ ಅಲ್ಪಮತದ್ದು. ಲೋಕಸಭೆ ಮಾತ್ರ ಪೂರ್ಣಾವಧಿ ಬಾಳಿತ್ತು. ಅದು ಪಿ.ವಿ. ನರಸಿಂಹರಾವ್ ಎಂಬ ಚಾಣಕ್ಯನ ರಾಜಕೀಯ ಚಾಕಚಕ್ಯತೆ. ಅದರ ನಂತರದ ಮೂರು ವರ್ಷಗಳ ಅವಧಿಯಲ್ಲಿ (1996, 1998, 1999) ದೇಶ ಮೂವರು ಪ್ರಧಾನಿಗಳು (ಅವರಲ್ಲೊಬ್ಬರು ಎಚ್.ಡಿ. ದೇವೇಗೌಡರು) ಮತ್ತು ಮೂರು ಚುನಾವಣೆಗಳ ಭಾರ ಹೊರಬೇಕಾಯಿತು. ಈಗ ಮತ್ತೆ?

ಲೋಕಸಭೆಯ ಅವಧಿಯನ್ನು ಐದು ವರ್ಷಗಳಿಗೆ ಕಡ್ಡಾಯಗೊಳಿಸುವುದು ಮಧ್ಯಂತರ ಚುನಾವಣೆಯ ರೋಗಕ್ಕೆ ಮದ್ದಾಗಬಹುದೇ? ಎನ್‌ಡಿಎ ಅಧಿಕಾರವಧಿಯಲ್ಲಿ ಎಲ್.ಕೆ. ಅಡ್ವಾಣಿ ಈ ವಿಷಯವನ್ನು ಚರ್ಚೆಗೆ ತೇಲಿಬಿಟ್ಟಿದ್ದರು. ಅವರು ಉದಾಹರಣೆ ನೀಡಿದ್ದು ಜರ್ಮನಿಯದ್ದು. ಅಲ್ಲಿನ ಸಂಸತ್‌ನಲ್ಲಿ ಪರ್ಯಾಯ ವ್ಯವಸ್ಥೆ ಇಲ್ಲದೆ ಯಾರೂ ಸರ್ಕಾರದ ವಿರುದ್ಧ ಅವಿಶ್ವಾಸಮತ ಮಂಡಿಸುವಂತಿಲ್ಲ. ಇದು ಮಾದರಿ ವ್ಯವಸ್ಥೆ ಆಗಬಲ್ಲುದೇ? ಸಂಬಳ, ಭತ್ಯೆ, ಬಂಗಲೆ, ಕಾರು, ಫೋನ್ ಮೊದಲಾದ ಸಕಲ ಸವಲತ್ತುಗಳನ್ನು ಅನುಭವಿಸುತ್ತಿರುವ ನಮ್ಮ ಜನಪ್ರತಿನಿಧಿಗಳ ಪಾಲಿಗೆ ಇಲ್ಲದಿರುವುದೆಂದರೆ, ಐದು ವರ್ಷಗಳ ಭದ್ರತೆ ಮಾತ್ರ. ಅವಧಿ ಕಡ್ಡಾಯಗೊಳಿಸುವುದರಿಂದ ಆ ಸವಲತ್ತನ್ನೂ ನೀಡಿದಂತಾಗಬಹುದು. ಆಮೇಲೆ ಅವರನ್ನು ಹಿಡಿಯುವರ್‍ಯಾರು? ಕಡ್ಡಾಯ ಅವಧಿ ಲೋಕಸಭೆಗೆ ಭದ್ರತೆ ಒದಗಿಸಬಹುದೇ ವಿನಃ ಸರ್ಕಾರಕ್ಕೆ ಅಲ್ಲ ಎನ್ನುವುದು ಗಮನಾರ್ಹ.

ರಾಜಕೀಯ ಅಸ್ಥಿರತೆಗಿಂತ ಭದ್ರತೆಯೇ ದೇಶಕ್ಕೆ ಹೆಚ್ಚು ಹಾನಿ ಎನ್ನುವವರಿದ್ದಾರೆ.. ಅಂತಹವರು ದುರ್ಗಿ ಇಂದಿರಾಗಾಂಧಿಯ ಅವತಾರವನ್ನು ನೆನಪಿಸುತ್ತಾರೆ. ರಾಜಕೀಯ ಅಸ್ಥಿರತೆಯಿಂದ ದೇಶ ಬೇರು ಸಹಿತ ಅಲುಗಾಡಿ

ಹೊಸತನದ ಬೇರುಬಿಟ್ಟು ಸೊಂಪಾಗಿ ಬೆಳೆಯಬಹುದೆನ್ನುವುದು ಅಂತಹ ಆಶಾವಾದಿಗಳ ಅಭಿಪ್ರಾಯ. ಒಂದು ಉದಾಹರಣೆ ಇದೆ– 1946ರಿಂದ 1955ರವರೆಗೆ ಫ್ರಾನ್ಸಿನಲ್ಲಿ ಉರುಳಿದ ಸರ್ಕಾರಗಳಿಗೆ ಲೆಕ್ಕ ಇಲ್ಲ. 1952ರಲ್ಲಿ ಒಂದೇ ದಿನ ಅಲ್ಲಿ ಎರಡು ಸರ್ಕಾರಗಳು ಉರುಳಿದ್ದವು. ಅದು ಆ ದೇಶಕ್ಕೆ ಹಾನಿ ಉಂಟುಮಾಡಲಿಲ್ಲ. ಅಲ್ಲಿನ ಜನ ಭವಿಷ್ಯದ ಬಗ್ಗೆ ಚಿಂತನೆಗಿಳಿದರು, ಡಿಗಾಲ್ ಎನ್ನುವ ಯುದ್ಧ ಕಾಲದ ವೀರಯೋಧನನ್ನು ದೇಶದ ನೇತಾರನನ್ನಾಗಿ ರೂಪಿಸಿದರು. ತಮ್ಮ ಆಶೋತ್ತರಕ್ಕೆ ಅನುಗುಣವಾಗಿ ರಾಜ್ಯಾಂಗವನ್ನು ಬದಲಾಯಿಸಿದರು. 50 ವರ್ಷಗಳಲ್ಲಿ ಫ್ರಾನ್ಸ್ ಅಪ್ಪಟ ಜನತಂತ್ರವಾದಿ, ಸಮೃದ್ಧ ನಾಡಾಗಿ ವಿಕಾಸ ಹೊಂದಿದೆ. ಪ್ರಜಾಪ್ರಭುತ್ವದ ಭವಿಷ್ಯ ಜನರ ಕೈಯಲ್ಲಿದೆ, ಅತ್ಯುತ್ತಮವಾದದ್ದಕ್ಕೆ ಆಶಿಸೋಣವೇ! (ಹೋಪ್ ಫಾರ್ ದಿ ಬೆಸ್ಟ್).

O

(26-08-2007)

ಸಮದರ್ಶಿಯ ಸವಾಲುಗಳು

ರಾಷ್ಟ್ರಪತಿ ಹುದ್ದೆ ಎನ್ನುವುದು ತುರ್ತುಕಾಲದ ದೀಪ ಇದ್ದ ಹಾಗೆ. ಬಿಕ್ಕಟ್ಟು ಉದ್ಭವವಾದಾಗ ತನ್ನಿಂದ ತಾನೇ ಹತ್ತಿಕೊಳ್ಳುತ್ತದೆ. ಅದು ನಿವಾರಣೆಯಾಗುತ್ತಿದ್ದಂತೆ ಆರಿಹೋಗುತ್ತದೆ – ಈ ಮಾತನ್ನು ಹೇಳಿದವರು ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನ್. ಆಗಿನ್ನೂ ಏಕಪಕ್ಷದ ಚಕ್ರಾಧಿಪತ್ಯ, ಈಗಿನಷ್ಟು ದುರ್ಬಲಗೊಂಡಿರಲಿಲ್ಲ, ಮೈತ್ರಿಕೂಟದ ಯುಗ ಇನ್ನೂ ಪೂರ್ಣಪ್ರಮಾಣದಲ್ಲಿ ತೆರೆದುಕೊಂಡಿರಲಿಲ್ಲ. ವಿರೋಧಪಕ್ಷಗಳು ಸರ್ಕಾರದ ವಿರುದ್ಧ ದೂರು ನೀಡಲು ತಿಂಗಳೆರಡು ಬಾರಿ ರಾಷ್ಟ್ರಪತಿ ಮನೆ ಬಾಗಿಲು ತಟ್ಟುತ್ತಲೂ ಇರಲಿಲ್ಲ. ಕಾಲ ಬದಲಾಗಿದೆ, ಅದರಂತೆ ರಾಜಕೀಯ ಕೂಡಾ. ಬಿಕ್ಕಟ್ಟು ದಿನಚರಿಯಾಗುತ್ತಿದೆ. ಪರಿಣಾಮ–ಆಗಾಗ ಪವರ್‌ಕಟ್. ತುರ್ತುಕಾಲದ ದೀಪ ಸದಾ ಉರಿಯುತ್ತಲೇ ಇರಬೇಕಾದ ಅನಿವಾರ್ಯ ಪರಿಸ್ಥಿತಿ.

ದೆಹಲಿಯ ರೈಸಿನಾ ಹಿಲ್‌ನ ತುದಿಯ ಸುಮಾರು 450 ಎಕರೆ ಉದ್ಯಾನದ ನಡುವಿನ ಐದು ಎಕರೆ ಜಾಗದಲ್ಲಿ ತಲೆ ಎತ್ತಿ ನಿಂತಿರುವ ರಾಷ್ಟ್ರಪತಿ ಭವನವನ್ನು ಭಾವುಕ ಕಣ್ಣುಗಳಿಂದ ನೋಡಿದರೆ, ಪ್ರಜಾಪ್ರಭುತ್ವದ ಅರಮನೆಯಂತೆಯೇ ಕಂಗೊಳಿಸುತ್ತದೆ. ಅಂದಮಾತ್ರಕ್ಕೆ ಅದರ ಒಳಗಿರುವವರನ್ನು ಅರಸ ಎಂದು ಹೇಳುವ ಹಾಗಿಲ್ಲ, ಅವರು ಸಂವಿಧಾನದ ಮನೆಯ ಕಾವಲುಗಾರ. ಸಂವಿಧಾನದ ಪ್ರಕಾರ

ರಾಷ್ಟ್ರಪತಿಯವರದ್ದು ಅತ್ಯುನ್ನತ ಗೌರವ ಮತ್ತು ಪ್ರತಿಷ್ಠೆಯ ಸ್ಥಾನ. ಅವರೇ ಸರ್ಕಾರದ ಯಜಮಾನರು. ಕೇಂದ್ರ ಸರ್ಕಾರದ ಎಲ್ಲ ಬಗೆಯ ಕಾರ್ಯಾಂಗ ಅಧಿಕಾರದ ದಂಡ ಅವರ ಕೈಯಲ್ಲಿ. ಸರ್ಕಾರದ ಪ್ರತಿಯೊಂದು ನಿರ್ಧಾರ ರಾಷ್ಟ್ರಪತಿಯವರ ನಾಮಸ್ಮರಣೆಯೊಂದಿಗೆ ಕಾರ್ಯರೂಪಕ್ಕೆ ಬರಬೇಕು. ಸೇನೆಯ ಸರ್ವೋಚ್ಚ ಮುಖ್ಯಸ್ಥರು ಕೂಡಾ ರಾಷ್ಟ್ರಪತಿಗಳು. ಪ್ರಧಾನಮಂತ್ರಿಯನ್ನು ಮಾತ್ರವಲ್ಲ, ಪ್ರಧಾನಿ ಸಲಹೆ ಮೇರೆಗೆ ಸಚಿವರ ನೇಮಕ ಕೂಡಾ ಅವರದ್ದೇ.

ರಾಷ್ಟ್ರಪತಿ ಹುದ್ದೆಯ ಈ ಪ್ರಭಾವಳಿ ಕಂಡು ಮೈಮರೆಯುವ ಮುನ್ನ ಸಂವಿಧಾನದ ಪುಟಗಳನ್ನು ತಿರುವುಹಾಕಬೇಕು. ಕೇಂದ್ರ ಸರ್ಕಾರ ತನ್ನ ಕಾರ್ಯಾಂಗ ಅಧಿಕಾರವನ್ನು ಸಂವಿಧಾನಕ್ಕೆ ಅನುಗುಣವಾಗಿ ರಾಷ್ಟ್ರಪತಿಯವರ ಮೂಲಕ ಕಾರ್ಯಗತಗೊಳಿಸಬೇಕು ಎಂದು ಸಂವಿಧಾನ ಹೇಳಿದೆ. ರಾಷ್ಟ್ರಪತಿಗಳು ಸಚಿವ ಮಂಡಳಿಯ ನೆರವು ಮತ್ತು ಸಲಹೆ ಮೇರೆಗೆ ಕಾರ್ಯನಿರ್ವಹಿಸಬೇಕು ಎಂದು ಸಂವಿಧಾನದ 74 (1)ನೇ ಪರಿಚ್ಛೇದ ಹೇಳುತ್ತಿದೆ. ರಾಷ್ಟ್ರಪತಿ ಸಂವಿಧಾನದ ಮುಖ್ಯಸ್ಥರಾದರೂ ಅವರು ಸಚಿವ ಮಂಡಳಿಯ ಸಲಹೆಯಂತೆಯೇ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹಲವಾರು ತೀರ್ಪುಗಳಲ್ಲಿ ಹೇಳಿದೆ.

ಅಂದರೆ ರಾಷ್ಟ್ರಪತಿಗಳು ಆಡಳಿತಾರೂಢರ ಕೈಯಲ್ಲಿನ ರಬ್ಬರ್‌ಸ್ಟಾಂಪ್ ಎನ್ನುವ ಕೊಂಕುನುಡಿ ನಿಜವೇ? ಇದಕ್ಕೆ ಉತ್ತರ-ರಾಷ್ಟ್ರಪತಿಗಳಾಗುವ ವ್ಯಕ್ತಿಯನ್ನು ಅವಲಂಬಿಸಿದೆ. ವಿವೇಚನೆಯನ್ನು ಬಳಸಿ ನಿರ್ಧಾರ ಕೈಗೊಳ್ಳಬೇಕಾದ ಪರಿಸ್ಥಿತಿಯನ್ನು ಪ್ರತಿಯೊಬ್ಬ ರಾಷ್ಟ್ರಪತಿ ಎದುರಿಸುತ್ತಾರೆ. ಅಂತಹ ಸಂದರ್ಭಗಳಲ್ಲಿನ ಅವರ ಕಾರ್ಯನಿರ್ವಹಣೆ ಮೇಲೆ ಇತಿಹಾಸದ ಪುಟಗಳಲ್ಲಿ ಅವರ ವ್ಯಕ್ತಿತ್ವದ ಚಿತ್ರ ದಾಖಲಾಗುತ್ತದೆ. ಈವರೆಗಿನ ರಾಷ್ಟ್ರಪತಿಗಳ ಹೆಸರಿನ ಕೆಳಗೆ ಕೆಂಪುಗೆರೆ ಕಾಣಿಸಿಕೊಂಡಿದ್ದರೆ ಅದು ಮುಖ್ಯವಾಗಿ ಎರಡು ಕಾರಣಗಳಿಗಾಗಿ. ಮೊದಲನೆಯದ್ದು, ಕೇಂದ್ರದಲ್ಲಿ ಚುನಾವಣೆಯ ನಂತರ ಹೊಸ ಸರ್ಕಾರದ ರಚನೆ. ಎಡನೆಯದ್ದು ರಾಜ್ಯಗಳಲ್ಲಿನ ಚುನಾಯಿತ ಸರ್ಕಾರದ ವಿಸರ್ಜನೆ. ಎರಡೂ ಸಂದರ್ಭಗಳಲ್ಲಿ ರಾಷ್ಟ್ರಪತಿಗಳು ಸಂಪೂರ್ಣ ಅಸಹಾಯಕರೇನಲ್ಲ.

ಕೇಂದ್ರದಲ್ಲಿ ಒಂದು ಪಕ್ಷ ಇಲ್ಲವೇ ಮೈತ್ರಿಕೂಟಕ್ಕೆ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಸಿಗದೆ ಹೋದಾಗ ಹೊಸ ಸರ್ಕಾರ ಯಾವ ಪಕ್ಷದ್ದು ಎಂದು ನಿರ್ಧರಿಸುವ ಅಧಿಕಾರ ರಾಷ್ಟ್ರಪತಿಯ ಕೈಯಲ್ಲಿರುತ್ತದೆ. ಆಗ ಸಲಹೆ ನೀಡಲು ಸಚಿವ ಮಂಡಳಿ ಅಸ್ತಿತ್ವದಲ್ಲಿ ಇರದಿರುವ ಕಾರಣ, ರಾಷ್ಟ್ರಪತಿಯವರದ್ದೇ ಸ್ವತಂತ್ರ ನಿರ್ಧಾರ ಮೈತ್ರಿಕೂಟದ ಯುಗದಲ್ಲಿನ ರಾಷ್ಟ್ರಪತಿಗಳಿಗೆಲ್ಲ ಇದೊಂದು ದೊಡ್ಡ ಸವಾಲು. ಆದರೆ ಈ ಸಾಲಲ್ಲಿ ಬಂದವರು ನಿರಾಶೆಗೊಳಿಸಿಲ್ಲ. ಬಹುಮತ ಇಲ್ಲದ ಅಟಲ್ ಬಿಹಾರಿ

ವಾಜಪೇಯಿ ಅವರಿಗೆ 1996ರಲ್ಲಿ ಸರ್ಕಾರ ರಚನೆಗೆ ಅವಕಾಶ ನೀಡುವಾಗ ಶಂಕರ್‌ದಯಾಳ್ ಶರ್ಮಾ ಅವರಿಗೆ ತನ್ನ ಕಾಂಗ್ರೆಸ್ ಹಿನ್ನೆಲೆ ಅಡ್ಡಿಯಾಗಲಿಲ್ಲ. ಆದರೆ ಹದಿಮೂರು ದಿನಗಳೊಳಗೆ ಆ ಸರ್ಕಾರ ಪತನಗೊಂಡಿತ್ತು. ಹದಿಮೂರು ತಿಂಗಳ ಕಾಲ ಪ್ರಧಾನಿಯಾದ ವಾಜಪೇಯಿ ಅವರಿಗೆ ಸರ್ಕಾರ ರಚನೆಯ ಅವಕಾಶ ನೀಡಿದಾಗ ಕೆ.ಆರ್. ನಾರಾಯಣನ್ ಅವರನ್ನು ಕಾಂಗ್ರೆಸಿಗರೆಂದು ಯಾರೂ ಹೇಳಿರಲಿಲ್ಲ. ಆದರೆ ಎಐಎಡಿಎಂಕೆ ಬೆಂಬಲ ವಾಪಸು ಪಡೆದ ನಂತರ ವಾಜಪೇಯಿ ಸರ್ಕಾರ ಬಹುಮತ ಸಾಬೀತುಪಡಿಸಬೇಕೆಂದು ನಾರಾಯಣನ್ ಬಯಸಿದಾಗ ಅವರ ಕಾಂಗ್ರೆಸ್ ಹಿನ್ನೆಲೆಯು ಗುಸುಗುಸು ಹರಡಿತು. ಅದೇ ನಾರಾಯಣನ್, ಸೋನಿಯಾಗಾಂಧಿ ಅವರ 272 ಸದಸ್ಯರ ಬೆಂಬಲದ ಹೇಳಿಕೆಯನ್ನು ಒಪ್ಪಿಕೊಂಡಿರಲಿಲ್ಲ. ರಾಷ್ಟ್ರಪತಿ ಹುದ್ದೆಯನ್ನು ಇಂತಹ ರಾಜಕೀಯ ವಿವಾದದಿಂದ ದೂರ ಇರಿಸಬೇಕೆಂಬ ಉದ್ದೇಶದಿಂದಲೇ ಪ್ರಧಾನಿಯನ್ನು ಲೋಕಸಭೆಯೇ ಆರಿಸಬೇಕು ಮತ್ತು ಸದನದಲ್ಲಿ ಅವಿಶ್ವಾಸಮತದ ಮೂಲಕವೇ ಅವರನ್ನು ಪದಚ್ಯುತಿಗೊಳಿಸಬೇಕು ಎನ್ನುವ ಸಲಹೆಯನ್ನು ಸಂವಿಧಾನ ಕಾರ್ಯನಿರ್ವಹಣೆಯ ಪುನರ್‌ಪರಿಶೀಲನೆಯ ರಾಷ್ಟ್ರೀಯ ಆಯೋಗ ಸಲಹೆ ನೀಡಿದೆ.

ರಾಷ್ಟ್ರಪತಿಗಳ ತಲೆಮೇಲೆ ಸದಾ ತೂಗುತ್ತಿರುವ ಇನ್ನೊಂದು ವಿವಾದ ಕತ್ತಿ– ಸಂವಿಧಾನದ 356ನೇ ಪರಿಚ್ಛೇದ ಮೂಲಕ ನಡೆಯುವ ರಾಜ್ಯ ಸರ್ಕಾರಗಳ ವಿಸರ್ಜನೆ. ಸ್ವತಂತ್ರ ಭಾರತದಲ್ಲಿ ನೂರಕ್ಕೂ ಹೆಚ್ಚು ಬಾರಿ ಈ ಅಸ್ತ್ರದ ಪ್ರಯೋಗ ನಡೆದಿದೆ. ಕೇಂದ್ರದ ಆಡಳಿತ ಪಕ್ಷ, ರಾಜಭವನದಲ್ಲಿ ಕೂರಿಸಿರುವ ಕೈಗೊಂಬೆ ರಾಜ್ಯಪಾಲರ ಮೂಲಕ ವರದಿ ತರಿಸಿ ರಾತ್ರೋರಾತ್ರಿ ರಾಜ್ಯ ಸರ್ಕಾರಗಳನ್ನು ವಿಸರ್ಜಿಸಿ ರಾಷ್ಟ್ರಪತಿ ಅಂಕಿತ ಹೇರಿದ ಉದಾಹರಣೆಗಳಿವೆ. ಇದರಲ್ಲಿ ಕಾಂಗ್ರೆಸಿಗರು ನಿಸ್ಸೀಮರು. ಅವಕಾಶ ಸಿಕ್ಕಿದಾಗ ಉಳಿದವರೂ ಹಿಂದೆ ಬಿದ್ದಿಲ್ಲ. ಈ ವಿಷಯದಲ್ಲಿ ಇತ್ತೀಚಿನ ರಾಷ್ಟ್ರಪತಿಗಳು ಸಂಪೂರ್ಣ ಅಸಹಾಯಕರೇನಲ್ಲ. ಜನತಾ ಸರ್ಕಾರ 1978ರಲ್ಲಿ ಸಂವಿಧಾನದ 74ನೇ ಪರಿಚ್ಛೇದಕ್ಕೆ ಮಾಡಿದ 44ನೇ ತಿದ್ದುಪಡಿಯ ನಂತರ, ರಾಷ್ಟ್ರಪತಿಗಳು ಸಚಿವ ಸಂಪುಟದ ತೀರ್ಮಾನವನ್ನು ಒಂದು ಬಾರಿ ತಿರಸ್ಕರಿಸಬಹುದು. ಆದರೆ ಸಚಿವ ಸಂಪುಟ ಮತ್ತೊಂದು ಬಾರಿ ಅಂಗೀಕರಿಸಿ ಕಳುಹಿಸಿದರೆ ಒಪ್ಪಿಗೆಯ ಮುದ್ರೆ ಒತ್ತುವುದು ಅನಿವಾರ್ಯ.

ಈ ತಿದ್ದುಪಡಿಯನ್ನು ಬಳಸಿಕೊಂಡು ತನ್ನ ಅಧಿಕಾರವನ್ನು ಮೊದಲು ಸ್ಥಾಪಿಸಿದ್ದು ರಾಷ್ಟ್ರಪತಿ ಕೆ.ಆರ್. ನಾರಾಯಣನ್. ಉತ್ತರಪ್ರದೇಶದ ಕಲ್ಯಾಣ್‌ಸಿಂಗ್ ಸರ್ಕಾರದ ವಿಸರ್ಜನೆಗೆ ಐ.ಕೆ. ಗುಜ್ರಾಲ್ ವಾಜಪೇಯಿ ಸಚಿವ ಸಂಪುಟ, ಬಿಹಾರದ ಲಾಲುಪ್ರಸಾದ್ ಯಾದವ್ ಸರ್ಕಾರದ ವಿಸರ್ಜನೆಗೆ ಕೈಗೊಂಡ ತೀರ್ಮಾನವನ್ನು ಕೂಡಾ ಅವರು ಒಪ್ಪಿಕೊಳ್ಳಲಿಲ್ಲ. ಎರಡೂ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ

ಎರಡನೇ ಬಾರಿಗೆ ತನ್ನ ತೀರ್ಮಾನಗಳನ್ನು ರಾಷ್ಟ್ರಪತಿಯವರಿಗೆ ಕಳುಹಿಸಿಕೊಡಲಿಲ್ಲ. ಆದರೆ ಎರಡು ವರ್ಷಗಳ ಹಿಂದೆ ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವುದಕ್ಕಾಗಿ, ಮಧ್ಯರಾತ್ರಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಯುಪಿಎ ಸರ್ಕಾರ ಕೈಗೊಂಡ ನಿರ್ಧಾರಕ್ಕೆ ದೂರದ ರಷ್ಯಾದಲ್ಲಿಯೇ ಕೂತು ಎ.ಪಿ.ಜೆ. ಅಬ್ದುಲ್ ಕಲಾಂ ಅಂಕಿತ ಹಾಕಿಬಿಟ್ಟರು.

ನೂತನ ರಾಷ್ಟ್ರಪತಿಗೆ ಮುಂದಿನ ಒಂದು-ಒಂದೂವರೆ ವರ್ಷದ ಅವಧಿ ನಿಜಕ್ಕೂ ನಿಶ್ಚಿಂತೆಯ ಕಾಲ. ಈ ಅವಧಿಯಲ್ಲಿ ಚುನಾವಣೆ ನಡೆಯಲಿರುವ ಗುಜರಾತ್, ಮಧ್ಯಪ್ರದೇಶ, ರಾಜಸ್ತಾನ, ದೆಹಲಿ ಮೊದಲಾದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳೇ ಇಲ್ಲದಿರುವ ಕಾರಣ ಮೈತ್ರಿಕೂಟದ ಸಂಘರ್ಷಗಳೂ ಇಲ್ಲ. ಬಿಹಾರ-ಉತ್ತರಪ್ರದೇಶಗಳಲ್ಲಿ ಮಧ್ಯಂತರ ತಳಮಳ ಪ್ರಾರಂಭವಾಗದೆ ಹೋದರೆ ರಾಷ್ಟ್ರಪತಿಗೆ ಚೊಚ್ಚಲ ಅಗ್ನಿಪರೀಕ್ಷೆ ಎದುರಾಗಲಿರುವುದು ಮುಂದಿನ ಲೋಕಸಭಾ ಚುನಾವಣೆಯ ನಂತರ.

ರಾಷ್ಟ್ರೀಯ ಪಕ್ಷಗಳ ಬಲ ಕರಗುತ್ತಿದೆ. ಪ್ರಾದೇಶಿಕ ಪಕ್ಷಗಳ ಹಿಡಿತ ಬಿಗಿಗೊಳ್ಳುತ್ತಿದೆ. ಸೆಕ್ಯುಲರ್-ಕಮ್ಯುನಲ್ ಹಣೆಪಟ್ಟಿಗಳು ಮಸುಕಾಗುತ್ತಿವೆ-ಇವೆಲ್ಲವೂ ತಲೆ ಎಣಿಕೆ ರಾಜಕೀಯದ ದಿನಗಳ ಮುನ್ಸೂಚನೆಗಳು. ಸಮದರ್ಶಿಯಂತೆ ಇರಬೇಕಾದ ನೂತನ ರಾಷ್ಟ್ರಪತಿ ಲೆಕ್ಕ ತಪ್ಪಬಾರದು ಅಷ್ಟೇ.

(17-06-2007)

ಉತ್ತರದ ನಿರೀಕ್ಷೆಯಲ್ಲಿ ಲಂಚದ ಪ್ರಶ್ನೆ

ಇದೀಗ ಬಹಿರಂಗವಾಗಿರುವ ಸಂಸದರ ಲಂಚ ಹಗರಣ ಜನಸಾಮಾನ್ಯರಿಗೆ ಹೊಸದೆನ್ನಿಸಬಹುದು. ಆದರೆ ಹಣ ಕೊಟ್ಟು ಪ್ರಶ್ನೆ ಕೇಳಿಸುವ ಪರಿಪಾಠ ಬಹಳ ಕಾಲದಿಂದ ನಡೆಯುತ್ತ ಬಂದಿರುವುದು ದೆಹಲಿ ರಾಜಕೀಯದ ಒಳಹೊರಗು ಗೊತ್ತಿರುವವರಿಗೆ ಹೊಸದೇನೂ ಅಲ್ಲ.

ಹೊಸದೆಹಲಿಯ ಸಂಸತ್ ಸದಸ್ಯರ ಬಂಗಲೆಗಳ ಹೊಕ್ಕುಬಳಕೆ ಇರುವವರಿಗೆ ಈ ವ್ಯಕ್ತಿಗಳು ಅಪರಿಚಿತರೇನಲ್ಲ. ಅರವತ್ತರ ಆಜುಬಾಜಿನಲ್ಲಿರುವ, ಹಿಂದಿ-ಇಂಗ್ಲಿಷ್ ಸುಲಲಿತವಾಗಿ ಮಾಡನಾಡಬಲ್ಲ, ಸಂಸತ್ ಭವನದೊಳಗಡೆ ಸಂಪರ್ಕ ಇರುವ ನಿಗೂಢ ನಡವಳಿಕೆಯ ಈ ವ್ಯಕ್ತಿಗಳು ಒಳಪ್ರವೇಶಿಸಿದ ಕೂಡಲೇ ಕೈಯಲ್ಲಿರುವ ಬ್ರೀಫ್‌ಕೇಸ್ ತರೆದು ಒಂದಷ್ಟು ಕಾಗದಪತ್ರಗಳನ್ನು ಸಂಸದರ ಮುಂದೆ ಹರಡುತ್ತಾರೆ. ಸಂಸದ ಮಹಾಶಯರು ಅವುಗಳಲ್ಲಿ ಕೆಲವನ್ನು ಆರಿಸಿಕೊಳ್ಳುತ್ತಾರೆ. ಇನ್ನು ಕೆಲವನ್ನು ಪಕ್ಕಕ್ಕೆ ಸರಿಸುತ್ತಾರೆ. ಕೆಲಸ ಮುಗಿದಕೂಡಲೇ ಬ್ರೀಫ್‌ಕೇಸ್ ವ್ಯಕ್ತಿ ಬಂದಷ್ಟೇ ನಿಶ್ಶಬ್ದವಾಗಿ ನಿರ್ಗಮಿಸುತ್ತಾನೆ. ಅವರು ಕೊಟ್ಟದ್ದು, ಇವರು ಆರಿಸಿದ್ದು ಸಂಸತ್‌ನಲ್ಲಿ ಕೇಳಬಹುದಾದ ಪ್ರಶ್ನೆಗಳು. ನಿಧಾನವಾಗಿ ಲೆಕ್ಕಚುಕ್ತಾ ನಡೆಯುತ್ತದೆ.

ಇವರನ್ನು ಪ್ರಶ್ನೆ ಬ್ರಹ್ಮರು ಎಂದು ಕರೆಯಬಹುದು. ಎಷ್ಟೋ ವರ್ಷಗಳಿಂದ ಇವರು ಸ ಸತ್‌ಸದಸ್ಯರ ಮೂಲಕ ದೇಶದ ಸೇವೆ ಮಾಡಿಕೊಂಡು ಬಂದಿದ್ದಾರೆ.

ಪ್ರಶ್ನೆಗಳನ್ನು ತಯಾರಿಸಿ ಅದನ್ನು ಮಾರಾಟ ಮಾಡುವ ಕಾಯಕ ಇವರದ್ದು. ಅನಾವೃಷ್ಟಿ ಇರಲಿ, ಅತಿವೃಷ್ಟಿ ಬರಲಿ ಒಂದು ದಿನ ಕೂಡಾ ಸಂಸತ್‌ನಲ್ಲಿ ಬಾಯಿಬಿಚ್ಚದ ಸಂಸದರು, ಹಠಾತ್ತನೇ ಅಣುಶಕ್ತಿ ಕಾಯಿದೆಯ ಪುನರ್ ಪರಿಶೀಲನೆ, ಬಾಹ್ಯಾಕಾಶ ತಂತ್ರಜ್ಞಾನದ ಇತ್ತೀಚಿನ ಬೆಳವಣಿಗೆಗಳು, ಶಸ್ತ್ರಾಸ್ತ್ರ ಖರೀದಿ ಒಪ್ಪಂದಗಳು..... ಇತ್ಯಾದಿ ವಿಷಯಗಳ ಬಗ್ಗೆ ಪ್ರಶ್ನೆ ಕೇಳುವ ಸರ್ವಜ್ಞರು ಹೇಗಾದರು ಎಂದು ಯಾರಾದರೂ ಅಚ್ಚರಿಪಟ್ಟರೆ ಅದಕ್ಕೆ ಕಾರಣ ಇದು.

ತಮ್ಮ ಹೆಸರಿನಲ್ಲಿ ಒಂದು ಪ್ರಶ್ನೆ ದಾಖಲಾಗುವುದನ್ನು ಬಿಟ್ಟರೆ ಸಾಮಾನ್ಯವಾಗಿ ಇದರಲ್ಲಿ ಸಂಸದರಿಗೆ ವೈಯುಕ್ತಿವಾದ ಹೆಚ್ಚಿನ ಲಾಭ ಏನಿಲ್ಲ. ಹೆಚ್ಚಿನವು ಲಿಖಿತ ಉತ್ತರ ಬಯಸುವ ಪ್ರಶ್ನೆಗಳಾಗಿರುವ ಕಾರಣ, ಸದನದಲ್ಲಿ ಎದ್ದು ನಿಂತು ಮಾತನಾಡಬೇಕಾದ ಕಷ್ಟವೂ ಇಲ್ಲ. ಆದರೆ ಪ್ರಶ್ನೆ ಬ್ರಹ್ಮರೆಲ್ಲರೂ ಅಮಾಯಕರೇನಲ್ಲ. ಇವರಲ್ಲಿ ಮೋಸಗಾರರೂ ಇದ್ದಾರೆ. ಅವನು ಮಾರಾಟವಾಗುವ ಪ್ರಶ್ನೆಗಳಿಗೆ ಸಿಗುವ ಜುಜುಬಿ ಹಣದಿಂದ ತೃಪ್ತರೇನಲ್ಲ. ಇಂತಹವರನ್ನು ತಮಗೆ ಬೇಕಾದ ಪ್ರಶ್ನೆಗಳನ್ನು ಸಂಸದರಿಂದ ಕೇಳಿಸಲು ಉದ್ಯಮಪತಿಗಳು ಬಳಸಿಕೊಳ್ಳುವುದುಂಟು. ಕೆಲವು ಉದ್ಯಮಪತಿಗಳು ಪ್ರಶ್ನೆ ಬ್ರಹ್ಮರ ಮೂಲಕ, ಇಲ್ಲವೇ ನೇರವಾಗಿ ಸಂಸದರನ್ನು ಸಂಪರ್ಕಿಸಿ ವ್ಯವಹಾರ ಮುಗಿಸಿಬಿಡುತ್ತಾರೆ. ಕ್ಯಾಮರಾದಲ್ಲಿ ಸೆರೆಯಾದ ಲಂಚಾವತಾರ ಸಂಸದರು ಈ ಗುಂಪಿನವರು.

ಪ್ರಶ್ನೋತ್ತರ ಅವಧಿ ಸಂಸತ್ ಅಧಿವೇಶನದ ಮಹತ್ವಪೂರ್ಣ ಕಲಾಪ. ದೆಹಲಿಯಲ್ಲಿರುವ ಸರ್ಕಾರ ಮತ್ತು ಹಳ್ಳಿಗಳಲ್ಲಿರುವ ಜನತೆಗೂ ಪ್ರಶ್ನೋತ್ತರವೇ ಪ್ರಮುಖ ಕೊಂಡಿ. ಸದಸ್ಯರ ಪ್ರಶ್ನೆಗಳಿಂದ ಸರ್ಕಾರಕ್ಕೆ ದೇಶದ ನಾಡಿಮಿಡಿತವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಸರ್ಕಾರದ ವಿವಿಧ ಇಲಾಖೆಗಳ ತಳಮಟ್ಟದ ಕಾರ್ಯವೈಖರಿ, ಯೋಜನೆಗಳ ಸಫಲತೆ-ವಿಫಲತೆ, ಸೌಲಭ್ಯಗಳ ದುರುಪಯೋಗ ಇತ್ಯಾದಿ ವಿಷಯಗಳನ್ನು ಒಂದು ಗಂಟೆಯ ಪ್ರಶ್ನೋತ್ತರದ ಅವಧಿಯಲ್ಲಿ ಸರ್ಕಾರ ತಿಳಿದುಕೊಳ್ಳಲು ಸಾಧ್ಯ. ಆ ಅನುಭವ, ನೀತಿ ರೂಪಿಸುವಾಗ, ಯೋಜನೆಗಳನ್ನು ರೂಪಿಸುವಾಗ ಸರ್ಕಾರಕ್ಕೆ ನೆರವಾಗುತ್ತದೆ.

ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮೂರು ಬಗೆಯ ಪ್ರಶ್ನೆಗಳನ್ನು ಕೇಳಲು ಅವಕಾಶ ಇದೆ. ಮೊದಲನೆಯದ್ದು ಚುಕ್ಕೆ ಗುರುತಿನ ಪ್ರಶ್ನೆ. ಇವುಗಳಿಗೆ ಸದನದಲ್ಲಿಯೇ ಸಚಿವರು ಉತ್ತರಿಸುತ್ತಾರೆ. ಪೂರಕ ಪ್ರಶ್ನೆ ಕೇಳಲು ಕೂಡಾ ಅವಕಾಶ ಇರುತ್ತದೆ. ಒಂದು ಬೈಠಕ್‌ನಲ್ಲಿ ಕೇವಲ 20 ಚುಕ್ಕೆ ಗುರುತಿನ ಪ್ರಶ್ನೆ ಕೇಳಲು ಅವಕಾಶ ಇರುತ್ತದೆ.

ಎರಡನೆಯದ್ದು ಚುಕ್ಕೆ ಗುರುತು ಇಲ್ಲದ ಪ್ರಶ್ನೆಗಳು. ಇವುಗಳಿಗೆ ಸದನದಲ್ಲಿ ಸಚಿವರು ಉತ್ತರ ನೀಡುವುದಿಲ್ಲ. ಪೂರಕ ಪ್ರಶ್ನೆಗಳಿಗೆ ಅವಕಾಶವೂ ಇರುವುದಿಲ್ಲ.

ಪ್ರಶ್ನೋತ್ತರ ಅವಧಿಯ ಕೊನೆಯಲ್ಲಿ ಈ ವಿಭಾಗದ ಪ್ರಶ್ನೆಗಳಿಗೆ ಸಂಬಂಧಿತ ಸಚಿವರು ನೀಡಿದ ಲಿಖಿತ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗುತ್ತದೆ. ಈ ವಿಭಾಗದ ಪ್ರಶ್ನೆಗಳ ಗರಿಷ್ಠ ಮಿತಿ 230.

ಮೂರನೆಯದ್ದು ಕಿರು ಅವಧಿ ಸೂಚನೆಯ ಪ್ರಶ್ನೆ. ಅತ್ಯಂತ ತುರ್ತಿನ ಸಾರ್ವಜನಿಕ ಹಿತದೃಷ್ಟಿಯ ಪ್ರಶ್ನೆಗಳನ್ನು ಕೇಳಲು ಈ ಅವಕಾಶವನ್ನು ಬಳಸಬಹುದು. ಚುಕ್ಕೆ ಗುರುತು ಇರುವ ಮತ್ತು ಇಲ್ಲದ ಪ್ರಶ್ನೆಗಳನ್ನು ಕನಿಷ್ಠ 10 ದಿನಗಳ ಮೊದಲು ಕಳುಹಿಸುವುದು ಕಡ್ಡಾಯವಾದರೆ, ಕಿರು ಅವಧಿ ಸೂಚನೆಯ ಪ್ರಶ್ನೆಗಳಿಗೆ ಈ ಅವಧಿಯನ್ನು ಸಡಿಲಿಸಲಾಗಿದೆ. ಆದರೆ ಈ ವಿಭಾಗದಲ್ಲಿ ಪ್ರಶ್ನೆ ಕೇಳಲು ಕಾರಣ ಏನೆಂಬುದನ್ನು ಹೇಳುವುದು ಕಡ್ಡಾಯ. ಉಳಿದ ಎರಡು ವಿಧದ ಪ್ರಶ್ನೆಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ. ಲಿಖಿತ ಉತ್ತರದ ಪ್ರಶ್ನೆಗಳಲ್ಲಿ ದುರುಪಯೋಗಕ್ಕೆ ಅವಕಾಶ ಹೆಚ್ಚು.

ದುರುದ್ದೇಶದ ಪ್ರಶ್ನೆಗಳು ಉತ್ತರದ ಅವಕಾಶ ಪಡೆಯಲು ಕೇವಲ ಸಂಸತ್ ಸದಸ್ಯರ ಸಹಕಾರ ಸಾಕಾಗುವುದಿಲ್ಲ. ಅದು ಸಂಸತ್ ಕಾರ್ಯಾಲಯದಲ್ಲಿರುವವರ ಗುಪ್ತ ನೆರವು ಕೂಡಾ ಬೇಕಾಗುತ್ತದೆ. ಸಾಮಾನ್ಯವಾಗಿ ಪ್ರಶ್ನೆಗಳನ್ನು ವಿಷಯದ ಆಧಾರದಲ್ಲಿ ವಿಂಗಡಿಸಿ ಚೀಟಿ ಎತ್ತುವ ಮೂಲಕ ಅವಕಾಶ ನೀಡಲಾಗುತ್ತದೆ. ಆದರೆ ಕೆಲವು ಪ್ರಶ್ನೆಗಳು ಇಂತಹ ನಿಯಮಾವಳಿಗಳನ್ನು ಮೀರಿಯೂ ಅವಕಾಶ ಪಡೆಯಲು ಸಾಧ್ಯ. ಸರ್ಕಾರದ ನೀತಿ, ಯೋಜನೆಗಳ ದಿಕ್ಕನ್ನೇ ಬದಲಾಯಿಸುವ ಸಾಮರ್ಥ್ಯದ ತಿಮಿಂಗಿಲಗಳಿಗೆ ಹೋಲಿಸಿದರೆ ಪ್ರಶ್ನೆ ಕೇಳಲು ಲಂಚ ಪಡೆದ ಸದಸ್ಯರು ಸಣ್ಣ ಮೀನುಗಳು. ಇತ್ತೀಚಿನ ಬಹು ಚರ್ಚಿತ ವೋಲ್ಕರ್ ವರದಿಯಲ್ಲಿ ನಟವರ್‌ಸಿಂಗ್ ಜತೆಯಲ್ಲಿ ದೇಶದ 125 ಖ್ಯಾತ ಕಂಪೆನಿಗಳ ಹೆಸರುಗಳೂ ಇವೆ. ಆದರೆ ಅದರ ಬಗ್ಗೆ ಎಡಪಕ್ಷಗಳ ಹೊರತಾಗಿ ಬೇರೆ ಯಾರಾದರೂ ಸೊಲ್ಲೆತ್ತಿಲ್ಲ!

ಸಂಸತ್ ಸದಸ್ಯರು ಭ್ರಷ್ಟಾಚಾರದಲ್ಲಿ ತೊಡಗಿದರೆ, ಅವರನ್ನು ಕಾನೂನು ಪ್ರಕಾರ ಶಿಕ್ಷಿಸಲು ಸಾಧ್ಯವೇ ಎನ್ನುವುದು ಈಗ ಚರ್ಚೆಯಲ್ಲಿರುವ ಇನ್ನೊಂದು ಪ್ರಶ್ನೆ. ಸಂಸತ್‌ನ ಒಳಗೆ ಆಡಿದ ಯಾವುದೇ ಮಾತು ಇಲ್ಲವೇ ಚಲಾಯಿಸಿದ ಮತಕ್ಕೆ ಸಂಬಂಧಿಸಿದಂತೆ ಸಂಸತ್ ಸದಸ್ಯರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವಂತಿಲ್ಲ ಎಂದು ಸಂವಿಧಾನದ 105 (2)ನೇ ಪರಿಚ್ಛೇದ ಹೇಳುತ್ತದೆ. ಜೆಎಂಎಂ ಲಂಚ ಹಗರಣದಲ್ಲಿ ನರಸಿಂಹರಾವ್ ಸರ್ಕಾರ ವಿರುದ್ಧದ ಅವಿಶ್ವಾಸ ಮತಕ್ಕೆ ವಿರುದ್ಧವಾಗಿ ಮತ ನೀಡಲು ಜೆಎಂಎಂ ನಾಲ್ಕು ಸದಸ್ಯರು ಲಂಚ ಸ್ವೀಕರಿಸಿದ್ದರು ಎಂಬ ಆರೋಪದ ಹಗರಣದಲ್ಲಿ ಸುಪ್ರೀಂ ಕೋರ್ಟ್ ಆರೋಪಿಗಳನ್ನು ಖುಲಾಸೆ ಮಾಡಲು ಸಂವಿಧಾನದ ಈ ರಕ್ಷಣೆ ಕಾರಣ.

ಸಂವಿಧಾನದತ್ತ ರಕ್ಷಣೆಯ ಹೊರತಾಗಿಯೂ ಸಂಸತ್ ನಿರ್ಧರಿಸಿದರೆ ಲಂಚಾವತಾರಿಗಳಿಗೆ ಶಿಕ್ಷೆ ನೀಡಲು ಸಾಧ್ಯ ಎನ್ನುತ್ತಾರೆ ಕಾನೂನು ತಜ್ಞರು. ಮೊದಲನೆಯದಾಗಿ ಲೋಕಸಭೆಯ ನೀತಿ ಸಮಿತಿ ಆರೋಪಿ ಸದಸ್ಯರನ್ನು ಅಮಾನತು ಗೊಳಿಸಬಹುದು. ಸದಸ್ಯತ್ವವನ್ನು ರದ್ದುಗೊಳಿಸಬಹುದು ಇಲ್ಲವೇ ಅವರ ವಿರುದ್ಧ ಸಿಬಿಐ ಮೂಲಕ ತನಿಖೆಗೆ ಆದೇಶ ನೀಡಬಹುದು.

ಸಂಸತ್ ಸದಸ್ಯರು ತಮಗಿದೆ ಎಂದು ಹೇಳಿಕೊಳ್ಳುತ್ತಿರುವ ಸಂವಿಧಾನದತ್ತ ರಕ್ಷಣೆಗೆ ಸುಪ್ರೀಂ ಕೋರ್ಟ್ ಮನ್ನಣೆ ನೀಡದೆ ಭ್ರಷ್ಟಾಚಾರ ನಿಷೇಧ ಕಾಯಿದೆಯ ವ್ಯಾಪ್ತಿಯಲ್ಲಿ ಅವರನ್ನು ಸೇರಿಸಿದರೆ, ಕಾನೂನು ಕ್ರಮಕ್ಕೆ ಹಾದಿ ಸುಗಮ. ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ, ಕೆನಡಾ ದೇಶಗಳು ಸಂಸತ್ ಸದಸ್ಯರನ್ನು ಭ್ರಷ್ಟಾಚಾರ ನಿಷೇಧ ಕಾನೂನಿನ ವ್ಯಾಪ್ತಿಯಲ್ಲಿ ಸೇರಿಸಿವೆ. ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶಕ್ಕೆ ಇದೊಂದು ಸವಾಲು.

ಆಪರೇಷನ್ ದುರ್ಯೋಧನದ ನಾಯಕ ಅನಿರುದ್ಧ್ ಬಹಳ ತಿಂಗಳುಗಳ ಹಿಂದೆ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ಲೇಖನ ಬರೆದಿದ್ದರು. ಚಿತ್ರರಂಗ ಸೇರಲು ಬಯಸಿ ಬಂದ ಹೆಣ್ಣಿನೊಡನೆ ನಟ ಶಕ್ತಿ ಕಪೂರ್ ಚೆಲ್ಲಾಟ ನಡೆಸಿದ್ದನ್ನು ಟಿವಿ ಚಾನೆಲ್ ಗುಪ್ತ ಕ್ಯಾಮೆರಾ ಮೂಲಕ ಬಹಿರಂಗಪಡಿಸಿದ್ದರು. ಸಾರ್ವಜನಿಕ ಹಿತವನ್ನೊಳಗೊಂಡಿರುವ ವಿಷಯಗಳಲ್ಲಿ ಮಾತ್ರ ಇಂತಹ (ಗುಪ್ತ ಕ್ಯಾಮೆರಾ) ಕಾರ್ಯಾಚರಣೆ ನಡೆಸಬೇಕೆಂಬುದು ಅವರ ವಾದವಾಗಿತ್ತು. ಯಾವುದರ ಬಗ್ಗೆ ಇಂತಹ ಕಾರ್ಯಾಚರಣೆ ನಡೆಸಬೇಕೆಂಬುದನ್ನು ಬಹಲ್ ವಿವರಿಸುತ್ತಾ, ಸಂಸದರು ಪ್ರಶ್ನೆ ಕೇಳಲು ದುಡ್ಡು ಪಡೆಯುತ್ತಿರುವ ಆರೋಪವನ್ನು ಉಲ್ಲೇಖಿಸಿದ್ದರು. ಕೇವಲ ಇಷ್ಟು ಬರೆದದ್ದಕ್ಕಾಗಿ ಪತ್ರಿಕೆಗೆ ಸಂಸತ್ ಹಕ್ಕುಚ್ಯುತಿ ನೋಟೀಸ್ ನೀಡಿತ್ತು. ಅದಕ್ಕೆ ಉತ್ತರ ಕೊಡಲು ಪತ್ರಿಕೆ ಸಿದ್ಧತೆ ನಡೆಸಿದ್ದರೆ, ಅನಿರುದ್ಧ ಬಹಲ್ ಆಗಲೇ ಉತ್ತರ ಕೊಟ್ಟು ಬಿಟ್ಟಿದ್ದರು ಲೇಖನಿ ಖಡ್ಗವಾಗುವುದೆಂದರೆ ಹೀಗೆ.

O

(19-12-2005)

ಭ್ರಷ್ಟಾಚಾರ ನಿರ್ಮೂಲನೆ ಎಂಬ ಮರೀಚಿಕೆ

ಆಪ್ತ ಸಹಾಯಕನ ಲಂಚ ಹಗರಣಗಳಲ್ಲಿ ಕಳಂಕಿತರಾದ ಕೇಂದ್ರ ಹಣಕಾಸು ಖಾತೆ ಸಚಿವ ಜಿಂಜಿ ರಾಮಚಂದ್ರನ್ ಮನೆಗೆ ಮರಳಿದ್ದಾರೆ. ಲಂಚ ಸ್ವೀಕರಿಸಿದ ಸಚಿವರ ಆಪ್ತಸಹಾಯಕ ಪೆರುಮಾಳಸ್ವಾಮಿ, ಲಂಚ ನೀಡಿದ ವರಮಾನ ತೆರಿಗೆ ಅಧಿಕಾರಿ ಅನುರಾಗ್ ವರ್ಧನ್ ಮತ್ತು ಮಧ್ಯವರ್ತಿ ಕೃಷ್ಣಮೂರ್ತಿ ಸೆರೆಮನೆಯಲ್ಲಿದ್ದಾರೆ. ನಗದು ಮತ್ತು ಚೆಕ್ ಸೇರಿ ಸುಮಾರು 1.67 ಕೋಟಿ ರೂಪಾಯಿಗಳನ್ನು ಈ ಮೂವರಿಂದ ಸಿಬಿಐ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮುಂದೇನು? ಸಿಬಿಐನ ಗತ ಸಾಹಸಗಳತ್ತ ಕಣ್ಣಾಡಿಸಿದರೆ, ಮುಂದಿನ ದೃಶ್ಯವನ್ನು ಈಗಲೇ ತೆರೆಯ ಮೇಲೆ ಕಾಣಬಹುದು. 2001ರ ಮಾರ್ಚ್‌ನಲ್ಲಿ ಕೇಂದ್ರ ಸುಂಕ ಮತ್ತು ಅಬಕಾರಿ ಮಂಡಳಿಯ ಮುಖ್ಯಸ್ಥ ಬಿ.ಪಿ. ವರ್ಮಾ ಅವರ ಕಚೇರಿ ಮತ್ತು ಮನೆ ಮೇಲೆ ದಾಳಿ ನಡೆಸಿ, ಭ್ರಷ್ಟಾಚಾರ ನಿಷೇಧ ಕಾನೂನಿನನ್ವಯ ಅವರ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಿಕೊಂಡ ಸಿಬಿಐ ಈವರೆಗೆ ಆರೋಪಪಟ್ಟಿಸಲ್ಲಿಸಿಲ್ಲ.

ಸಿಬಿಐನ ಇನ್ನಿತರ ಸಾಹಸಗಳಲ್ಲಿ ಬೋಫೋರ್ಸ್, ಹವಾಲಾ, ಪುರುಲಿಯಾ ಶಸ್ತ್ರಾಸ್ತ್ರ ಪೂರೈಕೆ, ಇಸ್ರೋ ಗೂಢಚರ್ಯೆಯಂತಹ ಪ್ರಮುಖ ಪ್ರಕರಣಗಳು ಸೇರಿವೆ. ಇವುಗಳಲ್ಲಿ ಯಾರಿಗೂ ಶಿಕ್ಷೆಯಾಗಿಲ್ಲ, ಒಬ್ಬೊಬ್ಬರೇ ದೋಷಮುಕ್ತರಾಗಿ

ಹೊರಬರುತ್ತಿದ್ದಾರೆ. ಭ್ರಷ್ಟಾಚಾರ ನಿಷೇಧ ಕಾನೂನಿಗೆ ಸಂಬಂಧಿಸಿದ ಮೂರು ಸಾವಿರ ಪ್ರಕರಣಗಳು ಕಳೆದ ಹತ್ತು ವರ್ಷಗಳಿಂದ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ನೆನೆಗುದಿಗೆ ಬಿದ್ದಿವೆ. ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೊಳಗಾಗುತ್ತಿರುವವರ ಪ್ರಮಾಣ ಕೇವಲ ಶೇಕಡಾ ಆರು.

ಈ ಚಾರಿತ್ರಿಕ ಹಿನ್ನೆಲೆಯು ಸಿಬಿಐನಿಂದ ಜೆಂಜಿ ರಾಮಚಂದ್ರನ್ ಬಿಡಿ, ಪೆರುಮಾಳ್ ಸ್ವಾಮಿ ಅಂತಹವರಿಗೂ ಶಿಕ್ಷೆ ಆಗುವ ಪವಾಡವನ್ನು ನಿರೀಕ್ಷಿಸಲಾಗದು. ಆದರೆ ಇನ್ನೊಂದು ಬಗೆಯ ಪವಾಡಗಳು ಸಿಬಿಐನಲ್ಲಿ ನಿತ್ಯ ನಡೆಯುತ್ತಿರುತ್ತವೆ. ಇದಕ್ಕೆ ಇತ್ತೀಚಿನ ಉದಾಹರಣೆ– ಕ್ರಿಕೆಟ್ ಬೆಟ್ಟಿಂಗ್ ಹಗರಣ. ಸುದ್ದಿ ಮಾಧ್ಯಮದ ಹೊನಲು ಬೆಳಕಿನಲ್ಲಿ ಕ್ರಿಕೆಟ್ ತಾರೆ ಕಪಿಲ್‌ದೇವ್, ಅಜರುದ್ದೀನ್, ಅಜಯ್ ಜಡೇಜಾ ಮನೆಮೇಲೆ ನಡೆದ ದಾಳಿಯ ನೆನಪು ಇನ್ನೂ ಜನಮನದಲ್ಲಿ ಹಸಿರಾಗಿರುವಾಗಲೇ ಕಪಿಲ್‌ದೇವ್, ಅಜಯ್ ಜಡೇಜಾ ಆರೋಪದಿಂದ ಮುಕ್ತರಾಗಿದ್ದಾರೆ. ಅಜರುದ್ದೀನ್ ಆ ಸುದಿನವನ್ನು ಎದುರು ನೋಡುತ್ತಿದ್ದಾರೆ.

ಚಿರತೆಗಳ ಹತ್ಯೆಯ ಆರೋಪದ ಮೇಲೆ ತೆಹೆಲ್ಕಾ ವರದಿಗಾರರನ್ನು ಸೆರೆಮನೆಗೆ ತಳ್ಳಿದ ಸಿಬಿಐ, ಜೆಎಂಎಂ ಲಂಚ ಹಗರಣದಲ್ಲಿ ದೆಹಲಿ ಹೈಕೋರ್ಟ್ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತಿತರನ್ನು ದೋಷಮುಕ್ತಗೊಳಿಸಿ ನೀಡಿದ ತೀರ್ಪನ್ನು ಪ್ರಶ್ನಿಸಿ 90 ದಿನಗಳೊಳಗೆ ಸುಪ್ರೀಮ್‌ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲೇ ಇಲ್ಲ.

ಜೋಗಿಂದರ್ ಸಿಂಗ್ ಸಿಬಿಐ ನಿರ್ದೇಶಕರಾಗಿದ್ದಾಗ, ಸೀತರಾಮಂ ಕೇಸರಿ ಅವರ ಆಪ್ತ ವೈದ್ಯನ ಹತ್ಯೆ ಪ್ರಕರಣವನ್ನು ಕೆದಕುವ ಸಾಹಸ ಮಾಡಲು ಹೋಗದಿದ್ದರೆ, ದೇವೇಗೌಡರು ಇನ್ನಷ್ಟು ಸಮಯ ಪ್ರಧಾನಿ ಪಟ್ಟದಲ್ಲಿ ಮುಂದುವರಿಯುತ್ತಿದ್ದರೇನೋ? ಈ ರೀತಿ ರಾಜಕೀಯ ಒಡೆಯರ ಮರ್ಜಿ ಹಿಡಿದು ಕಾರ್ಯನಿರ್ವಹಿಸುತ್ತಿರುವ ಸಿಬಿಐ ಇರುವವರೆಗೆ ಭಾರತದ ತಲೆಮೇಲಿರುವ ಭ್ರಷ್ಟತೆಯ ಕಿರೀಟ ಅಬಾಧಿತ.

ಬರ್ಲಿನ್‌ನ ಅಂತರರಾಷ್ಟ್ರೀಯ ಪಾರದರ್ಶಕ ಸಂಸ್ಥೆ 102 ದೇಶಗಳಲ್ಲಿ ಸಮೀಕ್ಷೆ ನಡೆಸಿ ತಯಾರಿಸಿದ ಭ್ರಷ್ಟದೇಶಗಳ ಪಟ್ಟಿಯಲ್ಲಿ ಭಾರತ 72ನೇ ಸ್ಥಾನ ಪಡಿದಿದೆ. ಭ್ರಷ್ಟತೆಯಲ್ಲಿ ನಮ್ಮನ್ನೂ ಮೀರಿಸಿದ ದೇಶಗಳಲ್ಲಿ ಪಾಕಿಸ್ತಾನ (77) ನೈಜೀರಿಯಾ (101) ಮತ್ತು ಬಾಂಗ್ಲಾದೇಶ (102)ಗಳು ಸೇರಿವೆ.

ವಿಶ್ವ ಆರ್ಥಿಕ ವೇದಿಕೆ ಅಧಿಕಾರಗಳಲ್ಲಿ ಪ್ರಾಮಾಣಿಕತೆ ಎಂಬ ವಿಷಯದ ಮೇಲೆ ಇತ್ತೀಚೆಗೆ 49 ದೇಶಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಭಾರತ 45ನೇ ರ್‍ಯಾಂಕ್ ಪಡೆದಿದೆ. ಅತ್ಯಂತ ಸ್ವಚ್ಛ ಆಡಳಿತಕ್ಕೆ 10 ಮತ್ತು ಅತ್ಯಂತ ಭ್ರಷ್ಟ ಆಡಳಿತಕ್ಕೆ 0 ಅಂಕ ನೀಡಿ ನಡೆಸಿದ ಸಮೀಕ್ಷೆಯಲ್ಲಿ ಭಾರತ 2.7ರ ಸ್ಥಾನ ಪಡೆದಿದೆ. ವಿಶ್ವದ ಅತ್ಯಂತ ಸ್ವಚ್ಛ

ಆಡಳಿತದ ಮೂರು ದೇಶಗಳಲ್ಲಿ ಫಿನ್‌ಲ್ಯಾಂಡ್ (9.9), ಡೆನ್ಮಾರ್ಕ್ (9.5) ಮತ್ತು ನ್ಯೂಜಿಲ್ಯಾಂಡ್ (9.4) ದೇಶಗಳು ಸೇರಿವೆ.

ಭ್ರಷ್ಟಾಚಾರದ ಗಂಗೋತ್ರಿಯನ್ನು ಕೆಲವರು ರಾಜಕೀಯ ವ್ಯವಸ್ಥೆಯಲ್ಲಿ, ಇನ್ನು ಕೆಲವರು ಆಡಳಿತ ವ್ಯವಸ್ಥೆಯಲ್ಲಿ ಗುರುತಿಸುತ್ತಾರೆ. ಇದೊಂದು ರೀತಿಯ ಬೀಜ-ವೃಕ್ಷ ನ್ಯಾಯದ ರೀತಿ. ಆದರೆ ರಾಜಕಾರಣಿಗಳಿಗೆ ಇರುವ ಉತ್ತರದಾಯಿತ್ವ ಅಧಿಕಾರಿಗಳಿಗೆ ಇಲ್ಲವಾದ ಕಾರಣ, ಅವರೇ ಭ್ರಷ್ಟಾಚಾರದ ಪ್ರಮುಖ ಕೊಂಡಿ ಎನ್ನುವ ವಾದ ಇದೆ. ರಾಜಕಾರಣಿಗಳನ್ನು ಶಿಕ್ಷಿಸಲು ಜನರ ಬಳಿ ಕನಿಷ್ಠ ಮತಗಳ ಅಸ್ತ್ರವಾದರೂ ಇದೆ. ಆದರೆ ರಾಜಕಾರಣಿಗಳಿಂದ ಹೆಚ್ಚು ಸಂಘಟಿತರಾಗಿರುವ ಅಧಿಕಾರಿ ವರ್ಗಕ್ಕೆ ಅಂತಹ ಅಂಕೆಗಳು ಇಲ್ಲ. ಜತೆಗೆ ಅವರ ಬೆಂಬಲಕ್ಕೆ ರಾಜಕೀಯ ನಾಯಕರು ಸದಾ ಸನ್ನದ್ಧ ಸ್ಥಿತಿಯಲ್ಲಿರುತ್ತಾರೆ.

ಕೇಂದ್ರ ಜಾಗೃತ ಆಯೋಗದ ವೆಬ್‌ಸೈಟ್‌ಗೆ ಇಣುಕು ಹಾಕಿ. ಅದರಲ್ಲಿ ವಿವಿಧ ರೀತಿಯ ಭ್ರಷ್ಟಾಚಾರಗಳ ಆರೋಪ ಹೊತ್ತ 2600 ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಹೆಸರಿದೆ. ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗುವಂತಹದ್ದು ಎಂದು ಮನವರಿಕೆಯಾದ ನಂತರವೇ ಈ ಹೆಸರುಗಳನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ. ಆದರೆ ಇವರಲ್ಲಿ ಬಹುತೇಕ ಎಲ್ಲಾ ಅಧಿಕಾರಿಗಳು ಈಗಲೂ ಅಧಿಕಾರರೂಢರು.

ಈ ವೆಬ್‌ಸೈಟ್‌ನಲ್ಲಿ ಪೆರುಮಾಳ್ ಸ್ವಾಮಿಯಂತಹ ಆಪ್ತಸಹಾಯಕರ ಹೆಸರಿಲ್ಲ. ಈ ವರ್ಗದ ಭ್ರಷ್ಟರು ಮೇಲ್ನೋಟಕ್ಕೆ ಸಣ್ಣಮಿಕಗಳು. ಆದರೆ ಅವರ ಆಳ-ಅಗಲ ಊಹಾತೀತ. ದೆಹಲಿಯಲ್ಲಿ ಸಚಿವರ ಆಪ್ತಸಹಾಯಕರು ಮತ್ತು ಆಪ್ತಕಾರ್ಯದರ್ಶಿಗಳ ಒಂದು ಭೂಗತ ಜಗತ್ತು ಇದೆ. ಇವರು ಸಚಿವರಷ್ಟೇ ಸರ್ವಶಕ್ತರು. ಅವರಿಗಿಂತಲೂ ಹೆಚ್ಚು ಸರ್ವಾಂತರಯಾಮಿಗಳು. ವ್ಯವಹಾರದ ವಿಷಯದಲ್ಲಿ ಸರ್ವಜ್ಞರು. ಸಂಸತ್‌ಭವನದ ಸುತ್ತ ಇರುವ ಸಚಿವ ಖಾತೆಗಳ ಕಚೇರಿಗಳಿರುವ ಶಾಸ್ತ್ರೀಭವನ, ಕೃಷಿ ಭವನ, ನಾರ್ತ್ ಬ್ಲಾಕ್, ಸೌತ್ ಬ್ಲಾಕ್, ಉದ್ಯೋಗಭವನ, ರೈಲು ಭವನ – ಎಲ್ಲಾಕಡೆಗಳಲ್ಲಿ ಇವರು ಗಡಿಬಿಡಿಯಲ್ಲಿ ಓಡಾಡುತ್ತಿರುತ್ತಾರೆ. ಸಚಿವರ ಬಂಗಲೆಗಳಲ್ಲಿ ಇವರು ದಿನದ ಮೂರು ಹೊತ್ತು ಹಾಜರಿ ಹಾಕುತ್ತಾರೆ.

ಕೈಯಲ್ಲಿ ಡೈರಿ-ಫೈಲುಗಳ ಕಂತೆ, ಕಿವಿಗೆ ಅಂಟಿಸಿಕೊಂಡ ಮೊಬೈಲು, ತುಸು ಊದಿದ ಹೊಟ್ಟೆಯ, ಠಾಕುಠೀಕಾಗಿ ಡ್ರೆಸ್ ಹಾಕಿಕೊಂಡ, ಸಬಲರನ್ನು ಕಂಡರೆ ನಡು ಬಗ್ಗಿಸುವ, ದುರ್ಬಲರನ್ನು ಕಂಡರೆ ಎದೆ ಸೆಟೆಸಿ ನಡೆಯುವ ಆಕೃತಿಗಳನ್ನು ಕಂಡಕೂಡಲೇ ಅವರ ಜಾತಿ (ಹುಟ್ಟು ಜಾತಿಯಲ್ಲ) ಗೊತ್ತಾಗಿಬಿಡುತ್ತದೆ. ಇವರಲ್ಲಿ

ಹೆಚ್ಚಿನವರು ಸಚಿವರ ಸಂಬಂಧಿಕರು, ಇಲ್ಲವೇ ಜಾತಿಯವರು. (ಹುಟ್ಟು ಜಾತಿ) ಇಲ್ಲವೇ ಊರಿನವರು, ಇಲ್ಲವೇ ಸ್ನೇಹಿತರು, ಇಲ್ಲವೇ ಸ್ನೇಹಿತರ ಸಂಬಂಧಿಗಳು.

ಸಚಿವರಿಗೆ ಇವರು ಬಹುಪಯೋಗಿ ವ್ಯಕ್ತಿಗಳು. ಕಚೇರಿ ಕೆಲಸಕ್ಕಿಂತ ಹೆಚ್ಚಾಗಿ ಇವರು ಸಚಿವರ ಖಾಸಗಿ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಅದರ ಜತೆಗೆ ಸಚಿವರ ಊರಿನಿಂದ ಬರುವ ಸ್ನೇಹಿತರು, ಪಕ್ಷದ ಕಾರ್ಯಕರ್ತರು, ಮತದಾರ ಬಂಧುಗಳು– ಎಲ್ಲರನ್ನು ಅವರವರ ದರ್ಜೆಗೆ ತಕ್ಕಂತೆ ಮ್ಯಾನೇಜ್ ಮಾಡುವ ಹೊಣೆ ಕೂಡಾ ಇವರದ್ದೇ.

ಸಚಿವರಿಗೆ ಮಾತ್ರವಲ್ಲ, ಇಲಾಖೆಯ ಹಿರಿಯ ಅಧಿಕಾರಿಗಳಿಗೂ (ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ) ಇವರು ಆಪ್ತರು, ಯಾಕೆಂದರೆ ವ್ಯವಹಾರದ ಪ್ರಮುಖ ಕೊಂಡಿಗಳೇ ಇವರು. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಇವರು ನಿಶ್ಚಿಂತರು. ಎಲ್ಲಾ ಪಕ್ಷಗಳಲ್ಲಿಯೂ ಇವರಿಗೆ ದೇವಪಿತರು ಇರುತ್ತಾರೆ. ವರ್ತಮಾನದ ಒಡೆಯ, ಭೂತದ ಒಡೆಯ ಹಾಗೂ ಭವಿಷ್ಯದ ಒಡೆಯ–ಹೀಗೆ ಎಲ್ಲರ ಸೇವೆ ಮಾಡುವ ಇವರು ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಇವರು ನಿಶ್ಚಿಂತರು. ಸಚಿವರು ಬದಲಾಗಬಹುದು. ಆದರೆ ಭವನಗಳಲ್ಲಿ ಇವರ ಸ್ಥಾನ ಬದಲಾಗುವುದಿಲ್ಲ.

ಪೆರುಮಾಳ್ ಸ್ವಾಮಿ ಈ ಜಾತಿಗೆ ಸೇರಿದ ಆಪ್ತ ಸಹಾಯಕ. ಈತ ಮೂಲತಃ ಎಂಡಿಎಂಕೆ ಕಾರ್ಯಕರ್ತ. ಪಕ್ಷದ ನಾಯಕ ವೈಕೋ ಅವರ ಖಾಸಾ ದೋಸ್ತ್. ಹಗರಣಗಳು ಈತನಿಗೆ ಹೊಸದಲ್ಲ. ಹಿಂದೆಯೂ ಈತ ಇಂತಹ ಅಕ್ರಮಗಳಲ್ಲಿ ಸಿಕ್ಕಿಹಾಕಿಕೊಂಡು ತಮ್ಮ ನಾಯಕರ ನೆರವಿನಿಂದ ಪಾರಾಗಿ ಬಂದವ. ಸಂಪುಟದಲ್ಲಿ ಈಗ 75 ಸಚಿವರಿದ್ದಾರೆ. ಒಬ್ಬೊಬ್ಬರೊಡನೆ ಇರುವ ಮೂರರಿಂದ ನಾಲ್ಕು ಆಪ್ತ ಕಾರ್ಯದರ್ಶಿ ಸಹಾಯಕರನ್ನು ಲೆಕ್ಕಕ್ಕೆ ಹಿಡಿದರೆ, ಇವರ ಸಂಖ್ಯೆ 250ರಿಂದ 300ರಷ್ಟಾಗುತ್ತದೆ. ಸಿಬಿಐ ಇಲ್ಲವೇ ಸಿವಿಸಿ (ಕೇಂದ್ರ ಜಾಗೃತ ಆಯೋಗ) ಇವರೆಲ್ಲರ ಜಾತಕಗಳನ್ನು ಜಾಲಾಡಿಸಿದರೆ ಬಹಳ ಮಂದಿ ಮರ್ಯಾದ ಪುರುಷೋತ್ತಮ ರಾಮಚಂದ್ರನ್‌ಗಳು ಸಂಪುಟದಿಂದ ಮತ್ತು ಐಎಎಸ್ ದೊರೆಗಳು ಇಲಾಖಾ ಕಚೇರಿಯಿಂದ ನಿರ್ಗಮಿಸಬೇಕಾಗಬಹುದು. ಆದರೆ ಇದು ಸಾಮಾನ್ಯ ಮನುಷ್ಯನ ಅಸಾಮಾನ್ಯ ಹಗಲುಕನಸು ಅಷ್ಟೇ.

ಅಷ್ಟು ನಿರಾಶರಾಗಬೇಕಾಗಿಲ್ಲ. ಭ್ರಷ್ಟಾಚಾರದ ರೋಗವನ್ನು ನಿರ್ಮೂಲನೆ ಮಾಡಲಾಗದಿದ್ದರೂ ನಿಯಂತ್ರಣ ಆಯುಕ್ತರಾಗಿದ್ದ ಎನ್. ವಿಠ್ಠಲ್, ಭ್ರಷ್ಟಾಚಾರವನ್ನು ಕಡಿಮೆ ಅಪಾಯದ, ಹೆಚ್ಚು ಆದಾಯದ ಕಸುಬು ಎಂದು ಬಣ್ಣಿಸುತ್ತಿರುವ ವಿಠ್ಠಲ್, ಭ್ರಷ್ಟ ಅಧಿಕಾರಿಗಳ ಹೆಸರನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಜತೆಗೆ ಭ್ರಷ್ಟಾಚಾರ ನಿಯಂತ್ರಣಕ್ಕೆ ಕಾನೂನಿನ ಕೆಲವು ಮಾರ್ಗಗಳನ್ನು ಸೂಚಿಸಿದ್ದರು.

ಇವುಗಳಲ್ಲಿ ಪ್ರಮುಖವಾದುದು ಭ್ರಷ್ಟ ಅಧಿಕಾರಿಗಳ ಆಸ್ತಿ ಮುಟ್ಟುಗೋಲು ಹಾಕುವುದಕ್ಕೆ ಸಂಬಂಧಿಸಿದ್ದು. ಈಗಿನ ಕಾನೂನಿನಲ್ಲಿ ಅದಕ್ಕೆ ಅವಕಾಶ ಇಲ್ಲ. ವಿಠ್ಠಲ್ ಶಿಫಾರಸಿನ ಮೇರೆಗೆ ಕಾನೂನು ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಜೀವನ್‌ರೆಡ್ಡಿ ಅವರು ಭ್ರಷ್ಟ ಅಧಿಕಾರಿಗಳ (ಆಸ್ತಿ ಮುಟ್ಟುಗೋಲು) ಕಾಯಿದೆಯ ಕರಡನ್ನು ರೂಪಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರು. ಆದರೆ ಅದಕ್ಕಿನ್ನೂ ಕಾಯಿದೆಯ ರೂಪು ಪಡೆಯುವ ಭಾಗ್ಯ ಕೂಡಿ ಬಂದಿಲ್ಲ.

ಬೇನಾಮಿ ವ್ಯವಹಾರ ನಿಷೇಧ ಕಾಯಿದೆಯ ಪರಿಣಾಮಕಾರಿ ಜಾರಿ. ಈ ಕಾಯಿದೆ 1988ರಲ್ಲಿಯೇ ಜಾರಿಗೆ ಬಂದಿದ್ದರೂ ಈವರೆಗೆ ಸರ್ಕಾರ ನಿಯಮಾವಳಿಗಳನ್ನು ರೂಪಿಸಿಲ್ಲ. ಕನಿಷ್ಠ ಈ ಕಾಯಿದೆಯ ಸೆಕ್ಷನ್ ಎಂಟರ ಪ್ರಕಾರ ಭ್ರಷ್ಟ ಅಧಿಕಾರಿಗಳ ಬೇನಾಮಿ ಆಸ್ತಿಯನ್ನು ಮುಟ್ಟುಗೋಲು ಹಾಕುವ ನಿಯಮಾವಳಿಯನ್ನಾದರೂ ಸರ್ಕಾರ ಜಾರಿಗೆ ತಂದರೆ ತನಿಖೆ ಪೂರ್ಣಗೊಳ್ಳುವ ವರೆಗೆ ಭ್ರಷ್ಟತೆಯ ಆರೋಪ ಹೊತ್ತವರು ತಮ್ಮ ಅಕ್ರಮ ಗಳಿಕೆಯ ಆಸ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ.

ಈಗಿನ ಸ್ಥಿತಿಯಲ್ಲಿ ನ್ಯಾಯಾಲಯದಲ್ಲಿ ಜಾಮೀನು ಪಡೆದು ಹೊರಬಂದ ಭ್ರಷ್ಟ ಅಧಿಕಾರಿ ತನ್ನೆಲ್ಲಾ ಅಕ್ರಮಗಳಿಕೆಯನ್ನು ಅನುಭವಿಸುತ್ತಾ ಐಷಾರಾಮಿ ಜೀವನ ನಡೆಸುತ್ತಿರುತ್ತಾನೆ. ಪ್ರಚಾರದ ಬೆಳಕಲ್ಲಿ ಬತ್ತಲೆಯಾಗಿದ್ದೊಂದೇ ಅವಮಾನ. ಅದನ್ನು ಅವಮಾನವೆಂದು ಯಾಕೆ ತಿಳಿದುಕೊಳ್ಳಬೇಕು? ದೇಶದ ಪ್ರಧಾನಮಂತ್ರಿ, ಮುಖ್ಯಮಂತ್ರಿಗಳೇ ಅಂತಹ ಅವಮಾನಕ್ಕೀಡಾಗಿಲ್ಲವೆ? ಪೆರುಮಾಳಸ್ವಾಮಿಗೆ ಯಾಕೆ ನಾಚಿಕೆಯಾಗಬೇಕು?

ಕೆಲವು ರಾಜಕಾರಣಿಗಳು ಮತ್ತು ಅಧಿಕಾರಿಗಳು ಭ್ರಷ್ಟರಾಗಿದ್ದರೂ ಯಾಕೆ ಜನಪ್ರಿಯರು? ಈ ಪ್ರಶ್ನೆಗೆ ಅನುಭವಿಗಳೊಬ್ಬರ ವಿಶ್ಲೇಷಣಾತ್ಮಕ ಉತ್ತರ ಹೀಗಿದೆ :

ಜನಸೇವೆಯಲ್ಲಿ ತೊಡಗಿರುವ ರಾಜಕಾರಣಿ ಮತ್ತು ಅಧಿಕಾರಿಗಳಲ್ಲಿ ಮೂರು ವರ್ಗದವರಿದ್ದಾರೆ. ಕೆಲಸ ಮಾಡದೆ ಬರೀ ದುಡ್ಡು ತಿನ್ನುವುದರಲ್ಲಿಯೇ ತಲ್ಲೀನರಾದವರ ಒಂದು ವರ್ಗ. ದುಡ್ಡೂ ತಿನ್ನದ, ಕೆಲಸವನ್ನೂ ಮಾಡದ ಎರಡನೇ ವರ್ಗ, ದುಡ್ಡು ತಿಂದರೂ ಕೊಟ್ಟ ದುಡ್ಡಿಗೆ ಮೋಸಮಾಡದೆ ನಿಯತ್ತಿನಿಂದ ಕೆಲಸ ಮಾಡುವವರು ಮೂರನೇ ವರ್ಗ. ಯಾರು ಹಿತವರು ನಿಮಗೆ ಈ ಮೂವರೊಳಗೆ?

O

(25-05-2003)

ಪ್ರಶಸ್ತಿಗಳ ಮೋಹಕ ಪಾಶ

ಪ್ರಶಸ್ತಿ – ಗೌರವದ ಸಂಕೇತ. ಆದರೆ ಪ್ರಶಸ್ತಿ ಪಡೆದವರೆಲ್ಲರೂ ಆ ಗೌರವಕ್ಕೆ ಅರ್ಹರು ಎಂದು ಹೇಳಲು ಎಲ್ಲರ ಮನಸ್ಸು ಒಪ್ಪಲಾರದು. ಕಳೆದ ವರ್ಷ ಹನುಮಂತನ ಬಾಲದಂತೆ ಬೆಳೆದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಪಟ್ಟಿಯನ್ನು ಕಂಡವರಂತೂ ಖಂಡಿತ ಒಪ್ಪಲಾರರು. ಒಮ್ಮೊಮ್ಮೆ ಪ್ರಶಸ್ತಿಗಳಿಗಿಂತ ಹೆಚ್ಚಾಗಿ ಅದು ಹುಟ್ಟುಹಾಕುವ ವಿವಾದವೇ ಸುದ್ದಿ ಆಗುವುದುಂಟು. ಈ ಕಳಂಕದಿಂದ ಅತ್ಯುನ್ನತ ಗೌರವ ಎನ್ನಲಾದ ಭಾರತರತ್ನ ಮತ್ತು ಪದ್ಮಶ್ರೀ ಪ್ರಶಸ್ತಿಗಳೂ ಹೊರತಲ್ಲ.

ಗಣರಾಜ್ಯೋತ್ಸವದ ದಿನ ಹತ್ತಿರ ಬರುತ್ತಿದ್ದಂತೆಯೇ ರಾಜಧಾನಿಯಲ್ಲಿ ಕೇಂದ್ರ ಸಚಿವರು ಮತ್ತು ವಿವಿಧ ಪಕ್ಷಗಳ ನಾಯಕರ ಮನೆ–ಕಚೇರಿಗಳ ಮುಂದೆ ವಿವಿಧ ಕ್ಷೇತ್ರಗಳ ಸಾಧಕರು ಕಾಣಿಸಿಕೊಳ್ಳತೊಡಗಿದ್ದಾರೆ. ಪ್ರಶಸ್ತಿಗೆ ಪಾತ್ರರಾಗಲಿರುವ ಸಂಭವನೀಯ ಗಣ್ಯರ ಪಟ್ಟಿ ಹೊರಬೀಳತೊಡಗಿದೆ. ಒಂಬತ್ತು ವರ್ಷಗಳ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕಾರಣ ಆ ಪಕ್ಷಕ್ಕೆ ನಿಷ್ಠರಾಗಿರುವ ಗಣ್ಯರು ಹೆಚ್ಚು ನಿರೀಕ್ಷೆಯಲ್ಲಿದ್ದಾರೆ.

ಭಾರತರತ್ನ ಮತ್ತು ಪದ್ಮಪ್ರಶಸ್ತಿಗಳು ಭಾರತಕ್ಕೆ ಬ್ರಿಟಿಷರ ಬಳುವಳಿ. ತಮ್ಮ ಸಾಮ್ರಾಜ್ಯಕ್ಕೆ ನಿಷ್ಠೆಯಿಂದ ಸೇವೆ ಸಲ್ಲಿಸಿದವರಿಗೆ ಬ್ರಿಟಿಷರು ನೈಟ್‌ಹುಡ್ ಜತೆ ರಾವ್‌ಬಹದ್ದೂರ್, ಖಾನ್ ಬಹದ್ದೂರ್, ದಿವಾನ ಬಹದ್ದೂರ್ ಪ್ರಶಸ್ತಿಗಳನ್ನು

ನೀಡುತ್ತಿದ್ದರು. ಆ ಪ್ರಶಸ್ತಿಗಳನ್ನು ರದ್ದುಮಾಡುವುದಾಗಿ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಘೋಷಿಸಿತ್ತು. ಅದನ್ನೇನೋ ರದ್ದು-ಮಾಡಿತು: ಆದರೆ ಹೊಸ ಪ್ರಶಸ್ತಿಗಳನ್ನು ಪ್ರಾರಂಭಿಸಿತು.

ಈ ಪ್ರಶಸ್ತಿಗಳು ಪದವಿ ಅಲ್ಲ, ಕೇವಲ ಗೌರವ, ಆದ್ದರಿಂದ ಇದನ್ನು ಪಡೆದವರು ತಮ್ಮ ಹೆಸರಿನ ಮುಂದೆ ಪ್ರಶಸ್ತಿಯ ಹೆಸರು ಜೋಡಿಸಬಾರದು ಎಂಬ ನಿಯಮ ಇದೆ. ಆದರೆ ಅದನ್ನು ಪಾಲಿಸುವವರ್‍ಯಾರು? ಪ್ರದರ್ಶಿಸಲೆಂದೇ ಶ್ರಮಪಟ್ಟು ಪಡೆದವರು ಈ ನಿಯಮ ಪಾಲಿಸಲು ಹೇಗೆ ಸಾಧ್ಯ? ಒಮ್ಮೊಮ್ಮೆ ಸರ್ಕಾರವೇ ತನ್ನ ಜಾಹೀರಾತಿನಲ್ಲಿ ತಾನೇ ರೂಪಿಸಿದ ನಿಯಮವನ್ನು ಉಲ್ಲಂಘಿಸಿ ಉಳಿದವರಿಗೆ ಪ್ರೇರಣೆ ನೀಡುತ್ತದೆ.

ಪ್ರಶಸ್ತಿಗಳ ಆಯ್ಕೆ ಕೇಂದ್ರ ಗೃಹ ಇಲಾಖೆಯ ಜವಾಬ್ದಾರಿ. ಗಣರಾಜ್ಯೋತ್ಸವಕ್ಕಿಂತ ಸಾಕಷ್ಟು ಪೂರ್ವದಲ್ಲಿಯೇ ಪದ್ಮಶ್ರೀ ಪ್ರಶಸ್ತಿಗಳಿಗೆ ಹೆಸರು ಸೂಚಿಸಲು ಸರ್ಕಾರ, ಎಲ್ಲ ಕೇಂದ್ರ ಸಚಿವ ಖಾತೆಗಳು ಮತ್ತು ರಾಜ್ಯ ಸರ್ಕಾರಕ್ಕೆ ಸುತ್ತೋಲೆ ಕಳುಹಿಸುತ್ತದೆ. ಈ ರೀತಿ ಬಂದ ಹೆಸರುಗಳನ್ನು ಸಂಪುಟ ಕಾರ್ಯದರ್ಶಿ, ಪ್ರಧಾನಮಂತ್ರಿಯ ಕಾರ್ಯದರ್ಶಿ ಮತ್ತು ಗೃಹ ಕಾರ್ಯದರ್ಶಿಗಳನ್ನೊಳಗೊಂಡ ಸಮಿತಿ ಪರಿಶೀಲಿಸುತ್ತದೆ. ಒಮ್ಮೊಮ್ಮೆ ಈ ಸಮಿತಿಯಲ್ಲಿ ಕೆಲವು ಗಣ್ಯರನ್ನು ಸೇರಿಸಿಕೊಳ್ಳುವುದುಂಟು.

ವ್ಯಕ್ತಿಯ ಪ್ರತಿಭೆ ಮತ್ತು ಸಾಧನೆಯ ಜತೆ ಪ್ರಶಸ್ತಿಗೆ ಆಯ್ಕೆ ಮಾಡುವಾಗ ಸಮಿತಿ ಬೇರೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅರ್ಹ ವ್ಯಕ್ತಿಗಳು ಗುಪ್ತಚರ ಇಲಾಖೆಯ ನಿಗಾದಲ್ಲಿರಬಾರದು, ಆದಾಯ ತೆರಿಗೆ ಬಾಕಿ ಇಟ್ಟುಕೊಂಡಿರಬಾರದು, ಒಂದು ಪದ್ಮಪ್ರಶಸ್ತಿಗೂ ಇನ್ನೊಂದಕ್ಕೂ ಕನಿಷ್ಠ ಹತ್ತು ವರ್ಷಗಳ ಅಂತರ ಇರಬೇಕು ಇತ್ಯಾದಿ. ಇಷ್ಟೆಲ್ಲಾ ನೀತಿ-ನಿಯಮಾವಳಿಗಳ ಪಾಲನೆಯ ನಂತರವೂ ಸರ್ಕಾರ ಎಡವುವುದು ಯಾಕೆ?

ಆಶ್ಚರ್ಯವೆಂದರೆ, ರಾಷ್ಟ್ರಪಿತನೆಂದು ಹೆಮ್ಮೆಯಿಂದ ಎಲ್ಲರೂ ಹೇಳಿಕೊಳ್ಳುವ ಮಹಾತ್ಮಾ ಗಾಂಧೀಜಿ ಭಾರತ ರತ್ನಕ್ಕೆ ಪಾತ್ರರಾಗಿಲ್ಲ. ಅಂತಹ ಗೌರವದಿಂದ ಮೀರಿದ ವ್ಯಕ್ತಿತ್ವ ಅವರದ್ದು ಎಂದು ಹೇಳಿ ಲೋಪದಿಂದ ಕೈತೊಳೆದುಕೊಳ್ಳುವುದು ಸುಲಭ. ಆದರೆ ಈ ಪ್ರಶಸ್ತಿಗಳನ್ನು ಸ್ಥಾಪನೆ ಮಾಡಿದ ಮೊದಲ ವರ್ಷವೇ (1954) ಭಾರತ ರತ್ನವನ್ನು ಗಾಂಧೀಜಿಗೆ ಪ್ರದಾನ ಮಾಡಿದ್ದರೆ ಅವರ ಗೌರವಕ್ಕೆ ಅಪಚಾರ ಮಾಡಿದಂತಾಗುತ್ತಿರಲಿಲ್ಲ. ಈ ಲೋಪಕ್ಕೆ ಮುಖ್ಯ ಕಾರಣ ಪ್ರಶಸ್ತಿ ಸ್ಥಾಪನೆ ಮಾಡಿದಾಗ ಅದನ್ನು ಮರಣೋತ್ತರವಾಗಿ ನೀಡಲು ಅವಕಾಶ ಇಲ್ಲದಿದ್ದುದು. ಆದರೆ ಮರುವರ್ಷವೇ ನಿಯಮಾವಳಿಗೆ ತಿದ್ದುಪಡಿ ಮಾಡಲಾಯಿತು. ಆ ಸದ್ಬುದ್ಧಿ ಗಾಂಧೀಜಿ ಶಿಷ್ಯ ಜವಾಹರಲಾಲ್ ನೆಹರೂ ಅವರಿಗೆ ಮೊದಲೇ ಬಂದಿದ್ದರೆ?

ನೆಹರೂ ಮತ್ತು ಅವರ ಮಗಳ ಕಾಲದಲ್ಲಿ ಇನ್ನೊಂದು ಲೋಪವೂ ನಡೆದು ಹೋಯಿತು. ಗಾಂಧೀಜಿ ನಂತರ ದೇಶದ ಅತ್ಯುನ್ನತ ಗೌರವಕ್ಕೆ ಪಾತ್ರರಾಗಬೇಕಾಗಿದ್ದವರು ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್. ಪ್ರಶಸ್ತಿ ಸ್ಥಾಪನೆಯ ಮರುವರ್ಷವೇ ನೆಹರೂ (1955) ಭಾರತರತ್ನ ಸ್ವೀಕರಿಸಿಬಿಟ್ಟರು. ಇಂದಿರಾಗಾಂಧಿಗೆ 1971ರಲ್ಲಿ ಭಾರತ ರತ್ನ ಪ್ರದಾನ ಮಾಡಲಾಯಿತು. ಆದರೆ ಅಂಬೇಡ್ಕರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿದ್ದು 1990ರಲ್ಲಿ. ಅದು ಎಂ.ಜಿ.ರಾಮಚಂದ್ರನ್‌ಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ಪ್ರದಾನ ಮಾಡಿದ ಎರಡು ವರ್ಷಗಳ ನಂತರ. ತಮಿಳುನಾಡು ಚುನಾವಣೆಯ ಮೇಲೆ ಕಣ್ಣಿಟ್ಟು ಎಂಜಿಆರ್‌ಗೆ ನೀಡಿದ ಭಾರತರತ್ನ ಆ ಪ್ರಶಸ್ತಿಯ ಇತಿಹಾಸದ ಕಪ್ಪುಚುಕ್ಕೆ ಎಂದೇ ಬಣ್ಣಿಸಲಾಗುತ್ತಿದೆ.

ನೆಹರೂ ಮತ್ತು ಇಂದಿರಾಗಾಂಧಿ ಜೀವಿತಾವಧಿಯಲ್ಲಿಯೇ ಭಾರತರತ್ನ ಪಡೆದರೆ ಕಾಂಗ್ರೆಸ್ ಪಕ್ಷದಲ್ಲಿ ಕೇವಲ ಸಾಧನೆಯ ಮೂಲಕವೇ ಅತ್ಯಂತ ಕೆಳಸ್ತರದಿಂದ ಮೇಲಕ್ಕೇರಿದ ಲಾಲ್ ಬಹಾದುರ್ ಶಾಸ್ತ್ರಿ ಮತ್ತು ಕಾಮರಾಜ್ ನಾಡಾರ್ ಅವರಿಗೆ ಪ್ರಶಸ್ತಿ ನೀಡಿದ್ದು ಮರಣೋತ್ತರವಾಗಿ. 1992ರಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರಿಗೆ ಭಾರತ ರತ್ನ ನೀಡಿ ಆ ನಂತರ ವಾಪಸು ಪಡೆಯಲಾಯಿತು. ಜಯಪ್ರಕಾಶ್ ನಾರಾಯಣ್ ಅವರಿಗೆ ಭಾರತರತ್ನ ನೀಡಲು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕಾಯಿತು.

ಇತ್ತೀಚೆಗೆ ಭಾರತರತ್ನ ವಿವಾದಕ್ಕೆ ಕಾರಣವಾಗಿದ್ದು 1999ರಲ್ಲಿ ಪಂಡಿತ ರವಿಶಂಕರ್‌ಗೆ ನೀಡಿದಾಗ. ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ ಜಸ್‌ರಾಜ್ ಬಹಿರಂಗವಾಗಿಯೇ ವಿರೋಧಿಸಿದ್ದರು. ಭಾರತದಲ್ಲಿ ತನ್ನ ಕಲೆಗೆ ಪ್ರೋತ್ಸಾಹ ಇಲ್ಲದಿರುವುದರಿಂದ, ಪೌರತ್ವವನ್ನೇ ತ್ಯಜಿಸುತ್ತೇನೆ ಎಂದು ಹೇಳಿದ್ದವರಿಗೆ ಈ ಗೌರವವೇ ಎಂದು ಅವರು ಪ್ರಶ್ನಿಸಿದ್ದರು.

ಪದ್ಮಪ್ರಶಸ್ತಿಗಳ ವಿವಾದ ಇಲ್ಲದ ವರ್ಷವೇ ಇಲ್ಲವೆನ್ನಬಹುದು. ಸಿತಾರ್‌ವಾದಕ ಉಸ್ತಾದ್ ವಿಲಾಯತ್ ಖಾನ್ ಪದ್ಮಭೂಷಣ ಪ್ರಶಸ್ತಿ ನಿರಾಕರಿಸಿ ಸುದ್ದಿ ಮಾಡಿದರು. ತನಗಿಂತ ಕಿರಿಯರಾದ ರವಿಶಂಕರ್‌ಗೆ ಭಾರತರತ್ನ ನೀಡಿರುವಾಗ ತನಗೆ ಪದ್ಮವಿಭೂಷಣವೇ ಎನ್ನುವುದು ಅವರ ಪ್ರಶ್ನೆಯಾಗಿತ್ತು. 2002ರಲ್ಲಿ ಕಥಕ್ ನೃತ್ಯಗಾತಿ ಸಿತಾರಾ ದೇವಿಗೆ ಪದ್ಮಭೂಷಣ ಪ್ರಶಸ್ತಿ ಪ್ರಕಟಿಸಿದಾಗ ಕೊಡುವುದಿದ್ದರೆ ಭಾರತರತ್ನ ಕೊಡಿ ಇಲ್ಲದಿದ್ದರೆ ಯಾವುದೂ ಬೇಡ ಎಂದು ನಿರಾಕರಿಸಿದ್ದರು. ತನ್ನ ಹದಿನಾರನೇ ವಯಸ್ಸಿನಲ್ಲೇ ಕವಿ ರವೀಂದ್ರನಾಥ್ ಟಾಗೋರ್ ಅವರಿಂದ ಕಥಕ್‌ರಾಣಿ ಎಂಬ ಪ್ರಶಂಸೆ ಗಳಿಸಿದ್ದವರಿಗೆ ಪದ್ಮವಿಭೂಷಣ ನೀಡುತ್ತಿರುವುದು ಯಾವ ನ್ಯಾಯ ಎಂದು ಅವರು ಕೇಳಿದ್ದರು.

1981ರಲ್ಲಿ ವಿಶ್ವವಿಖ್ಯಾತ ಬಿಲಿಯಾರ್ಡ್ಸ್ ಆಟಗಾರ ಮೈಕೆಲ್ ಫೆರೇರಾ ಪದ್ಮಶ್ರೀ ತಿರಸ್ಕರಿಸಿದ್ದರು. ಸರ್ಕಾರಕ್ಕೂ ಕ್ರಿಕೆಟ್ ಬಗ್ಗೆ ಯಾಕಿಷ್ಟು ಮೋಹ? ನನ್ನ ಸಾಧನೆ ಗಾವಸ್ಕರ್‌ಗಿಂತ ಏನು ಕಡಿಮೆ? ಅವರಿಗೆ ನೀಡಿರುವ ಪದ್ಮವಿಭೂಷಣ ನನಗೂ ನೀಡಿದ್ದರೆ ಅದರ ಗೌರವ ಕಡಿಮೆಯಾಗುತ್ತಿತ್ತೇನು? ಎಂದು ಆಗಲೇ ಎರಡು ಬಾರಿ ಬಿಲಿಯರ್ಡ್ಸ್‌ನಲ್ಲಿ ವಿಶ್ವ ಅಮೆಚೂರ್ ಚಾಂಪಿಯನ್ ಆಗಿದ್ದ ಫೆರೇರಾ ಕೇಳಿದ್ದರು. ಎರಡು ವರ್ಷಗಳ ನಂತರ ಮೂರನೇ ಬಾರಿ ವಿಶ್ವ ಅಮೆಚೂರು ಚಾಂಪಿಯನ್‌ಷಿಪ್ ಗಳಿಸಿದಾಗ ಸರ್ಕಾರ ಅವರಿಗೆ ಪದ್ಮವಿಭೂಷಣ ನೀಡಿತು.

ವಿವಾದಗಳ ಕಾರಣಕ್ಕಾಗಿಯೇ 1977ರಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಈ ಪ್ರಶಸ್ತಿಗಳನ್ನು ರದ್ದುಪಡಿಸಿತು. ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ಇಂತಹ ಪ್ರಶಸ್ತಿಗಳಿಗೆ ವಿರುದ್ಧವಾಗಿದ್ದರು. ಆದರೆ 1980ರಲ್ಲಿ ಭಾರತ ರತ್ನ ಮತ್ತು ಪದ್ಮ ಪ್ರಶಸ್ತಿಗಳಿಗೆ ಮರುಜೀವ ನೀಡಲಾಯಿತು. ವಿಪರ್ಯಾಸವೆಂದರೆ ಭಾರತರತ್ನ ಪ್ರಶಸ್ತಿಯನ್ನು ರದ್ದುಪಡಿಸಿದ ಮೊರಾರ್ಜಿ ದೇಸಾಯಿಯವರೇ 1991ರಲ್ಲಿ ಅದನ್ನು ಸ್ವೀಕರಿಸಿದರು. ಪ್ರಶಸ್ತಿಯ ಮೋಹಪಾಶ ಅಂತಹದ್ದು.

ಎಲ್ಲರೂ ಈ ಮೋಹಪಾಶಕ್ಕೆ ಸಿಲುಕಿದವರು ಎಂದು ಹೇಳುವುದು ಕೂಡಾ ಸರಿಯಾಗಲಾರದು. ಪ್ರಧಾನಿ ಇಂದಿರಾಗಾಂಧಿಯವರಿಗೆ ಸಲಹೆಗಾರರಾಗಿದ್ದ ಎಚ್.ವೈ. ಶಾರದಾ ಪ್ರಸಾದ್ ಪದ್ಮಪ್ರಶಸ್ತಿಗಳ ಬಗ್ಗೆ ಬರೆಯುತ್ತಾ ಒಂದು ಘಟನೆಯನ್ನು ಉಲ್ಲೇಖಿಸಿದ್ದಾರೆ:

ಪ್ರಶಸ್ತಿ ಬೇಡ – ವಾಚ್ ಕೊಡಿ!

ಮಹಾತ್ಮಗಾಂಧೀಜಿಯವರ ಆತ್ಮ ಚರಿತ್ರೆ ಬರೆದಿರುವ ಡಿ. ಜಿ. ತೆಂಡೂಲ್ಕರ್ ಅವರಿಗೆ ನೆಹರೂ ಪ್ರಧಾನಿಯಾಗಿದ್ದಾಗ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಲು ನಿರ್ಧರಿಸಿತ್ತಂತೆ. ಈ ಸುದ್ದಿ ತಿಳಿದ ತೆಂಡ್ಯೂಲ್ಕರ್, ಪದ್ಮಭೂಷಣ ಕಟ್ಟಿಕೊಂಡು ನಾನೇನು ಮಾಡಲಿ, ಅದರ ಬದಲಿಗೆ ನನಗೊಂದು ಕೈಗಡಿಯಾರ ಕೊಡಿ ಎಂದು ರಾಷ್ಟ್ರಪತಿಗಳಿಗೆ ಟೆಲಿಗ್ರಾಂ ಕೊಟ್ಟರಂತೆ. ಅದರಂತೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಅವರಿಗೊಂದು ಕೈಗಡಿಯಾರ ಕೊಟ್ಟು ಕಳುಹಿಸಿದರಂತೆ.

ಈಗಿನ ಕಾಲದಲ್ಲಿ ಪ್ರಶಸ್ತಿ ನೀಡುವುದಿದ್ದರೆ ರಾಷ್ಟ್ರಪತಿಗಳ ಕೈಗೆ ಚಿನ್ನದ ಕೈಗಡಿಯಾರ ಕಟ್ಟಲು ಸಿದ್ಧ ಇರುವವರ ಸಂಖ್ಯೆಯೇನೂ ಕಡಿಮೆ ಇರಲಾರದು.

ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಕಲೆಯ ಬಗ್ಗೆ ಆಸಕ್ತಿ ಇಲ್ಲ ಎಂದು ಹೇಳಿದವರ್‍ಯಾರು? ರಾಜಧಾನಿಯ ಖ್ಯಾತ ಸಂಗೀತಗಾರರು ಮತ್ತು ನೃತ್ಯ ಪಟುಗಳ ಶಿಷ್ಯರ ಪಟ್ಟಿಯಲ್ಲಿ ಈ ಗಣ್ಯರ ಮಕ್ಕಳ ಹೆಸರೇ ಮೊದಲ ಸಾಲಲ್ಲಿದೆ. ಈ ವಿಐಪಿ

ಶಿಷ್ಯರು ಕಲೋಪಾಸನೆಯ ಮೂಲಕ ಗುರುವಿನ ಹೆಸರು ಎಷ್ಟು ಉಜ್ವಲಗೊಳಿಸುತ್ತಾರೋ ಗೊತ್ತಿಲ್ಲ. ಆದರೆ ತಮ್ಮ ಗುರುಗಳಿಗೆ ಪ್ರಶಸ್ತಿ ಕೊಡಿಸಿ ಅವರನ್ನು ಗೌರವಾನ್ವಿತರನ್ನಾಗಿ ಮಾಡುತ್ತಾರೆ. ಇದಕ್ಕಿಂತ ದೊಡ್ಡ ಗುರುದಕ್ಷಿಣೆ ಇನ್ನೇನು ಬೇಕು? ಈ ಬಾರಿ ಕಾಂಗ್ರೆಸ್ ರಾಜಕಾರಣಿಗಳ ಮಕ್ಕಳ ಗುರುಗಳು ಸಿದ್ಧರಾಗಿ ನಿಂತಿದ್ದಾರೆ. ಪ್ರತಿಬಾರಿ ಪದ್ಮಪ್ರಶಸ್ತಿ ಕುರಿತ ವಿವಾದಗಳಲ್ಲಿ ಸಂಗೀತಗಾರರು ಮತ್ತು ನೃತ್ಯಪಟುಗಳ ಹೆಸರೇ ಹೆಚ್ಚು ಕೇಳಿಬರುತ್ತಿರುವುದೇಕೆ ಎನ್ನುವ ಪ್ರಶ್ನೆಗೆ ಉತ್ತರಿಸುವ ಅಗತ್ಯ ಇದೆಯೇ?

(17-01-2005)

ಜಾತಿಗಣತಿಗೆ ಭೀತಿಯೇಕೆ?

ಭಾರತೀಯರನ್ನು ಸುಮಾರು 200 ವರ್ಷ ಗುಲಾಮರನ್ನಾಗಿ ಮಾಡಿಕೊಂಡ ಬ್ರಿಟಿಷರ ಬಗ್ಗೆ ನೂರೆಂಟು ದೂರುಗಳಿರಬಹುದು. ಆದರೆ ಇಂಗ್ಲಿಷ್ ಶಿಕ್ಷಣ, ರೈಲು ಸಂಪರ್ಕ, ಅಂಚೆ ವ್ಯವಸ್ಥೆ ಮೊದಲಾದ ಕೊಡುಗೆಗಳಾಗಿ ಅವರನ್ನು ಕೃತಜ್ಞತೆಯಿಂದ ಸ್ಮರಿಸದೇ ಇರುವುದು ಕಷ್ಟ. ಅದೇ ರೀತಿ ಅವರು ನಡೆಸಿದ್ದ ಜಾತಿವಾರು ಜನಗಣತಿ. ಅಡ್ಡಕ್ಕೆ ಉದ್ದಕ್ಕೆ ಸೀಳಿಹೋಗಿರುವ ಭಾರತೀಯ ಸಮಾಜದ ವಿರಾಟ್‌ದರ್ಶನ ಬ್ರಿಟಿಷರಿಗೆ ಆಗಿದ್ದೇ 1931ರಲ್ಲಿ ನಡೆಸಿದ ಜಾತಿ ಜನಗಣತಿಯಿಂದ. ಆ ಮಾಹಿತಿಯನ್ನು ತಮ್ಮ ಒಡೆದು ಆಳುವ ನೀತಿಗೆ ಅವರು ದುರುಪಯೋಗಪಡಿಸಿಕೊಂಡರು ಎನ್ನುವುದು ಬೇರೆ ಮಾತು.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿತ ಜಾತಿಗಳಿಗೆ ಮೀಸಲಾತಿ ನೀಡುವ ವಿಚಾರದಲ್ಲಿನ ವಿವಾದ ಈಗ ಮತ್ತೊಮ್ಮೆ ಜಾತಿವಾರು ಜನಗಣತಿ ಎಂಬ ಬೆಂಕಿ ಚೆಂಡನ್ನು ಚರ್ಚೆಯ ಅಂಗಳಕ್ಕೆ ಎಸೆದಿದೆ. ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವುದೇನೋ ಸರಿ, ಆ ಜಾತಿಗಳು ಯಾವುವು? ಅದರ ಪ್ರಮಾಣವನ್ನು ಹೇಗೆ ನಿರ್ಧರಿಸಲು ಏನು ಆಧಾರ?.... ಎಂಬ ಸುಪ್ರೀಂಕೋರ್ಟ್‌ನ ಪ್ರಶ್ನೆಗಳ ಸುರಿಮಳೆಗೆ ಕೇಂದ್ರ ಸರ್ಕಾರ ತಬ್ಬಿಬ್ಬಾಗಿ ಹೋಗಿತ್ತು. ಇಂತಹದ್ದೇ ಪ್ರಶ್ನೆಗಳನ್ನು ಹಿಂದುಳಿದ ಜಾತಿಗಳ ಉದ್ಧಾರಕನ ಕಿರೀಟಧಾರಣೆಗೆ ಸಿದ್ಧತೆ ನಡೆಸಿರುವ ಕೇಂದ್ರ ಮಾನವ

ಸಂಪನ್ಮೂಲ ಅಭಿವೃದ್ಧಿ ಸಚಿವ ಅರ್ಜುನ್‌ಸಿಂಗ್ ಅವರಿಗೆ ಟಿವಿ ಸಂದರ್ಶಕರು ಕೇಳಿದಾಗ ಅವರಿಗೆ ಸಮರ್ಪಕ ಉತ್ತರ ನೀಡಲಾಗದೆ ಅರ್ಜುನ್‌ಸಿಂಗ್ ತಡವರಿಸಿದ್ದಾರೆ.

ಸಂವಿಧಾನ ಕಾರ್ಯರೂಪಕ್ಕೆ ಬಂದು 56 ವರ್ಷಗಳು ಕಳೆದುಹೋಗಿವೆ. ಆದರೆ ಸಂವಿಧಾನಬದ್ಧ ಕರ್ತವ್ಯವೊಂದನ್ನು ಈವರೆಗಿನ ಯಾವ ಸರ್ಕಾರವೂ ನಿರ್ವಹಿಸಿಲ್ಲ ಎನ್ನುವುದಕ್ಕೆ ಸುಪ್ರೀಂಕೋರ್ಟ್ ಮುಂದೆ ಕೈಕಟ್ಟಿ ನಿಂತ ಸರ್ಕಾರದ ನಿರುತ್ತರವೇ ಸಾಕ್ಷಿ. ಸರ್ಕಾರ ಪ್ರಸ್ತಾಪ ಮಾಡಿರುವ ಶೇಕಡಾ 27ರಷ್ಟು ಮೀಸಲಾತಿಯು ಪ್ರಮಾಣದಷ್ಟು ಹಿಂದುಳಿದ ಜಾತಿಗಳ ಜನಸಂಖ್ಯೆ ಇದೆ ಎನ್ನುವುದು ನಿರ್ವಿವಾದ. ಈ ಜಾತಿ ಲೆಕ್ಕದಿಂದಲ್ಲವೇ ಬಿಜೆಪಿ ಕೂಡಾ ಸಂಸತ್‌ನಲ್ಲಿ ಸಂವಿಧಾನ ತಿದ್ದುಪಡಿ ಮಸೂದೆಗೆ ಕೈ ಎತ್ತಿದ್ದು. ಆದರೆ ಇದನ್ನೇ ತರ್ಕಬದ್ಧವಾಗಿ ಸಾಧಿಸಲು ಸರ್ಕಾರದ ಬಳಿ ಅಧಿಕೃತ ದಾಖಲೆ ಇಲ್ಲ.

ಜಾತಿ, ವರ್ಣ, ಧರ್ಮ, ಲಿಂಗ, ಹುಟ್ಟಿನ ಸ್ಥಳ, ವಾಸಸ್ಥಾನಗಳನ್ನು ಮೀರಿ ಭಾರತೀಯರೆಲ್ಲರೂ ಸಮಾನರು ಎಂದು ಸಾರಿರುವ ಸಂವಿಧಾನವೇ ನಾಲ್ಕು ವರ್ಗಗಳನ್ನು ನಿರ್ದಿಷ್ಟ ಕಾರಣಗಳಿಗಾಗಿ ಸಮಾನತೆಯ ವ್ಯಾಖ್ಯೆಯಿಂದ ಹೊರಗಿಟ್ಟಿದೆ. ಈ ನಾಲ್ಕು ವರ್ಗಗಳು ಯಾವುವು ಮತ್ತು ಅವುಗಳ ಮುನ್ನಡೆಗೆ ಏನು ಮಾಡಬೇಕೆಂಬುದು ಸಂವಿಧಾನದ 15(3), 15(4), 16(4) ಮತ್ತು 46ನೇ ಪರಿಚ್ಛೇದಗಳಲ್ಲಿ ಸ್ಪಷ್ಟವಾಗಿದೆ.

ಜಾತಿ, ಧರ್ಮಗಳ ತಾರತಮ್ಯ ಮಾಡದೆ ಮಹಿಳೆ ಮತ್ತು ಮಕ್ಕಳಿಗಾಗಿ ವಿಶೇಷ ಸವಲತ್ತುಗಳನ್ನು ನೀಡಬಹುದು ಎನ್ನುತ್ತದೆ 15 (3)ನೇ ಪರಿಚ್ಛೇದ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮುನ್ನಡೆಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವ ಅವಕಾಶವನ್ನು 15 (4)ನೇ ಪರಿಚ್ಛೇದ ನೀಡಿದೆ. ತನ್ನ ಇಲಾಖೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆದಿರದ ಹಿಂದುಳಿದ ವರ್ಗಗಳಿಗೆ ನೇಮಕ ಮತ್ತು ಹುದ್ದೆಗಳಲ್ಲಿ ಪ್ರಾತಿನಿಧ್ಯ ನೀಡಲು 16 (4)ನೇ ಪರಿಚ್ಛೇದ ಸರ್ಕಾರಕ್ಕೆ ಅನುಮತಿ ನೀಡಿದೆ. ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ದುರ್ಬಲ ವರ್ಗಗಳಿಗೆ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಯ ರಕ್ಷಣೆಗೆ ವಿಶೇಷ ಗಮನ ನೀಡುವುದರ ಜತೆಗೆ ಸಾಮಾಜಿಕ ಅನ್ಯಾಯ ಮತ್ತು ಎಲ್ಲ ಬಗೆಯ ಶೋಷಣೆಗಳಿಂದ ಅವರನ್ನು ರಕ್ಷಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು 46ನೇ ಪರಿಚ್ಛೇದದಲ್ಲಿ ಹೇಳಲಾಗಿದೆ.

ಹತ್ತು ವರ್ಷಗಳಿಗೊಮ್ಮೆ ದೇಶದಲ್ಲಿ ನಡೆಯುವ ಜನಗಣತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯ ವಿವರದಷ್ಟೇ

ಸಿಗುತ್ತದೆ. ಆದರೆ ಸಂವಿಧಾನ ಹೇಳಿರುವ ಹಿಂದುಳಿದ ವರ್ಗಗಳು ಯಾವುವು? ಅವುಗಳ ಸ್ಥಿತಿಗತಿ ಏನು? ಇದನ್ನು ವೈಜ್ಞಾನಿಕ ಸಮೀಕ್ಷೆ ಮೂಲಕ ತಿಳಿದುಕೊಳ್ಳಬೇಕಾದ ಹೊಣೆ ಸರ್ಕಾರದ್ದಾಗಿತ್ತು. ಅದಕ್ಕಿದ್ದ ಒಂದೇ ದಾರಿ ಜಾತಿವಾರು ಜನಗಣತಿ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರ ರಚಿಸಿದ್ದ ಕಾಕಾ ಕಾಲೇಲ್ಕರ್ ಆಯೋಗವಾಗಲಿ, ನಂತರ ರಚನೆಯಾದ ಮಂಡಲ ಆಯೋಗವಾಗಲಿ ಇಲ್ಲವೇ ಕರ್ನಾಟಕದ ಹಾವನೂರು ಆಯೋಗ ಸೇರಿದಂತೆ ಇತರ ರಾಜ್ಯಗಳ ಆಯೋಗಗಳಾಗಲಿ ಹಿಂದುಳಿದ ಜಾತಿ ಜನಸಂಖ್ಯೆ ತಿಳಿದುಕೊಳ್ಳಲು ಜಾತಿವಾರು ಜನಗಣತಿ ನಡೆಸಲಿಲ್ಲ. ಬ್ರಿಟಿಷರ ಕಾಲದಲ್ಲಿ 1931ರಲ್ಲಿ ನಡೆದ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು, ಆ ಜಾತಿ ಪ್ರಮಾಣವನ್ನು ಈಗಿನ ಜನಸಂಖ್ಯೆಯ ಸರಾಸರಿ ಹೆಚ್ಚಳದ ಪ್ರಮಾಣಕ್ಕೆ ಹಿಗ್ಗಿಸಿ ಮಾಡಿದ ಲೆಕ್ಕ ಅದು. ಆ ಆಯೋಗಗಳು ನಡೆಸಿದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಧ್ಯಯನ ಕೂಡಾ ಕೆಲವು ಸಾವಿರ ಕುಟುಂಬಗಳನ್ನಷ್ಟೇ ಪ್ರಶ್ನಿಸಿ ನಡೆಸಿದ ಮಾದರಿ ಸಮೀಕ್ಷೆಯನ್ನು ಆಧರಿಸಿದ್ದು. ಆದ್ದರಿಂದ ಈ ಅಂಕಿ-ಅಂಶಗಳ ನಿಖರತೆಯನ್ನು ಯಾರಾದರೂ ಕೂಡಾ ಪ್ರಶ್ನಿಸಲು ಸಾಧ್ಯ. ಈಗ ನಡೆಯುತ್ತಿರುವುದು ಅದೇ ಕೆಲಸ.

ಜಾತಿವಾರು ಜನಗಣತಿ ನಡೆದರೆ ಸಮಾಜ ಒಡೆದು ಚೂರುಚೂರಾಗುತ್ತದೆ, ಜಾತಿ ದಂಗೆಗಳು ನಡೆದು ಸಮಾಜ ಹೊತ್ತಿ ಉರಿಯುತ್ತದೆ ಎನ್ನುವ ಹುಸಿಭೀತಿ ಹುಟ್ಟಿಸಲಾಗುತ್ತಿದೆ. ಜಾತಿ ಬೇಡ ಎನ್ನುವುದು ಒಂದು ಪ್ರಗತಿಗಾಮಿ ನಿಲುವು. ಜಾತಿ ಇಲ್ಲ ಎನ್ನುವುದು ಆತ್ಮವಂಚನೆ. ಸಮಾಜದಲ್ಲಿ ಜಾತಿ ವ್ಯವಸ್ಥೆ ಭದ್ರಗೊಳ್ಳಲು ಅತಿ ಮುಖ್ಯ ಕಾರಣ, ಸ್ವಜಾತಿ ವಿವಾಹ. ಜಾತಿ ಆಧಾರಿತ ಮೀಸಲಾತಿ ನೀಡಿದರೆ ಸಮಾಜ ಒಡೆದುಹೋಗುತ್ತದೆ ಎಂದು ಉಪವಾಸ ಕೂತ ವಿದ್ಯಾರ್ಥಿಗಳಲ್ಲಿ ಎಷ್ಟು ಮಂದಿ ಅಂತರಜಾತಿ ವಿವಾಹವಾಗಿ ಜಾತಿ ವ್ಯವಸ್ಥೆಯನ್ನು ಮುರಿಯಲು ಸಿದ್ಧ ಇದ್ದಾರೆ? ವಿವಾಹವಾಗುವ ಸಂದರ್ಭ ಎದುರಾದಾಗ ಈಗ ಜಾತಿ ವಿರೋಧಿಸುತ್ತಿರುವ ಮುಂದುವರಿದವರು ತಮ್ಮ ಜಾತಿ, ಒಳಪಂಗಡದವರನ್ನೇ ಆರಿಸಿಕೊಳ್ಳುತ್ತಾರೆ. ಇದಕ್ಕೆ ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಮೆಟ್ರಿಮೊನಿಯಲ್ ಅಂಕಣಗಳೇ ಸಾಕ್ಷಿ.

ಜಾತಿವಾರು ಜನಗಣತಿಯನ್ನು ಕೆಲವು ರಾಜಕೀಯ ಪಕ್ಷಗಳು ಹಿಂದೆ ವಿರೋಧಿಸಿದ್ದು ನಿಜ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಯಾವ ಪಕ್ಷ ಕೂಡಾ ಆ ನಿಲುವು ತಳೆಯುವುದು ಕಷ್ಟ. ಮಂಡಲ್ ವಿರೋಧಿ ಚಳವಳಿಗೆ ಬಹಿರಂಗ ಬೆಂಬಲ ನೀಡಿದ್ದ ಬಿಜೆಪಿ ಈ ಬಾರಿ ತೆಪ್ಪಗಾಗಿದೆ. ನರೇಂದ್ರ ಮೋದಿ, ಕಲ್ಯಾಣ್‌ಸಿಂಗ್, ಸುಶೀಲ್ ಮೋದಿ, ವಸುಂಧರೆ ರಾಜೇ, ಶಿವರಾಜ್ ಚೌಹ್ಹಾಣ್ ಮೊದಲಾದ ಹಿಂದುಳಿದ ಜಾತಿ ನಾಯಕರನ್ನು ಅವಲಂಬಿಸಿರುವ ಪಕ್ಷ ಬದಲಾಗದಿದ್ದರೆ ಹೇಗೆ?

ಜಾತಿಗಳ ಜನಸಂಖ್ಯೆ ಮತ್ತು ಅವುಗಳ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಯ ವಿಶ್ವಾಸಾರ್ಹ ಮಾಹಿತಿಯ ಕೊರತೆ ಇರುವ ಕಾರಣದಿಂದಾಗಿಯೇ ಹೊಸ ಹೊಸ ಜಾತಿಗಳು ಪರಿಶಿಷ್ಟಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಗುಂಪಿಗೆ ಸೇರುತ್ತಲೇ ಇದೆ. ರಾಜಸ್ತಾನದ ಹಿಂದಿನ ಸರ್ಕಾರ ಮೇಲ್ಜಾತಿಗಳಿಗೆ ಶೇಕಡಾ 14ರಷ್ಟು ಮೀಸಲಾತಿ ನೀಡುವ ಪ್ರಸ್ತಾಪವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿತ್ತು. ಎನ್‌ಡಿಎ ಸರ್ಕಾರ ಭೂಮಾಲೀಕರಾದ ಜಾಟರನ್ನೇ ಹಿಂದುಳಿದ ವರ್ಗಕ್ಕೆ ಸೇರಿಸಿಬಿಟ್ಟಿತು. ರಾಜ್ಯಸರ್ಕಾರಗಳು ತಮ್ಮ ರಾಜಕೀಯ ಅನುಕೂಲ ನೋಡಿಕೊಂಡು ಮೀಸಲಾತಿ ಸೌಲಭ್ಯವನ್ನು ವಿಸ್ತರಿಸುತ್ತಲೇ ಇರುತ್ತವೆ. ಈ ಕಾರಣದಿಂದಾಗಿಯೇ ಕರ್ನಾಟಕದಲ್ಲಿ ಇಂದು ಶೇಕಡಾ 68ರಷ್ಟು ಜನಸಂಖ್ಯೆ ಹಿಂದುಳಿದ ಜಾತಿಗೆ ಸೇರಿಬಿಟ್ಟಿವೆ. ಇದರ ಪ್ರಕಾರ ಎಸ್.ಎಂ. ಕೃಷ್ಣ ಮತ್ತು ಎಚ್.ಡಿ. ದೇವೇಗೌಡ ಕೂಡಾ ಹಿಂದುಳಿದ ಜಾತಿ ನಾಯಕರು.

○

ಸೇನೆಯಲ್ಲಿ ಮಹಿಳೆಯ 'ಸೋಲು'

ಸೇನೆಯಲ್ಲಿ ಮಹಿಳೆಯರಿಂದ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚು ಎಂಬ ಹಿರಿಯ ಸೇನಾಧಿಕಾರಿಯೊಬ್ಬರ ಹೇಳಿಕೆ ಮಹಿಳಾ ಸಮುದಾಯವನ್ನು ಕೆರಳಿಸಿದೆ. ಕಿತ್ತೂರ ಚೆನ್ನಮ್ಮ, ಝಾನ್ಸಿ ರಾಣಿ, ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್....ಮತ್ತಿತರ ವೀರವನಿತೆಯರ ಉದಾಹರಣೆಗಳು ಇರುವಾಗ, ಸೇನೆಯಲ್ಲಿ ಸೇವೆ ಸಲ್ಲಿಸಲು ಮಹಿಳೆಯರು ಅರ್ಹರಲ್ಲ ಎನ್ನುವ ಮಾತಿಗೆ ಅರ್ಥವಿದೆಯೇ?

ಕಿತ್ತೂರು ಚೆನ್ನಮ್ಮ, ರಾಣಿ ಅಬ್ಬಕ್ಕ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ರಜಿಯಾ ಸುಲ್ತಾನ್, ಒನಕೆ ಓಬವ್ವ, ಕ್ಯಾಪ್ಟನ್ ಲಕ್ಷ್ಮಿಸೆಹಗಲ್....ಭಾರತ ಕಂಡ ವೀರವನಿತೆಯರ ಸಾಲು ದೊಡ್ಡದು. ಹೋಗುತ್ತಿರುವ ದಾರಿಯ ಬಗ್ಗೆ ಭಿನ್ನಾಭಿಪ್ರಾಯ ಇಟ್ಟುಕೊಂಡರೂ ನಕ್ಸಲೀಯರ ತಂಡಗಳಲ್ಲಿರುವ ಮಹಿಳೆಯರ ಸಾಹಸವನ್ನು ಮೆಚ್ಚದಿರಲು ಸಾಧ್ಯವಿಲ್ಲ. ಸೇನೆಯ ಉಪ ಪ್ರಧಾನ ಲೆಫ್ಟಿನೆಂಟ್ ಜನರಲ್ ಎಸ್.ಪಟ್ಟಾಭಿರಾಮನ್ ಇವೆಲ್ಲವನ್ನೂ ನೆನಪು ಮಾಡಿಕೊಂಡಿದ್ದರೆ ಮಹಿಳೆಯರ ಬಗ್ಗೆ ನಕಾರಾತ್ಮಕ ಹೇಳಿಕೆ ನೀಡುತ್ತಿರಲಿಲ್ಲವೇನೋ?

'ಮಹಿಳೆಯರಿಲ್ಲದಿದ್ದರೂ ಸಹನೆ ಇರಬಲ್ಲದು. ಅವರನ್ನು ಸೇನೆಗೆ ಸೇರಿಸಿಕೊಳ್ಳುವುದರಿಂದ, ಅನೂಕೂಲಕ್ಕಿಂತ ಅನಾನುಕೂಲತೆಯೆ ಹೆಚ್ಚು' ಎಂಬ ಅವರ

ಹೇಳಿಕೆ ಮಹಿಳೆಯರನ್ನು ಕೆರಳಿಸಿದೆ. ಈಗ ಅವರು ಕ್ಷಮೆ ಕೇಳಿದ್ದಾರೆ. ಆದರೆ ಅಲ್ಲಿಗೆ ವಿವಾದ ಅಂತ್ಯವಾಗಿಲ್ಲ.

ರಕ್ಷಣಾಪಡೆಗಳಲ್ಲಿ ಆತ್ಮಹತ್ಯೆಗಳು ಸಾಮಾನ್ಯ. ಅಧಿಕೃತ ದಾಖಲೆಗಳ ಪ್ರಕಾರವೇ ಕಳೆದ 4 ವರ್ಷಗಳಲ್ಲಿ 430 ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಲ್ಲಿ ಸೇನಾಧಿಕಾರಿಗಳ ಸಂಖ್ಯೆಯೇ ಹೆಚ್ಚು. ಆದರೆ ಉದಮ್‌ಪುರದಲ್ಲಿ ಲೆಫ್ಟಿನೆಂಟ್ ಆಗಿದ್ದ ಸುಶ್ಮಿತಾ ಚಕ್ರವರ್ತಿ ಅವರ ಆತ್ಮಹತ್ಯೆ ಮತ್ತು ಅದಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಸೇನಾ ಉಪಮುಖ್ಯಸ್ಥರು ನೀಡಿದ ಹೇಳಿಕೆ ಸೇನೆಯ 'ಮಹಿಳಾ ಅಸ್ಪೃಶ್ಯತೆಯ ರಹಸ್ಯಮುಖ'ವೊಂದನ್ನು ಬಯಲು ಮಾಡಿದೆ.

ಸ್ವಾತಂತ್ರ್ಯ ಸಿಕ್ಕಿ 45 ವರ್ಷಗಳವರೆಗೂ ಭಾರತೀಯ ಸೇನೆಯಲ್ಲಿ ಮಹಿಳೆಯರೇ ಇರಲಿಲ್ಲ ಎನ್ನುವುದು ವೀರನಾರಿಯರನ್ನು ಕಂಡ ನಾಡಿಗೆ ಶೋಭೆ ತರುವ ವಿಷಯವಲ್ಲ. 1992ರಲ್ಲಿ ಸೇನೆಗೆ ಮಹಿಳೆಯರ ನೇಮಕಾತಿ ಪ್ರಾರಂಭವಾದರೂ ಈಗಲೂ ಅವರ ಸಂಖ್ಯೆ ನಗಣ್ಯ ಅನಿಸುವಷ್ಟು ಕಡಿಮೆ. ಸುಮಾರು 35 ಸಾವಿರ ಅಧಿಕಾರಿಗಳಲ್ಲಿ ಮಹಿಳೆಯರ ಸಂಖ್ಯೆ ಕೇವಲ 918. ಈ ಮಹಿಳಾ ಅಧಿಕಾರಿಗಳ ಜತೆಯಲ್ಲಿಯೂ ಸೇನೆ ಲಿಂಗಭೇದ ನಡೆಸುತ್ತಿದೆ. ಯುದ್ಧದಲ್ಲಿ ನೇರವಾಗಿ ಭಾಗವಹಿಸುವ ಅವಕಾಶ ಇಲ್ಲ. ಕಾಲಾಳುಪಡೆ ಇಲ್ಲವೆ ಫಿರಂಗಿ ದಳಗಳಿಗೂ ಅವರನ್ನು ಸೇರಿಸಿಕೊಳ್ಳುತ್ತಿಲ್ಲ. ಪುರುಷರ ನೇಮಕಕ್ಕಾಗಿ ಪ್ರತ್ಯೇಕ ಆಯೋಗ ಇದ್ದರೆ, ಮಹಿಳೆಯರನ್ನು ಕಿರುಸೇವೆಯ ಆಧಾರದಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಆದ್ದರಿಂದ ಒಂದೇ ಶ್ರೇಣಿಯಿದ್ದರೂ ಮಹಿಳೆಯರಿಗೆ ಸಂಬಳ ಕಡಿಮೆ. ವಾಯುಪಡೆಯಲ್ಲಿರುವ ಸುಮಾರು 10,000 ಅಧಿಕಾರಿಗಳಲ್ಲಿ 450 ಮಹಿಳೆಯರು. ನೌಕಾದಳದಲ್ಲಿರುವ 7,000 ಅಧಿಕಾರಿಗಳಲ್ಲಿ ಮಹಿಳೆಯರ ಸಂಖ್ಯೆ ನೂರು.

ಸೇನೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿರುವುದು ವೈದ್ಯಕೀಯ ವಿಭಾಗದಲ್ಲಿ. ಅದನ್ನು ಹೊರತುಪಡಿಸಿದರೆ ಸೇವೆ, ಶಿಕ್ಷಣ, ಕಾನೂನು, ಮದ್ದುಗುಂಡುಗಳ ಕೋಠಿ ಮೊದಲಾದ ವಿಭಾಗಗಳಿಗೆ ಅವರ ಪಾತ್ರ ಸೀಮಿತ. ಸೇನೆಯಲ್ಲಿ ಮಹಿಳೆಯರು ಪಡೆಯಬಹುದಾದ ಅತ್ಯುನ್ನತ ಹುದ್ದೆ ಲೆಫ್ಟಿನೆಂಟ್ ಕರ್ನಲ್ ಮಾತ್ರ. ಅವರ 'ಗರಿಷ್ಠ ಸೇವಾವಧಿ 14 ವರ್ಷ. ವಾಯುಪಡೆಯಲ್ಲಿ ಮಹಿಳಾ ಪೈಲೆಟ್‌ಗಳಿದ್ದರೂ ಅವರಿಗೆ ಯುದ್ಧವಿಮಾನದ ಚಾಲನೆ ನಿಷಿದ್ಧ. ನೌಕಾದಳದಲ್ಲಿರುವ ಮಹಿಳೆಯರಿಗೆ ಸಬ್‌ಮೆರಿನ್ ಓಡಿಸಲು ಅವಕಾಶ ಇಲ್ಲ.

ಅಮೇರಿಕ ಮತ್ತು ಬ್ರಿಟನ್‌ನಲ್ಲಿಯೂ ಮಹಿಳೆಯರಿಗೆ ಯುದ್ಧದಲ್ಲಿ ಭಾಗವಹಿಸುವ ಅವಕಾಶ ಇಲ್ಲ. ಸಬ್‌ಮೆರಿನ್ ಚಲಾಯಿಸುವಂತಿಲ್ಲ. ಯುದ್ಧವಿಮಾನಗಳ ಪೈಲಟ್ ಆಗುವಂತಿಲ್ಲ. ಯುದ್ಧದಲ್ಲಿ ಭಾಗವಹಿಸುವ ಅವಕಾಶವನ್ನು ವಿಶ್ವದಲ್ಲಿ ಮೊದಲ ಬಾರಿ

ನೀಡಿದ್ದು ನಾರ್ವೆ. ಅಲ್ಲಿನ ಸೇನೆಯಲ್ಲಿನ ಮಹಿಳೆ ಯುದ್ಧದಲ್ಲಿ ಬಾಗವಹಿಸಬಹುದು. ಇಸ್ರೇಲ್‌ನಲ್ಲಿ ಆಯ್ಕೆಯನ್ನು ಮಹಿಳೆಯರಿಗೆ ಬಿಟ್ಟುಕೊಟ್ಟಿರುವುದರಿಂದ ಅಲ್ಲಿನ ರಕ್ಷಣಾ ಪಡೆಗಳ ಕೆಳಶ್ರೇಣಿಯಲ್ಲಿ ಶೇ.33 ರಷ್ಟು, ಮಧ್ಯಮ ಶ್ರೇಣಿಯಲ್ಲಿ ಶೇ.20 ರಷ್ಟು ಮಹಿಳೆಯರಿದ್ದಾರೆ.

ಮಹಿಳೆಯರನ್ನು ಸೇನೆಯಿಂದ ಯಾಕೆ ದೂರ ಇಡಲಾಗಿದೆ? ಇದಕ್ಕೆ ಮೊದಲ ಕಾರಣ–ಪೂರ್ವಗ್ರಹ ಪೀಡಿತ ಪುರುಷ ಸಮಾಜ. ಇಲ್ಲಿ ಮಹಿಳೆಯರೂ ಸೇರಿದಂತೆ ಎಲ್ಲರಿಗೂ ರಕ್ಷಣೆ ನೀಡುವ ಜವಾಬ್ದಾರಿ ಪುರುಷರದ್ದು. ಯುದ್ಧಕ್ಕೆ ಹೋದ ಪತಿ ಪ್ರಾಣ ಕಳೆದುಕೊಂಡರೆ ಆತನ ಚಿತೆಗೆ ಹಾರಿ ಪ್ರಾಣ ಕೊಡುವುದಷ್ಟೇ ಆಕೆಯ ಕರ್ತವ್ಯ. ಸತ್ತ ಪತಿಯ ಚಿತೆಗೆ ನೂಕುವ ಬದಲಿಗೆ, ಯುದ್ಧ ಭೂಮಿಗೆ ಕಳುಹಿಸಿಕೊಟ್ಟಿದ್ದರೆ ವೀರಸ್ವರ್ಗ ಪಡೆಯಲು ಆಕೆ ಸಂತೋಷದಿಂದ ಹೋಗುತ್ತಿದ್ದಳೇನೋ? ಆದರೆ ಆತ್ಮಹತ್ಯೆಯ ಹೇಡಿಕಾರ್ಯವನ್ನು ಆಕೆಯ ಮೇಲೆ ಹೊರಿಸಿದ ಸಮಾಜ, ಹೋರಾಟದ ಧೈರ್ಯವನ್ನು ತುಂಬುವ ಪ್ರಯತ್ನ ಮಾಡಲಿಲ್ಲ.

ಪಟ್ಟಾಭಿರಾಮನ್ ಹೇಳಿಕೆ ನೋಡಿದರೆ, ಸಮಾಜದಲ್ಲಿ ಮಹಿಳೆಯರ ಬಗೆಗಿನ ಧೋರಣೆ ಇನ್ನೂ ಬದಲಾಗಿರುವಂತೆ ಕಾಣುವುದಿಲ್ಲ. ಮಹಿಳೆಯರಲ್ಲಿ ಹೊಂದಿಕೊಳ್ಳುವ ಸ್ವಭಾವ ಕಡಿಮೆ. ಹೆಚ್ಚಿನವರು ನೇಮಕಗೊಂಡ ಕೂಡಲೇ ಮದುವೆಗೆ ಮುಂದಾಗುತ್ತಾರೆ. ಇತ್ಯಾದಿ ಆರೋಪಗಳನ್ನು ಮಾಡಿದ್ದಾರೆ. ಮಹಿಳಾ ಅಧಿಕಾರಿಗಳು ಬಂಕರ್‌ಗಳಲ್ಲಿ ಉಳಿದು ಮುಖಾಮುಖಿ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವೇ? ಶತ್ರುಗಳಿಗೆ ಸೆರೆಸಿಕ್ಕರೆ ಗತಿ ಏನಾಗಬಹುದು? ಎಂಬಿತ್ಯಾದಿ ಪ್ರಶ್ನೆಗಳನ್ನು ಸೇನೆಯ ಪುರುಷ ಮನಸ್ಸುಗಳು ಕೇಳುತ್ತವೆ.

ಸುಭಾಷ್‌ಚಂದ್ರ ಬೋಸ್ ಅವರು ವಿಶ್ವದ ಮೊದಲ ಮಹಿಳಾ ಸೇನಾ ಪಡೆಯನ್ನು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ನಾಯಕತ್ವದಲ್ಲಿ ಕಟ್ಟಿದಾಗಲೂ ಈ ರೀತಿಯ ಪ್ರಶ್ನೆಗಳನ್ನು ಕೇಳುವವರಿದ್ದರು. ಬ್ರಿಟನ್ ಸೇನೆಯಿಂದ ಬಂಧನಕ್ಕೊಳಗಾಗಿ ಅನಂತರ ಸುರಕ್ಷಿತವಾಗಿ ಪಾರಾಗಿ ಬಂದ ಸಾಹಸಿ ಕ್ಯಾಪ್ಟನ್ ಲಕ್ಷ್ಮಿ. ದೇಶದ 13 ರಾಜ್ಯಗಳ ವ್ಯಾಪ್ತಿಯಲ್ಲಿ 'ರೆಡ್ ಕಾರಿಡಾರ್' ನಿರ್ಮಿಸಿ ಸರ್ಕಾರಕ್ಕೆ ಸವಾಲು ಹಾಕುತ್ತಿರುವ ನಕ್ಸಲೀಯ ತಂಡಗಳಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಆಂಧ್ರಪ್ರದೇಶ, ಬಿಹಾರ, ಜಾರ್ಖಂಡ್, ಚತ್ತೀಸಘಡಗಳಲ್ಲಿ ಮಹಿಳೆಯರನ್ನೇ ಹೊಂದಿರುವ ಪ್ರತ್ಯೇಕ ನಕ್ಸಲೀಯ ತಂಡಗಳು ಪುರುಷರಿಗೆ ಸರಿಸಮನಾಗಿ ಕಾರ್ಯಾಚರಣೆ ನಡೆಸುತ್ತಿವೆ.

ನೇಪಾಳದ ಮಾವೋವಾದಿ ಸಂಘಟನೆಯಲ್ಲಿ ಮೂರನೇ ಒಂದು ಭಾಗದಷ್ಟು ಮಹಿಳೆಯರೇ ಇದ್ದಾರೆ. ಶ್ರೀಲಂಕಾದ ಎಲ್‌ಟಿಟಿಇಯಲ್ಲಿರುವ ಸುಮಾರು 11000 ಸದಸ್ಯರಲ್ಲಿ 3000 ದಷ್ಟು ಮಹಿಳೆಯರಿದ್ದಾರೆ. ಎಲ್‌ಟಿಟಿಇಯಲ್ಲಿನ ಮಹಿಳಾ ಸದಸ್ಯರನ್ನು ಕಂಡ ಮೇಲೆ ಅಲ್ಲಿನ ಸರ್ಕಾರ ಕೂಡಾ 1985ರಲ್ಲಿ ಮಹಿಳೆಯರನ್ನು ಸೇನೆಗೆ ನೇಮಕ

ಮಾಡಿಕೊಳ್ಳತೊಡಗಿತು. ಈಗ ಅಲ್ಲಿ ಒಂದು ಲಕ್ಷ ಬಲದ ಸೇನೆಯಲ್ಲಿ ಸುಮಾರು 5000 ಮಹಿಳೆಯರಿದ್ದಾರೆ.

ಭಾರತದಲ್ಲಿ ಸೇನೆ ಸೇರುವ ವಿಚಾರದಲ್ಲಿ ಮಹಿಳೆಯರಲ್ಲಿ ಹಿಂಜರಿತ ಇದೆ. ಅದಕ್ಕೆ ಕಾರಣಗಳಿವೆ. ದೈಹಿಕವಾಗಿ ಗಂಡು-ಹೆಣ್ಣು ಭಿನ್ನ ಜೀವಿಗಳು. ಆದರೆ ರಣರಂಗ ಯಾರಿಗೂ ರಿಯಾಯಿತಿ ನೀಡುವುದಿಲ್ಲ. ದೈಹಿಕ ಶ್ರಮವನ್ನು ಬೇಡುವ ಕೆಲಸಗಳನ್ನೆಲ್ಲಾ ಗಂಡಿಗೆ ಸರಿಸಮನಾಗಿ ಹೆಣ್ಣು ಮಾಡಲಾರಳು. ಕಾಡು-ಬೆಟ್ಟಗಳಲ್ಲಿ ಸ್ನಾನಗೃಹ-ಶೌಚಾಲಯ ಸೌಲಭ್ಯಗಳಿಲ್ಲದೇ ತಿಂಗಳುಗಟ್ಟಳೆ ವಾಸಿಸುವುದು ಮಹಿಳೆಗೆ ಕಷ್ಟದ ಕೆಲಸ. ಇವೆಲ್ಲದರ ಜತೆ ಸೇನೆಯ ಮೇಲಿರುವ ಲೈಂಗಿಕ ಶೋಷಣೆಯ ಕಳಂಕವೂ ಮಹಿಳೆಯರ ಭೀತಿಗೆ ಕಾರಣ. ಮಿಲಿಟರಿಯ ಕಬ್ಬಿಣದ ಕೋಟೆಗಳಿಗಿಂತ ಮಹಿಳೆಯರ ಆಕ್ರಂದನ ಹೊರ ಜಗತ್ತಿಗೆ ಕೇಳದೆ ಇದ್ದರೂ ಈ ಕಳಂಕವನ್ನು ನಿರಾಕರಿಸುವುದು ಕಷ್ಟ.

ಮಹಿಳೆಯರನ್ನು ಸೇನೆಗೆ ಸಜ್ಜುಗೊಳಿಸಲು ಅವರ ಶಕ್ತಿ ಮತ್ತು ದೌರ್ಬಲ್ಯಗಳ ಆಧಾರದಲ್ಲಿ ಪ್ರತ್ಯೇಕ ತರಬೇತಿ ಕ್ರಮ ರೂಪಿಸಬೇಕೆಂಬ ಬೇಡಿಕೆ ಹಳೆಯದು. ಪುರುಷರಿಗೆ 44 ವಾರಗಳ ತರಬೇತಿ ನೀಡಲಾಗುತ್ತಿದ್ದರೆ. ಮಹಿಳಾ ಅಧಿಕಾರಿಗಳಿಗೆ ಕೇವಲ 24 ವಾರಗಳಿಗೆ ಮೊಟಕು ಗೊಳಿಸಲಾಗಿದೆ. ಮಹಿಳೆಯರ ತರಬೇತಿ ಕ್ರಮ ಕೂಡಾ ಸರಳವಾಗಿದ್ದು, ಪುರುಷ ಅಧಿಕಾರಿಗಳಿಗೆ ನೆರವಾಗುವ ರೀತಿಯಲ್ಲಿ ರೂಪಿಸಲಾಗಿದೆ. ತರಬೇತಿ ಕ್ರಮದ ಬದಲಾವಣೆಯ ಜತೆಯಲ್ಲಿ ಸೇನೆಯಲ್ಲಿನ ಪುರುಷರ ಧೋರಣೆ ಕೂಡಾ ಬದಲಾದರೆ, ಚೆನ್ನಮ್ಮ, ಲಕ್ಷ್ಮಿಬಾಯಿ, ಅಬ್ಬಕ್ಕರನ್ನು ಮತ್ತೆ ಕಾಣಬಹುದೇನೋ?

ಸೇನೆಯಲ್ಲಿಯೇ ಯಾಕೆ, ಪೋಲೀಸ್ ಇಲಾಖೆಯಲ್ಲಿಯೂ ಮಹಿಳೆಯರ ಪ್ರಮಾಣ ಶೇಕಡಾ ಮೂರು ದಾಟುವುದಿಲ್ಲ. ಸಿವಿಲ್ ಸರ್ವಿಸ್‌ನಲ್ಲಿ ಅವರ ಪ್ರಮಾಣ ಶೇಕಡಾ ಏಳರಿಂದ ಎಂಟು. ಲೋಕಸಭೆಯಲ್ಲಿ ಮಹಿಳಾ ಸದಸ್ಯರ ಪ್ರಮಾಣ ಶೇಕಡಾ 8.7 ಕರ್ನಾಟಕದ ಸಚಿವ ಸಂಪುಟದಲ್ಲಿ-ಶೂನ್ಯ.

O

ವಿವಾದಕ್ಕೆ ಮಹಿಳಾ ಮೀಸಲಾತಿ

ಈಗಿನ ರೂಪದಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸಂಸತ್‌ನಲ್ಲಿ ಬಹುಮತದ ಅಂಗೀಕಾರ ಪಡೆಯುವುದು ಅಸಾಧ್ಯ ಎಂಬ ಸತ್ಯವನ್ನು ಹತ್ತು ವರ್ಷಗಳ ಅನುಭವ ಹೇಳುತ್ತಿದೆ. ಅದಕ್ಕೆ ಪರ್ಯಾವಾಗಿ ಅನೇಕ ಸೂತ್ರಗಳು ಚರ್ಚೆಯ ಅಂಗಳದಲ್ಲಿ ಉರುಳಾಡುತ್ತಿವೆ. ಮೀಸಲಾತಿಯ ಸಮರ್ಥಕರಾಗಲಿ, ವಿರೋಧಿಗಳಾಗಲಿ ಆ ಬಗ್ಗೆ ಕಣ್ಣು ಹರಿಸುತ್ತಿಲ್ಲ. 'ಹೇಗಾದರೂ ಇರಲಿ, ಎಷ್ಟಾದರೂ ಬರಲಿ,' 'ಬಂದಷ್ಟು ಬರಲಿ' ಎನ್ನುವ ಮೀಸಲಾತಿ ಸಮರ್ಥಕರು ಈಗಿನ ಮಸೂಧೆಯ ಸಾಧಕ-ಬಾಧಕಗಳ ಬಗ್ಗೆ ಚರ್ಚೆಗೂ ಸಿದ್ಧ ಇಲ್ಲ. ಅವರ ವಾಗ್ದಾಳಿಯ ಗುರಿ ಮುಲಾಯಂ- ಲಾಲು- ಪಾಸ್ವಾನ್ ಮೊದಲಾದ ಮೀಸಲಾತಿ ವಿರೋಧಿಗಳು. ವಿವಾದದ ಧೂಳು ಎದ್ದರೆ ಹೀಗೆ, ಎಲ್ಲರ ಕಣ್ಣು ಕುರುಡು.

ಸಂಸತ್ ಅಧಿವೇಶನ ಮಹಿಳಾ ಮೀಸಲಾತಿಯ ಮಂತ್ರಪಠಣದೊಂದಿಗೆ ಪ್ರಾರಂಭವಾಗುವುದು ಕಳೆದ ಕೆಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಒಂದು ಕುರುಡು ಆಚರಣೆ. ಮಂತ್ರದ ಮಹಿಮೆಯೇ ಹಾಗೆ, ಭಕ್ತಿ ಭಾವಪರವಶರಾದ ಭಕ್ತರಿಗೆ ಮಾತ್ರವಲ್ಲ, ಒಮ್ಮೊಮ್ಮೆ ಮಂತ್ರ ಪಠಿಸುವ ಪೂಜಾರಿಗೂ ಅದರ ಅರ್ಥ ಗೊತ್ತಿರುವುದಿಲ್ಲ. ಮಹಿಳಾ ಮೀಸಲಾತಿಯ ಮಂತ್ರದ ವಿಷಯದಲ್ಲಿಯೂ ಇದು ಸ್ವಲ್ಪ ಮಟ್ಟಿಗೆ ಸತ್ಯ. ಮೀಸಲಾತಿ ಮಸೂದೆಯ ಪರವಾಗಿ ಭಾಷಣ ಮಾಡುವ, ಘೋಷಣೆ ಕೂಗುವ,

ಪ್ರತಿಭಟನೆ ನಡೆಸುವವರು ಮನಸ್ಸನ್ನು ಇನ್ನಷ್ಟು ತೆರೆದು ಮಸೂದೆಯ ಅಧ್ಯಯನ ಮಾಡಿದ್ದರೆ ಈಗಿನ ರೂಪದಲ್ಲಿ ಅದನ್ನು ಒಪ್ಪುತ್ತಿರಲಿಲ್ಲವೇನು?

ಲೋಕಸಭೆಯಲ್ಲಿ ಮಂಡನೆಗೆ ಸಿದ್ಧ ಇರುವ ಮಸೂದೆಯ ಪ್ರಕಾರ ಲೋಕಸಭೆ ಮತ್ತು ವಿಧಾನ ಸಭೆಯ ಮೂರನೆ ಒಂದಷ್ಟು ಕ್ಷೇತ್ರಗಳು ಮಹಿಳೆಯರಿಗೆ ಮೀಸಲಾಗಿರುತ್ತವೆ. ಆದರೆ ಅವುಗಳು ಶಾಶ್ವತ ಮೀಸಲು ಕ್ಷೇತ್ರಗಳಲ್ಲ. ಪ್ರತಿ ಚುನಾವಣೆಯಲ್ಲಿ ಬದಲಾಗುತ್ತಾ ಹೋಗುವಂತದ್ದು. ರೊಟೇಶನ್ ವ್ಯವಸ್ಥೆಯಲ್ಲಿ ಮೆಲ್ನೋಟಕ್ಕೆ ಯಾವ ತಪ್ಪೂ ಕಾಣುವುದಿಲ್ಲ. ಆದರೆ ಅನುಷ್ಠಾನದಲ್ಲಿ ಕೆಲವು ಸಮಸ್ಯೆಗಳು ಎದ್ದುರಾಗಲು ಸಾಧ್ಯ.

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆ ಮತ್ತು ಜನಪ್ರತಿನಿಧಿಗಳ ನಡುವಿನ ಸಂಬಂಧಕ್ಕೆ ಮಹತ್ವದ ಸ್ಥಾನ ಇದೆ. ರೊಟೇಷನ್ ವ್ಯವಸ್ಥೆ ಈ ಸಂಬಂಧವನ್ನೇ ಕದಡಲಿದೆ. ಉದಾಹರಣೆಗೆ ಪ್ರತಿ ಲೋಕಸಭಾ ಚುನಾವಣೆಯಲ್ಲಿ 360 (180+180) ಸದಸ್ಯರು ಹಿಂದಿನ ಕ್ಷೇತ್ರದಿಂದ ಮರು ಆಯ್ಕೆ ಬಯಸುವಂತಿಲ್ಲ. ಅಷ್ಟೇ ಅಲ್ಲ ಯಾವ ಪುರುಷ ಸದಸ್ಯರೂ ನಿರಂತರವಾಗಿ ಎರಡಕಿಂತ ಹೆಚ್ಚು ಬಾರಿ ಒಂದು ಕ್ಷೇತ್ರದಿಂದ ಸ್ಪರ್ಧಿಸುವಂತಿಲ್ಲ. ಮೂರನೆ ಬಾರಿ ಅದನ್ನು ಮಹಿಳೆಯರಿಗೆ ಬಿಟ್ಟುಕೊಡಬೇಕಾಗುತ್ತದೆ. ಕರ್ತವ್ಯ ಭ್ರಷ್ಟತೆಯ ಆರೋಪದ ಹೊರತಾಗಿಯೂ ಜನಪ್ರತಿನಿಧಿ ಈಗಲೂ ಒಂದಷ್ಟು ಜವಾಬ್ದಾರಿಯಿಂದ ಕಾರ್‍ಯನಿರ್ವಹಿಸುತ್ತಿದ್ದರೆ ಅದಕ್ಕೆ ಕಾರಣ ಮುಂದಿನ ಚುನಾವಣೆಯಲ್ಲಿ ಮತದಾರರನ್ನು ಎದುರಿಸಬೇಕೆಂಬ ಭೀತಿ. ರೋಟೇಷನ್‌ನಿಂದಾಗಿ ಆ ಭೀತಿಯೇ ಇಲ್ಲದಂತಾಗುತ್ತದೆ.

ಇದರಿಂದ 'ಡಮ್ಮಿ' ಮಹಿಳಾ ಸದಸ್ಯರ ಸಂಖ್ಯೆ ಹೆಚ್ಚಲು ಕೂಡ ಸಾಧ್ಯ. ಮೂರನೆ ಅವಧಿಗೆ ಮಹಿಳೆಯರಿಗೆ ಸ್ಥಾನ ಬಿಟ್ಟುಕೊಡಬೇಕಾದ ಪುರುಷ ಸದಸ್ಯರು ಆ ಒಂದು ಅವಧಿಗೆ ತಮ್ಮ ಸಂಬಂಧಿ ಇಲ್ಲವೆ ಕೈಗೊಂಬೆಯಂತ್ತಿರುವ ಮಹಿಳೆಯರನ್ನು ಚುನಾವಣೆಗೆ ನಿಲ್ಲಿಸಬಹುದು. ಇದರಿಂದ ಮಹಿಳಾ ಸಬಲೀಕರಣದ ಮೀಸಲಾತಿಯ ಮೂಲ ಆಶಯ ಭಂಗಗೊಳ್ಳಬಹುದು. ಮೊದಲನೆಯದ್ದು ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯನ್ನು ಶೇಕಡಾ 33ರಷ್ಟು ಹೆಚ್ಚಿಸಿ ಅವುಗಳನ್ನು ಮಹಿಳೆಯರಿಗೆ ಮೀಸಲಿಡುವುದು. ಶೇಕಡಾ 30ರಷ್ಟು ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುವುದಕ್ಕೆ ಕಾಂಗ್ರೆಸ್ ಕೂಡ ಸಹಮತ ವ್ಯಕ್ತಪಡಿಸಿತ್ತು. ಆದರೆ ಇವುಗಳು ಶಾಶ್ವತ ಮೀಸಲು ಕ್ಷೇತ್ರಗಳಾದ ಕಾರಣ ಇತರ ಸಾಮಾನ್ಯ ಕ್ಷೇತ್ರಗಳ ಮಹಿಳೆಯರು ಸ್ಪರ್ಧಿಸಲು ಅವಕಾ ಇಲ್ಲದೆ, ಮೀಸಲಾತಿ ಸೌಲಭ್ಯದಿಂದ ವಂಚಿತರಾಗಬೇಕಾಗುತ್ತದೆ. ಈ ಸೂತ್ರ ಇಟ್ಟುಕೊಂಡರೆ, ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಜಾರಿಯಲ್ಲಿದ್ದು ಹದಿನೆಂಟು ರಾಜ್ಯಗಳ ಕ್ಷೇತ್ರಮರು ವಿಂಗಡಣೆ ಪೂರ್ಣಗೊಂಡಿದೆ. ಈ ಹಂತದಲ್ಲಿ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸಿದರೆ ಮತ್ತೆ ಆ ಕಾರ್‍ಯವನ್ನು ಮೊದಲಹಂತದಿಂದ ಪ್ರಾರಂಭಿಸಬೇಕಾಗುತ್ತದೆ.

ಎರಡನೆಯ ಪರ್ಯಾಯ ಸೂತ್ರ: ಮೂರನೆ ಒಂದರಷ್ಟು ಕ್ಷೇತ್ರಗಳನ್ನು ದ್ವಿಸದಸ್ಯತ್ವದ ಕ್ಷೇತ್ರಗಳಾಗಿ ಪರಿವರ್ತಿಸಿ, ಅಲ್ಲಿ ಪುರುಷನ ಜೊತೆ ಮಹಿಳೆಯರಿಗೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದು. ಇದರಿಂದ ಪುರುಷರ ಕ್ಷೇತ್ರಗಳನ್ನು ಕಾಯ್ದುಕೊಳ್ಳುವುದರ ಜತೆಗೆ ಮಹಿಳೆಯರಿಗೆ ಅವಕಾಶ ನೀಡಿದಂತಾಗುತ್ತದೆ ಎನ್ನುತ್ತಾರೆ ಈ ಸೂತ್ರದ ಪ್ರತಿಪಾದಕರು. ಬಿಜೆಪಿ ಕೂಡ ಈ ಸೂತ್ರವನ್ನು ಬೆಂಬಲಿಸಿತ್ತು. 1957ರ ವರೆಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಇದೇ ರೀತಿಯ ದ್ವಿಸದಸ್ಯತ್ವದ ಮೀಸಲಾತಿ ಇತ್ತು. 1961ರಲ್ಲಿ ಅದನ್ನು ರದ್ದುಗೊಳಿಸಿ ಪ್ರತ್ಯೇಕ ಮೀಸಲು ಕ್ಷೇತ್ರಗಳನ್ನು ರೂಪಿಸಲಾಯಿತು. ಆದರೆ ಈ ಸೂತ್ರದ ಮೀಸಲಾತಿಯಲ್ಲಿ ಮಹಿಳಾ ಸದಸ್ಯರು ಪುರುಷ ಸದಸ್ಯರ ಬಾಲಂಗೋಚಿಗಳಾಗುವ, ಅವರು ತೋರಿಸಿದ್ದಲ್ಲಿ ಸಹಿ ಹಾಕುವ ಗುಲಾಮರಾಗುವ ಸಾಧ್ಯತೆ ಇದೆ. ಇದಕ್ಕೊಪ್ಪದಿದ್ದರೆ, ಮಹಿಳೆ ಪುರುಷ ಸದಸ್ಯರ ನಡುವೆ ನಿತ್ಯ ಸಂಘರ್ಷಗಳು ನಡೆದು ಕ್ಷೇತ್ರ ನಿರ್ಲಕ್ಷಕ್ಕೀಡಾಗಬಹುದು. ಮೂರನೇಯ ಸೂತ್ರದ ಪ್ರಸ್ತಾವವನ್ನು ಸ್ಥೂಲ ರೂಪದಲ್ಲಿ ಮೊದಲು ಮಾಡಿದ್ದು ತೃಣಮೂಲ ಪಕ್ಷದ ಲೋಕಸಭಾ ಸದಸ್ಯೆ ಕೃಷ್ಣಾಬೋಸ್. ಅದರ ನಂತರ ಮಾನುಷಿ ಲೋಕಸತ್ತಾ ಮೊದಲಾದ ಸ್ವಯಂಸೇವಾ ಸಂಸ್ಥೆಗಳು ಅದನ್ನು ಪರಿಷ್ಕರಿಸಿ ಸ್ಪಷ್ಟ ರೂಪ ನೀಡಿದೆ. ಚುನಾವಣಾ ಆಯೋಗ ಕೂಡ ಇದನ್ನು ಒಪ್ಪಿಕೊಂಡಿದೆ. ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಶೇಕಡಾ 33 ರಷ್ಟು ಕ್ಷೇತ್ರಗಳಲ್ಲಿ ಮಹಿಳೆಯರನ್ನೇ ಅಭ್ಯರ್ಥಿಗಳನ್ನಾಗಿ ಮಾಡುವುದು ಈ ಸೂತ್ರದ ಮುಖ್ಯಾಂಶ. ಈಗಿನ ಮಸೂದೆ ವಿರುದ್ಧದ ಅನೇಕ ಆಕ್ಷೇಪಗಳಿಗೆ ಈ ಸೂತ್ರದಲ್ಲಿ ಪರಿಹಾರ ಇದೆ. ಮೀಸಲು ಕ್ಷೇತ್ರಗಳ ಆಯ್ಕೆಯ ಸ್ವಾತಂತ್ರ್ಯ ರಾಜಕೀಯ ಪಕ್ಷಗಳಿಗೆ ಇರುವುದರಿಂದ ತಮ್ಮ ಪಕ್ಷ ಬಲವಾಗಿರುವ ಕಡೆಗಳಲ್ಲಿಯೇ ಮಹಿಳೆಯರನ್ನು ಅಭ್ಯರ್ಥಿಗಳನ್ನಾಗಿ ಮಾಡಬಹುದು. ಲಾಲು-ಮುಲಾಯಂ ಬಯಸಿದರೆ ತಾವೇ ಒಳಮೀಸಲಾತಿಯನ್ನು ನೀಡಬಹುದು. ಇದರಲ್ಲಿ ಮಹಿಳೆಯರು ಕೇವಲ ಮಹಿಳೆಯರ ವಿರುದ್ಧವಷ್ಟೆ ಸ್ಪರ್ಧಿಸಬೇಕಾಗಿಲ್ಲವಾದ ಕಾರಣ, 'ಮಹಿಳೆಯರನ್ನಷ್ಟೆ ಸೋಲಿಸಲು ಅರ್ಹರು' ಎಂಬ ಕಳಂಕ ಕೂಡ ಅವರ ಮೇಲಿರುವುದು.

ರಾಜಕೀಯ ಪಕ್ಷಗಳು ಗೆಲ್ಲಲು ಸಾಧ್ಯ ಇಲ್ಲದ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್‌ನೀಡಿ ಮೀಸಲಾತಿ ಪಾಲನೆಯ ಶಾಸ್ತ್ರ ಪೂರ್ಣಗೊಳಿಸುವ ಸಾಧ್ಯತೆ ಇದೆ ಎನ್ನುವುದು ಪ್ರಾರಂಭದಲ್ಲಿ ಈ ಸೂತ್ರದ ವಿರುದ್ಧ ಕೇಳಿಬಂದ ಪ್ರಮುಖ ಆಕ್ಷೇಪ. ಪರಿಷ್ಕೃತ ಸೂತ್ರದಲ್ಲಿ ಅದಕ್ಕೂ ಪರಿಹಾರ ಇದೆ. ರಾಜಕೀಯ ಪಕ್ಷಗಳು ಲೋಕಸಭಾ ಚುನಾವಣೆಯಲ್ಲಿ, ಮಹಿಳಾ ಮೀಸಲಾತಿಯನ್ನು ಒಂದು ರಾಜ್ಯದ ಘಟಕವಾಗಿ ಪರಿಗಣಿಸಿ ಪಾಲಿಸಬೇಕೆಂದು ಸೂತ್ರ ಹೇಳುತ್ತದೆ. ಮುಲಾಯಂಸಿಂಗ್ ಕೇರಳದಲ್ಲಿ, ಲಾಲು ಪ್ರಸಾದ್ ತಮಿಳುನಾಡಿನಲ್ಲಿ ಮಹಿಳಾ ಅಭ್ಯರ್ಥಿಗಳನ್ನು ನಿಲ್ಲಿಸಿ ಮೀಸಲಾತಿ ಪಾಲನೆ ಮಾಡುವಂತಿಲ್ಲ. ಅದರಂತೆ ವಿಧಾನಸಭಾ ಚುನಾವಣೆಯಲ್ಲಿ ಮೂರು ಲೋಕಸಭಾ

ಕ್ಷೇತ್ರಗಳನ್ನು ಒಂದು ಘಟಕವಾಗಿ ಪರಿಗಣಿಸಿ, ಅಲ್ಲಿ ಶೇಕಡಾ 33ರಷ್ಟು ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕು. ಈ ಸೂತ್ರದ ಅನುಷ್ಠಾನಕ್ಕೆ ಸಂವಿಧಾನ ತಿದ್ದುಪಡಿ ಕೂಡ ಅಗತ್ಯ ಇಲ್ಲ. ಪ್ರಜಾಪ್ರಾತಿನಿಧ್ಯ ಕಾಯಿದೆಗೆ ತಿದ್ದುಪಡಿ ಮಾಡಿದರಷ್ಟೇ ಸಾಕು. ಈ ಎಲ್ಲ ಕಾರಣಗಳಿಂದ ಇದು ಸುಲಭದಲ್ಲಿ ಜಾರಿಗೊಳಿಸಬಹುದಾದ ಸೂತ್ರದಂತೆ ಕಾಣುತ್ತದೆ. ಸುಲಭದ ಸೂತ್ರ ಯಾರಿಗೆ ಬೇಕು? ಬೇಕಾಗಿರುವುದು ವಿವಾದದ ಸೂತ್ರ.

ಸಂಸತ್‌ನಲ್ಲಿ ಮಸೂದೆಗಳ ಅಂಗೀಕಾರಕ್ಕಾಗಿ ಬೇಕಾಗಿರುವುದು ಬಹುಮತವೇ ಹೊರತು ಸಹಮತ ಅಲ್ಲ. ಕಾಂಗ್ರೆಸ್, ಬಿಜೆಪಿ ಮತ್ತು ಎಡಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸುತ್ತಿರುವ ಕಾರಣ ಸುಲಭದಲ್ಲಿ ಬಹುಮತ ಸಾಧ್ಯ. 543 ಸದಸ್ಯ ಬಲದ ಲೋಕಸಭೆಯಲ್ಲಿ ಈ ಮೂರು ಪಕ್ಷಗಳ ಒಟ್ಟು ಬಲ 327. ಹೀಗಿದ್ದರೂ ಸರ್ಕಾರ ಹಿಂಜರಿಯುತ್ತಿರುವುದೇಕೆ? ಲಾಲು-ಮುಲಾಯಂ-ಪಾಸ್ವಾನ್ ಮಾತ್ರ ಮಹಿಳೆಯರ ಶತ್ರುಗಳಾದರೆ, ಸೋನಿಯಾಗಾಂಧಿ-ರಾಜನಾಥ್ ಸಿಂಗ್- ಪ್ರಕಾಶ್ ಕರಾಟ್ ಯಾರು?

○

ಜನಗಣತಿಯ 'ಒಳಗುಟ್ಟು'

ಚುನಾವಣೆ ಎಂದರೇನು? ಅದೇನಿದ್ದರು ಜಾತಿ–ಧರ್ಮಗಳ ಸರಳ ಲೆಕ್ಕಾಚಾರ ಎಂದು ರಾಜಕಾರಣಿಗಳು ಗುಟ್ಟಲ್ಲಿ ಹೇಳುವುದುಂಟು. ಚುನಾವಣೆಯನ್ನು ಸಮೀಪದಿಂದ ನೋಡಿದವರ್‍ಯಾರೂ ಈ ಗುಟ್ಟು ಸಂಪೂರ್ಣ ಸುಳ್ಳೆಂದು ಹೇಳಲಾರರು. 2001 ರ ಧರ್ಮಾಧಾರಿತ ಜನಗಣತಿ ಸೃಷ್ಟಿಸಿರುವ ವಿವಾದಕ್ಕೆ ರಾಜಕಾರಣಿಗಳ ಈ ಗುಟ್ಟಿನ ಮಾತಿನ ಹಿನ್ನೆಲೆಯಿದೆ.

ಧರ್ಮಾಧಾರಿತ ಜನಗಣತಿ ನಡೆದಿರುವುದು ಇದು ಮೊದಲ ಸಲವೇನಲ್ಲ. ಆದರೆ ಹಿಂದೆಂದೂ ಈಗಿನ ಕೋಲಾಹಲ ಸೃಷ್ಟಿಯಾಗಿರಲಿಲ್ಲ. ಇದಕ್ಕೆ ಜನಗಣತಿ ಆಯೋಗದ ಒಂದು ಸಣ್ಣ ಬೇಜವಾಬ್ದಾರಿತನ ಕೂಡಾ ಕಾರಣ. 1981–1991ರ ದಶಕಕ್ಕೆ ಹೋಲಿಸಿದರೆ, 1991–2001ರ ದಶಕದಲ್ಲಿ ಮುಸ್ಲಿಮ್ ಜನಸಂಖ್ಯಾವೃದ್ಧಿ ದರ ಶೇ.1.5ರಷ್ಟು ಹೆಚ್ಚಾಗಿದೆ. ಹಿಂದುಗಳ ಜನಸಂಖ್ಯಾವೃದ್ಧಿ ದರ ಶೇ. 4.8 ರಷ್ಟು ಕುಸಿತಕಂಡಿದೆ ಎಂದು ಆಯೋಗ ಹೇಳಿದ್ದು, ಬಿಜೆಪಿ ಮತ್ತು ಪರಿವಾರಕ್ಕೆ ಸಂಗೀತದಂತೆ ಕೇಳಿಸಿತು. ಹಿಂದುತ್ವವನ್ನು ಬಡಿದೆಬ್ಬಿಸಲು ಸಿಕ್ಕ ಹೊಸ ಬಡಿಗೆಯನ್ನು ಹಿಡಿದು ಬಯಲಿಗೆ ಇಳಿದ ನಾಯಕರಿಗೆ ಮೂರು ದಿನಗಳ ನಂತರ ಆಯೋಗ ನೀಡಿದ ಸ್ಪಷ್ಟೀಕರಣ ಕೇಳಲೇ ಇಲ್ಲ.

1991 ರ ಜನಗಣತಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಅಸ್ಸಾಂ ರಾಜ್ಯಗಳು ಸೇರಿರಲಿಲ್ಲ. 2001ರ ಜನಗಣತಿಯಲ್ಲಿ ಆ ರಾಜ್ಯಗಳನ್ನು ಸೇರಿಸಿಕೊಂಡಿರುವುದು

ಮುಸ್ಲಿಮ್ ಜನಸಂಖ್ಯೆ ವೃದ್ಧಿದರದ ಹೆಚ್ಚಳಕ್ಕೆ ಕಾರಣ. ವಾಸ್ತವದಲ್ಲಿ ಮುಸ್ಲಿಮರ ಜನಸಂಖ್ಯಾಭಿವೃದ್ಧಿ ದರ ಹೆಚ್ಚಾಗಿಲ್ಲ. ಅದು ಶೇ. 34.5ರಿಂದ ಶೆ.29.3ಕ್ಕೆ ಕುಸಿದಿದೆ. ಶೇ.5.3ರ ಪ್ರಮಾಣದ ಈ ಕುಸಿತ ಹಿಂದು ಜನಸಂಖ್ಯಾ ವೃದ್ಧಿದರದ ಕುಸಿತಕ್ಕಿಂತಲೂ (ಶೇ.4.8) ಹೆಚ್ಚಿನದ್ದು.

ಈ ಜನಗಣತಿಯಲ್ಲಿ ಮುಸ್ಲಿಮರ ಸಂಖ್ಯೆಯ ಜತೆ ಇನ್ನೂ ಕೆಲವು ಸತ್ಯಗಳನ್ನು ಬಹಿರಂಗಪಡಿಸಿದೆ. ಸಾಕ್ಷರತೆ, ಮಹಿಳಾ ಸಾಕ್ಷರತೆ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮುಸ್ಲಿಮರು ಕಟ್ಟಕಡೆಯ ಸ್ಥಾನದಲ್ಲಿದ್ದಾರೆ. 'ಇದೊಂದು ತಿರುಚಿದ ವರದಿ' ಎಂದು ತಳ್ಳಿ ಹಾಕುವ ಬದಲಿಗೆ 'ವಾಸ್ತವವನ್ನು ಸವಾಲಾಗಿ ಎದುರಿಸಲು' ಮುಸ್ಲಿಮರು ಸಿದ್ಧವಾಗಬೇಕು. ಆತ್ಮಾವಲೋಕನಕ್ಕೆ ಪ್ರೇರಣೆ ನೀಡುವಂತಿದೆ ಜನಗಣತಿ ವರದಿ.

ಜನಸಂಖ್ಯೆಗೂ ಒಂದು ಸಮುದಾಯದ ಶಿಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಗೂ ಸಂಬಂಧ ಇದೆ ಎನ್ನುವುದನ್ನು ಕೂಡಾ ಜನಗಣತಿ ವರದಿ ಹೇಳುತ್ತದೆ. ಉದಾಹರಣೆಗೆ ಸಾಕ್ಷರತೆಯೂ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಹಿಂದುಳಿದಿರುವ ಬಿಹಾರ, ರಾಜಸ್ತಾನ ಮೊದಲಾದ ರಾಜ್ಯಗಳಲ್ಲಿ ಮುಸ್ಲಿಮರು ಮಾತ್ರವಲ್ಲ ಹಿಂದುಗಳ ಜನಸಂಖ್ಯಾ ವೃದ್ಧಿಪರ ಕೂಡಾ ಹೆಚ್ಚಾಗಿದೆ. ಅಭಿವೃದ್ಧಿಶೀಲ ರಾಜ್ಯಗಳಾದ ತಮಿಳುನಾಡು, ಕೇರಳ, ಕರ್ನಾಟಕ, ಮಹಾರಾಷ್ಟ, ಗುಜರಾತ್‌ಗಳಲ್ಲಿ ಮುಸ್ಲಿಮರು ಸೇರಿದಂತೆ ಎಲ್ಲಾ ಧರ್ಮಗಳ ಜನಸಂಖ್ಯಾ ವೃದ್ಧಿಪರ ಕಡಿಮೆಯಾಗಿದೆ.

ಕ್ರಿಶ್ಚಿಯನ್ ಮಿಷನರಿಗಳು ಸಾಮೂಹಿಕ ಮತಾಂತರದಲ್ಲಿ ತೊಡಗಿದ್ದಾರೆ ಎನ್ನುವ ಗುಲ್ಲು ಆಗಾಗ ಕೇಳಿಬರುತ್ತಿದೆ. ಅವರು ಮುಖ್ಯವಾಗಿ ಅನಕ್ಷರಸ್ಥರನ್ನು ಮತಾಂತರಕ್ಕೆ ಬಳಸಿಕೊಳ್ಳುತ್ತಾರೆ ಎಂದು ಆರೋಪಿಸಲಾಗುತ್ತಿದೆ. ಆದರೆ ಈ ಜನಗಣತಿಯ ಪ್ರಕಾರ ಕ್ರಿಶ್ಚಿಯನ್ನರ ಜನಸಂಖ್ಯಾ ಪ್ರಮಾಣ ಮಾತ್ರವಲ್ಲ, ಜನಸಂಖ್ಯಾ ವೃದ್ಧಿದರ ಕೂಡಾ ಕಡಿಮೆಯಾಗಿದೆ. ಅದಲ್ಲದೆ ಜೈನರ ನಂತರ ಅತ್ಯಂತ ಹೆಚ್ಚು ಮಹಿಳಾ ಸಾಕ್ಷರತೆ ಹೊಂದಿರುವುದು ಕ್ರಿಶ್ಚಿಯನ್ ಧರ್ಮ.

ಜನಗಣತಿಯಲ್ಲಿನ ಅಚ್ಚರಿಯ ಸಂಗತಿ ಅಭಿವೃದ್ಧಿಯ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಇರುವ ಜೈನ ಮತ್ತು ಬೌದ್ಧಧರ್ಮೀಯರ ಜನಸಂಖ್ಯೆಯಲ್ಲಿನ ಹೆಚ್ಚಳ ಹತ್ತು ವರ್ಷಗಳ ಅವಧಿಯಲ್ಲಿ ಜೈನರ ಜನಸಂಖ್ಯಾ ವೃದ್ಧಿಪರ ಶೇ 4.6ರಿಂದ ಶೇ. 26ಕ್ಕೆ ಹೆಚ್ಚಿದ್ದರೆ, ಬೌದ್ಧರ ವೃದ್ಧಿ ದರ ಶೇ.24.5ಕ್ಕೆ ಹೆಚ್ಚಿದೆ. ಈ ಎರಡು ಧರ್ಮಗಳ ಜನಸಂಖ್ಯಾವೃದ್ಧಿ ಪರ ಹೆಚ್ಚಿರುವುದಕ್ಕೂ ಹಿಂದುಗಳ ಜನಸಂಖ್ಯಾ ವೃದ್ಧಿದರ ಇಳಿಮುಖವಾಗಿರುವುದಕ್ಕೂ ಸಂಬಂಧ ಇದೆಯೇ?

ಇದೆ ಎನ್ನುತ್ತಿವೆ ಈ ಅವಧಿಯಲ್ಲಿನ ಕೆಲವು ಬೆಳವಣಿಗೆಗಳು. ಬೌದ್ಧ ಧರ್ಮಕ್ಕೆ ಮತಾಂತರಗೊಂಡ ದಲಿತರು ಮೀಸಲಾತಿ ಸೌಲಭ್ಯ ಪಡೆಯಬೇಕಾದರೆ ಅವರು ತಮ್ಮ ಧರ್ಮ ಹಿಂದು ಎಂದು ಹೇಳಬೇಕಾಗಿತ್ತು. ಆದರೆ 1990ರ ಸಂವಿಧಾನ ತಿದ್ದುಪಡಿಯ

ನಂತರ ಬೌದ್ಧ ಧರ್ಮದಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೂ ಮೀಸಲಾತಿ ನೀಡಬಹುದೆಂದಾಯಿತು. ಇದೇ ರೀತಿ ತಮ್ಮ ಧರ್ಮವನ್ನು 'ಹಿಂದು' ಎಂದು ಹೇಳುತ್ತಾ ಬಂದ ಜೈನರು ಸ್ವಂತಿಕೆ ಉಳಿಸಿಕೊಳ್ಳಲು ತಮ್ಮ ಧರ್ಮವನ್ನು ಜೈನ ಎಂದು ನಮೂದಿಸಬೇಕೆಂಬ ಪ್ರಚಾರ ಕಳೆದ ಕೆಲವು ವರ್ಷಗಳಿಂದ ಪ್ರಾರಂಭವಾಗಿದೆ.

ಕರ್ನಾಟಕದಲ್ಲಿ ಲಿಂಗಾಯತರು ಜನಗಣತಿಯ ಕಾಲದಲ್ಲಿ ತಮ್ಮ ಧರ್ಮವನ್ನು ಹಿಂದು ಎನ್ನದೆ ಲಿಂಗಾಯತ ಎಂದು ನಮೂದಿಸಬೇಕೆಂದು ಆ ಜಾತಿಯ ನಾಯಕರು ಕರೆ ನೀಡಿದ್ದು ವಿವಾದಕ್ಕೆ ಕಾರಣವಾಗಿತ್ತು. ಜಾರ್ಖಂಡದ 'ಸರನಾ' ಎಂಬ ಜಾತಿಯೂ ಸೇರಿದಂತೆ ಹಲವಾರು ಹಿಂದುಳಿದ ಮತ್ತು ಬುಡಕಟ್ಟು ಜನಾಂಗಗಳು ತಮ್ಮನ್ನು ಹಿಂದು ಎಂದು ಕರೆದುಕೊಳ್ಳದೆ, ತಮ್ಮ ಜಾತಿ ಸೂಚಕಗಳನ್ನೇ ಧರ್ಮ ಎಂದು ನಮೂದಿಸಿವೆ. ಇದೇ ಕಾರಣಕ್ಕೆ 1991ರ ಜನಗಣತಿಯಲ್ಲಿ ಶೇಕಡಾ 18ರಷ್ಟಿದ್ದ 'ಇತರರ' ಜನಸಂಖ್ಯಾವೃದ್ಧಿ ದರ ಶೇ.103ಕ್ಕೆ ಹೆಚ್ಚಿದೆ.

ಈ ಎಲ್ಲಾ ಕಾರಣಗಳ ಹೊರತಾಗಿಯೂ ಮುಸ್ಲಿಮರ ಜನಸಂಖ್ಯಾ ಹೆಚ್ಚಳದ ದರ ಹಿಂದುಗಳಿಗಿಂತ ಹೆಚ್ಚು ಇರುವುದು ನಿಜ. ಆದರೆ ಇದರಿಂದಾಗಿ ಮುಂದೊಂದು ದಿನ ಭಾರತ ಪಾಕಿಸ್ತಾನವಾಗಬಹುದೇ? ಈಗಿನ ಜನಸಂಖ್ಯಾ ವೃದ್ಧಿದರಕ್ಕನುಗುಣವಾಗಿ ಹಿಂದು ಮತ್ತು ಮುಸ್ಲಿಂರ ಜನಸಂಖ್ಯೆ ಹೆಚ್ಚುತ್ತಾ ಹೋದರೂ ಮುಸ್ಲಿಮರು ಹಿಂದುಗಳನ್ನು ಜನಸಂಖ್ಯೆಯ ಬಲದಿಂದ ಹಿಂದಕ್ಕೆ ತಳ್ಳಲು 275 ವರ್ಷಗಳು ಬೇಕಾಗುತ್ತದೆ. ಮುಂದಿನ ಚುನಾವಣೆ ಮೇಲೆ ಕಣ್ಣಿಟ್ಟವರಿಗೆ ಅಷ್ಟೊಂದು ದೂರಕ್ಕೆ ಯೋಚಿಸುವ ತಾಳ್ಮೆ ಎಲ್ಲಿದೆ?

ಜನಸಂಖ್ಯೆ ಎನ್ನುವುದು ಒಂದು ಸಮುದಾಯದ ಶಕ್ತಿ ಮತ್ತು ದೌರ್ಬಲ್ಯ ಎನ್ನುವುದು ನಿಜವೇ? ಅದೊಂದು ಶಕ್ತಿಯೇ ಆಗಿದ್ದರೆ ಹಿಂದುಗಳಲ್ಲಿಯೇ ಬಹುಸಂಖ್ಯೆಯಲ್ಲಿರುವ ಹಿಂದುಳಿದ ಜಾತಿಯವರಾಗಲಿ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರಾಗಲಿ ಯಾಕೆ ಈ ವರೆಗೆ ಪ್ರಧಾನಿ ಪಟ್ಟ ಏರಲು ಸಾಧ್ಯವಾಗಲಿಲ್ಲ? ಶಿಕ್ಷಣ, ಉದ್ಯೋಗ, ರಾಜಕೀಯ ಕ್ಷೇತ್ರಗಳಲ್ಲಿ ಹಿಂದುಗಳಲ್ಲಿಯೇ ಇರುವ ವಿವಿಧ ಜಾತಿಗಳ ಪ್ರಾತಿನಿಧ್ಯ ಎಷ್ಟು? – ಈ ಪ್ರಶ್ನೆಗಳಿಗೆ ಉತ್ತರ ಕಂಡು ಕೊಳ್ಳಬೇಕಾದರೆ ಧರ್ಮದ ಆಧಾರದಂತೆ ಜಾತಿಯ ಆಧಾರದಲ್ಲಿಯೂ ಜನಗಣತಿ ನಡೆಯಬೇಕೆಂದು ಹೇಳುವವರಿದ್ದಾರೆ.

ಆದರೆ ಅಂತಹ ಬೇಡಿಕೆ ಬಂದಾಗೆಲ್ಲ ಇದರಿಂದ ಜಾತೀಯತೆ ಬೆಳೆಯುತ್ತದೆ ಎಂಬ ಕಾರಣ ನೀಡಿ ನಿರಾಕರಿಸುವ ರಾಜಕೀಯ ನಾಯಕರು, ಚುನಾವಣೆ ಎದುರಾದಾಗ ಮಾತ್ರ ಪತ್ತು ಬೆರಳುಗಳಲ್ಲಿಯೂ ಜಾತಿ ಲೆಕ್ಕಗಳನ್ನು ಕುಣಿದಾಡಿಸುತ್ತಾರೆ. ತಮ್ಮ ಹಳ್ಳಿಯಲ್ಲಿ ಶಾಲೆ–ಆಸ್ಪತ್ರೆ, ಕೆರೆ–ಬಾವಿಗಳ ಸಂಖ್ಯೆ ಎಷ್ಟೆಂದು ಕೇಳಿದರೆ ಉತ್ತರ ನೀಡಬಲ್ಲ ಸಾಮರ್ಥ್ಯದ ರಾಜಕಾರಣಿಗಳು ವಿರಳ. ಆದರೆ ತಮ್ಮ ಹಳ್ಳಿಯಲ್ಲಿ ಯಾವ ಜಾತಿ–ಯಾವ

ಧರ್ಮದ ಮತದಾರರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎನ್ನುವುದು ಅವರ ನಾಲಗೆ ತುದಿಯಲ್ಲಿರುತ್ತದೆ. ಆ ಸಂಖ್ಯೆಗೆ ಏನು ಆಧಾರ?

ಸ್ವತಂತ್ರ ಭಾರತದಲ್ಲಿ ಜಾತಿ ಆಧಾರಿತ ಜನಗಣತಿ ನಡೆದೇ ಇಲ್ಲ. ಎನ್ನುವ ಸತ್ಯ ಬಹಳಮಂದಿಗೆ ತಿಳಿದಿಲ್ಲ. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ 1913ರಲ್ಲಿ ನಡೆದ ಜಾತಿ ಆಧಾರಿತ ಜನಗಣತಿಯೇ ಕೊನೆಯದ್ದು. ಆ ನಂತರದ್ದೇನಿದ್ದರೂ. ಆ ಜನ ಗಣತಿ ಆಧಾರವಾಗಿಟ್ಟುಕೊಂಡು ಮಾಡಿರುವ ಊಹಾತ್ಮಕ ಜಾತಿ ಜನಗಣತಿ.

ಸ್ವತಂತ್ರ ಭಾರತದಲ್ಲಿ ಮೊದಲಬಾರಿಗೆ ಸ್ಥೂಲರೂಪದ ಜಾತಿ ಆಧಾರಿತ ಆರ್ಥಿಕ – ಸಾಮಾಜಿಕ ಸಮೀಕ್ಷೆ ನಡೆದದ್ದು ಕರ್ನಾಟಕದಲ್ಲಿ. ಎಲ್.ಜಿ.ಹಾವನೂರು ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ಅದನ್ನು ನಡೆಸಿತ್ತು. ಹಾವನೂರು ಆಯೋಗದಿಂದ ಪ್ರಭಾವಕ್ಕೀಡಾದ ಮಂಡಲ ಆಯೋಗ ಹಿಂದುಳಿದ ಜಾತಿಗಳ ಆರ್ಥಿಕ-ಸಾಮಾಜಿಕ ಸಮೀಕ್ಷೆಗೆ ಹಾವನೂರು ಅನುಸರಿಸಿದ ವಿಧಾನಗಳನ್ನೇ ಅನುಸರಿಸಿತ್ತು.

ಕರ್ನಾಟಕದಲ್ಲಿರುವ ಹಿಂದು ಧರ್ಮದೊಳಗಿನ 94 ವಿವಿಧ ಜಾತಿಗಳು ಹಾಗೂ ಮುಸ್ಲಿಮ್, ಕ್ರಿಶ್ಚಿಯನ್, ಜೈನ್, ಬೌದ್ಧ ಮತ್ತು ಸಿಖ್ಖ ಧರ್ಮಗಳು ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪಡೆದಿರುವ ಪ್ರಾತಿನಿಧ್ಯದ ವಿವರ ಅದರಲ್ಲಿದೆ. ಹಿಂದು ಧರ್ಮದ ಸಮಗ್ರ ಅಭಿವೃದ್ಧಿ ಬಗ್ಗೆ ಪ್ರಾಮಾಣಿಕವಾದ ಕಾಳಜಿ ಉಳ್ಳವರು ಹಾವನೂರು ಬರೆದ 'ಬೈಬಲ್' ಅನ್ನು ಒಮ್ಮೆ ಓದಬೇಕು. ಸಾಧ್ಯವಾದರೆ ಅಂತಹ ಮತ್ತು ಅದಕ್ಕಿಂತ ವ್ಯಾಪಕ ಪ್ರಮಾಣದ ಇನ್ನೊಂದು ಸಮೀಕ್ಷೆ-ಗಣತಿಗೆ ಒತ್ತಾಯಿಸಬೇಕು.

ಹಿಂದುಗಳ ಜನಸಂಖ್ಯೆ ಕಡಿಮೆಯಾಗಲು ಬಿಜೆಪಿ ಮತ್ತು ಪರಿವಾರ ಕೂಡಾ ಕಾರಣ ಎಂದು ಆರೋಪಿಸುವವರಿದ್ದಾರೆ. ಬ್ರಹ್ಮಚಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆ ಪರಿವಾರದಲ್ಲಿರುವುದು ಅದಕ್ಕೆ ಕಾರಣವಂತೆ! ಹೌದಲ್ವೆ ಯೋಚಿಸಬೇಕಾದ ಸಂಗತಿ.

O

(12-09-2004)

ಗದ್ದುಗೆ 'ವೃದ್ಧಾಶ್ರಮ'ವೆ?

ಭಾರತದಂತಹ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯಲ್ಲಿ ತಲೆ ತಲಾಂತರದ ಘರ್ಷಣೆ ಹೊಸದೇನಲ್ಲ. ಆಚಾರ-ವಿಚಾರಗಳಲ್ಲಿ ಮಾತ್ರವಲ್ಲ, ಯಜಮಾನಿಕೆಯ ವಿಷಯದಲ್ಲಿಯೂ ಈ ಘರ್ಷಣೆಯ ಕಿಡಿ ಹಾರುತ್ತಲೇ ಇರುತ್ತದೆ. ಮಕ್ಕಳು ಎಷ್ಟೇ ಅಡ್ಡ-ಉದ್ದ ಬೆಳೆದಿರಲಿ, ಸ್ವಂತ ಕಾಲ ಮೇಲೆ ನಿಂತಿರಲಿ. ಮನೆ ಯಜಮಾನನಾದ ತಂದೆ ಮಾತೆ ಕೊನೆ. ಉಸಿರು ಇರುವವರೆಗೆ ಸೊಂಟಕ್ಕೆ ಸಿಕ್ಕಿಸಿಕೊಂಡಿರುವ ಬೀಗದಕೈ ಗೊಂಚಲನ್ನು ಕಿರಿಯರ ಅವರ ಕೈಗೆ ಕೊಡಲಾರ.

ಇಲ್ಲಿನ ರಾಜಕೀಯವೂ ಅದೇ ಸಮಾಜ ವ್ಯವಸ್ಥೆಯ ಪ್ರತಿಬಿಂಬದಂತೆ 'ವೃದ್ಧಾಶ್ರಮ'ವಾಗಿಯೇ ಉಳಿದುಬಿಟ್ಟಿದೆ ಎಂಬ ಆರೋಪ ಇದೆ. ಹದಿನೆಂಟನೇ ವರ್ಷಕ್ಕೆ ಮತ ಚಲಾಯಿಸುವ ಅರ್ಹತೆ ಗಳಿಸಿದರೂ ನಾಯಕತ್ವ ವಹಿಸುವ ಅರ್ಹತೆ ಗಳಿಸಬೇಕಾದರೆ ಅರವತ್ತು ದಾಟುವವರೆಗೆ ಪಕ್ಷದ ಕಚೇರಿ ಬಾಗಿಲು ಕಾಯಬೇಕಾದ ಪರಿಸ್ಥಿತಿ ಇದೆ ಎನ್ನುವ ಹತಾಶೆ ಇಲ್ಲಿನ ಯುವ ರಾಜಕಾರಣಿಗಳದ್ದು.

ಹೆಂಡತಿ ಹೆರಿಗೆ ನೋವು ಅನುಭವಿಸುತ್ತಿರುವಾಗ ದೇಶದ ಪ್ರಧಾನಿ ಆಸ್ಪತ್ರೆಯ ಹಜಾರದಲ್ಲಿ ಕೈಕೈ ಹಿಸುಕುತ್ತಾ ಸಿಹಿ ಸುದ್ದಿಗಾಗಿ ಕಾಯುತ್ತಾ ಕೂತ ಚಿತ್ರವನ್ನು ಭಾರತದಲ್ಲಿ ಎಂದಾದರೂ ಕಾಣಲು ಸಾಧ್ಯವೇ? ಅಂತಹ ಚಿತ್ರವನ್ನು ಇಂಗ್ಲೆಂಡ್‌ನ ಜನ ಕಂಡಿದ್ದರು.

44ರ ಹರೆಯದಲ್ಲಿಯೇ ಆ ದೇಶದ ಪ್ರಧಾನಿಯಾದ ಟೋನಿ ಬ್ಲೇರ್‌ಗೆ ಎರಡನೇ ಮಗುವಾಗಿದ್ದ ಸಂದರ್ಭ ಅದು.

ಜ್ಯೂಡೋ ಪಟು ರಷ್ಯಾದ ಪ್ರಧಾನಿ ವ್ಲಾದಿಮರ್ ಪುಟಿನ್ ಕೂಡಾ 45ರ ಆಸುಪಾಸಿನಲ್ಲಿರುವವರು. 48ನೇ ವಯಸ್ಸಿಗೆ ಬಿಲ್ ಕ್ಲಿಂಟನ್ ಅಮೆರಿಕಾದ ಅಧ್ಯಕ್ಷರಾದರು. ಇವರಿಗೆ ಹೋಲಿಸಿ 56ನೇ ವಯಸ್ಸಿನಲ್ಲಿ ಅಧ್ಯಕ್ಷರಾದ ಜಾರ್ಜ್ ಡಬ್ಲ್ಯು ಬುಷ್ ಅವರನ್ನು ಅಮೆರಿಕನ್ನರು ಮುದುಕ ಎಂದು ಗೇಲಿ ಮಾಡಿದರು. ಶ್ರೀಲಂಕಾ ಪ್ರಧಾನಿ ರನಿಲ್ ವಿಕ್ರಮಸಿಂಘೆಗೆ ಇನ್ನೂ 53.

ಭಾರತದ ದುಸ್ಥಿತಿ ನೋಡಿ: ಈ ದೇಶದ ಪ್ರಧಾನಿಗೆ 78. ಅವರ ಉತ್ತರಾಧಿಕಾರಿಯಾಗಲು ಸರತಿಯ ಸಾಲಲ್ಲಿ ನಿಂತಿರುವ ಅಡ್ವಾಣಿಗೆ 76. ಮುರಳಿ ಮನೋಹರ ಜೋಷಿಗೆ 74. ಅಕಸ್ಮಾತ್ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆ ಪಕ್ಷದಲ್ಲಿರುವ 'ಸ್ವದೇಶಿ' ಆಯ್ಕೆಗಳಾದ ಮನಮೋಹನ್ ಸಿಂಗ್‌ಗೆ 72. ಅರ್ಜುನ್‌ಸಿಂಗ್‌ಗೆ 74. ನಟವರ್ ಸಿಂಗ್‌ಗೆ 73. ಪ್ರಣಬ್ ಮುಖರ್ಜಿಗೆ 69. ಕರುಣಾಕರನ್‌ಗೆ 81....ಇವರಿಗೆ ಹೋಲಿಸಿದರೆ ಆ ಪಕ್ಷದ ಅಧ್ಯಕ್ಷೆ 58ರ ಹರೆಯದ ಸೋನಿಯಾಗಾಂಧಿ ಆಯ್ಕೆಯೇ ಯುವತಿ ಎಂದು ಅನ್ನಿಸದೆ ಇರದು.

ಈ ಎರಡು ದೊಡ್ಡ ಪಕ್ಷಗಳ ನಿಶ್ಶಕ್ತ ನಾಯಕರು ಬೇಡ ಎಂದು ಮೂರನೇ ಶಕ್ತಿಯಲ್ಲಿ ನಾಯಕರನ್ನು ಹುಡುಕಲು ಹೊರಟರೆ, ಅಲ್ಲಿರುವ ಹರಿಕಿಶನ್ ಸಿಂಗ್ ಸುರ್ಜಿತ್‌ಗೆ 88. ಜ್ಯೋತಿ ಬಸುಗೆ 80. ಕರುಣಾನಿಧಿ ಅವರಿಗೆ 81. ಐ.ಕೆ.ಗುಜ್ರಾಲ್‌ಗೆ 79. ದೇವೇಗೌಡರಿಗೆ 71. ಚಂದ್ರಶೇಖರ್‌ಗೆ 76. ಶರದ್ ಪವಾರ್‌ಗೆ 64. ಮುಲಾಯಂ ಸಿಂಗ್‌ಗೆ 60.

ಈ ರಾಷ್ಟ್ರನಾಯಕರಿಗೆ ಹೋಲಿಸಿದರೆ ರಾಜ್ಯಗಳ ಮುಖ್ಯಮಂತ್ರಿಗಳೇ ವಾಸಿ. 75ರ ಎನ್.ಡಿ.ತಿವಾರಿ. 72ರ ಎಸ್.ಎಂ.ಕೃಷ್ಣ. 69ರ ಓಂಪ್ರಕಾಶ್ ಚೌತಾಲ ಮೊದಲಾದ 'ಮುದುಕ'ರನ್ನು ಹೊರತುಪಡಿಸಿದರೆ ಹೆಚ್ಚಿನ ರಾಜ್ಯಗಳ ಮುಖ್ಯಮಂತ್ರಿಗಳು ಯುವವರ್ಗಕ್ಕೆ ಸೇರಿದವರು. 54ರ ಹರೆಯದ ಚಂದ್ರಬಾಬು. 45ರ ಉಮಾಭಾರತಿ. 49ರ ಮನೋಹರ ಪಾರೀಕ್. 51ರ ವಸುಂಧರಾ ರಾಜೇ. 58ರ ರಮಣ್ ಸಿಂಗ್. 52ರ ನರೇಂದ್ರ ಮೋದಿ. 56ರ ಜೈಯಲಲಿತಾ. 44ರ ರಾಬ್ಡಿದೇವಿ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ.

ಈ ನಿಯಮಕ್ಕೆ ಅಪವಾದ ಇಲ್ಲವೆಂದಲ್ಲ; ವೃದ್ಧಾಶ್ರಮದಂತಿದ್ದ ಭಾರತದ ರಾಜಕೀಯ ಒಮ್ಮಿಂದೊಮ್ಮೆಲೇ 'ಯುವಜನಸಂಘ'ವಾಗಿ ಪರಿವರ್ತನೆಗೊಂಡದ್ದು 40ನೇ ವಯಸ್ಸಿನಲ್ಲಿ ರಾಜೀವ್ ಗಾಂಧಿ ದೇಶದ ಪ್ರಧಾನಿಯಾದಾಗ. ಅದಕ್ಕಿಂತಲೂ ಮೊದಲು 40ನೇ ವಯಸ್ಸಿಗೆ ಶರದ್ ಪವಾರ್ ಮಹಾರಾಷ್ಟ್ರದಲ್ಲಿ. 43ನೇ ವಯಸ್ಸಿನಲ್ಲಿ ಗುಂಡೂರಾವ್ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು.

ಯುವಸಮುದಾಯವನ್ನು ದೊಡ್ಡ ಪ್ರಮಾಣದಲ್ಲಿ ರಾಜಕೀಯದತ್ತ ಆಕರ್ಷಿಸಿದ್ದು ರಾಜೀವ್‌ಗಾಂಧಿ. ಅವರ ಸುತ್ತ ಅರುಣ್ ನೆಹರು, ಅರುಣ ಸಿಂಗ್, ರಾಜೇಶ್ ಪೈಲಟ್, ಮಾಧವರಾವ್ ಸಿಂಧಿಯಾ, ಮಣಿಶಂಕರ್ ಅಯ್ಯರ್, ಪ್ರಿಯರಂಜನ್ ದಾಸ್ ಮುನ್ಷಿ ಮೊದಲಾದ ಯುವರಾಜಕಾರಣಿಗಳ ದಂಡು ಇತ್ತು. ಅವರ ಚಿಂತಕರ ಚಾವಡಿಯಲ್ಲಿ ಸ್ಯಾಮ್ ಪಿತ್ರೋಡಾ, ಸುಮನ್‌ದುಬೆ, ವಿಶ್ವೇಂದ್ರಸಿಂಗ್, ಮೊದಲಧ ಯುವತಲೆಗಳಿದ್ದವು. 'ಬಾಬಾ ಲೋಗ್' ಎಂದು ಕರೆಯಲಾಗುತ್ತಿದ್ದ ಈ ಯುವತಂಡದ ಜತೆ ಖಾದಿಧಾರಿ ಹಳೆತಲೆಗಳಾದ ಜೈಲ್‌ಸಿಂಗ್, ತ್ರಿಪಾಠಿ, ಬಹುಗುಣಗಳ ಸಂಘ ಸದಾ ಇತ್ತು. ಯುವಪ್ರಾತಿನಿಧ್ಯಕ್ಕೆ ಬದ್ಧರಾಗಿದ್ದ ರಾಜೀವ್ ಗಾಂಧಿ ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸುವ ಮೂಲಕ ಯುವಸಮುದಾಯದ ಕಣ್ಮಣಿ ಎನಿಸಿದ್ದರು.

ರಾಜೀವ್ ಹಠಾತ್ ಸಾವು ಮತ್ತೆ ರಾಜಕೀಯವನ್ನು ವೃದ್ಧರ ಯುಗಕ್ಕೆ ಕೊಂಡೊಯ್ದಿತೆನ್ನಬಹುದು. ಮೊದಲು ಪಿ.ವಿ.ನರಸಿಂಹರಾವ್, ಆ ನಂತರ ವಾಜಪೇಯಿ, ದೇವೇಗೌಡ ಮತ್ತು ಗುಜ್ರಾಲ್, ಮತ್ತೆ ಪ್ರಾರಂಭವಾದ ವಾಜಪೇಯಿ ಎಂಬ ಭೀಷ್ಮ ಪಿತಾಮಹನ ಯುಗ ಆರು ವರ್ಷಗಳಿಂದ ಮುಂದುವರಿದುಕೊಂಡು ಬಂದಿದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಯುವ ಸಮುದಾಯ ಸಕ್ರಿಯ ರಾಜಕಾರಣದಿಂದ ದೂರ ಸರಿಯುತ್ತಿದೆ ಎನ್ನುತ್ತಿದೆ ಕಳೆದ ಹದಿಮೂರನೇ ಲೋಕಸಭೆಯ ಸದಸ್ಯರ ಹಿನ್ನೆಲೆಯ ಅವಲೋಕನ. ಪ್ರಥಮ ಲೋಕಸಭೆಯ ಸರಾಸರಿ ವಯೋಮಾನ 46.5 ವರ್ಷಗಳಾದರೆ. ಇದೀಗ ವಿಸರ್ಜನೆಗೊಂಡ ಹದಿಮೂರನೇ ಲೋಕಸಭೆಯ ಸದಸ್ಯರ ಸರಾಸರಿ ವಯಸ್ಸು 55.5 ವರ್ಷ.

ದೇಶದ ಒಟ್ಟು ಮತದಾರರಲ್ಲಿ 25 ರಿಂದ 35 ವರ್ಷದೊಳಗಿನ ಮತದಾರರ ಸಂಖ್ಯೆ ಶೇಕಡಾ 50 ರಷ್ಟಿದೆ ಎಂದು ಹೇಳಲಾಗುತ್ತಿದೆ. ಆದರೆ ಪ್ರಥಮ ಲೋಕಸಭೆಯಲ್ಲಿ 25 ರಿಂದ 35 ವರ್ಷಗದೊಳಗಿನ ಸದಸ್ಯರು ಶೇಕಡಾ 17ರಷ್ಟಿದ್ದರೆ ಹದಿಮೂರನೇ ಲೋಕಸಭೆಯಲ್ಲಿ ಈ ವಯೋಮಿತಿಯ ಸದಸ್ಯರ ಪ್ರಮಾಣ ಕೇವಲ 5.36 ಮಾತ್ರ.

ಕಾರ್ಪೋರೇಟ್ ಜಗತ್ತಿನಲ್ಲಿ 45ರ ಮ್ಯಾನೇಜರ್‌ಗಳು ಕಿರಿಯರಿಗೆ ದಾರಿ ಮಾಡಿಕೊಡುತ್ತಾರೆ. 50 ವರ್ಷಗಳಾದರೆ ಬ್ಯಾಂಕ್‌ಗಳಲ್ಲಿ ಸ್ವಯಂ ನಿವೃತ್ತಿ ತೆಗೆದುಕೊಳ್ಳಬಹುದು. 58–60 ವರ್ಷಕ್ಕೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ನೌಕರರು ಕಡ್ಡಾಯವಾಗಿ ನಿವೃತ್ತಿ ಪಡೆಯಬೇಕಾಗುತ್ತದೆ. ಆದರೆ ರಾಜಕೀಯ ಕ್ಷೇತ್ರದಲ್ಲಿ ಮಾತ್ರ 60ರ ನಂತರವೇ ಅವಕಾಶದ ಬಾಗಿಲು ತೆರೆಯಲು ಪ್ರಾರಂಭವಾಗುತ್ತದೆ.

ಯುವ ಅಂಬಾನಿ, ಬಿರ್ಲಾ, ಗೋಯೆಂಕಾಗಳು ಸಾವಿರಾರು ಕೋಟಿ ರೂಪಾಯಿ ವ್ಯವಹಾರದ ಉದ್ಯಮ ಸಂಸ್ಥೆಗಳನ್ನು ಮುನ್ನಡೆಸಲು ಸಾಧ್ಯ ಇದ್ದರೆ, ರಾಜಕೀಯ ಕ್ಷೇತ್ರದಲ್ಲಿ ಯುವಕರು ಕನಿಷ್ಠ ಒಂದು ವಿಧಾನಸಭಾ ಕ್ಷೇತ್ರ, ಒಂದು ಲೋಕಸಭಾ ಕ್ಷೇತ್ರವನ್ನು ನೋಡಿಕೊಳ್ಳಲು ಸಾಧ್ಯ ಇಲ್ಲವೇ?

ಆದರೆ ನಿವೃತ್ತಿಯೇ ಇಲ್ಲದ ವೃತ್ತಿ ಎನಿಸಿರುವ ರಾಜಕಿಯದಲ್ಲಿ ಎರಡನೇ ಪೀಳಿಗೆಯನ್ನು ಬೆಳೆಸುವ ವಿಶಾಲ ಮನಸ್ಸನ್ನು ರಾಜಕೀಯದ ಹಿರಿಯ ನಾಯಕರು ತೋರಿದ್ದು ಕಡಿಮೆ. ಇದರಿಂದಾಗಿ ವಂಶಪಾರಂಪರ್ಯದ ಅದೃಷ್ಟ ಇಲ್ಲದ ಯುವಸಮುದಾಯ ರಾಜಕೀಯವನ್ನು ಜೀವನ ಮಾರ್ಗವಾಗಿ ಆರಿಸಿಕೊಳ್ಳಲು ಹಿಂಜರಿಯುತ್ತಾರೆ. ಇದಕ್ಕೆ ಪ್ರೋತ್ಸಾಹದ ಕೊರತೆ ಒಂದೆಡೆಯಾದರೆ, ಅಭದ್ರತೆಯ ಭೀತಿ ಇನ್ನೊಂದೆಡೆ.

ಎರಡನೇ ಪೀಳಿಗೆಯನ್ನು ಬೆಳೆಸುವ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳದ್ದು ಒಂದೇ ಬಣ್ಣ. ಆದರೆ ಇತ್ತೀಚೆಗೆ ಬಿಜೆಪಿ ಎರಡನೇ ಪೀಳಿಗೆಯನ್ನು ಬೆಳೆಸುವ ಕಾರ್ಯವನ್ನು ವ್ಯವಸ್ಥಿತವಾಗಿ ಪ್ರಾರಂಭಿಸಿದೆ. ಇದರ ಫಲವಾಗಿಯೇ ಮನೋಹರ್ ಪಾರೀಕ್, ನರೇಂದ್ರ ಮೋದಿ, ಉಮಾ ಭಾರತಿ, ವಸುಂಧರಾ ರಾಜೇ ಎಂಬ 45–55ರ ಆಜುಬಾಜಿನಲ್ಲಿರುವ ನಾಯಕರು ಮುಖ್ಯಮಂತ್ರಿ ಪಟ್ಟದಲ್ಲಿ ವಿರಾಜಮಾನರಾಗಿದ್ದಾರೆ.

ರಾಜಸ್ತಾನದಲ್ಲಿ ಸೋಲಿನ ದವಡೆಗೆ ಕೈಹಾಕಿ ಪಕ್ಷಕ್ಕಾಗಿ ಗೆಲುವನ್ನು ತಂದುಕೊಟ್ಟ ಪ್ರಮೋದ್ ಮಹಾಜನ್ ಈಗ ಚುನಾವಣಾ ತಂತ್ರದ ಕೇಂದ್ರ ಬಿಂಧು ಮೊದಲು ಗುಜರಾತ್‌ನಲ್ಲಿ ನಂತರ ಮಧ್ಯಪ್ರವೇಶದಲ್ಲಿ ಇದೇ ರೀತಿಯ ಸಾಧನೆ ತೋರಿ ಈಗ ಕರ್ನಾಟಕಕ್ಕೆ ಅಡಿ ಇಟ್ಟಿರುವ ಅರುಣ್ ಜೆಟ್ಲಿ. ಬಾಯಿ ಸ್ವಲ್ಪ ದೊಡ್ಡದಾದರೂ ಕೊಟ್ಟ ಕೆಲಸವನ್ನು ಯಶಸ್ವಿಯಾಗಿ ನಡೆಸುತ್ತಿರುವ ಪಕ್ಷದ ಅಧ್ಯಕ್ಷ ವೆಂಕಯ್ಯ ನಾಯ್ಡು, ಇದೀಗ ಕರ್ನಾಟಕದಲ್ಲಿ ಪಕ್ಷದ ನೇತೃತ್ವ ವಹಿಸಿರುವ 45ರ ಹರೆಯದ ಅನಂತಕುಮಾರ್, ಸಚಿವರಾದ ರವಿಶಂಕರ್ ಪ್ರಸಾದ್, ರಾಜೀವ್ ಪ್ರತಾಪ್ ರೂಡಿ, ಶಹನವಾಜ್ ಹುಸೇನ್ ಮೊದಲಾದವರು ಬಿಜೆಪಿಯ ಮುಂದಿನ ಜನಾಂಗ.

ಆದರೆ ಪಕ್ಷದ ನಾಯಕತ್ವಕ್ಕಾಗಿ ವಂಶದ ಕುಡಿಗಳನ್ನೇ ನೆಚ್ಚಿಕೊಂಡಿರುವ ಕಾಂಗ್ರೆಸ್‌ನಲ್ಲಿ ಎರಡನೇ ಪೀಳಿಗೆಯ ಸಾಲು ಸಣ್ಣದು. ರಾಜೀವ್‌ಗಾಂಧಿ ನಂತರ ನಿರೀಕ್ಷೆ ಮೂಡಿಸಿದ್ದ ಇಬ್ಬರು ಯುವ ರಾಜಕಾರಣಿಗಳಾದ ರಾಜೇಶ್ ಪೈಲಟ್ ಮತ್ತು ಮಾಧವರಾವ್ ಸಿಂಧಿಯಾ ಅಪಘಾತದಲ್ಲಿ ಅಕಾಲ ಮೃತ್ಯುಗೀಡಾಗಿದ್ದು ಆ ಪಕ್ಷಕ್ಕೆ ದೊಡ್ಡ ಹೊಡೆತ. ಕೊನೆಗೂ ಅದರ ಸ್ಥಾನಗಳನ್ನು ತುಂಬಲು ಅವರ ಮಕ್ಕಳಾದ ಸಚಿನ್ ಪೈಲಟ್ ಮತ್ತು ಜ್ಯೋತಿರಾದಿತ್ಯ ಸಿಂಧಿಯಾ ಬರಬೇಕಾಯಿತು ಎನ್ನುವುದು ಕಾಂಗ್ರೆಸ್‌ನಲ್ಲಿನ ವಂಶಪರಂಪರೆಯ ಪ್ರಭಾವಕ್ಕೆ ಸಾಕ್ಷಿ.

ಕಾಂಗ್ರೆಸ್ ಪಕ್ಷದ ಎರಡು ಪ್ರಭಾವಶಾಲಿ ಯುವಮುಖಗಳಾದ ಪ್ರಿಯಾಂಕಾ ಮತ್ತು ರಾಹುಲ್ ಗಾಂಧಿಯ ರಾಜಕೀಯ ಪ್ರವೇಶ ಇನ್ನೂ ನಿಗೂಢವಾಗಿಯೇ ಇದೆ. ಅವರನ್ನು ಹೊರತುಪಡಿಸಿದರೆ ಉಳಿದಂತೆ ಕಾಂಗ್ರೆಸ್‌ನಲ್ಲಿ ಕಾಣುವ ಯುವಮುಖ ಬೆರಳೆಣಿಕೆಯದ್ದು. ಸೋನಿಯಾಗಾಂಧಿ ರಾಜಕೀಯ ಕಾರ್ಯದರ್ಶಿ ಅಹ್ಮದ್ ಪಟೇಲ್,

ಎಐಸಿಸಿ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ಇವರಿಗಿಂತಲೂ ಮುಂದೆ ಹೋಗಬೇಕಾದರೆ ವಯೋಮಿತಿಯನ್ನು ಸಡಿಲಿಸಿ 55-60ರ ಆಜುಬಾಜಿನಲ್ಲಿರುವ ದಿಗ್ವಿಜಯ್ ಸಿಂಗ್, ಎ.ಕೆ.ಆಂಟನಿ, ಅಮರಿಂದರ್ ಸಿಂಗ್, ಸುಶೀಲ್ ಕುಮಾರ್ ಶಿಂಧೆ ಮೊದಲಾದವರನ್ನು ಸೇರಿಸಿಕೊಳ್ಳಬೇಕು.

ಪ್ರಾದೇಶಿಕ ಪಕ್ಷಗಳ ಯುವಮುಖಗಳಲ್ಲಿ ನ್ಯಾಷನಲ್ ಕಾನ್‌ಫರೆನ್ಸ್‌ನ ಒಮರ್ ಅಬ್ದುಲ್ಲಾ, ತೆಲುಗುದೇಶಂನ ಯರ್ರಂನಾಯ್ಡು, ಶಿವಸೇನೆಯ ಉದ್ಧವ್ ಠಾಕ್ರೆ, ಸುರೇಶ್ ಪ್ರಭು, ಮತ್ತು ಸುಜಯ್ ನಿರುಪಮ್, ಡಿಎಂಕೆಯ ಎಂ.ಕೆ.ಸ್ಟಾಲಿನ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ದೇವೇಗೌಡರ ಮಗ ಎಚ್.ಡಿ.ಕುಮಾರಸ್ವಾಮಿ... ಮೊದಲಾದವರು ಪ್ರಮುಖರು. ಎಡಪಕ್ಷಗಳ ಯಜಮಾನಿಕೆ ಇನ್ನೂ ಚಟರ್ಜಿ, ಬಸು, ದಾಸ್‌ಗುಪ್ತಾ ಕೈಯ್ಯಲ್ಲಿಯೇ ಇದ್ದರೂ ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ, ನೀಲೋತ್ಪಲ್ ಬಸು ಮೊದಲಾದ ಯುವನಾಯಕರು ಸಿದ್ಧವಾಗಿದ್ದಾರೆ.

ಮಹಿಳೆಯರಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯದ ಕೊರತೆ ಇದ್ದರೂ ಸಕ್ರಿಯವಾಗಿರುವ ಅನೇಕ ನಾಯಕಿಯರು ಯುವವರ್ಗಕ್ಕೆ. ನಾಲ್ವರು ಮಹಿಳಾ ಮುಖ್ಯಮಂತ್ರಿಗಳು ಮಾತ್ರವಲ್ಲ, 48ರ ಹರೆಯದ ಮಾಯಾವತಿ, 49ರ ಮಮತಾ ಬ್ಯಾನರ್ಜಿ, 48ರ ಮೇನಕಾಗಾಂಧಿ, 54ರ ರೇಣುಕಾ ಚೌಧರಿ ಮೊದಲಾದವರು ಮುಂದಿನ ದಿನಗಳಲ್ಲಿ ಕಾದು ನೋಡಬೇಕಾದವರು.

'ಪಟಿಂಗರ ಕೊನೆಯ ಆಸರೆ' ಎಂದೇ ಕುಖ್ಯಾತಿ ಪಡೆದ ರಾಜಕೀಯಕ್ಕೆ ಹೋದರೆ ಮರ್ಯಾದೆ ಇಲ್ಲ ಎನ್ನುವ ಅಭಿಪ್ರಾಯ ಬಹುತೇಕ ಸಭ್ಯ ಯುವಜನರಲ್ಲಿದೆ. ಅಪ್ಪ-ಅಮ್ಮನ ಹೆಸರು, ಹಣ ಇಲ್ಲವೇ ಬಾಹುಬಲ ಇದ್ದವರಿಗೆ ಮಾತ್ರ ರಾಜಕೀಯದಲ್ಲಿ ಭವಿಷ್ಯ ಎನ್ನುವ ವಾಸ್ತವವನ್ನು ಅವರು ಅರಿತುಕೊಂಡಂತಿದೆ. ಹುಟ್ಟನ್ನು ಬದಲಾಯಿಸಲು ಸಾಧ್ಯ ಇಲ್ಲ ಎಂದು ಗೊತ್ತಿರುವ ರಾಜಕೀಯ ಆಕಾಂಕ್ಷಿ ಯುವಜನರ ಒಂದು ವರ್ಗ, ಹಣ ಮತ್ತು ಬಾಹುಬಲದ ಮೂಲಕ ರಾಜಕೀಯ ಮೆಟ್ಟಿಲುಗಳನ್ನೇರುವ ಪ್ರಯತ್ನ ಮಾಡುತ್ತಿರುವುದು ಇತ್ತೀಚಿನ ಬೆಳವಣಿಗೆ.

ಇದರ ಜೊತೆಯಲ್ಲಿಯೇ ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣ ಪಡೆದವರು ಕೂಡಾ ರಾಜಕೀಯದಲ್ಲಿ ಆಸಕ್ತಿ ವಹಿಸುತ್ತಿದ್ದಾರೆ ಎಂದು ಹೇಳುವ ಲೋಕಸಭೆಯ ದಾಖಲೆಗಳು ಭರವಸೆ ಹುಟ್ಟಿಸುವಂತಹದ್ದು. ವಿಸರ್ಜಿತ ಹದಿಮೂರನೇ ಲೋಕಸಭೆಯ 534 ಸದಸ್ಯರಲ್ಲಿ 172 ಸದಸ್ಯರು ಸ್ನಾತಕೋತ್ತರ, ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಪಡೆದವರು. ಇವರಲ್ಲಿ ಹೆಚ್ಚಿನವರು ಯುವರಾಜಕಾರಣಿಗಳು. ಆದರೆ ಸಂಸತ್‌ನ ಕಲಾಪದಲ್ಲಿ ಈ 'ಶಿಕ್ಷಣ' ಪ್ರತಿಫಲನಗೊಳ್ಳದಿರುವುದನ್ನು ಕಂಡಾಗ ಮತ್ತೆ ನಿರಾಶೆ ಮೂಡುತ್ತದೆ.

ಯುವಜನತೆಯ ರಾಜಕಿಯ ಪ್ರವೇಶದಿಂದ ಭಾರತ ಮತ್ತೆ ಸ್ವಾತಂತ್ರ್ಯ ನಂತರದ ಪ್ರಾರಂಭದ ದಿನಗಳ ಆದರ್ಶವಾದಿ, ಜನಪರ ರಾಜಕಾರಣವನ್ನು ಕಾಣುವುದು ಸಾಧ್ಯವಾಗಬಹುದೇ? ಮೊದಲು ಅವಕಾಶ ಕೊಟ್ಟು ನೋಡಿ ಎನ್ನತ್ತಿದೆ ಯುವಜನತೆ. ಅವಕಾಶ ಕೊಟ್ಟು ಯಾಕೆ ನೋಡಬಾರದು? ಅವಕಾಶವನ್ನು 'ಕೊಡ'ಬೇಕೆ? 'ಕಿತ್ತುಕೊಳ್ಳ'ಬೇಕೇ ಹೊರತು ಈ ಮಂದಿ ಕೊಡುವುದಿಲ್ಲ!

O

(14-03-2004)

ಸತ್ಯದ ಹಾದಿ

ಅಮೆರಿಕಾ, ಬ್ರಿಟನ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಹೊರತುಪಡಿಸಿದರೆ ವಿಶ್ವದಲ್ಲೆಲ್ಲೂ ಅಪ್ರಾಮಾಣಿಕರ ವಿರುದ್ಧ 'ಸೀಟಿ' ಊದುವವರ ರಕ್ಷಣೆಗಾಗಿ ಕಾನೂನು ಇಲ್ಲ. ನಾಲ್ಕು ವರ್ಷಗಳ ಹಿಂದೆಯೇ ಕಾನೂನು ಆಯೋಗ ಇಂತಹ ಕಾನೂನಿನ ಅವಶ್ಯಕತೆ ಬಗ್ಗೆ ಶಿಫಾರಸ್ಸು ಮಾಡಿದ್ದರೂ ದೇಶದ ಜನಪ್ರತಿನಿಧಿಗಳಿಗೆ ಆ ಬಗ್ಗೆ ಯೋಚಿಸಲು ಇನ್ನೂ ಪುರುಸೊತ್ತು ಸಿಕ್ಕಿಲ್ಲ. ಇದಕ್ಕಾಗಿ ಇನ್ನೆಷ್ಟು ದುಬೆ, ಮಂಜುನಾಥ್‌ಗಳು ಬಲಿಯಾಗಬೇಕೇನೋ? ಗೊತ್ತಿಲ್ಲ.

ಸತ್ಯದ ಹಾದಿ ಮಸಣದೆಡೆಗೆ ಕೊಂಡೊಯ್ಯುತ್ತದೆ ಎನ್ನುವುದು ತಿಳಿಯಲು ಸತ್ಯಹರಿಶ್ಚಂದ್ರನ ಕತೆಯನ್ನೇ ಓದಬೇಕಾಗಿಲ್ಲ. ಕೆ.ಜಿ.ಎಫ್.ನ ಮಂಜುನಾಥ ಅವರ ಕತೆಯೇ ಸಾಕು. ಭಾರತೀಯ ತೈಲ ನಿಗಮದ ಈ ಯುವ ಅಧಿಕಾರಿಯ ಹತ್ಯೆಯ ನಂತರ ಅನುಕಂಪದ ಹೊಳೆ, ನೆರವಿನ ಧಾರೆ ಹರಿದಿದೆ. ಪ್ರತಿ ಬಾರಿ ತನ್ನ ಪ್ರಾಮಾಣಿಕತೆಗಾಗಿ ಅಧಿಕಾರಿಯೊಬ್ಬ ಸಾವು-ನೋವಿಗೆ ಈಡಾದಾಗ, ಜನಸಮೂಹದಲ್ಲಿ ಅನುಕಂಪದ ಅಲೆ ಪುಟದೇಳುತ್ತದೆ. ಆಕ್ರೋಶದ ಕಿಡಿ ಹಾರುತ್ತದೆ. ಔದಾರ್ಯದ ಹೆಬ್ಬಾಗಿಲು ತೆರೆದುಕೊಳ್ಳುತ್ತದೆ. ಆದರೆ ಎಲ್ಲವೂ ಅಷ್ಟೇ ಬೇಗ ಕೊನೆಯಾಗುತ್ತದೆ.

ಸತ್ಯೇಂದ್ರ ದುಬೆಯ ನೆನಪೇ ಈಗ ಮಸುಕು ಮಸುಕು. ಇನ್ನು ಜಸ್ವಂತ್‌ಸಿಂಗ್ ಕಾಲ್ರಾ, ಸಂಜಯ್‌ಕುಮಾರ್‌ಸಿಂಗ್, ಅರುಣ್ ಭಾಟಿಯಾ, ಜಿ.ಆರ್.ಖೈರ್ನಾರ್, ರಾಧೇ

ಶ್ಯಾಮ್ ಮೊಪಲ್‌ವಾರ್....ಇವರಲ್ಲಿ ಕೆಲವರ ಹೆಸರನ್ನು ಹೆಚ್ಚಿನವರು ಕೇಳಿಯೇ ಇಲ್ಲ. ಕೇಳಿದವರು ಕೂಡಾ ಮರೆತುಬಿಟ್ಟಿದ್ದಾರೆ.

ಮಾನವಹಕ್ಕುಗಳ ಕಾರ್ಯಕರ್ತ ಜಗತ್‌ಸಿಂಗ್ ಕಾಲ್ರಾ ಕಳೆದ ಹತ್ತು ವರ್ಷಗಳಿಂದ 'ನಾಪತ್ತೆ' ಯಾಗಿದ್ದಾರೆ. ಪಂಜಾಬ್ ಪೋಲೀಸರು 2000 ಅಮಾಯಕ ವ್ಯಕ್ತಿಗಳನ್ನು ಹತ್ಯೆ ಮಾಡಿ, ಅಪರಿಚಿತ ಶವಗಳೆಂದು ದಫನ್ ಮಾಡಿದ್ದಾರೆ ಎಂದು 1995ರಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಗೊಳಿಸಿದ್ದು ಅವರ 'ಅಪರಾಧ'. ಅದರ ನಂತರ ಒಂದು ಮುಂಜಾನೆ ಕಾಲ್ರಾ ಅವರನ್ನು ಅಮೃತಸರದ ಅವರ ಮನೆಯಿಂದ ಪಂಜಾಬ್ ಪೋಲೀಸರು ಹೊತ್ತುಕೊಂಡು ಹೋಗಿದ್ದರು. ಅಲ್ಲಿಂದ ಇಲ್ಲಿಯವರೆಗೆ ಅವರು 'ನಾಪತ್ತೆ'; ಆರೋಪದ ಬಗ್ಗೆ ಸಿಬಿಐ ತನಿಖೆ ನಡೆಸಿದಾಗ 1238 ಶವಗಳು ಅಪರಿಚಿತ. 278 ಶವಗಳು ಭಾಗಶಃ ಪರಿಚಿತ ಮತ್ತು 582 ಶವಗಳು ಮಾತ್ರ ಪರಿಚಿತ ಎಂದು ಬಹಿರಂಗಗೊಂಡಿತು. ಕಾಲ್ರಾ ಅವರ ಪತ್ನಿ ಪರಮ್‌ಜಿತ್ ಕೌರ್ ಈಗಲೂ ತಮ್ಮ ಪತಿಯ ದಾರಿ ಕಾಯುತ್ತಿದ್ದಾರೆ.

ಬಿಹಾರದ ಅರಣ್ಯಾಧಿಕಾರಿ ಸಂಜಯ ಕುಮಾರ್‌ಸಿಂಗ್ ಅವರಿಗೆ ಸಾವು ತನ್ನನ್ನು ಬೆನ್ನಟ್ಟಿರುವುದು ಗೊತ್ತಿತ್ತು. ಅದನ್ನು ಪತ್ನಿಯೊಂದಿಗೆ ಹೇಳಿಯೂ ಇದ್ದರು. ಗಣಿ ಮಾಫಿಯಾವನ್ನು ನಾಶ ಮಾಡಲು ನಿರ್ಧರಿಸಿದ್ದ ಅವರು ಅದಕ್ಕಾಗಿ ಹೆಚ್ಚುವರಿ ಪೋಲೀಸ್ ಬಲ ಕೋರಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಪತ್ರವನ್ನೂ ಬರೆದಿದ್ದರು. ಕೇಳಿದ್ದು ಸಿಗಲಿಲ್ಲ. ನಿರೀಕ್ಷಿಸಿದ್ದು ನಿಜವಾಯಿತು. ದುಷ್ಕರ್ಮಿಗಳಿಂದ ಅಪಹರಣಕ್ಕೀಡಾದ ಸಿಂಗ್ ಮೃತದೇಹ ಕಾಡಿನಲ್ಲಿ ಸಿಕ್ಕಿತು.

ನಕಲಿ ಛಾಪಾಕಾಗದ ಹಗರಣದ ಸುಳಿವನ್ನು ಮೊದಲು ನೀಡಿದವರು ಮಹಾರಾಷ್ಟ್ರದ ಸ್ಟಾಂಪ್ಸ್ ಸುಪರಿಂಟೆಂಡೆಂಟ್ ರಾದೇಶ್ಯಾಮ್ ಮೊಪಾಲ್‌ವಾರ್. 1995ರಲ್ಲಿ ಮೊದಲ ಬಾರಿ ಅಬ್ದುಲ್ ಕರೀಮ್ ತೆಲಗಿ ಹೆಸರು ಕಾಣಿಸಿಕೊಂಡದ್ದು ಅವರು ಬರೆದ ನಕಲಿ ಛಾಪಾ ಕಾಗದದ ಎಫ್‌ಐಆರ್‌ನಲ್ಲಿ, ಆ ಬಗ್ಗೆ ತನಿಖೆ ನಡೆಸಲು ಅವರು ಬರೆದರೂ ಪೋಲೀಸರು ಮೌನವಾಗಿಯೇ ಇದ್ದರು., ನಾಲ್ಕು ವರ್ಷಗಳ ನಂತರ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಈ ಹಗರಣ ದೊಡ್ಡ ಸಂಚಲನವನ್ನುಂಟು ಮಾಡಿತ್ತು. ಮೊಪಾಲ್‌ವಾರ್ ಈಗ ಮಣ್ಣಿನ ಅಂತರ್ಜಲ ಸಮೀಕ್ಷೆ ಇಲಾಖೆಯ ನಿರ್ದೇಶಕ. ಇದು ಹಿಂಬಡ್ತಿಯೋ, ಮುಂಬಡ್ತಿಯೋ ಅವರಿಗೂ ಗೊತ್ತಿಲ್ಲ.

ಅಕ್ರಮ ಕಟ್ಟಡಗಳ ವಿರುದ್ಧ ಸಮರ ಸಾರಿದ ಡೆಮಾಲಿಷ್ ಮ್ಯಾನ್ ಮುಂಬೈ ಮಹಾನಗರ ಪಾಲಿಕೆಯ ಉಪ ಆಯುಕ್ತ ಜಿ.ಎಸ್.ಖೈರ್ನಾರ್ ಭೂಗತ ದೊರೆಗಳಿಂದ ಹಿಡಿದು ರಾಜಕಾರಣಿಗಳವರೆಗೆ ಎಲ್ಲರ ನಿದ್ದೆಗೆಡಿಸಿದವರು. ಹತ್ಯೆಯ ಬೆದರಿಕೆ ಮಾತ್ರ ಅಲ್ಲ, ಆ ಪ್ರಯತ್ನವೂ ನಡೆದಿತ್ತು. ವಾರಗಟ್ಟಲೆ ಬೆದರಿಕೆ ಕರೆ ಬರದಿದ್ದರೆ 'ನೀವು ಸರಿಯಾಗಿ ಕೆಲಸ ಮಾಡುತ್ತಿಲ್ಲವೇ?' ಎಂದು ಅವರ ಪತ್ನಿ ಕೇಳುತ್ತಿದ್ದರಂತೆ. ಬಗೆ

ಬಗೆಯಲ್ಲಿ ಅವರಿಗೆ ಕಿರುಕುಳ ನೀಡಿದ ಮೇಲಾಧಿಕಾರಿಗಳು ಅವರು ನಿವೃತ್ತರಾದ ದಿನವೇ ಮನೇ ಖಾಲಿ ಮಾಡಿಸಿ (ಹೊರದಬ್ಬಿ?) ಖುಷಿಪಟ್ಟರಂತೆ.

ಪುಣೆಯ ಮುನ್ಸಿಪಾಲ್ ಕಮಿಷನರ್ ಅರುಣ್ ಭಾಟಿಯಾ ಅವರದ್ದು ಇನ್ನೊಂದು ಕತೆ. ಹೋದಲ್ಲೆಲ್ಲಾ ಸಹದ್ಯೋಗಿಗಳ ಭ್ರಷ್ಟಾಚಾರವನ್ನು ಬಯಲಿಗೆಳೆದ ಭಾಟಿಯಾ ಅವರು, 26 ವರ್ಷಗಳ ಸೇವಾ ಅವಧಿಯಲ್ಲಿ 26 ಬಾರಿ ವರ್ಗಾವಣೆಗೊಂಡಿದ್ದರು. ತಮ್ಮವರಿಂದಲೇ ನಡೆಯುತ್ತಿರುವ ಅವ್ಯವಹಾರ, ಅನ್ಯಾಯವನ್ನು ಸಾರ್ವಜನಿಕ ಹಿತದ ದೃಷ್ಟಿಯಿಂದ ಬಯಲಿಗೆಳೆದ ಇಂಥವರನ್ನೆಲ್ಲಾ 'ಸೀಟಿ ಊದುವವರು' (ವಿಷಲ್‌ಬ್ಲೋವರ್ಸ್) ಎನ್ನುತ್ತಾರೆ.

ಭ್ರಷ್ಟರೇ ಬಹುಸಂಖ್ಯೆಯಲ್ಲಿರುವ ವ್ಯವಸ್ಥೆಯಲ್ಲಿ ಪ್ರಾಮಾಣಿಕರು ಅಲ್ಪಸಂಖ್ಯಾತರು. ಇಲಾಖೆಗೆ ಸಂಬಂಧಿಸಿದ ಅವ್ಯವಹಾರದಲ್ಲಿ ಸಹದ್ಯೋಗಿಗಳ ಪಾತ್ರವೂ ಇರುವುದರಿಂದ ಮೊದಲ ಶತ್ರುಗಳು ಅವರೇ ಆಗಿರುತ್ತಾರೆ. ಮೊದಲು 'ಸೀಟಿ ಊದುವವರ' ವಿರುದ್ಧ ಅಪಪ್ರಚಾರ ನಡೆಯುತ್ತದೆ. ಆ ನಂತರ ಸುಳ್ಳು ಆರೋಪಗಳನ್ನು ಹೊರಿಸಲಾಗುತ್ತದೆ. ಇವೆಲ್ಲದರ ನಡುವೆ ಅವರನ್ನು ಒಂಟಿಯಾಗಿ ಮಾಡುವ ಪ್ರಯತ್ನ ನಡೆಯುತ್ತದೆ. ಇವುಗಳ ಮೂಲಕವೇ 'ದಾರಿಗೆ ತರುವ' ಪ್ರಯತ್ನ ನಡೆಯುತ್ತದೆ. ಇವರಲ್ಲಿ ಹಲವರು ಶರಣಾಗುತ್ತಾರೆ. ಕೆಲವರು ಪ್ರಾಣ ಕಳೆದುಕೊಳ್ಳುತ್ತಾರೆ. ಬದುಕುಳಿದವರು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಾ ಹತಾಶೆ-ನಿರಾಶೆಗೆ ಸಿಕ್ಕಿ ಕುಸಿದುಹೋಗುತ್ತಾರೆ. ಭಾರತದಲ್ಲಿಯೇ ಯಾಕೆ, ವಿಶ್ವದ ನಾಲ್ಕು ದೇಶಗಳನ್ನು ಹೊರತು ಪಡಿಸಿದರೆ ಬೇರೆಲ್ಲೂ 'ಸೀಟಿ' ಊದುವವರ' ರಕ್ಷಣೆಗಾಗಿ ಕಾನೂನು ಕೂಡಾ ಇಲ್ಲ. 1857ರಲ್ಲಿ ಬ್ರಿಟನ್ ನ್ಯಾಯಾಲಯವೊಂದು 'ಸೀಟಿ ಊದುವವರ' ಪರವಾಗಿ ತೀರ್ಪು ನೀಡಿತ್ತು. ಆದರೆ ವಿಶ್ವದಲ್ಲಿಯೇ ಮೊದಲ ಬಾರಿ ಇಂತಹ ಒಂದು ಕಾನೂನನ್ನು 1989ರಲ್ಲಿ ರೂಪಿಸಿದ್ದು ಅಮೆರಿಕಾ. ಅದರ ನಂತರ ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗಳು ಹಿಂಬಾಲಿಸಿದವು.

ಈ ಕಾನೂನು ಇರುವ ಕಾರಣಕ್ಕಾಗಿಯೇ ಎನ್ರಾನ್ ಸಂಸ್ಥೆಯ ತಪ್ಪು ಲೆಕ್ಕಪತ್ರವನ್ನು ಬಯಲಿಗೆಳೆದ ಅದರ ಉಪಾಧ್ಯಕ್ಷೆ ಶೆರ್ರಾನ್ ವಾಟ್ಕಿನ್ಸ್, 9/11ರ ದಾಳಿ ನಡೆಸಿದ ಭಯೋತ್ಪಾದಕರ ಸುಳಿವಿನ ಮುನ್ಸೂಚನೆ ನಿರ್ಲಕ್ಷಿಸಿದ್ದನ್ನು ಎಫ್‌ಬಿಯ ನಿರ್ದೇಶಕರಿಗೆ ಪತ್ರ ಬರೆದು ಬಹಿರಂಗಗೊಳಿಸಿದ ಎಫ್‌ಬಿಐ ಅಟಾರ್ನಿ ಕೊಲೀನ್ ರೌಲೆ, ವರ್ಲ್ಡ್‌ಕಾಮ್ 3.8 ಬಿಲಿಯನ್ ಡಾಲರ್‌ನಷ್ಟು ನಷ್ಟವನ್ನು ಮುಚ್ಚಿಟ್ಟಿದ್ದನ್ನು ನಿರ್ದೇಶಕರ ಮಂಡಳಿಗೆ ತಿಳಿಸಿ ಸುದ್ದಿಮಾಡಿದ ಸಿಂಥಿಯಾ ಕೂಪರ್ ಅಮೆರಿಕಾದಲ್ಲಿ 'ತಾರಾ ಮೌಲ್ಯ' ಗಳಿಸುವಷ್ಟು ಜನಪ್ರಿಯರು. ಆದರೆ ಭಾರತದಲ್ಲಿ ಈ ಕೆಲಸ ಮಾಡಿದವರಿಗೆ ಕಿರುಕುಳ, ವರ್ಗಾವಣೆ, ಹತ್ಯೆಯ ಬಹುಮಾನ ಸಿಗುತ್ತದೆ.

ಗುತ್ತಿಗೆದಾರರ ಮಾಫಿಯಾಕ್ಕೆ ಸತ್ಯೇಂದ್ರ ದುಬೆ ಬಲಿಯಾದ ನಂತರ, ಪ್ರಾಮಾಣಿಕತೆಯ 'ಸೀಟಿ ಊದುವವರ' ರಕ್ಷಣೆಗಾಗಿ ಕಾನೂನು ರೂಪಿಸಬೇಕೆಂದು

ದೇಶಾದ್ಯಂತ ಕೂಗೆದ್ದಿತು. 2001 ರ ಕಾನೂನು ಆಯೋಗ ಈ ಕಾನೂನನ್ನು ಶಿಫಾರಸ್ಸನ್ನು ಜಾರಿಗೊಳಿಸುವುದಾಗಿ ಎನ್‌ಡಿಎ ಸರ್ಕಾರ ಕೂಡಾ ಘೋಷಿಸಿತು. ಆದರೆ ಕಾವು ತಣ್ಣಗಾದಂತೆಯೇ ಎಲ್ಲರೂ ಮರೆತುಬಿಟ್ಟರು. ಕಾಯಿದೆಯ ಮುಖ್ಯ ಉದ್ದೇಶ ಮಾಹಿತಿ ನೀಡಿದ 'ಸೀಟಿ ಊದುವವರ' ಗುರುತಿನ ಬಗ್ಗೆ ರಹಸ್ಯ ಪಾಲನೆ ಮತ್ತು ಆತನಿಗೆ ರಕ್ಷಣೆ.

ಅಧಿಕಾರಿಯೊಬ್ಬನಿಂದ ಅಧಿಕಾರದ ದುರುಪಯೋಗ, ಭ್ರಷ್ಟಾಚಾರ ನಿರೋಧ ಕಾಯಿದೆ ಇಲ್ಲವೇ ಭಾರತೀಯ ದಂಡ ಸಂಹಿತೆಯಲ್ಲಿ ಹೇಳಲಾದ ಅಪರಾಧ, ಇಲ್ಲವೇ ದುರಾಡಳಿತ–ಸ್ಥೂಲವಾಗಿ ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಅಧಿಕಾರಿಗಳ ವಿರುದ್ಧದ ದೂರುಗಳನ್ನು 'ಸೀಟಿ ಊದುವವರ' ರಕ್ಷಣೆಯ ಕಾಯಿದೆಯ ವ್ಯಾಪ್ತಿಯಲ್ಲಿ ಸೇರಿಸಬೇಕೆಂದು ಕರಡು ಕಾನೂನು ಹೇಳುತ್ತದೆ. ಇದು ಜಾರಿಗೊಳ್ಳಬೇಕಾದರೆ ಇನ್ನೆಷ್ಟು ದುಬೆ, ಮಂಜುನಾಥ್‌ಗಳು ಬಲಿಯಾಗಬೇಕಾಗಬಹುದು. 'ಮಗನೊಬ್ಬ ಆತನ ಪ್ರಾಮಾಣಿಕತೆಗಾಗಿ ಪ್ರಾಣಕಳೆದುಕೊಳ್ಳಬೇಕಾಯಿತಲ್ಲಾ ಎಂದು ತಂದೆತಾಯಿ ದುಃಖಿಸಬೇಕಾದ ಪರಿಸ್ಥಿತಿ ಯಾರಿಗೂ ಬಾರದಿರಲಿ' ಎಂದು ಹೇಳಿದ ಮಂಜುನಾಥ್ ತಂದೆ ಷಣ್ಮುಗಂ ಅವರ ಆಶಯ ಈಡೇರಬಹುದೇ?

'ಸೀಟಿ ಊದುವವರ' ರಕ್ಷಣೆಗೆ ರೂಪಿಸುವ ಕಾಯಿದೆಯ ವ್ಯಾಪ್ತಿಯಲ್ಲಿ ರಾಜಕೀಯ ಕ್ಷೇತ್ರವನ್ನೂ ಸೇರಿಸಬೇಕೆಂದು ಬಿಜೆಪಿ ಬಂಡಕೋರ ನಾಯಕ ಉಮಾಭಾರತಿ ಬೆಂಬಲಿಗರು ಒತ್ತಾಯಿಸಬಹುದೇನೋ? ತಮ್ಮ ಸಹೋದ್ಯೋಗಿಗಳ 'ಪಕ್ಷವಿರೋಧಿ ಚಟುವಟಿಕೆಗಳ ಬಗ್ಗೆ 'ಸೀಟಿ ಊದಿದಕ್ಕಲ್ಲವೇ' ಅವರಿಗೆ ಈ ಸ್ಥಿತಿ ಬಂದೊದಗಿದ್ದು ಎಂದು 'ದೀದಿ' ಭಕ್ತರು ಹೇಳಿದರೆ ನಿರಾಕರಿಸಲಾದೀತೇ?

(08-12-2005)

ಸ್ವಾತಂತ್ರ್ಯ ಬಯಸುತ್ತಿರುವ ಸಿಎಬಿಇ

ಕಳೆದ ಬುಧವಾರ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವ ಅರ್ಜುನ್‌ಸಿಂಗ್ 'ಕೇಂದ್ರ ಶೈಕ್ಷಣಿಕ ಸಲಹಾ ಮಂಡಳಿ'ಯನ್ನು ಪುನರ್ರಚಿಸಿದಾಗ ರಾಜ್ಯ ಶಿಕ್ಷಣ ಸಚಿವರೊಬ್ಬರು ಖಾಸಗಿ ಮಾತುಕತೆಯಲ್ಲಿ 'ಕೊನೆಗೂ ಸ್ವಾತಂತ್ರ್ಯ ಸಿಕ್ಕಿತು' ಎಂದರು ವ್ಯಂಗ್ಯವಾಗಿ. ಅವರ ವ್ಯಗ್ಯೋಕ್ತಿಗೆ ಹಿನ್ನೆಲೆ ಇದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ನೀತಿ–ನಿರ್ಧಾರಗಳನ್ನು ಕಾನೂನಿನ ಮೂಲಕ ಮಾತ್ರ ಕೇಂದ್ರ ಸರ್ಕಾರ ಅನುಷ್ಠಾನಕ್ಕೆ ತರಲು ಸಾಧ್ಯ. ಸಹಮತ ಇಲ್ಲದ ನಿರ್ಧಾರಗಳ ಅನುಷ್ಠಾನ ಕಷ್ಟ. ಅನಿವಾರ್ಯವಾದ ಸಹಮತವನ್ನು ರೂಪಿಸುವ ಉದ್ದೇಶದಿಂದಲೇ 1921ರಲ್ಲಿ ರಚನೆಗೊಂಡದ್ದು ಕೇಂದ್ರ ಶೈಕ್ಷಣಿಕ ಸಲಹಾ ಮಂಡಳಿ (ಸಿಎಬಿಇ) ಪ್ರಾಂತೀಯ ಸರ್ಕಾರಗಳ ಸಹಮತ ಪಡೆಯುವ ಉದ್ದೇಶದಿಂದ ಇದು ಅಸ್ತಿತ್ವಕ್ಕೆ ಬಂತು.

ಆದರೆ ಈ ಮಂಡಳಿಯ ಸದಸ್ಯರಾಗಿದ್ದವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದ ಪ್ರಾಂತೀಯ ಸರ್ಕಾರಗಳ ಶಿಕ್ಷಣ ಸಚಿವರು. ಅವರ ನಿಲುವುಗಳು ಬ್ರಿಟಿಷ್ ಸರ್ಕಾರಕ್ಕೆ ಮುಜುಗರ ಉಂಟು ಮಾಡಿದ ಕಾರಣ 1923ರಲ್ಲಿ ಮಂಡಳಿಯನ್ನು ಸ್ಥಗಿತ ಸ್ಥಿತಿಯಲ್ಲಿಡಲಾಯಿತು. ಅದಕ್ಕೆ ಮತ್ತೆ ಕಾಯಕಲ್ಪ ಸಿಕ್ಕಿದ್ದು 1935ರಲ್ಲಿ. ಅದು ನೇತಾರರಾದ ಎಸ್.ರಾಧಾಕೃಷ್ಣನ್, ರಾಜಕುಮಾರಿ ಅಮೃತಾ ಕೌರ್, ಭಗವಾನ್‌ದಾಸ್, ಶ್ಯಾಮಪ್ರಸಾದ್ ಮುಖರ್ಜಿ ಮೊದಲಾದವರ ಪ್ರಯತ್ನದಿಂದಾಗಿ. 1935 ರಿಂದ 1994ರ ವರೆಗೆ 60

ಸಭೆಗಳನ್ನು ನಡೆಸಿದ ಸಿಎಬಿಇ ಯನ್ನು ನಂತರದ ಹತ್ತು ವರ್ಷಗಳಲ್ಲಿ ಪುನರ್ರಚಿಸಲೇ ಇಲ್ಲ. ಈಗ ಅದಕ್ಕೆ ಮತ್ತೆ ಕಾಯಕಲ್ಪ ನೀಡುದ್ದು ಅರ್ಜುನ್‌ಸಿಂಗ್. 'ಸ್ವಾತಂತ್ರ್ಯ ಬಂತು'. ಎಂದ ಶಿಕ್ಷಣ ಸಚಿವರು ಈ ಕತೆಯನ್ನೆಲ್ಲಾ ಮೆಲುಕುಹಾಕಿದರು. ಆದರೆ ಸಿಎಬಿಇ ನಿಜಕ್ಕೂ ಸ್ವಾತಂತ್ರ್ಯ ಪಡೆದಿದೆಯೇ?

ಎಚ್.ಡಿ. ದೇವೆಗೌಡರು ಪ್ರಧಾನಿಯಾಗಿದ್ದಾಗ ಮಂಡಳಿ ಪುನರ್ರಚನೆಯ ಪ್ರಯತ್ನ ನಡೆದಿತ್ತು. ಒಕ್ಕೂಟ ವ್ಯವಸ್ಥೆಗೆ ಅನುಗುಣವಾಗಿ ಮಂಡಳಿಯ ನೆಲೆಯನ್ನು ಇನ್ನಷ್ಟು ವಿಸ್ತರಿಸಬೇಕೆಂಬ ದೇವೇಗೌಡರ ಸಲಹೆಯ ಕಾರಣದಿಂದಾಗಿ ಪುನರ್ರಚನೆ ಮುಂದಕ್ಕೆ ಹೋಯಿತು. ಅಷ್ಟರಲ್ಲಿ ಅವರ ಸರ್ಕಾರವೇ ಪತನಗೊಂಡಿತು. ಗುಜ್ರಾಲ್ ಸರ್ಕಾರಕ್ಕೆ ಈ ಬಗ್ಗೆ ಗಮನ ಕೊಡುವಷ್ಟು ಸಮಯವೇ ಇರಲಿಲ್ಲ!

ಆ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತನ್ನ ಅಧಿಕಾರಾವಧಿಯ ಉದ್ದಕ್ಕೂ ಸಿಎಬಿಇ ಅನ್ನು 'ಅಸ್ಪೃಶ್ಯ' ಸ್ಥಿತಿಯಲ್ಲಿಟ್ಟಿತು. ರಾಷ್ಟ್ರೀಯ ಶೈಕ್ಷಣಿಕ ಅಧ್ಯಾಯನ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಮೂಲಕ ಪಠ್ಯಪುಸ್ತಕಗಳನ್ನು ತಿದ್ದುವ (ತಿರುಚುವ) ಪ್ರಯತ್ನ ನಡೆಸಿದ ಮಾಜಿ ಸಚಿವ ಮುರಳಿ ಮನೋಹರ ಜೋಶಿ ಅವರು ಈ ಬದಲಾವಣೆಗೆ ಸಹಮತ ಪಡೆಯುವ ಪ್ರಮುಖ ವೇದಿಕೆಯಾದ ಸಿಎಬಿಇ ಅನ್ನು ಪುನರ್ರಚಿಸದೆ ನಿರ್ಲಕ್ಷಿಸುತ್ತಲೇ ಹೋದರು.

106 ಸದಸ್ಯರ ಸಿಎಬಿಇಯಲ್ಲಿ ರಾಜ್ಯಗಳ ಶಿಕ್ಷಣ ಸಚಿವರು, ಐವರು ಕೇಂದ್ರ ಸಚಿವರು, ಆರು ಸಂಸದರು, ಯೋಜನೆಯ ಸದಸ್ಯರಾಗಿರುತ್ತಾರೆ. ಇವರ ಜತೆ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿನ 32 ಬುದ್ಧಿಜೀವಿಗಳನ್ನು ಮಂಡಳಿಯ ಸದಸ್ಯರನ್ನಾಗಿ ನೇಮಿಸಬೇಕಾಗುತ್ತದೆ. ಆದರೆ ಮುರಳಿ ಮನೋಹರ ಜೋಶಿ ಅವರು ಈ ಪುನರ್ರಚನೆಯ ಕಷ್ಟ ತೆಗೆದುಕೊಳ್ಳಲಿಲ್ಲ.

ಸಂಘ ಪರಿವಾರದ ವಿಚಾರಧಾರೆಯನ್ನು ಒಪ್ಪುವ 32 ಬುದ್ಧಿಜೀವಿಗಳನ್ನು ಹುಡುಕುವುದು ಅವರ ಮೊದಲ ಕಷ್ಟವಾಗಿತ್ತು. ಒಂದೊಮ್ಮೆ ಅಂತಹವರನ್ನು ಹುಡುಕಾಡಿ ನೇಮಿಸಿದರೂ ತೀವ್ರವಾದ ಸಾರ್ವಜನಿಕ ವಿರೋಧವನ್ನು ಅವರು ಎದುರಿಸಬೇಕಾಗುತ್ತಿತ್ತು. ಈ ಮುಜುಗರದಿಂದ ತಪ್ಪಿಸಿಕೊಳ್ಳಲಿಕ್ಕಾಗಿಯೇ ಜೋಷಿ ಅವರು ಸಿಎಬಿಇ ಅನ್ನು ಪುನರ್ರಚಿಸಲೇ ಇಲ್ಲ ಎನ್ನುವ ಅಭಿಪ್ರಾಯ ಇದೆ.

ಸಿಎಬಿಇ ಅನ್ನು ಜೋಷಿ ಅವರು ಯಾಕೆ ಪುನರ್ರಚಿಸಲಿಲ್ಲ ಎನ್ನುವುದಕ್ಕೆ ಸಾಹಿತಿ ಯು.ಆರ್.ಅನಂತಮೂರ್ತಿ ನೀಡುವ ಕಾರಣದಲ್ಲೊಂದು ಒಳನೋಟ ಇದೆ. 'ನಮ್ಮಲ್ಲಿ ಇನ್ನೂ ಗಾಂಧಿ-ನೆಹರೂ-ಟಾಗೋರ್ ಪಂಕ್ತಿಗೆ ಸೇರಿದ ಪುರೋಗಾಮಿ ವಿಚಾರಧಾರೆಯ ಮಾನವತಾವಾದಿ ಚಿಂತಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅದರಲ್ಲಿ ಬುದ್ಧ-ಅಂಬೇಡ್ಕರ್ ಅನುಯಾಯಿಗಳೂ ಸೇರಿದ್ದಾರೆ. ಅವರಿನ್ನೂ ಕೋಮುವಾದದ ಹೊಳೆಯಲ್ಲಿ ಕೊಚ್ಚಿಹೋಗಿಲ್ಲ. ಆದ್ದರಿಂದಲೇ ಕೇಂದ್ರ ಶೈಕ್ಷಣಿಕ ಸಲಹಾ ಮಂಡಳಿಯನ್ನು

ಅರ್ಜುನ್‌ಸಿಂಗ್ ಅವರಷ್ಟು ಸುಲಭದಲ್ಲಿ ಪುನರ್ರಚಿಸಲು ಜೋಷಿ ಅವರಿಗೆ ಸಾಧ್ಯವಾಗಲಿಲ್ಲ' ಎನ್ನುತ್ತಾರೆ ಅನಂತಮೂರ್ತಿ

ಸಿಎಬಿಇಗೆ ಅಷ್ಟೇನು ಮಹತ್ವ? 1994ಕಿಂತ ಮೊದಲು ಸಿಎಬಿಇ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ರಾಜ್ಯಗಳ ನಡುವೆ ಸಹಮತ ರೂಪಿಸುವ ಪ್ರಮುಖ ವೇದಿಕೆಯಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭಾಷಾ ಕಲಿಕೆ ಸಂಕೀರ್ಣ ಸಮಸ್ಯೆಯಾಗಿತ್ತು. 1956ರ ಸಭೆಯಲ್ಲಿ ಸಿಎಬಿಇ 'ತ್ರಿಭಾಷಾ' ಸೂತ್ರವನ್ನು ರೂಪಿಸಿತು. 1961ರಲ್ಲಿ ಮುಖ್ಯಮಂತ್ರಿಗಳ ಸಮ್ಮೇಳನ ಈ ಸೂತ್ರವನ್ನು ಒಪ್ಪಿಕೊಂಡಿತು. ಹಿಂದಿಯೇತರ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಇಂಗ್ಲೀಷ್ ಜತೆ ಹಿಂದಿ ಕಲಿಯಬೇಕು. ಹಿಂದಿ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಇಂಗ್ಲಿಷ್ ಜತೆ ಇನ್ನೊಂದು ಭಾರತೀಯ ಭಾಷೆಯನ್ನು ಅಧ್ಯಯನ ಮಾಡಬೇಕೆಂದು ಸಿಎಬಿಇ ಶಿಫಾರಸ್ಸು ಮಾಡಿತ್ತು. ಇದರ ಅನುಷ್ಠಾನ ಇನ್ನೂ ಸಮರ್ಪಕವಾಗಿ ನಡೆದಿಲ್ಲ ಎನ್ನುವುದು ಬೇರೆ ಮಾತು.

ಶಿಕ್ಷಣದಲ್ಲಿ ಮೌಲ್ಯಗಳು ಮತ್ತು ರಾಷ್ಟ್ರೀಯ ಹಾಗೂ ಭಾವನಾತ್ಮಕ ಸೌಹಾರ್ದತೆ ಬಗ್ಗೆ ಅಧ್ಯಯನ ನಡೆಸಲು ಗಂಗಾಶರಣ್ ಸಿನ್ಹಾ, ಶ್ರೀಪ್ರಕಾಶ ಮತುತ ಸಂಪೂರ್ಣಾನಂದ ನೇತೃತ್ವದಲ್ಲಿ ಮೂರು ಸಮಿತಿಗಳನ್ನು ಸಿಎಬಿಇ ನೇಮಿಸಿತ್ತು. ಸಿಎಬಿಇ ಶಿಫಾರಸಿನ ಮೇಲೆಯೇ ಕೇಂದ್ರ ಸರ್ಕಾರ 1966ರಲ್ಲಿ ಪಠ್ಯಪುಸ್ತಕಗಳ ನಿಲುವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವಂತಿರಬೇಕು ಎಂದು ಆ ಸಮಿತಿ ಶಿಫಾರಸು ಮಾಡಿತ್ತು.

1970ರಲ್ಲಿ ಪಿ.ವಿ.ನರಸಿಂಹರಾವ್ ಆಂಧ್ರಪ್ರದೇಶದ ಶಿಕ್ಷಣ ಸಚಿವರಾಗಿದ್ದಾಗ ಅವರ ಅಧ್ಯಕ್ಷತೆಯಲ್ಲಿ ಸಿಎಬಿಇ ನೇಮಿಸಿದ ಸಮಿತಿಯೇ ಪರೀಕ್ಷಾ ಪದ್ಧತಿಯಲ್ಲಿ ಪ್ರಮುಖ ಸುಧಾರಣೆಗಳನ್ನು ಶಿಫಾರಸು ಮಾಡಿದ್ದು. ಸಮಾನ ಶೈಕ್ಷಣಿಕ ಗುಣಮಟ್ಟ, ಸಾಮಾಜಿಕ ಶೈಕ್ಷಣಿಕ ವ್ಯವಸ್ಥೆಯ ಬಗ್ಗೆ ಸಿಎಬಿಇ ಸಹಮತವನ್ನು ರೂಪಿಸಿತ್ತು. 1968ರ ಈ ನಿರ್ಧಾರ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ.

ಶುಲ್ಕರಹಿತ ಶಾಲೆ, ಸಮಾನ ಗುಣಮಟ್ಟದ ಶಿಕ್ಷಕರು, ಸಮುದಾಯದ ಭಾಗವಹಿಸುವಿಕೆ, ನೆರೆಯ ಶಾಲೆಗಳ ದತ್ತು ಸ್ವೀಕಾರ ಮೊದಲಾದ ಸುಧಾರಣೆಗಳನ್ನೊಳಗೊಂಡ ಸಾಮಾನ್ಯ ಶಾಲಾಪ್ರವೇಶ ನೀತಿಗೂ ಕೂಡಾ ಅದೇ ಗತಿ ಆಗಿದೆ.

ಆದರೆ ಸಿಎಬಿಇ ಕಾನುನಿನ ಮೂಲಕ ರಚಿಸಲಾದ ಸಂಸ್ಥೆ ಅಲ್ಲ. ಮುರಳಿ ಮನೋಹರ ಜೋಷಿ ಅವರು ಸಿಎಬಿಇ ಅನ್ನು ಪಕ್ಕಕ್ಕೆ ಸರಿಸಿದ್ದು ಇದೇ ಕಾರಣ ನೀಡಿ ಸಿಎಬಿಇ ಸದಸ್ಯರೆಲ್ಲಾ ಎನ್‌ಸಿಇಆರ್‌ಟಿ ಸಾಮಾನ್ಯ ಸಭೆಯ ಸದಸ್ಯರಾಗಿರುವ ಕಾರಣ ಸಿಎಬಿಇ ಅಗತ್ಯ ಏನಿದೆ ಎಂದು ಅವರು ವಾದಿಸಿದ್ದರು. ಆದರೆ ಸೆಕೆಂಡರಿ ಶಿಕ್ಷಣಕ್ಕೆ ಹೊಸ ಪಠ್ಯಕ್ರಮವನ್ನು ರೂಪಿಸಿದ ಮತ್ತು ಬಿಬಿಎಸ್‌ಇ ಪಠ್ಯದಲ್ಲಿ ಬದಲಾವಣೆ ಉಂಟು

ಮಾಡಿದ ಎನ್‌ಸಿಇಆರ್‌ಟಿ ಕೂಡಾ ಕಾನೂನು ಮೂಲಕ ರಚನೆಗೊಂಡ ಸಂಸ್ಥೆ ಅಲ್ಲ. ಅದೊಂದು ಖಾಸಗಿ ಸ್ವರೂಪದ ಸಂಸ್ಥೆ.

ಈ ವಿವಾದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾದರೆ, ಕೇಂದ್ರ ಶೈಕ್ಷಣಿಕ ಸಲಹಾ ಮಂಡಳಿ (ಸಿಎಬಿಇ)ಯನ್ನು ರಾಜಕೀಯ ನಿಯಂತ್ರಣದಿಂದ ಮುಕ್ತಗೊಳಿಸಿ ಅದಕ್ಕೆ ಕಾನೂನು ಬದ್ಧವಾಗಿ ಸ್ವಾಯತ್ತ ಸ್ವರೂಪ ನೀಡಬೇಕು. ಇದರಿಂದ 'ಶಿಕ್ಷಣದ ರಾಜಕೀಯ'ವನ್ನು ಕೂಡಾ ತಪ್ಪಿಸಿದಂತಾಗುತ್ತದೆ. ಆಗಲೇ ಸಿಎಬಿಇ ನಿಜವಾದ ಸ್ವಾತಂತ್ರ್ಯ ಪಡೆಯುವುದು.

ಅರ್ಜುನ್ ಸಿಂಗ್ ಮತ್ತು ಮುರಳಿ ಮನೋಹರ ಜೋಷಿ ನಡುವೆ ಎರಡು ಧ್ರುವಗಳ ಅಂತರ ಇದೆ. ಇಬ್ಬರೂ ಭಿನ್ನ ವಿಚಾರಧಾರೆಗಳನ್ನು 'ವಿವಾಹ' ಆದವರು. ಆದರೆ ಸಚಿವ ಖಾತೆಯ ಹೊರತಾಗಿ ಇಬ್ಬರಲ್ಲಿಯೂ ಸಮಾನವಾದ ಅಂಶವೊಂದಿದೆ. ಅದು ಅವರ ವೈಯಕ್ತಿಕ ರಾಜಕೀಯ ಹತಾಶೆ.

ಮುರಳಿ ಮನೋಹರ ಜೋಷಿ ಅವರು ವಾಜಪೇಯಿ ನಂತರದ ಎರಡನೇ ಸ್ಥಾನಕ್ಕಾಗಿ ಹಂಬಲಿಸುತ್ತಲೇ ಐದು ವರ್ಷಗಳನ್ನು ಕಳೆದವರು. ಅರ್ಜುನ್‌ಸಿಂಗ್ ಕೂಡಾ ಸೋನಿಯಾಗಾಂಧಿ ನಂತರದ ಎರಡನೇ ಸ್ಥಾನ ತಮ್ಮದೆಂದೇ ಕನಸು ಕಂಡವರು. ಜೋಷಿ ಅವರಿಗೆ ಅಡ್ವಾಣಿ ದಾರಿ ಬಿಟ್ಟು ಕೊಡಲೇ ಇಲ್ಲ. ಅರ್ಜುನ್ ಸಿಂಗ್ ದಾರಿ ಮಧ್ಯೆ ಸೋನಿಯಾಗಾಂಧಿಯವರೇ ಮನಮೋಹನ್‌ಸಿಂಗ್ ಅವರನ್ನು ತಂದು ನಿಲ್ಲಿಸಿದರು. ಅರ್ಜುನ್‌ಸಿಂಗ್ ಅಗತ್ಯಕ್ಕಿಂತ ಹೆಚ್ಚು ಗದ್ದಲ ಉಂಟು ಮಾಡುತ್ತಿರುವುದಕ್ಕೆ ರಾಜಕೀಯ ಹತಾಶೆ ಕಾರಣ ಎನ್ನುವುದನ್ನು ಯಾರು ಒಪ್ಪದಿದ್ದರೂ ಪ್ರಣಬ್ ಮುಖರ್ಜಿ ಒಪ್ಪುತ್ತಾರೆ.

O

(16-08-2004)

ಕಚೋರಿಯಿಂದ ಇಡ್ಲಿ ಸಾಂಬಾರ್ ಕಡೆಗೆ...

ಮೈತ್ರಿ ರಾಜಕಾರಣದ ಹೊಸ ಯುಗದಲ್ಲಿ ಸೈದ್ಧಾಂತಿಕ ಆಷಾಢಭೂತಿತನ ತಲೆತಗ್ಗಿಸಬೇಕಾದ ದುರ್ಗುಣ ಅಲ್ಲ, ಅದು ರಾಜಕೀಯ ಯಶಸ್ಸಿನ ಇನ್ನೊಂದು ಸರಳ ಸೂತ್ರ. ಡಿಎಂಕೆಯ ರಾಜಕಿಯ ಯಶಸಿನಲ್ಲಿಯೂ ಇದೇ ಸೂತ್ರ ಕೆಲಸ ಮಾಡಿದೆ.

ಗಂಗೆ-ಯಮುನೆಯ ದಂಡೆಯಲ್ಲಿಯೇ ದೆಹಲಿ ರಾಜಕೀಯ ಬೀಡುಬಿಟ್ಟ ಕಾಲ ಇತ್ತು. ಈಗ ಅದು ಕಾವೇರಿ-ಹೂಗ್ಲಿ ನದಿದಂಡೆ ಕಡೆಗೆ ಸರಿದಿದೆ. ಜಿಲೇಬಿ-ಕಚೋರಿಗಳು ಸಂಸತ್ ಭವನದ ಕ್ಯಾಂಟೀನಿನಲ್ಲಿಯೂ ಈಗ ಅಪರೂಪ. ಈಗ ಏನಿದ್ದರೂ ರಸಗುಲ್ಲಾ (ರೋಸೊಗುಲ್ಲಾ?)-ಇಡ್ಲಿ ಸಾಂಬಾರ್ ಕಾಲ. ಕಳೆದ ವಾರ ಲೋಕಸಭೆಯಲ್ಲಿ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನ ಸದಸ್ಯರು ಮುಷ್ಠಕಾಳಗಕ್ಕೆ ಎದುರು-ಬದರು ನಿಂತದ್ದು ಬದಲಾದ ಕಾಲವನ್ನು ನೆನಪಿಸುವ ಮತ್ತೊಂದು ಸೂಚನೆ. ಎಡಪಕ್ಷಗಳಿಗೆ ಸದ್ದು-ಗದ್ದಲ ಹಳೆಯ ಅಭ್ಯಾಸ. ಸರ್ಕಾರದ ಜುಟ್ಟು ಕೈಗೆ ಸಿಕ್ಕಿದಷ್ಟೇ ಅದರ ಪಾಲಿನ ಹೊಸ ಬೆಳವಣಿಗೆ. ಆದರೆ 'ಉಗ್ರಗಾಮಿ' ಅವತಾರದಲ್ಲಿ ಯಶಸ್ಸನ್ನು ಕಾಣುತ್ತಿರುವ ಡಿಎಂಕೆ ಎಲ್ಲರ ಕಣ್ಣು ಚುಚ್ಚತೊಡಗಿದೆ.

ಎಂಜಿಆರ್ ಕಾಲದಿಂದಲೇ ತಮಿಳುನಾಡು ಕೇಂದ್ರ ಸರ್ಕಾರದ ಜತೆ ಪ್ರೀತಿ-ದ್ವೇಷಗಳ ರಾಜಕಿಯ ಆಟವನ್ನು ಆಡುತ್ತಾ ಬಂದಿದ್ದರೂ ಇತ್ತೀಚಿನ ದಿನಗಳಲ್ಲಿ ಡಿಎಂಕೆ ಹೆಚ್ಚು ಜಾಣ್ಮೆಯಿಂದ ಈ ಆಟ ಆಡುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ

ಕಾಂಗ್ರೆಸ್ ಕೈಹಿಡಿದು ಎಐಎಡಿಎಂಕೆಯನ್ನು ಧೂಳೀಪಟ ಮಾಡಿದ ಡಿಎಂಕೆ ಅದೇ ವಿಜಯೋನ್ಮಾದದಲ್ಲಿ ಮಿತ್ರ ಪಕ್ಷದ ನಡುಬಗ್ಗಿಸಿ ಬಯಸಿದ ಸಚಿವ ಖಾತೆಗಳನ್ನು ಪಡೆಯಿತು. ಸರ್ಕಾರದಿಂದಲೇ ಹೊರಗುಳಿಯುವ ಬೆದರಿಕೆ ಹಾಕಿದ್ದ ಡಿಎಂಕೆ ನಾಯಕ ಎಂ.ಕರುಣಾನಿಧಿ ಅವರನ್ನು ಒಲಿಸಿಕೊಳ್ಳಲು ಸೋನಿಯಾಗಾಂಧಿಯೇ ಅವರು ತಂಗಿದ್ದ ಹೋಟೆಲ್‌ಗೆ ಹೋಗಬೇಕಾಯಿತು. ಕೇಳಿದ್ದ ಸಚಿವ ಖಾತೆಗಳ ಜತೆಯಲ್ಲಿ ತಮಿಳು ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನವಮಾನ ಬೋನಸ್ ರೂಪದಲ್ಲಿ ಅವರಿಗೆ ದೊರೆಯಿತು. ಲೋಕಸಭೆಯಲ್ಲಿ 40 ಸದಸ್ಯ ಬಲದ ತಮಿಳುನಾಡು 13 ಸಚಿವರನ್ನು ಹೊಂದಿದೆ. ನಮ್ಮವರು ಮೂವರೇ ಎಂದು ಕೊರಗುತ್ತಿರುವ ಕರ್ನಾಟಕ, ಉತ್ತರಪ್ರದೇಶವನ್ನು ನೋಡಿ ಸಮಾಧಾನಪಟ್ಟುಕೊಳ್ಳಬಹುದು. 77 ಸದಸ್ಯ ಬಲದ ಆ ರಾಜ್ಯಕ್ಕೆ ಸೇರಿದ ಸಚಿವರ ಸಂಖ್ಯೆ ಕೂಡಾ ಮೂರು. ಮುಂಡು-ವೇಷ್ಟಿಗಳು, ಕುರ್ತಾ-ಪೈಜಾಮಗಳನ್ನು ಹಿಂದಕ್ಕೆ ತಳ್ಳಿರುವ ಹೊಸ ಕತೆ ಇದು.

ಡಿಎಂಕೆ-ಪಿಎಂಕೆಗಳ ರಾಜಕೀಯ ಯಶಸ್ಸಿಗೆ ಕೇವಲ ಸಂಖ್ಯೆಯ ಬಲ ಮತ್ತು ಮೈತ್ರಿ ರಾಜಕಾರಣದ ದೌರ್ಬಲ್ಯವಷ್ಟೇ ಕಾರಣವೇ? ದ್ರಾವಿಡ ರಾಜಕಾರಣವನ್ನು ಸಮೀಪದಿಂದ ನೋಡಿದರೆ ಬೇರೆ ಕಾರಣಗಳೂ ಕಾಣುತ್ತಿವೆ. ಬಹಳ ಮುಖ್ಯವಾಗಿ ಅರಿವಿಗೆ ಬರುವುದು, ದ್ರಾವಿಡ ರಾಜಕಾರಣದ ಸೈದ್ಧಾಂತಿಕ ಆಷಾಢ ಭೂತಿತನ. ಮೈತ್ರಿ ರಾಜಕಾರಣದ ಹೊಸ ಯುಗದಲ್ಲಿ ಇದು ತಲೆತಗ್ಗಿಸಬೇಕಾದ ದುರ್ಗುಣ ಅಲ್ಲ. ರಾಜಕೀಯ ಯಶಸ್ಸಿನ ಇನ್ನೊಂದು ಸರಳ ಸೂತ್ರ. ಉತ್ತರ ಭಾರತೀಯರನ್ನು ಸಾರಾಸಗಟಾಗಿ ಆರ್ಯರೆಂದು ಮೂದಲಿಸುತ್ತಿದ್ದ, ದೆಹಲಿ ಎಂದರೆ ಉರಿದುಬೀಳುತ್ತಿದ್ದ, ಪ್ರತ್ಯೇಕ 'ದ್ರಾವಿಡಸ್ಥಾನ'ಕ್ಕಾಗಿ ಹೋರಾಟ ನಡೆಸಿದ್ದ, ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿದಾಗ ಬೆಂಕಿ ಹಚ್ಚಿಕೊಂಡು ಆತ್ಮಾರ್ಪಣೆ ನಡೆಸಿದ್ದ ತಮಿಳರನ್ನೇ ಇವರು ಪ್ರತಿನಿಧಿಸುತ್ತಿದ್ದಾರೆ ಎಂದು ಹೇಳಲು ಹಿಂಜರಿಯುವಷ್ಟು ದೆಹಲಿಯಲ್ಲಿ ದ್ರಾವಿಡ ರಾಜಕಾರಣಿಗಳು ಬದಲಾಗಿದ್ದಾರೆ.

ಹಿಂದೆ ಜಯಲಲಿತಾ ಅಧಿಕಾರಕ್ಕೆ ಬಂದ ಹೊಸದರಲ್ಲಿ ರಾಜ್ಯದ ಎಲ್ಲ ಡಿಸ್ಕೋ ಕೇಂದ್ರಗಳನ್ನು ಮುಚ್ಚಿಸಿದ್ದರು. ಸೈಬರ್ ಕೆಫೆಗಳ ಮೇಲೆ ದಾಳಿ ನಡೆಸಿದ್ದರು, ಅರೆಬೆತ್ತಲೆ ಡಾನ್ಸ್ ಆರೋಪದ ಹಿನ್ನೆಲೆಯಲ್ಲಿ ಹೋಟೇಲ್‌ಗಳ ಲೈಸೆನ್ಸ್ ರದ್ದುಗೊಳಿಸಿದ್ದರು. ಡಿಎಂಕೆ ಅಧಿಕಾರ ಬಂದ ಮೇಲೆ ಅಣ್ಣಾ ವಿಶ್ವವಿದ್ಯಾಲಯದಲ್ಲಿ ಮೊಬೈಲ್ ಬಳಕೆ ಮಾತ್ರವಲ್ಲ, ವಿದ್ಯಾರ್ಥಿನಿಯರು ಜೀನ್ಸ್ ಹಾಕುವುದನ್ನು ಕೂಡಾ ಕುಲಪತಿಗಳು ನಿಷೇಧಿಸಿದ್ದರು. ನಟಿ ಖುಷ್ಬೂ ವಿವಾಹಪೂರ್ವ ಲೈಂಗಿಕ ಸಂಪರ್ಕದ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳಿಂದ ರಾಜ್ಯಾದ್ಯಂತ ಪ್ರತಿಭಟನೆ ಭುಗಿಲೆದ್ದಿತ್ತು. ಮುಖ್ಯಮಂತ್ರಿ ಎಂ.ಕರುಣಾನಿಧಿ ಅಣ್ಣಾ ದೊರೈ ಕಾಲದ ಅಜೆಂಡಾವನ್ನಿಟ್ಟುಕೊಂಡು ಭಾಷಣ ಮಾಡುತ್ತಿದ್ದಾರೆ. ಐದನೇ ತರಗತಿವರೆಗೆ

ತಮಿಳು ಭಾಷಾ ಮಾಧ್ಯಮವನ್ನು ಹಂತ-ಹಂತವಾಗಿ ಜಾರಿಗೆ ತರುವ ಘೋಷಣೆ ಮಾಡಿದ್ದಾರೆ. ಹೈಕೋರ್ಟ್‌ನಲ್ಲಿ ತಮಿಳನ್ನು ಅಧಿಕೃತ ಭಾಷೆಯಾಗಿ ಮಾಡಲು ಕೇಂದ್ರ ಸರ್ಕಾರದ ಜತೆ ಗುದ್ದಾಡುತ್ತಿದ್ದಾರೆ.

ಅದೇ ಡಿಎಂಕೆ ದೆಹಲಿಯಲ್ಲಿ ಭಿನ್ನ ರಾಜಕೀಯ ಭಾಷೆಯಲ್ಲಿ ಮಾತನಾಡುತ್ತದೆ. ತಮಿಳು ರಾಜಕಾರಣಿಗಳಿಗೆ ಈಗ ದೆಹಲಿ ದೂರದ್ದೂ ಅಲ್ಲ, ಬೇಡದ್ದೂ ಅಲ್ಲ. ಇವರಲ್ಲಿ ಯಾರೂ ಈಗ ತಪ್ಪಿಯೂ ಆರ್ಯ-ದ್ರಾವಿಡ ಸಂಘರ್ಷವನ್ನು ಪ್ರಸ್ತಾಪಿಸುವುದಿಲ್ಲ. ರಾಜೀವ್‌ಗಾಂಧಿ ಹತ್ಯೆಯಲ್ಲಿ ತಮ್ಮನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದ್ದ ಕಾಂಗ್ರೆಸ್ ಆಗಲಿ, ಕೋಮುವಾದಿ ರಾಜಕಾರಣದ ಆರೋಪ ಹೊತ್ತ ಬಿಜೆಪಿಯಾಗಲಿ, ಡಿಎಂಕೆಗೆ ಈಗ ಅಸ್ಪೃಶ್ಯ ಅಲ್ಲ. ಎಲ್‌ಟಿಟಿಇಗೆ ಆಶ್ರಯ ನೀಡಿದ ಆರೋಪದ ಮೇಲೆ ಬಂಧಿತರಾಗಿದ್ದ ಸುಬ್ಬಲಕ್ಷ್ಮಿ ಎಸ್. ಜಗದೀಶನ್ ಈಗ ಕೇಂದ್ರದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವೆ. ದ್ರಾವಿಡ ರಾಜಕಾರಣದ ಹೊಸ ಜನಾಂಗಕ್ಕೆ ಹಿಂದಿ ಅಪಥ್ಯವೇನಲ್ಲ, ಅದೇನಿದ್ದರೂ ತಮಿಳುನಾಡಿಗೆ ಸೀಮಿತ. ದೆಹಲಿ ದರ್ಬಾರ್‌ನಲ್ಲಿ ತಮಿಳು-ಹಿಂದಿ ಭಾಯಿಭಾಯಿ. ಈ ಜನಾಂಗದ ಪ್ರತಿನಿಧಿ ದಯಾನಿಧಿ ಮಾರನ್ ಹಿಂದಿ ಮೂಲಕವೇ ಉತ್ತರ ಭಾರತದ ರಾಜಕಾರಣಿಗಳ ನಡುವೆ ಜನಪ್ರಿಯಗೊಂಡಿರುವುದು.

ಡಿಎಂಕೆಯಲ್ಲಿ ಸ್ಪಷ್ಟವಾಗಿ ಮೂರು ಗುಂಪಿನ ರಾಜಕಾರಣಿಗಳು ಕಾಣುತ್ತಿದ್ದಾರೆ. ಮೊದಲನೆ ಗುಂಪಿನಲ್ಲಿ ಆಗಲೇ ಶರಶಯ್ಯೆ ಏರಲು ಸಿದ್ಧವಾಗಿರುವ ಕರುಣಾನಿಧಿ ಇದ್ದರೆ, ತಳಮಟ್ಟದ ಸಂಘಟನೆಯಲ್ಲಿ ತೊಡಗಿರುವ ಎಂ.ಕೆ.ಸ್ಟಾಲಿನ್ ಎರಡನೆ ಗುಂಪಿನ ನಾಯಕ. ಮೂರನೆಯ ಗುಂಪಿನ ಪ್ರತಿನಿಧಿ - ಸೋನಿಯಾಗಾಂಧಿ ಜತೆ ಮಾತ್ರವಲ್ಲ ಅಂಬಾನಿ - ಬಿರ್ಲಾಗಳ ದರ್ಬಾರಿನಲ್ಲಿಯೂ ಹಿಂಜರಿಕೆ -ಕೀಳರಿಮೆ ಇಲ್ಲದೆ ಬೆರೆಯಬಲ್ಲ, ನಿರರ್ಗಳವಾಗಿ ಇಂಗ್ಲಿಷ್ ಮಾತನಾಡಬಲ್ಲ ದಯಾನಿಧಿ ಮಾರನ್ ಇದ್ದಾರೆ. ವಿಶ್ವದಲ್ಲಿ ಇರುವುದೊಂದೇ ತಮಿಳುನಾಡು ಎಂಬಂತೆ ಅದೇ ಹಳೆಬಾವಿಯಲ್ಲಿ ಸುತ್ತುತ್ತಿದ್ದ ದ್ರಾವಿಡ ರಾಜಕಾರಣಿಗಳು ಈಗ ದೇಶ ಸುತ್ತುತ್ತಿದ್ದಾರೆ, ಕೋಶ ಓದುತ್ತಿದ್ದಾರೆ. ಹೊಸ ಬದಲಾವಣೆಗೆ ಮೈಯೊಡ್ಡಿಕೊಂಡಿದ್ದಾರೆ. ಯುಪಿಎ ಸಚಿವ ಸಂಪುಟದಲ್ಲಿರುವ ಸಚಿವರ ಪೈಕಿ ಉನ್ನತ ಶಿಕ್ಷಣ ಹೊಂದಿರುವ ಮತ್ತು ತಮಗೊಪ್ಪಿಸಿರುವ ಖಾತೆಗಳಲ್ಲಿ ಚುರುಕಾಗಿ ಕೆಲಸಮಾಡುತ್ತಿರುವ ಇಬ್ಬರು ಯುವರಾಜಕಾರಣಿಗಳು ತಮಿಳರು. ಒಬ್ಬರು ದಯಾನಿಧಿ ಮಾರನ್ ಇನ್ನೊಬ್ಬರು ಡಾ.ಅನ್ಬುಮಣಿ ರಾಮದಾಸ್, ಇನ್ನೊಬ್ಬ ಯುವ ಸಚಿವ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಎ.ರಾಜಾ, ಕಾನೂನು ಮತ್ತು ಗಣಿತ ಪದವೀಧರ.

ದೆಹಲಿಗೆ ಬಂದರೂ ತಮಿಳು ಬಿಟ್ಟು ತಪ್ಪಿಯೂ ಬೇರೆ ಭಾಷೆ ಮಾತನಾಡದ, ಪತ್ರಿಕಾಗೋಷ್ಠಿಗೆ ಬಂದವರಿಗೆ ಕೂರಲು ಕುರ್ಚಿ, ಕುಡಿಯಲು ನೀರು ಕೂಡಾ ನೀಡದೆ ಪತ್ರಕರ್ತರನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದವರು ಡಿಎಂಕೆ ನಾಯಕ ಎಂ.ಕರುಣಾನಿಧಿ. ಈಗಲೂ ಅವರ ವರ್ತನೆಯಲ್ಲಿ ಹೆಚ್ಚೇನೂ ಬದಲಾವಣೆಯಾಗಿಲ್ಲ.

ಆದರೆ ಹೊಸ ತಲೆಮಾರಿನ ರಾಮದಾಸ್, ಮಾರನ್‌ಗಳು ದೆಹಲಿ ಪತ್ರಕರ್ತರನ್ನು ಪಂಚತಾರಾ ಶೈಲಿಯಲ್ಲಿ ಓಲೈಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಕುಟುಂಬ ರಾಜಕೀಯದ ಕಳಂಕ, ಸೈದ್ಧಾಂತಿಕ ಆಷಾಢಭೂತಿತನದ ಆರೋಪವನ್ನು ಬದಿಗಿಟ್ಟು ನೋಡಲು ಸಾಧ್ಯವಾದರೆ, ಭವಿಷ್ಯಕ್ಕೂ ಸಲ್ಲುವಂತೆ ಡಿಎಂಕೆ ತನ್ನ ಸಂಘಟನೆಯನ್ನು ಅಣಿಗೊಳಿಸುತ್ತಿರುವುದು ಬೇರೆ ಪ್ರಾದೇಶಿಕ ಪಕ್ಷಗಳಿಗೆ ಪಾಠದಂತೆ ಕಾಣುತ್ತಿದೆ. ಕರ್ನಾಟಕದ ರಾಜಕಾರಣಿಗಳಿಗೂ ಇದು ನೆರೆಮನೆ ಪಾಠ.

ಯುಪಿಎ ಸರ್ಕಾರದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ಬಿಡುಗಡೆ ಮಾಡಿದಾಗ ಸೋನಿಯಾಗಾಂಧಿ ಪಕ್ಕದಲ್ಲಿ ನಿಂತಿದ್ದ ಸಚಿವ ದಯಾನಿಧಿ ಮಾರನ್ ಈವರೆಗೆ ಆ ಸ್ಥಾನ ಬಿಟ್ಟು ಕದಲಿಲ್ಲ ಎಂಬ ತಮಾಷೆಯ ಮಾತಿದೆ. ಮಾರನ್ ಈಗ ಸೋನಿಯಾಗಾಂಧಿ ಅವರು 'ಅಚ್ಚುಮೆಚ್ಚಿನ ಹುಡುಗ'.

ಈ ಅಚ್ಚುಮೆಚ್ಚಿನ ಸಂಬಂಧದ ಹಿಂದೆ ಇಬ್ಬರ ರಾಜಕೀಯ ಸ್ವಾರ್ಥ ಕೂಡಾ ಇದೆ ಎನ್ನುವುದು ಪುಕಾರು. ಡಿಎಂಕೆಯೊಳಗಿನ ಎರಡನೆ ತಲೆಮಾರಿನ ನಾಯಕರ ನಡುವಿನ ಸಂಘರ್ಷದಲ್ಲಿ ಸ್ಟಾಲಿನ್ ಕೈಮೇಲಾದರೆ, ದಯಾನಿಧಿಗೂ ಕಾಲೂರಲು ಒಂದು ಜಾಗ ಬೇಕಾಗಬಹುದು.

ದ್ರಾವಿಡಪಕ್ಷದ ಬಾಲಂಗೋಚಿಯಾಗಿ ಸುಸ್ತಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಸ್ವಂತ ಕಾಲಮೇಲೆ ನಿಲ್ಲಲು ದ್ರಾವಿಡ ನಾಯಕೊಬ್ಬನ ಅಗತ್ಯ ಕೂಡಾ ಇದೆ.

(19-03-2007)

ಎಲ್ಲ ಲಾಭಕ್ಕೆ

ರಾಜಕಿಯ ವ್ಯಾಪಾರವಾದಾಗ ನಷ್ಟಕ್ಕೀಡಾಗಲು ಯಾರು ಇಷ್ಟಪಡುತ್ತಾರೆ? ಎಲ್ಲರ ಕಣ್ಣು ಲಾಭದತ್ತಲೇ ಹರಿಯುತ್ತದೆ. ಆ ಕಣ್ಣುಗಳಿಗೆ ಕೆಂಪು, ಹಳದಿ, ಕೇಸರಿ, ಹಸುರು, ನೀಲಿ ಎನ್ನುವ ಭೇದ ಇರುವುದಿಲ್ಲ. ಬದಲಾಗುತ್ತಿರುವ 'ಜನಸೇವೆ'ಯ ಹೊಸ ವ್ಯಾಖ್ಯಾನದಿಂದಾಗಿಯೇ ಜನಪ್ರತಿನಿಧಿಗಳ ಲಾಭದ ಹುದ್ದೆಯ ವಿವಾದ ಪಕ್ಷಾತೀತವಾಗಿ ಎಲ್ಲರನ್ನು ಸ್ನಾನದ ಮನೆಯಲ್ಲಿ ತಂದು ನಿಲ್ಲಿಸಿದೆ. ಅಲ್ಲಿ ಎಲ್ಲರೂ ಬೆತ್ತಲೆ.

ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಸದಾ ನೈತಿಕತೆಯ ಉನ್ನತ ಪೀಠದಲ್ಲಿಯೇ ವಿರಾಜಮಾನರಾಗಿದ್ದವರು ಹಿರಿಯ ಕಮ್ಯುನಿಸ್ಟ್ ನಾಯಕ ಸೋಮನಾಥ ಚಟರ್ಜಿ. ಆದರೆ ಜನಪ್ರತಿನಿಧಿಗಳ ನೈತಿಕತೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಸಾರ್ವಜನಿಕರಲ್ಲಿ ಮೂಡಿಸಿದ ವಿಷಯವೊಂದರ ಚರ್ಚೆಯ ಸಂದರ್ಭದಲ್ಲಿ, ಲೋಕಸಭಾಧ್ಯಕ್ಷರ ಪೀಠದಲ್ಲಿ ಕೂರಲು ಸಾಧ್ಯವಾಗದಿರುವ ಅವರ ಅಸಹಾಯಕತೆಗೆ ಏನನ್ನಬೇಕು? ಪಶ್ಚಿಮ ಬಂಗಾಳದ ಶ್ರೀನಿಕೇತನ ಶಾಂತಿ ನಿಕೇತನ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕುರ್ಚಿಯಲ್ಲಿ ಅಂಥದ್ದೇನಿದೆ ಸೋಮನಾಥ ಬಾಬು?

ಸೋಮನಾಥ ಬಾಬು ಒಬ್ಬರೇ ಅಲ್ಲ. ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಮರು ಪರಿಶೀಲನೆಗಾಗಿ ವಾಪಸ್ ಕಳುಹಿಸಿದ ಲಾಭದ ಹುದ್ದೆ ಮಸೂದೆಯನ್ನು ಎರಡನೆಯ ಬಾರಿ ಸಂಸತ್ ಅಂಗೀಕರಿಸದೆ ಹೋಗಿದ್ದರೆ ಅವರ ಪಕ್ಷದ ಹದಿನೆಂಟು

ಸಂಸತ್ ಸದಸ್ಯರು ಮನೆಗೆ ಹೋಗಬೇಕಾಗಿತ್ತು. ಲಾಭದ ಹುದ್ದೆ ಮಸೂದೆ ವಿನಾಯಿತಿ ನೀಡಿದ 55 ಹುದ್ದೆಗಳಲ್ಲಿ 17 ಪಶ್ಚಿಮಬಂಗಾಳ ಸರ್ಕಾರ ಮತ್ತು ಒಂದು ತ್ರಿಪುರ ಸರ್ಕಾರಕ್ಕೆ ಸೇರಿದ್ದು. ಆ ಹುದ್ದೆಗಳನ್ನು ಆಕ್ರಮಿಸಿಕೊಂಡು ಕೂತವರು ಸಿಪಿಎಂನ ಹದಿನೆಂಟು ಎಂ.ಪಿಗಳು. ಇವರ ವಿರುದ್ಧದ ದೂರಿನ ಬಗ್ಗೆ ಜುಲೈ 31ರೊಳಗೆ ವಿವರಣೆ ನೀಡಬೇಕೆಂದು ಚುನಾವಣಾ ಆಯೋಗ ಪಶ್ಚಿಮ ಬಂಗಾಳ ಸರ್ಕಾರಕ್ಕೆ ತಿಳಿಸಿತ್ತು. ಎಡಪಕ್ಷಗಳ ಪ್ರಾಣವಾಯುವಿನಿಂದಾಗಿ ಉಸಿರಾಡುತ್ತಿರುವ ಯುಪಿಎ ಸರ್ಕಾರ ಮಸೂದೆ ಅಂಗೀಕಾರಕ್ಕಾಗಿ ಪಡುತ್ತಿದ್ದ ಅವಸರಕ್ಕೆ ಇದೂ ಒಂದು ಕಾರಣ.

ಲಾಭದ ಹುದ್ದೆ ಮಸೂದೆಯ ಮರು ಅಂಗೀಕಾರವನ್ನು ಸಂಸತ್‌ನ ಉಭಯ ಸದನಗಳಲ್ಲಿ ವಿರೋಧಿಸಿ ಭಾರತೀಯ ಜನತಾ ಪಕ್ಷ ತಲೆಗೇರಿಸಿಕೊಂಡಿರುವ ನೈತಿಕತೆಯ ಕಿರೀಟದಲ್ಲಿಯೂ ತೂತುಗಳಿವೆ. ಕೇಂದ್ರದಲ್ಲಿ ಕೈಗೊಂಡ ನಿಲುವಿಗೆ ಜಾರ್ಖಂಡ್ ರಾಜ್ಯದಲ್ಲಿಯೂ ಆ ಪಕ್ಷ ಬದ್ಧವಾಗಿದ್ದರೆ ಅಲ್ಲಿನ ಬಿಜೆಪಿ ಸರ್ಕಾರ ಪತನಗೊಂಡು 4 ತಿಂಗಳಾಗಬೇಕಿತ್ತು. ಯುಪಿಎ ಸರ್ಕಾರ ರೂಪಿಸಿದ್ದ ಮಸೂದೆಯ ಮಾದರಿಯಲ್ಲಿಯೇ ಜಾರ್ಖಂಡ್‌ನ ಬಿಜೆಪಿ ಸರ್ಕಾರ ಕೂಡಾ ಲಾಭದ ಹುದ್ದೆಗಳನ್ನು ಹೊಂದಿರುವ 17 ಶಾಸಕರನ್ನು ಉಳಿಸಿಕೊಳ್ಳಲು ಮಸೂದೆ ರೂಪಿಸಿದೆ. ರಾಷ್ಟ್ರಪತಿಗಳ ರೀತಿಯಲ್ಲಿಯೇ ಆ ರಾಜ್ಯದ ರಾಜ್ಯಪಾಲ ಸೈಯ್ಯದ್ ಸಿಬ್ತೆ ರಜ್ವಿ ಅದಕ್ಕೆ ಅಂಕಿತ ಹಾಕದೆ ವಾಪಸ್ ವಿಧಾನಸಭೆಗೆ ಕಳುಹಿಸಿದ್ದಾರೆ. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹ್ಹಾಣ್ ಕೂಡಾ 'ಲಾಭದ ಹುದ್ದೆ'ಯೊಂದರಲ್ಲಿ ಕೂತಿದ್ದಾರೆ.

ಕುರ್ಚಿ ರಕ್ಷಣೆಗಾಗಿ ಸಂವಿಧಾನವನ್ನೇ ಬುಡಮೇಲು ಮಾಡಲು ಹಿಂಜರಿಯದ ಇಂದಿರಾಗಾಂಧಿಯವರಂತಹ ನಾಯಕಿಯರು ಆಗಿಹೋದ ಕಾಂಗ್ರೆಸ್ ಪಕ್ಷದಲ್ಲಿ ಈ ರೀತಿಯ ನೈತಿಕ ಸವಾಲುಗಳಿಗೆ ಜಾಗ ಇಲ್ಲ. 'ನಿರುದ್ಯೋಗಿ'ಯಾಗಿ ಕೂತಿರುವ ತಮ್ಮ ನಾಯಕಿ ಸೋನಿಯಾ ಗಾಂಧಿಯವರನ್ನು ಆದಷ್ಟು ಶೀಘ್ರದಲ್ಲಿ 'ರಾಷ್ಟ್ರೀಯ ಸಲಹಾ ಸಮಿತಿ'ಯ ಕುರ್ಚಿಯಲ್ಲಿ ಕಾಣಬೇಕೆಂಬ ಹಂಬಲ ಆ ಪಕ್ಷದ ನಾಯಕರಿಗೆ. ಲಾಭದ ಹುದ್ದೆಯ ವಿವಾದಕ್ಕೆ ಕಾರಣರಾದ ನಟಿ ಜಯಾಬಚ್ಚನ್ ರಾಜೀನಾಮೆಯ ನಂತರ ಕಾಂಗ್ರೆಸ್ ಪಕ್ಷದ ಮೇಲೇರಿ ಹೋಗಿದ್ದ ಸಮಾಜವಾದಿ ಪಕ್ಷ ಈಗ ತುಟಿಪಿಟಕೆನ್ನುತ್ತಿಲ್ಲ. ರಾಜ್ಯಸಭಾ ಸದಸ್ಯತ್ವದ ಜತೆ ಉತ್ತರಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಆ ಪಕ್ಷದ 'ದೊಡ್ಡಬಾಯಿ' ಅಮರ್‌ಸಿಂಗ್ ಬಾಯಿಬಿಡುತ್ತಿಲ್ಲ. ಪ್ರಾಧಿಕಾರದ ಅಧ್ಯಕ್ಷ ಸ್ಥಾನವೂ ಸೇರಿದಂತೆ ಏಳು ಹುದ್ದೆಗಳಿಗೆ 'ಲಾಭದ ಹುದ್ದೆ'ಯ ಕಾನೂನಿನಿಂದ ವಿನಾಯಿತಿ ನೀಡಬೇಕೆಂಬ ಸಮಾಜವಾದಿ ಪಕ್ಷದ ಕೋರಿಕೆಯನ್ನು ಯುಪಿಎ ಸರ್ಕಾರ ಒಪ್ಪಿಕೊಂಡ ಮೇಲೆ ಬಾಯಿ ಬಿಡಲು ಏನು ಉಳಿದಿದೆ?

'ಅನರ್ಹತೆಗೆ ಯೋಗ್ಯ ಅಲ್ಲ ಎಂದು ಸಂಸತ್ ಕಾನೂನಿನ ಮೂಲಕ ಘೋಷಿಸಿದ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳನ್ನು ಯಾವನೇ ವ್ಯಕ್ತಿ ಕೇಂದ್ರ ಇಲ್ಲವೇ ರಾಜ್ಯದಲ್ಲಿ ಹೊಂದಿದ್ದರೆ ಆತ ಸಂಸತ್ ಇಲ್ಲವೇ ವಿಧಾನಮಂಡಲದ ಸದಸ್ಯನಾಗಲು ಅನರ್ಹನಾಗುತ್ತಾನೆ' ಎಂದು ಸಂವಿಧಾನದ 102 (1) ನೇ ವಿಧಿ ಹೇಳಿದೆ. ಜನಪ್ರತಿನಿಧಿಗಳು ಭಯ, ಪಕ್ಷಪಾತ ಇಲ್ಲದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಬೇಕು ಎನ್ನುವುದು ಸಂವಿಧಾನದ ಈ ವಿಧಿಯ ಉದ್ದೇಶ.

ಸಂವಿಧಾನದ ಆಶಯದ ಈಡೇರಿಕೆಯ ಜತೆಯಲ್ಲಿಯೇ ಕೆಲವು ಹುದ್ದೆಗಳಿಗೆ ವಿನಾಯಿತಿ ಪಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರ 1954ರಲ್ಲಿ ಭಾರ್ಗವ ಸಮಿತಿಯನ್ನು ರಚಿಸಿತು. ನಾಲ್ಕು ವರ್ಷಗಳ ನಂತರ ಆ ಸಮಿತಿ ನೀಡಿದ ವರದಿ ಆಧಾರದಲ್ಲಿಯೇ 1959 ರ ಸಂಸತ್ (ಅನರ್ಹತೆಗೆ ತಡೆ) ಕಾನೂನು ಜಾರಿಗೆ ಬಂತು. ಅದರಲ್ಲಿ ಕೆಲವು ಹುದ್ದೆಗಳನ್ನು ಹೆಸರಿಸಿ ಅವುಗಳಿಗೆ 'ಲಾಭದ ಹುದ್ದೆ'ಗಳ ಪಟ್ಟಿಯಿಂದ ವಿನಾಯಿತಿ ನೀಡಿತು. ಅದೇ ಮಾದರಿಯಲ್ಲಿ ರಾಜ್ಯಗಳು ಕೂಡಾ ತಮ್ಮದೇ ಕಾನೂನು ರಚಿಸಿಕೊಂಡವು. ಆದರೆ ರಾಜ್ಯದ ಕಾನೂನಿನ ಬಲದಿಂದ ಸಂಸತ್ ಸದಸ್ಯರು ರಾಜ್ಯಸರ್ಕಾರದ ಹುದ್ದೆಗಳನ್ನು ಸ್ವೀಕರಿಸುವಂತಿಲ್ಲ. ಅದಕ್ಕಾಗಿ ಕೇಂದ್ರ ಕಾನೂನಿನ ರಕ್ಷಣೆ ಬೇಕು.

ಕೇಂದ್ರದ ಕಾನೂನಿಗೆ ಕಳೆದ 47 ವರ್ಷಗಳಲ್ಲಿ ಹಲವಾರು ಬಾರಿ ತಿದ್ದುಪಡಿ ಮಾಡಿ ಹಲವಾರು ಹುದ್ದೆಗಳನ್ನು 'ಲಾಭದ ಹುದ್ದೆ'ಯ ಹಣೆಪಟ್ಟಿಯಿಂದ ವಿನಾಯಿತಿ ನೀಡಲಾಗಿದೆ. 1989ರಲ್ಲಿ ರಾಮಕೃಷ್ಣ ಹೆಗಡೆ ಅವರು ಯೋಜನಾ ಆಯೋಗದ ಉಪಾಧ್ಯಕ್ಷರಾಗುವ ವರೆಗೆ ಅದು ಕೂಡಾ ಲಾಭದ ಪಟ್ಟಿಯಲ್ಲಿಯೇ ಇತ್ತು. ಅದರಿಂದಾಗಿ ಅವರು ಸಂಸತ್ ಸದಸ್ಯತ್ವ ಕಳೆದುಕೊಳ್ಳಬೇಕಾಯಿತು. ಈಗ ಅದು ಲಾಭದ ಹುದ್ದೆ ಅಲ್ಲ. 1977ರಲ್ಲಿ ಮೊರಾರ್ಜಿ ದೇಸಾಯಿ ಸರ್ಕಾರ ಕಾನೂನಿಗೆ ತಿದ್ದುಪಡಿ ಮಾಡುವವರೆಗೆ ವಿರೋಧ ಪಕ್ಷಗಳ ನಾಯಕ ಸ್ಥಾನ ಕೂಡಾ ಲಾಭದ ಹುದ್ದೆ. 1999ರಲ್ಲಿ ವಾಜಪೇಯಿ ಸರ್ಕಾರ ಪಕ್ಷಗಳ ಮುಖ್ಯ ಸಚೇತಕರ ಹುದ್ದೆಗಳಿಗಿದ್ದ 'ಲಾಭದ ಹುದ್ದೆ'ಯ ಹಣೆಪಟ್ಟಿಯನ್ನು ಕಿತ್ತು ಹಾಕಿತು.

ಇದೇ ರೀತಿ ಕಳೆದ 50 ವರ್ಷಗಳಿಂದ ಎಲ್ಲ ರಾಜಕೀಯ ಪಕ್ಷಗಳು ತಮಗೆ ಬೇಕಾದ ಹುದ್ದೆಗಳಿಗಿರುವ 'ಲಾಭದ ಹಣೆಪಟ್ಟಿ'ಯನ್ನು ಸದ್ದಿಲ್ಲದೆ ಕಿತ್ತು ಹಾಕಿಸುತ್ತಾ ಬಂದಿವೆ. ಇಂತಹ ಪ್ರಸ್ತಾವಗಳನ್ನು ಪರಿಶೀಲಿಸಲೆಂದೇ ಜಂಟಿ ಸಂಸದೀಯ ಸಮಿತಿಯೊಂದನ್ನು ಸಂಸತ್ ರಚಿಸಿದೆ. ಕಳೆದ ವರ್ಷದ ಡಿಸೆಂಬರ್ ತಿಂಗಳಿನಲ್ಲಷ್ಟೇ ಅದು ಸಲ್ಲಿಸಿದ ತನ್ನ ಹದಿನಾಲ್ಕನೇ ವರದಿಯಲ್ಲಿ ಹೊಸದಾಗಿ ನಾಲ್ಕು ಹುದ್ದೆಗಳಿಗೆ ವಿನಾಯಿತಿ ನೀಡಿತ್ತು. ಆದರೆ ಆಗಾಗ ವೈಯಕ್ತಿಕ ದ್ವೇಷಾಸೂಯೆಯ ಬಣ್ಣ ಪಡೆಯುವ

ಉತ್ತರಪ್ರದೇಶದ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ನಡುವಿನ ರಾಜಕೀಯ ಸಂಘರ್ಷದಿಂದಾಗಿ ಈ ವಿಷಯ ವಿವಾದವಾಗಿ ಪರಿವರ್ತನೆಗೊಂಡು ರಾಡಿ ಎಬ್ಬಿಸಿದೆ.

ಅನರ್ಹತೆ ತಡೆ (ತಿದ್ದುಪಡಿ) ಮಸೂದೆ 2006ಕ್ಕೆ ಸಂಸತ್ ಮರು ಅಂಗೀಕಾರ ನೀಡಿರುವುದರಿಂದ ತೂಗುವ ಕತ್ತಿಯಿಂದ ಪಾರಾಗಿ ಹೋದೆವು ಎಂದು ಲಾಭದ ಹುದ್ದೆಯಲ್ಲಿ ಕೂಡವರೆಲ್ಲ ಈಗಲೂ ನಿಶ್ಚಿಂತೆಯ ನಿಟ್ಟುಸಿರು ಬಿಡುವಂತಿಲ್ಲ. ಉಳಿದಿರುವ ಒಂದು ವರ್ಷದ ಅವಧಿಯ ತಮ್ಮ ಕುರ್ಚಿಯ ಆಸೆ ತೊರೆದು, ರಾಷ್ಟ್ರಪತಿ ಅಬ್ದುಲ್ ಕಲಾಂ ತಮ್ಮ ಆತ್ಮಸಾಕ್ಷಿಯ ಕರೆಗೆ ಓಗೊಟ್ಟರೆ ದೇಶದ ರಾಜಕೀಯ ಕ್ಷೇತ್ರದಲ್ಲಿ ಇನ್ನೊಂದು ವಿವಾದದ ಚಂಡಮಾರುತ ಎದ್ದೇಳಬಹುದು. ಬಿಜೆಪಿ ನಾಯಕರೇನೋ ರಾಷ್ಟ್ರಪತಿಗಳ ಆತ್ಮ ಸಾಕ್ಷಿಯನ್ನು ಬಡಿದೆಬ್ಬಿಸುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಆದರೆ ಅವರ ಆತ್ಮಸಾಕ್ಷಿ ಕಳೆದ ಬಾರಿ ಕೊಟ್ಟ ಕರೆಯನ್ನೇ ಈ ಬಾರಿಯು ಕೊಡಲಿದೆ ಎನ್ನುವುದಕ್ಕೆ ಏನು ಖಾತರಿ?

ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಮುಂದೆ ಈಗ ಇರುವುದು ಮೂರು ಆಯ್ಕೆಗಳು; ಒಂದು-ಸಂಸತ್ ಎರಡನೆ ಬಾರಿ ಅಂಗೀಕರಿಸಿ ಕಳುಹಿಸಿದ ಮಸೂದೆಗೆ ಸಹಿ ಹಾಕಿ ವಿವಾದವನ್ನು ತಮ್ಮ ಮನೆ ಹೊಸ್ತಿಲಿನಿಂದ ಹೊರಹಾಕಿ ರಾಷ್ಟ್ರಪತಿ ಭವನದಲ್ಲಿ ಉಳಿದ ಕಾರ್ಯಾವಧಿಯನ್ನು ನಿಶ್ಚಿಂತೆಯಾಗಿ ಕಳೆಯುವುದು. ಎರಡು: ಬಿಜೆಪಿ ಸಲಹೆ ನೀಡಿದಂತೆ ಮಸೂದೆ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಘೋಷಿಸುವ ಮೂಲಕ. ಆ ಅಪಾಯವನ್ನು ಬಿಜೆಪಿ ನಾಯಕರು ಜೀವಂತವಾಗಿಟ್ಟಿದ್ದಾರೆ. ಅದರಿಂದ ಇನ್ನೊಂದು ಸುತ್ತಿನ ನ್ಯಾಯಾಂಗ - ಶಾಸಕಾಂಗ ನಡುವಿನ ಸಮರ ಪ್ರಾರಂಭವಾಗಬಹುದು.

O

(06-08-2006)

'ನವಗ್ರಹ' ಪ್ರವೇಶಕ್ಕೆ ತೆರೆದ ಬಾಗಿಲು

ಸಂವಿಧಾನದ ಒಂಬತ್ತನೆ ಪರಿಚ್ಛೇದದಡಿ ಸೇರಿರುವ ಸುಮಾರು 284 ಕಾಯಿದೆಗಳಲ್ಲಿ 200ಕ್ಕೂ ಹೆಚ್ಚು ಕಾಯಿದೆಗಳು ಭೂ ಸುಧಾರಣೆಗೆ ಸಂಬಂಧಿಸಿದವು. ಭೂ ಸುಧಾರಣೆ ಎನ್ನುವುದು ಸಾಮಾಜಿಕ ನ್ಯಾಯದ ಪರಿಣಾಮಕಾರಿ ಅಸ್ತ್ರ. ಬಡತನ ನಿರ್ಮೂಲನೆಯಲ್ಲಿ ಇದರ ಪಾತ್ರ ಸಾಬೀತಾಗಿದೆ. ಇವೆಲ್ಲವೂ ನ್ಯಾಯಾಲಯದ ಪರಾಮರ್ಶೆಗೆ ತೆರೆದುಕೊಂಡರೆ ಪರಿಣಾಮವೇನಾಗಬಹುದೆಂಬುದೇ ಈಗಿನ ಆತಂಕ.

ಉತ್ತರಪ್ರದೇಶ ಮತ್ತು ಬಿಹಾರ ರಾಜ್ಯಗಳ ಗ್ರಾಮೀಣ ಭಾಗಗಳಲ್ಲಿ ಅಡ್ಡಾಡಿದರೆ ಮೊದಲು ಗಮನ ಸೆಳೆಯುವುದು ಹಚ್ಚಹಸುರಿನ ಭೂಪ್ರದೇಶ. ಸದಾ ಹರಿಯುತ್ತಿರುವ ಗಂಗೆಯ ನೀರು, ಮಳೆಗಾಲದಲ್ಲಿ ನೆರೆನೀರು ತಂದು ಹಾಕುವ ಮೆಕ್ಕಲು ಮಣ್ಣು. ನಳನಳಿಸುವ ಬೆಳೆಗಳು. ವಾರಣಾಸಿ–ಗೋರಖ್‌ಪುರ ನಡುವಿನ ಸಾಸಿವೆ ಗಿಡಗಳ ಹಳದಿ ಹೂ ಚೆಲ್ಲಿದ ಹಾದಿಯಲ್ಲಿ ಪ್ರಯಾಣಿಸುವುದೇ ಕಣ್ಣಿಗೆ ಹಬ್ಬ. ಇತ್ತೀಚಿನವರೆಗೂ ನೇಪಾಳದ ಮಾವೋವಾದಿಗಳಿಗೆ ನೆಲೆಯಾಗಿದ್ದ ಬಿಹಾರದ ಉತ್ತರದ ಜಿಲ್ಲೆಗಳಾದ ಪೂರ್ವ ಮತ್ತು ಪಶ್ಚಿಮ ಚಂಪಾರಣ್, ಸಾರಣ್, ಸಮಷ್ಟಿಪುರ ಜಿಲ್ಲೆಗಳಲ್ಲಿಯೂ ಇದೇ ರೀತಿ ಹಸಿರುಹಾಸಿನ ದೃಶ್ಯವೈಭವ. ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ತೊನೆದಾಡುತ್ತಿರುವ ಭತ್ತ–ಕಬ್ಬಿನ ಬೆಳೆಗಳು. ಈ ಭಾಗವನ್ನು ಒಟ್ಟಾಗಿ ಪೂರ್ವಾಂಚಲ ಎನ್ನುತ್ತಾರೆ. ಫಲವತ್ತಾದ ಭೂಮಿ, ಧಾರಾಳ ನೀರು, ಎಂದೂ ಕೈಕೊಡದ ಬೆಳೆ–ಈ ಸಮೃದ್ಧ ಸ್ಥಿತಿಯಲ್ಲಿ ಬಡತನದ

ಕುರುಹುಗಳೇ ಅಲ್ಲಿ ಇರಬಾರದಿತ್ತು. ಆದರೆ ಪರಿಸ್ಥಿತಿ ತದ್ವಿರುದ್ಧ. ಹಸಿರ ಪರದೆಯನ್ನು ತುಸುವೇ ಸರಿಸಿ ಒಳಹೊಕ್ಕರೆ ಹಸಿವು, ಅವಮಾನ, ದೌರ್ಜನ್ಯಗಳ ಇನ್ನೊಂದು ಕಷ್ಟಲೋಕ ತೆರೆದುಕೊಳ್ಳುತ್ತದೆ. ರಾಜು ಭಯ್ಯಾ, ಮುಕ್ತರ್ ಅನ್ಸಾರಿ, ಮುನ್ನಾ ಶುಕ್ಲಾ, ಕಾಲಿಪಾಂಡೆ ಮೊದಲಾದ 'ರಾಜಕೀಯ ಗೂಂಡಾಗಳ ಕಳೆ' ಹುಲುಸಾಗಿ ಬೆಳೆದಿರುವುದು ಕೂಡಾ ಅದೇ ಪ್ರದೇಶದಲ್ಲಿ. ಹೀಗೇಕೆ ಎನ್ನುವ ಸಹಜ ಪ್ರಶ್ನೆಗೆ ಉತ್ತರ ಅಷ್ಟೇ ಸರಳ. ಪೂರ್ವಾಂಚಲದಲ್ಲಿ ಶೇ.80ರಷ್ಟು ಜನರ ಕೈಯ್ಯಲ್ಲಿ ಸರಾಸರಿ ಒಂದರಿಂದ ಒಂದೂವರೆ ಎಕರೆಯಷ್ಟು ಮಾತ್ರ ಭೂಮಿ ಇದೆ. ಉಳಿದ ಶೇಕಡಾ 20ರಷ್ಟು ಮಂದಿ ಕೈಯ್ಯಲ್ಲಿ ಹತ್ತರಿಂದ ಸಾವಿರ ಎಕರೆವರೆಗೆ ಭೂಮಿ ಇದೆ. ಭೂ ಸುಧಾರಣೆ ಕಾಯಿದೆ ಇಲ್ಲಿ ಅಪರಿಚಿತ ಶಬ್ದ. ಜಮೀನ್ದಾರಿ ಪದ್ಧತಿ ರಾಜಾರೋಷವಾಗಿ ಜಾರಿಯಲ್ಲಿರುವ, ಪಾಳೆಯಗಾರರಿಗೆ ಸೇರಿದ ಪುರಾತನ ಕಾಲವೊಂದು ಇನ್ನೂ ಜೀವಂತವಾಗಿದೆಯೇನೋ ಎನ್ನುವ ಭೀತಿ ಹುಟ್ಟಿಸುವಂತಿದೆ ಅಲ್ಲಿನ ಸ್ಥಿತಿ.

ಈ ಊರುಗಳಲ್ಲಿ ಅಡ್ಡಾಡುವ ಕನ್ನಡಿಗನಿಗೆ ಸಹಜವಾಗಿಯೇ ದೇವರಾಜ ಅರಸು ನೆನಪಾಗಿ ಕಾಡುತ್ತಾರೆ. ಅದೇ ಮಲೆಯಾಳಿಯಾಗಿದ್ದರೆ ಇಎಂಎಸ್, ಬಂಗಾಳಿಯಾಗಿದ್ದರೆ ಜ್ಯೋತಿಬಸು ನೆನಪಾಗಬಹುದು. (ವಿಶೇಷ ಆರ್ಥಿಕ ವಲಯದ ವಿವಾದ ಪಶ್ಚಿಮಬಂಗಾಳದ ಭೂಸುಧಾರಣಾ ಕಾಯಿದೆ ಅನುಷ್ಠಾನದಲ್ಲಿನ ದೋಷಗಳನ್ನು ಬಯಲು ಮಾಡಿದೆ) ಭೂಸುಧಾರಣೆ ಕಾಯಿದೆ ಜಾರಿ ಮೂಲಕ ತಮ್ಮ ರಾಜ್ಯಗಳಲ್ಲಿ ಜಮೀನ್ದಾರಿ ಪದ್ಧತಿಯನ್ನು ಅಳಸಿಹಾಕಿ ಭೂಮಿಯ ಸಮಾನ ಹಂಚಿಕೆಗೆ ಕಾರಣರಾದವರು ಈ ನಾಯಕರು. ಹಿಂದಿ ಭೂಪ್ರದೇಶದ ರಾಜಕಾರಣ ಕೆಲ ಕಾಲವಾದರೂ ಇಂತಹ ರಾಜಕೀಯ ನಾಯಕರ ಕೈಗೆ ಸಿಕ್ಕಿದ್ದರೆ ಅಲ್ಲಿನ ಸ್ಥಿತಿ ಈಗಿನಂತೆ ಇರುತ್ತಿರಲಿಲ್ಲ. ಭೂ ಸುಧಾರಣೆ ಕಾಯಿದೆ ಜಾರಿಗೆ ಬರದೆ ಹೋಗಿದ್ದರೆ ಕರ್ನಾಟಕ, ಕೇರಳ, ಪಶ್ಚಿಮ ಬಂಗಾಳಗಳೂ ಹಿಂದಿ ಭೂ ಪ್ರದೇಶದ ರಾಜ್ಯಗಳ ಹಾದಿಯನ್ನೇ ಹಿಡಿಯುತ್ತಿದ್ದವೋ ಏನೋ?

'ಸಂವಿಧಾನದ ಒಂಬತ್ತನೆ ಪರಿಚ್ಛೇದಕ್ಕೆ ಸೇರಿರುವ ಕಾಯಿದೆಗಳು ಕೂಡಾ ನ್ಯಾಯಾಂಗದ ಪರಾಮರ್ಶೆಗೆ ಒಳಪಡುತ್ತವೆ' ಎನ್ನುವ ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪು ಅಸಮಾನ ಭೂ ಹಂಚಿಕೆ ಸೃಷ್ಟಿಸಿರುವ ಯುಪಿ-ಬಿಹಾರಗಳ ದುಃಸ್ಥಿತಿಯನ್ನು ಮೆಲುಕುಹಾಕುವಂತೆ ಮಾಡಿದೆ. ಒಂಬತ್ತನೆ ಪರಿಚ್ಛೇದವನ್ನು ರಾಜಕಾರಣಿಗಳು 'ಕೊಳೆಬಟ್ಟೆಗಳ ಬುಟ್ಟಿ'ಯಂತೆ ಬಳಸಿಕೊಳ್ಳಲು ನೋಡುತ್ತಿರುವುದು ನ್ಯಾಯಾಲಯದ ಕೆಂಗಣ್ಣಿಗೆ ಕಾರಣ ಇರಬಹುದು. ಮುಖ್ಯಮಂತ್ರಿ ಜಯಲಲಿತಾ ಒತ್ತಡಕ್ಕೆ ಮಣಿದ ಪಿ.ವಿ.ನರಸಿಂಹರಾವ್ ಸರ್ಕಾರ ಆ ರಾಜ್ಯದ ಶೆಕಡಾ 69ರಷ್ಟು ಮೀಸಲಾತಿಯ ಕಾಯಿದೆಯನ್ನು ಸೇರಿಸಿದ ನಂತರ ಈ ಪರಿಚ್ಛೇದ ಇನ್ನಷ್ಟು ಟೀಕೆ-ಟಿಪ್ಪಣಿಗಳಿಗೆ ಈಡಾಗಿದೆ. ದೆಹಲಿಯಲ್ಲಿ ಒತ್ತುವರಿ ನಿರ್ಮೂಲನೆಯ ಸುಪ್ರೀಂ ಕೋರ್ಟ್ ಆದೇಶದಿಂದ

ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರ ಹೊಸ ಭೂ ಪರಿಮಿತಿ ಕಾಯಿದೆ ರೂಪಿಸಿ ಅದನ್ನು ಒಂಬತ್ತನೆ ಪರಿಚ್ಛೇದದಲ್ಲಿ ಹಾಕಲು ಹೊರಟಿರುವುದು ಇತ್ತೀಚಿನ ಉದಾಹರಣೆ. ಸುಪ್ರೀಂಕೋರ್ಟ್ ತೀರ್ಪಿನ ಹಿಂದಿನ ಆಶಯ ಏನೇ ಇರಬಹುದು. ಆದರೆ ಈ ಬಗ್ಗೆ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆಗಳು ಮಾತ್ರ ಕಳವಳಕಾರಿಯಾಗಿವೆ. ಮೀಸಲಾತಿ, ಭೂಸುಧಾರಣೆ ಮೊದಲಾದ ಸುಧಾರಣಾ ಕ್ರಮಗಳನ್ನು ವಿರೋಧಿಸುವವರೆಲ್ಲರೂ ತೀರ್ಪನ್ನು ಸ್ವಾಗತಿಸಲು ತೊಡಗಿದ್ದಾರೆ. ಇದು ಮುಂದಿನ ದಿನಗಳಲ್ಲಿ ಪ್ರಾರಂಭವಾಗಲಿರುವ 'ಸಾಮಾಜಿಕ ನ್ಯಾಯ'ದ ವಿರುದ್ಧದ ಇನ್ನೊಂದು ಸಮರದ ಮುನ್ಸೂಚನೆಯಂತೆಯೇ ಕಾಣತೊಡಗಿದೆ.

ಒಂಬತ್ತನೆ ಪರಿಚ್ಛೇದ ಎನ್ನುವ ಸಂವಿಧಾನದ 'ನವಗ್ರಹ' ಅಸ್ತಿತ್ವಕ್ಕೆ ಬಂದ ಹಿನ್ನೆಲೆ ಕುತೂಹಲಕಾರಿಯಾಗಿದೆ. ಸಾಮಾಜಿಕ ಸಮಾನತೆಯ ಉದ್ದೇಶದ ಭೂ ಸುಧಾರಣೆಗೆ ಸಂವಿಧಾನದ ಮೂಲ ಚೌಕಟ್ಟಿನಲ್ಲಿಯೇ ರಕ್ಷಣೆ ಕೊಡಲು ಸಂವಿಧಾನ ಶಿಲ್ಪಿಗಳು ಯಾಕೆ ಮರೆತರೋ ಗೊತ್ತಿಲ್ಲ. ಇದರಿಂದಾಗಿ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕೆಲವು ರಾಜ್ಯಗಳು ಭೂ ಸುಧಾರಣಾ ಕಾಯಿದೆಯ ಅನುಷ್ಠಾನಕ್ಕೆ ಮುಂದಾದಾಗ ನ್ಯಾಯಾಲಯದಲ್ಲಿನ ಮೊಕದ್ದಮೆಗಳು ಅಡ್ಡಿ ಉಂಟುಮಾಡತೊಡಗಿದವು. ಭೂಮಾಲೀಕರು ಸಂವಿಧಾನದತ್ತ ಆಸ್ತಿ ಹಕ್ಕನ್ನು ಮುಂದಿಟ್ಟುಕೊಂಡು, ಭೂ ಸುಧಾರಣಾ ಕಾಯಿದೆಯನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸತೊಡಗಿದ್ದರು. ಈ ಹಂತದಲ್ಲಿ 'ಪುರೋಗಾಮಿ' ಶಾಸಕಾಂಗ ಮತ್ತು ಕಾರ್ಯಾಂಗ ಹಾಗೂ 'ಸಂಪ್ರದಾಯವಾದಿ' ನ್ಯಾಯಾಂಗದ ನಡುವೆ ಶೀತಲ ಸಮರವೇ ನಡೆದದ್ದಕ್ಕೆ ಇತಿಹಾಸವೇ ಸಾಕ್ಷಿ. ಸಂಪ್ರದಾಯವಾದಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಇಂತಹ ಪುರೋಗಾಮಿ ಕಾಯಿದೆಗೆ ರಕ್ಷಣೆ ಸಿಗಲಾರದು ಎನ್ನುವ ಆತಂಕವನ್ನು ಆಗಿನ ಪ್ರಧಾನಿ ಜವಾಹರಲಾಲ ನೆಹರೂ ವ್ಯಕ್ತಪಡಿಸಿದ್ದರು.

ಈ ಹಿನ್ನೆಲೆಯಲ್ಲಿಯೇ ಸರ್ಕಾರ ಸಂವಿಧಾನಕ್ಕೆ ಮೊದಲ ತಿದ್ದುಪಡಿ ಮಾಡಲು ಮುಂದಾಯಿತು. ಸಂವಿಧಾನಕ್ಕೆ ಹೊಸದಾಗಿ ಸೇರಿಸಲಾದ 31 ಬಿ ವಿಧಿಯ ಮೂಲಕ ಅಸ್ತಿತ್ವಕ್ಕೆ ಬಂದ ಒಂಬತ್ತನೆ ಪರಿಚ್ಛೇದದಲ್ಲಿ ಭೂ ಸುಧಾರಣಾ ಕಾಯಿದೆಗಳನ್ನು ಸೇರಿಸಲಾಯಿತು. 'ಕೆಲವು ಕಾಯಿದೆಗಳು ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದರೂ ಅದು ಸಿಂಧು' ಎಂದು 31 ಬಿ ವಿಧಿ ಹೇಳುತ್ತಿದೆ. ಈ ವಿಧಿ ಪ್ರಕಾರ ಒಂಬತ್ತನೆ ಪರಿಚ್ಛೇದದಲ್ಲಿರುವ ಕಾಯಿದೆಗಳನ್ನು ಸುಪ್ರೀಂ ಕೋರ್ಟ್ ಪರಾಮರ್ಶಿಸುವ ಹಾಗಿಲ್ಲ. ನೆಹರೂ ಸರ್ಕಾರದ ಮುಖ್ಯ ಉದ್ದೇಶ ಭೂ ಸುಧಾರಣಾ ಕಾಯಿದೆಗೆ ರಕ್ಷಣೆ ಕೊಡುವುದಷ್ಟೇ ಆಗಿತ್ತು. ಮೊದಲ ಹಂತದಲ್ಲಿ ಪರಿಚ್ಛೇದದಲ್ಲಿ ಸೇರಿಕೊಂಡಿರುವ ಎಲ್ಲ ಹದಿಮೂರು ಕಾಯಿದೆಗಳು ಕೂಡಾ ಭೂ ಸುಧಾರಣೆಗೆ ಸಂಬಂಧಿಸಿದವು.

ಸಂವಿಧಾನದ 'ನವಗ್ರಹ' ಹೊಂದಿರುವ ನ್ಯಾಯಾಲಯ ಪರಾಮರ್ಶೆ ನಿರೋಧಕ ಶಕ್ತಿಯನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನಗಳು ನೆಹರೂ ಕಾಲದಲ್ಲಿಯೇ ಪ್ರಾರಂಭವಾಗಿತ್ತು. ಈ ಪ್ರಯತ್ನಗಳಿಗೆ 1973ರ ಕೇಶವಾನಂದ ಭಾರತಿ ಪ್ರಕರಣ ಸಣ್ಣ ಅವಕಾಶವೊಂದನ್ನು ಒದಗಿಸಿತು. ಆ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ ಐತಿಹಾಸಿಕ ತೀರ್ಪಿನಲ್ಲಿ 'ಸಂವಿಧಾನದ ಮೂಲ' ಚೌಕಟ್ಟನ್ನು ಬದಲಿಸುವ ಅಧಿಕಾರ ಸಂಸತ್ತಿಗೂ ಇಲ್ಲ' ಎಂದು ಸಾರಿತು. ಪರೋಕ್ಷವಾಗಿ ಆ ತೀರ್ಪು ಒಂಬತ್ತನೆ ಪರಿಚ್ಛೇದದ ಅಸ್ತಿತ್ವವನ್ನೇ ಪ್ರಶ್ನಿಸಿತ್ತು. 1980ರಲ್ಲಿ ಕೇಂದ್ರ ಸರ್ಕಾರದ ವಿರುದ್ಧದ ವಾಮನ್‌ರಾವ್ ಪ್ರಕರಣದಲ್ಲಿ 'ಒಂಬತ್ತನೆ ಪರಿಚ್ಛೇದ ಸಂವಿಧಾನಬದ್ಧವಾಗಿಯೇ ಇದೆ. ಆದರೆ ಅದರಲ್ಲಿರುವ ಕಾಯಿದೆಗಳು ಸಂವಿಧಾನದ ಮೂಲ ಚೌಕಟ್ಟಿನ ಆಶಯಗಳಿಗೆ ಅನುಗುಣವಾಗಿ ಇರಬೇಕು' ಎಂದು ಸುಪ್ರೀಂಕೋರ್ಟ್ ಹೇಳಿತು.

ಮೂಲಭೂತ ಹಕ್ಕುಗಳೇ ಸಂವಿಧಾನದ ಮೂಲಚೌಕಟ್ಟಿಗೆ ಸೇರಿರುವ ಕಾರಣ, ಆಸ್ತಿ ಹೊಂದುವ ಮೂಲ ಭೂತ ಹಕ್ಕಿನ ಆಧಾರದಲ್ಲಿಯೇ ಒಂಬತ್ತನೆ ಪರಿಚ್ಛೇದದಲ್ಲಿರುವ ಭೂ ಸುಧಾರಣಾ ಕಾಯಿದೆಯನ್ನು ಯಾರಾದರೂ ಪ್ರಶ್ನಿಸಲು ಸಾಧ್ಯ ಇತ್ತು. ಈ ವರೆಗೆ ಸುಪ್ರೀಂ ಕೋರ್ಟ್ ಅದರಲ್ಲಿರುವ ಯಾವ ಕಾಯಿದೆಯನ್ನೂ ರದ್ದು ಮಾಡಿಲ್ಲವೆನ್ನುವುದು ನಿಜ. ಆದರೆ ಕಳೆದವಾರದ ತೀರ್ಪನ್ನು ಸ್ವಾಗತಿಸುತ್ತಿರುವವರ ಸಮರೋತ್ಸಾಹ ನೋಡಿದರೆ, 'ನವಗ್ರಹ'ದಲ್ಲಿರುವ ಕಾಯಿದೆಗಳೆಲ್ಲವೂ ಸುರಕ್ಷಿತ ಎನ್ನುವ ಹಾಗಿಲ್ಲ.

ಸುಪ್ರೀಂ ಕೋರ್ಟ್ ತೀರ್ಪನ್ನು ಭಾರತೀಯ ಜನತಾ ಪಕ್ಷ ಸ್ವಾಗತಿಸಿದೆ. ಅಂದರೆ ಭೂ ಸುಧಾರಣಾ ಕಾಯಿದೆ ನ್ಯಾಯಾಲಯದ ಪರಾಮರ್ಶೆಗೆ ಒಳಪಡಬೇಕೆಂಬುದು ಅದರ ಉದ್ದೇಶವೇ? ಹಾಗಿದ್ದರೆ ಭೂ ಸುಧಾರಣಾ ಕಾಯಿದೆ ರದ್ದುಗೊಳಿಸುತ್ತೇವೆ ಎನ್ನುವುದನ್ನು ಪ್ರಣಾಳಿಕೆಯಲ್ಲಿ ಸೇರಿಸಿಕೊಂಡು ಚುನಾವಣೆ ಎದುರಿಸಲು ಪಕ್ಷ ಸಿದ್ಧ ಇದೆ ಎಂದು ತಿಳಿದುಕೊಳ್ಳಬಹುದೇ?

(15-01-2007)

ದಿನೇಶ್ ಅಮಿನ್ ಮಟ್ಟು ಅವರ 'ದೆಹಲಿ ನೋಟ' ಅಂಕಣ ಬರಹ ಒಂದು ಅಪರೂಪದ ಹಾಗೂ ಸಕಾಲಿಕ ಸಂಕಲನ. ಸಂದರ್ಭವಶದಲ್ಲಿ ಬರೆದ ಲೇಖನಗಳು ಇವಾದರೂ ಇವು ಕರ್ನಾಟಕವನ್ನು ರಾಷ್ಟ್ರ ರಾಜಕಾರಣದ ಸಂದರ್ಭದಲ್ಲಿ ಸಮರ್ಥವಾಗಿ ಬಿಂಬಿಸುವಲ್ಲಿ ಪ್ರಧಾನ ಪಾತ್ರ ವಹಿಸಬಲ್ಲ ಸತ್ವಶಾಲಿ ಬರಹಗಳಾಗಿವೆ. ಸೈದ್ಧಾಂತಿಕ ಪೂರ್ವ ಪಕ್ಷಪಾತ ದೃಷ್ಟಿಯಿಂದಾಗಲಿ ಯಾವುದೇ ಪಕ್ಷದ ಪ್ರಣಾಳಿಕೆಗೆ ಬದ್ಧವಾದ ದೃಷ್ಟಿಯಿಂದಾಗಲಿ ಇವುಗಳ ನೋಟ ಮಲಿನಗೊಂಡಿಲ್ಲ. ಪತ್ರಿಕಾಧರ್ಮ ಹಾಗೂ ಪ್ರಜಾಪ್ರಭುತ್ವದಲ್ಲಿನ ಸಾಮಾಜಿಕ ನ್ಯಾಯ ಪ್ರಾದೇಶಿಕ ಅಸ್ಮಿತೆಗಳಿಗೆ ನಿಷ್ಠವಾದಂತೆ ಇಲ್ಲಿನ ಆಲೋಚನೆ ಚಿಂತನೆಗಳು ಹರಿದಿವೆ. ಜಾಗತಿಕ ವಿದ್ಯಮಾನಗಳು, ರಾಷ್ಟ್ರೀಯ ವಿದ್ಯಮಾನಗಳು ಇಲ್ಲಿ ಚರ್ಚೆಗೆ ಬಂದರೂ ಆ ಚರ್ಚೆಗಳ ಕೇಂದ್ರಬಿಂದು ಕರ್ನಾಟಕದ ಸ್ಥಳೀಯತೆ ಎಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಇಲ್ಲಿ ಚರ್ಚಿತವಾದ ಇಶ್ಯೂಗಳು ಕರ್ನಾಟಕದ ಪರವಾಗಿ ವಕಾಲತ್ತು ವಹಿಸುವ ಏಕಪಕ್ಷೀಯ ನಿಲುವಿನಲ್ಲಿ ನಿಂತಿಲ್ಲ; ಅದಕ್ಕಿಂತ ಮುಖ್ಯವಾಗಿ ಒಕ್ಕೂಟ ವ್ಯವಸ್ಥೆಯೊಳಗಿನ ಸಮಾನಧರ್ಮವನ್ನು ಗೌರವಿಸುವ ಹಕ್ಕಿನ ರೀತಿಯಲ್ಲಿ ಅದನ್ನು ಪ್ರತಿಪಾದಿಸುವ ನೈತಿಕ ಕೆಚ್ಚಿನಿಂದ ಬೆಳಗಿವೆ.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

ಬೆಲೆ : ರೂ. 100/-
ISBN No. : 81-7713-257